Department of Public Instruction, Mysore.

BHUVIVARANE

ಭೂವಿವರಣೆ

KANNADA MANUAL OF GEOGRAPHY

BY

R. RAGHUNATHA RAO, B.A.,

Assistant Master, Central College, Bangalore,
and present Head Master, High School, Chitaldrug.

PART II.

ROPE, AFRICA, AMERICA, AND OCEANIA.

ಎರಡನೆಯ ಭಾಗ

ಯೂರೋಪ್, ಆಫ್ರಿಕ, ಅಮೆರಿಕ, ಮತ್ತು ಓಷಿಯೇನಿಯ.

BANGALORE
RINTED AT THE GOVERNMENT CENTRAL PRESS
1911

136

PREFACE TO THE FOURTH EDITION.

In the present edition of Bhúvivaraṇé, Part II, Africa has thoroughly been revised and in other continents some necessary additions and alterations have been made in the light of the latest publications on the subject. Figures have also, as far as possible, been brought up to date.

BANGALORE,
July 1910.

M. LAKSHMINARANAPPA,
Kan. Translator, Edn. Dept.

PREFACE TO THE SECOND EDITION.

In the Second Edition of Bhúvivaraṇé, Part II, which has been revised, much superfluous matter has been left out, and facts and figures have, as far as possible, been brought up to date. A complete Index has also been added.

MYSORE,
February 1896.

R. NARASIMHACHAR,
Kan. Translator, Ed. Dept.

PREFATORY NOTE TO THE FIRST EDITION.

To what has been said in the Preface to Part I very little remains to be added here. The transliteration of some of the proper names was very difficult owing to the absence in Kannada of certain vowel and consonant sounds, as, for instance, the sound of *a* in Danube, Man, etc., and that of *sg* in Vosges; and some of them had to be more or less dravidianized.

The plan of treatment adopted in Part I has been followed here also, more attention, however, being paid to the comparative method. I have tried to give a clear ard comprehensive idea of each country, "its position, soil, climate and connections." It is believed that nothing of importance has been omitted. No pains have been spared to make the book interesting and instructive.

Suggestions for the improvement of the manual will be thankfully received.

BANGALORE,
June 1892.

R. RAGHUNATHA RAO.

ಉಪಾಧ್ಯಾಯರು ತಿಳಿದಿರತಕ್ಕ ವಿಷಯ.

೪ನೆಯ ಮತ್ತು ೫ನೆಯ ಇಯತ್ತೆಗಳಲ್ಲಿ (Standards) ವಿದ್ಯಾರ್ಥಿಗಳು ಓದಬೇಕಾದ ಭೂವಿವರಣೆಯ ಭಾಗಗಳು:—

೪ನೆಯ ಇಯತ್ತೆ.—(a) ಯೂರೋಪ್ ಮತ್ತು ಆಫ್ರಿಕಾ ಖಂಡಗಳ ವರ್ಣನೆ. (ಭೂವಿವರಣೆಯ ಎರಡನೆಯ ಭಾಗದಲ್ಲಿ ಪುಟ ೧ರಿಂದ ೭೦ರ ವರೆಗೆ). (b) ಮುಖ್ಯ ನದಿಗಳನ್ನೂ ಪರ್ವತಶ್ರೇಣಿಗಳನ್ನೂ ಮುಖ್ಯಪಟ್ಟಣಗಳನ್ನೂ ಕಾಣಿಸಿ ಯೂರೋಪೇಷ್ಯಾಖಂಡಗಳ ಮುಖ್ಯಮುಖ್ಯ ದೇಶಗಳ ಮ್ಯಾಪನ್ನು ಬರೆವುದು. [ ] ಇಂಥ ಆವರಣಚಿಹ್ನೆಗಳೊಳಗೆ ಸೇರಿಸಿರುವ ಭಾಗಗಳನ್ನು ಓದಬೇಕಾದುದಿಲ್ಲ.

೫ನೆಯ ಇಯತ್ತೆ.—(a) ಪೃಥ್ವಿಯಲ್ಲಿರುವ ದೇಶಗಳ ಸಾಮಾನ್ಯ ವರ್ಣನೆ. (ಭೂವಿವರಣೆ). (b) ಇಂಡಿಯಾದೇಶದ ವರ್ಣನೆ (ಭೂವಿವರಣೆ). (c) ಪೃಥ್ವಿಯ ಸಾಮಾನ್ಯವರ್ಣನೆ (ಭೂವಿವರಣೆಯ ಪೀಠಿಕಾಪ್ರಕರಣ). (d) ಮುಖ್ಯನದಿಗಳನ್ನೂ ಪರ್ವತಶ್ರೇಣಿಗಳನ್ನೂ ಮುಖ್ಯ ಮುಖ್ಯ ಪಟ್ಟಣಗಳನ್ನೂ ಕಾಣಿಸಿ ಪೃಥ್ವಿಯ ಖಂಡಗಳ ಮ್ಯಾಪನ್ನು ಅಥವಾ ಯೂರೋಪೇಷ್ಯಾ ಖಂಡಗಳ ಮುಖ್ಯ ಮುಖ್ಯ ದೇಶಗಳ ಮ್ಯಾಪನ್ನು ಬರೆವುದು. [ ] ಇಂಥ ಆವರಣಚಿಹ್ನೆಗಳೊಳಗೆ ಸೇರಿಸಿರುವ ಭಾಗಗಳನ್ನೂ ಓದಬೇಕು.

ವಿಷಯ ಸೂಚಿಕೆ.

ಯೂರೋಪ್ ಖಂಡ.

		ಪುಟ.
ಸಾಮಾನ್ಯ ವರ್ಣನೆ	General View	1
ಬ್ರಿಟಿಷ್ ದ್ವೀಪಗಳು (ಇಂಗ್ಲೆಂಡ್, ವೇಲ್ಸ್, ಸ್ಕಾಟ್ಲೆಂಡ್ ಮತ್ತು ಐರ್ಲೆಂಡ್)	The British Isles	11
ಫ್ರಾನ್ಸ್	France	25
ಬೆಲ್ಜಿಯಂ	Belgium	28
ಹಾಲೆಂಡ್ ಅಥವಾ ತಗ್ಗುದೇಶ	The Netherlands	29
ಸ್ವಿಟ್ಝರ್ಲೆಂಡ್	Switzerland	32
ಆಸ್ಟ್ರಿಯಾ ಚಕ್ರಾಧಿಪತ್ಯ (ಆಸ್ಟ್ರಿಯ ಮತ್ತು ಹಂಗೆರಿ)	Austria-Hungary	34
ಜರ್ಮನ್ ಚಕ್ರಾಧಿಪತ್ಯ (ಪ್ರಷ್ಯ ಮುಂತಾದವು)	Germany ...	36
ಡೆನ್ಮಾರ್ಕ್	Denmark	39
ಸ್ಕಾಂಡಿನೇವಿಯ (ನಾರ್ವೆ ಮತ್ತು ಸ್ವೀಡನ್)	Scandinavia	41
ರಷ್ಯ	Russia	44
ಯೂರೋಪಿನ ತುರ್ಕಿ	Turkey in Europe	47
ಗ್ರೀಸ್	Greece	49
ಇಟಲಿ	Italy	50
ಸ್ಪಾನಿಷ್ ಪರ್ಯಾಯದ್ವೀಪ (ಸ್ಪೇನ್ ಮತ್ತು ಪೋರ್ಚುಗಲ್)	The Peninsula	52

ಆಫ್ರಿಕಾ ಖಂಡ.

ಸಾಮಾನ್ಯ ವರ್ಣನೆ	General View	55
ಈಜಿಪ್ಟ್	Egypt	64
ಆಂಗ್ಲೋ ಈಜಿಪ್ಷನ್ ಸೌಡಾನ್	Anglo-Egyptian Soudan	66
ಅಬಿಸೀನಿಯ	Abyssinia	67
ಬರ್ಬರಿ ಸಂಸ್ಥಾನಗಳು	The Barbary States	68
ಸೌಡಾನ್ ಅಥವಾ ನೀಗ್ರೋದೇಶ	The Soudan	71
ಪಶ್ಚಿಮ ಆಫ್ರಿಕ	Western Africa	72
ಬ್ರಿಟಿಷ್ ದಕ್ಷಿಣ ಆಫ್ರಿಕ	British Southern Africa	74

ಪೂರ್ವ ಆಫ್ರಿಕ Eastern Africa 78
ಆಫ್ರಿಕಾ ಖಂಡಕ್ಕೆ ಸೇರಿದ ದ್ವೀಪಗಳು Islands connected with Africa 80

ಉತ್ತರ ಅಮೇರಿಕ.

ಅಮೇರಿಕಾ ಖಂಡ The two Americas 81
ಉತ್ತರ ಅಮೇರಿಕದ ಸಾಮಾನ್ಯ ವರ್ಣನೆ General View of North America 83
ಗ್ರೀನ್ಲಂಡ್ Greenland 92
ಬ್ರಿಟಿಷ್ ಅಮೇರಿಕ British America 92
ಅಮೇರಿಕದ ಸಂಯುಕ್ತ ಸಂಸ್ಥಾನ The United States of America 96
ಮೆಕ್ಸಿಕೊ Mexico 106
ಮಧ್ಯದ ಅಮೇರಿಕ Central America 108
ವೆಸ್ಟ್ ಇಂಡಿಯಾ ದ್ವೀಪಗಳು The West Indies 109

ದಕ್ಷಿಣ ಅಮೇರಿಕ.

ಸಾಮಾನ್ಯ ವರ್ಣನೆ General View 111
ಉತ್ತರಭಾಗದ ದೇಶಗಳು—ಕೊಲಂಬಿಯ, ವೆನಿಸ್ವೇಲ, ಮತ್ತು ಗಯೇನ—Columbia, Venezuela and Guiana 119
ಬ್ರೆಸಿಲ್ ಮತ್ತು ಉರುಗ್ವೆ Brazil and Uruguay 121
ಮಧ್ಯಭಾಗದ ದೇಶಗಳು—ಪಾರಗ್ವೆ ಅರ್ಜಂಟೈನ ಮತ್ತು ಬೊಲಿವಿಯ—Paraguay, Argentina and Bolivia 122
ಪಶ್ಚಿಮಭಾಗದ ದೇಶಗಳು—ಚಿಲಿ, ಪೆರು ಮತ್ತು ಇಕ್ವೆಡರ್ Chili, Peru, and Equador 124

ಓಷಿಯೇನಿಯ.

ಆಸ್ಟ್ರೇಲೇಷ್ಯ-ಆಸ್ಟ್ರೇಲಿಯ, ತಾಸ್ಮೇನಿಯ, ಮತ್ತು ನ್ಯೂಝೀಲೆಂಡ್ Australia, Tasmania and New Zealand 126
ಪೆಸಿಫಿಕ್ ಸಾಗರದ ದ್ವೀಪಗಳು—ಮೆಲನೀಷಿಯ, ಮೈಕ್ರೊನೀಷಿಯ ಮತ್ತು ಪಾಲಿನೀಷಿಯ. Melanesia, Micronesia and Polynesia 135
ಧ್ರುವ ಪ್ರದೇಶಗಳು Polar Regions 137
ಕ್ಲಿಷ್ಟಪದಗಳ ಪಟ್ಟಿ Some difficult words 141
ಅನುಕ್ರಮಣಿಕೆ Index 143

ಭೂವಿವರಣೆ.

ಎರಡನೆಯ ಭಾಗ.

ಯೂರೊಪ್ ಖಂಡ.

ಸಾಮಾನ್ಯ ವರ್ಣನೆ.

[ಯೂರೊಪ್ ಖಂಡವು ಉ. ಅ. ಸುಮಾರು ೩೬ರಿಂದ ೭೧ರ ವರೆಗೂ ಪ ರೇ. ಸುಮಾರು ೧೧ರಿಂದ ಪೂ. ರೇ. ೬೦ರ ವರೆಗೂ ಪ್ರಸರಿಸಿದೆ.]

1. ಮೇರೆ ಮತ್ತು ವಿಸ್ತೀರ್ಣ.—ಉತ್ತರಕ್ಕೆ ಉತ್ತರಸಾಗರ; ಪೂರ್ವಕ್ಕೆ ಯೂರಲ್ ಪರ್ವತ, ಯೂರಲ್ ನದಿ, ಮತ್ತು ಕ್ಯಾಸ್ಪಿಯನ್‌ಸಮುದ್ರ; ದಕ್ಷಿಣಕ್ಕೆ ಕಾಕಸಸ್ ಪರ್ವತ, ಕಪ್ಪುಸಮುದ್ರ, ಮತ್ತು ಮೆಡಿಟರೇನಿಯನ್ ಸಮುದ್ರ; ಪಶ್ಚಿಮಕ್ಕೆ ಅಟ್ಲಾಂಟಿಕ್ ಸಾಗರ—ಇವು ಮೇರೆಗಳು. ವಿಸ್ತೀರ್ಣ ಸುಮಾರು ೩೮,೦೦,೦೦೦ ಚ. ಮೈ. ಏಷ್ಯಾಖಂಡದ ವಿಸ್ತೀರ್ಣವು ಇದಕ್ಕಿಂತ ಸುಮಾರು ಐದರಷ್ಟು ಹೆಚ್ಚಾಗಿದೆ. ಇದು ಪೂರ್ವಪಶ್ಚಿಮ ೩,೪೦೦ ಮೈಲಿ ಉದ್ದವಾಗಿಯೂ, ದಕ್ಷಿಣೋತ್ತರ ೨,೪೦೦ ಮೈಲಿ ಅಗಲವಾಗಿಯೂ ಇದೆ.

ಈ ಖಂಡದ ಒಳಭಾಗಕ್ಕೆ ಸಮುದ್ರಗಳು ವಿಶೇಷವಾಗಿ ನುಗ್ಗಿ ಅನೇಕಪರ್ಯಾಯ ದ್ವೀಪಗಳನ್ನು ಮಾಡಿವೆ. ಇದರಿಂದ ತೀರದ ಅಳತೆ ಹೆಚ್ಚಿರುವುದು, ಮತ್ತು ಈ ಖಂಡದ ಯಾವ ಪಟ್ಟಣವೂ ಸಮುದ್ರಕ್ಕೆ ೩೦೦ ಮೈಲಿಗಿಂತ ಹೆಚ್ಚಾದ ದೂರದಲ್ಲಿಲ್ಲ. ಯೂರೊಪ್ ಖಂಡವು ಏಷ್ಯಾಖಂಡಕ್ಕೆ ಸೇರಿರುವ ಪರ್ಯಾಯದ್ವೀಪವೆಂದು ಹೇಳಬಹುದು; ಪಶ್ಚಿಮಕ್ಕೆ ಹೋಗುತ್ತ ಹೋಗುತ್ತ ಪರ್ಯಾಯದ್ವೀಪತ್ವವು ಹೆಚ್ಚುತ್ತದೆ.

2. ಮುಖ್ಯವಾದ ದೇಶಗಳು.—ವಾಯುವ್ಯಭಾಗದಲ್ಲಿ ಗ್ರೇಟ್ ಬ್ರಿಟನ್ ಮತ್ತು ಐರ್ಲೆಂಡ್, ನಾರ್ವೆ, ಸ್ವೀಡನ್; ಈಶಾನ್ಯದ ಮೈದಾನದಲ್ಲಿ ರಷ್ಯ, ಪ್ರಷ್ಯ,

ಡೆನ್ಮಾರ್ಕ್, ಹಾಲೆಂಡ್ ಮತ್ತು ಬೆಲ್ಜಿಯಂ ; ಮಧ್ಯದ ಪರ್ವತಸೀಮೆಯಲ್ಲಿ ಫ್ರಾನ್ಸ್, ಸ್ವಿಟ್ಸರ್ಲೆಂಡ್, ಜರ್ಮನ್ ಸಂಸ್ಥಾನಗಳು, ಮತ್ತು ಆಸ್ಟ್ರಿಯ–ಹಂಗೇರಿ; ದಕ್ಷಿಣದಲ್ಲಿ ಪೋರ್ಟುಗಲ್, ಸ್ಪೇನ್, ಇಟಲಿ, ಗ್ರೀಸ್, ಮತ್ತು ತುರ್ಕಿ.

3. ಪರ್ಯಾಯದ್ವೀಪಗಳು ಮತ್ತು ಭೂಕಂಠಗಳು.—ಈ ಖಂಡದಲ್ಲಿ ಪರ್ಯಾಯದ್ವೀಪಗಳು ಹೆಚ್ಚಾಗಿವೆ : ದಕ್ಷಿಣದಲ್ಲಿ ಪೋರ್ಟುಗಲ್–ಸ್ಪೇನ್, ಇಟಲಿ, ಗ್ರೀಸ್, ಮತ್ತು ಕ್ರಿಮಿಯ ; ಉತ್ತರದಲ್ಲಿ ಜುಟ್ಲೆಂಡ್ ಮತ್ತು ಸ್ಕಾಂಡಿನೇವಿಯ (ನಾರ್ವೆ–ಸ್ವೀಡನ್). ಕಾರಿಂತ್ ಭೂಕಂಠವು (ಅಗಲ ೪ ಮೈ.) ಗ್ರೀಸನ್ನೂ ಮೋರಿಯವನ್ನೂ ಸೇರಿಸುತ್ತದೆ. ಪೆರಿಕಾಫ್ ಭೂಕಂಠವು ಕ್ರಿಮಿಯವನ್ನೂ ರಷ್ಯವನ್ನೂ ಸಂಬಂಧಿಸುವುದು.

4. ಮುಖ್ಯ ಭೂಶಿರಗಳು.—(1) ನಾರ್ವೆಯ ಒಂದು ದ್ವೀಪದಲ್ಲಿರುವ ಉತ್ತರಭೂಶಿರ, (2) ನಾರ್ವೆಯಲ್ಲಿರುವ ಮತ್ತು ಯೂರೋಪ್ ಖಂಡದ ಉತ್ತರದ ಕೊನೆಯಾದ ನಾರ್ಡ್‌ಕಿನ್ (ಉತ್ತರಶಿರ), (3) ಪಶ್ಚಿಮದ ಕೊನೆಯಾದ ಮತ್ತು ಪೋರ್ಟುಗಲ್ಲಿನಲ್ಲಿರುವ ರೋಕಾಭೂಶಿರ, (4) ದಕ್ಷಿಣದ ಕೊನೆಯಾದ ಮತ್ತು ಸ್ಪೇನಿನಲ್ಲಿರುವ ತರೀಫ, ಮಟಪಾನ್ ಎಂಬುದು ಗ್ರೀಸ್ ದೇಶದ ದಕ್ಷಿಣಾಗ್ರ ಭೂಶಿರ.

ನಾರ್ವೆಯ ದಕ್ಷಿಣದಲ್ಲಿರುವ ನೇಸ್, ಡೆನ್ಮಾರ್ಕಿನ ಉತ್ತರದಲ್ಲಿರುವ ಸ್ಕಾ, ಫ್ರಾನ್ಸಿನ ವಾಯುವ್ಯದಲ್ಲಿರುವ ಲಾಹೋಗ್, ಸ್ಪೇನಿನ ವಾಯುವ್ಯದಲ್ಲಿರುವ ಆರ್ಟೆಗಲ್, ಫಿನಿಸ್ಟರ್, ಪೋರ್ಟುಗಲ್ಲಿನ ನೈರುತ್ಯದಲ್ಲಿರುವ ಸೇಂಟ್‌ವಿನ್‌ಸೆಂಟ್, ಇಟಲಿಯ ದಕ್ಷಿಣದ ಕೊನೆಗಳಾದ ಸ್ಪಾರ್ಟಿವೆಂಟೊ ಮತ್ತು ಲ್ಯೂಕ,–ಇವು ಇತರ ಭೂಶಿರಗಳು.

5. ಸಮುದ್ರಗಳು ಮತ್ತು ಅವುಗಳ ಶಾಖೆಗಳು:—ದೇಶದೊಳಕ್ಕೆ ಹೆಚ್ಚಾಗಿ ನುಗ್ಗಿ ಬಂದಿರುವ ಸಮುದ್ರಗಳು ಈ ಖಂಡದಲ್ಲಿ ವಿಶೇಷವಾಗಿವೆ. ದಕ್ಷಿಣದಲ್ಲಿ ಮೂರು ದೊಡ್ಡ ಸಮುದ್ರಗಳೂ ಉತ್ತರದಲ್ಲಿ ಮೂರು ದೊಡ್ಡ ಸಮುದ್ರಗಳೂ ಇವೆ. ದಕ್ಷಿಣದಲ್ಲಿರುವುವು—ಕ್ಯಾಸ್ಪಿಯನ್ ಸ., ಕಪ್ಪು ಸ., ಮೆಡಿಟರೇನಿಯನ್ ಸ., (ಭೂಮಧ್ಯ ಸಮುದ್ರ); ಉತ್ತರದಲ್ಲಿ ಬಿಳಿಯ ಸ., ಬಾಲ್ಟಿಕ್ ಸ., ಜರ್ಮನ್ ಸಮುದ್ರ (ಸ = ಸಮುದ್ರ).

(೧) ಕ್ಯಾಸ್ಪಿಯನ್ ಸಮುದ್ರವೆಂಬುದು ಏಷ್ಯಾಖಂಡಕ್ಕೂ ಸೇರಿದೆ; ಸಾಗರದ ನೀರು ಇದಕ್ಕೆ ಸೇರದಿರುವುದರಿಂದ ಇದನ್ನು ಸರೋವರವೆನ್ನಬೇಕು.

(೨) ಕಪ್ಪುಸಮುದ್ರ. ಇದಕ್ಕೆ ನದಿಯ ನೀರು ಹೆಚ್ಚಾಗಿ ಬರುವುದರಿಂದ ಇದರ ನೀರು ಸಾಗರದ ನೀರಿನಷ್ಟು ಉಪ್ಪಾಗಿಲ್ಲ; ಇಲ್ಲಿ ಬಿರುಗಾಳಿಗಳು ಬೀಸುವುದುಂಟು ಮತ್ತು ಹೆಚ್ಚಾಗಿ ಮಂಜು (Fog) ಬೀಳುತ್ತದೆ. ಏಸಾವ್ ಸಮುದ್ರವು ಇದಕ್ಕೆ ಸೇರಿದೆ. ಮಾರ್ಮೊರಾ ಸಮುದ್ರವು ಇದಕ್ಕೆ ನೈರುತ್ಯದಲ್ಲಿದೆ.

(೩) ಮೆಡಿಟರೇನಿಯನ್ (ಭೂಮಧ್ಯ) ಸಮುದ್ರದ ವಿಸ್ತೀರ್ಣವು ೧೦,೦೦,೦೦೦

೭. ಮೈ. ಇದಕ್ಕೆ ಉಬ್ಬರವಿಳಿತಗಳಿಲ್ಲ; ಇದರಲ್ಲಿ ಏಡ್ರಿಯಾಟಿಕ್, ಟುಸ್ಕೇನ್, ಅಯೋನಿಯನ್, ಈಜಿಯನ್ ಎಂಬ ನಾಲ್ಕು ಉಪಸಮುದ್ರಗಳಿವೆ. ಲಯನ್ಸ್, ಜಿನೋವ, ಟಾರೆಂಟೊ, ಕಾರಿಂತ್ ಎಂಬ ನಾಲ್ಕು ಶಾಖೆಗಳುಂಟು. ನದಿಗಳ ಮೂಲಕ ಬರುವ ನೀರಿಗಿಂತ ಹೆಚ್ಚಾದ ನೀರು ಇದರಿಂದ ಆವಿಯಾಗಿ ಮೇಲಕ್ಕೆ ಹೋಗುತ್ತದೆಯಾದಕಾರಣ ಇದರ ನೀರು ಸಾಗರದ ನೀರಿಗಿಂತ ಹೆಚ್ಚಾಗಿ ಉಪ್ಪಾಗಿದೆ; ಮತ್ತು ಅಟ್ಲಾಂಟಿಕ್ ಸಾಗರದ ಕಡೆಯಿಂದ ಇದಕ್ಕೆ ಸಾಗರಪ್ರವಾಹವೊಂದು ಬರುವುದು.

(೪) ಬಿಳಿಯಸಮುದ್ರ. ಇದು ಉತ್ತರಸಾಗರದ ಶಾಖೆ. ನೀರ್ಗಲ್ಲೂ ಹಿಮವೂ ಅನೇಕ ತಿಂಗಳುಗಳವರೆಗೆ ಇದನ್ನು ಮುಚ್ಚಿರುವುದರಿಂದ ಇದಕ್ಕೆ ಈ ಹೆಸರು ಬಂದಿತು.

(೫) ಬಾಲ್ಟಿಕ ಸಮುದ್ರ. ಇದರಲ್ಲಿ ಉಬ್ಬರವಿಳಿತಗಳಿಲ್ಲ; ಅನೇಕ ತಿಂಗಳುಗಳವರೆಗೆ ನೀರು ಗಡ್ಡೆಕಟ್ಟಿರುವುದು; ಅನೇಕ ನದಿಗಳ ನೀರು ಇದಕ್ಕೆ ಸೇರುವುದರಿಂದಲೂ, ಇದರಿಂದ ಕೊಂಚ ನೀರು ಮಾತ್ರ ಆವಿಯ ರೂಪದಲ್ಲಿ ಮೇಲಕ್ಕೆ ಹೋಗುವುದರಿಂದಲೂ, ಉಪ್ಪಿರುವುದು ಬಹಳ ಕಡಿಮೆ; ಬಾತ್ನಿಯ, ಫಿನ್‌ಲೆಂಡ್, ರೈಗ ಎಂಬ ಮೂರು ಶಾಖೆಗಳಿವೆ.

(೬) ಜರ್ಮನ್‌ಸಮುದ್ರವು ಗ್ರೇಟ್ ಬ್ರಿಟನ್‌ದ್ವೀಪಕ್ಕೆ ಪೂರ್ವದಲ್ಲಿದೆ. ಇದು ವಿಸ್ತೀರ್ಣದಲ್ಲಿ ಬಾಲ್ಟಿಕ ಸಮುದ್ರಕ್ಕಿಂತ ಎರಡು ಪಾಲಷ್ಟು ದೊಡ್ಡದಾಗಿದೆ; ಮರಳಿನ ದಿಣ್ಣೆಗಳು ಅನೇಕ ಇರುವುವು; ಇವು ಇರುವ ಕಡೆಗಳಲ್ಲಿ ಆಳ ಕಡಿಮೆ. ಕ್ರಿ. ಶ. ೧೩ನೆಯ ಶತಮಾನದಲ್ಲಿ ಸಮುದ್ರವು ದೇಶದೊಳಕ್ಕೆ ನುಗ್ಗಿದುದರಿಂದ ಝೂಡರ್ ಝೀ (ದಕ್ಷಿಣಸಮುದ್ರ) ಮತ್ತು ಡಾಲರ್ಟ್ ಎಂಬ ಶಾಖೆಗಳು ಆದುವು.

6. ಜಲಸಂಧಿಗಳು.—ಈ ಖಂಡದಲ್ಲಿ ಜಲಸಂಧಿಗಳೂ ವಿಶೇಷವಾಗಿವೆ. (1) ಜರ್ಮನ್ ಸಮುದ್ರಕ್ಕೂ ಬಾಲ್ಟಿಕ ಸಮುದ್ರಕ್ಕೂ ನಡುವೆ ಇರುವ ಸ್ಕ್ಯಾಗರ್ರಾಕ್, ಕ್ಯಾಟಗಾಟ್, ಸೌಂಡ್, ಗ್ರೇಟ್‌ಬೆಲ್ಟ್, ಲಿಟಲ್ ಬೆಲ್ಟ್; (2) ಜರ್ಮನ್ ಸಮುದ್ರಕ್ಕೂ ಅಟ್ಲಾಂಟಿಕ್ ಸಾಗರಕ್ಕೂ ನಡುವೆ ಡೋವರ್ ಜಲಸಂಧಿ ಮತ್ತು ಇಂಗ್ಲಿಷ್ ಕಡಲ್ಗಾಲುವೆ; (3) ಅಟ್ಲಾಂಟಿಕ್ ಸಾಗರಕ್ಕೂ ಮೆಡಿಟರೇನಿಯನ್ ಸಮುದ್ರಕ್ಕೂ ನಡುವೆ ಜಿಬ್ರಾಲ್ಟರ್ ಜಲಸಂಧಿ (ಅಗಲ ೯ ಮೈ.); (4) ಇಟಲಿಗೂ ಸಿಸಿಲಿಗೂ ನಡುವೆ ಮೆಸ್ಸೀನ ಜಲಸಂಧಿ; (5) ಒಟ್ರಾಂಟೊ ಜಲಸಂಧಿ, ಏಡ್ರಿಯಾಟಿಕ್ ಸಮುದ್ರಕ್ಕೆ ದಾರಿ; (6) ಈಜಿಯನ್ ಸಮುದ್ರಕ್ಕೂ ಮಾರ್ಮೊರ ಸಮುದ್ರಕ್ಕೂ ನಡುವೆ ಡಾರ್ಡನಲ್ಸ್, ಮಾರ್ಮೊರ ಸಮುದ್ರಕ್ಕೂ ಕಪ್ಪುಸಮುದ್ರಕ್ಕೂ ನಡುವೆ ಬಾಸ್ಫೊರಸ್ ಅಥವಾ ಕಾನ್‌ಸ್ಟಾಂಟಿನೋಪಲ್ ಜಲಸಂಧಿ; (7) ಯೆನಿಕೇಲ್ ಜಲಸಂಧಿ ಕಪ್ಪುಸಮುದ್ರವನ್ನೂ ಏಸೋವ್ ಸಮುದ್ರವನ್ನೂ ಕೂಡಿಸುತ್ತದೆ.

7. ದ್ವೀಪಗಳು.—ಈ ಖಂಡದಲ್ಲಿ ಪರ್ಯಾಯದ್ವೀಪಗಳು ಹೆಚ್ಚಾಗಿವೆಯೆಂದೂ, ಪೂರ್ವದಿಂದ ಪಶ್ಚಿಮಕ್ಕೆ ಹೋಗುತ್ತ ಹೋಗುತ್ತ ಪರ್ಯಾಯದ್ವೀಪತ್ವವು ಹೆಚ್ಚುವುದೆಂದೂ ಹೇಳಲ್ಪಟ್ಟಿತು. ಈ ಖಂಡದ ವಿಸ್ತೀರ್ಣವನ್ನು ನೋಡುವಲ್ಲಿ ಈ ಖಂಡಕ್ಕೆ ಇರುವಷ್ಟು ದ್ವೀಪಗಳು ಇನ್ನು ಯಾವ ಖಂಡಕ್ಕೂ ಇಲ್ಲವೆಂದು ಹೇಳಬಹುದು. ಇವುಗಳಲ್ಲಿ ಅನೇಕಗಳು ಪರ್ಯಾಯದ್ವೀಪಗಳಿಗೆ ಸೇರಿದುವುಗಳಂತೆ ಇವೆ. ಈ ಖಂಡದ ಬಹು ಮುಖ್ಯವಾದ ದ್ವೀಪಗಳು ಯಾವುವೆಂದರೆ:—ಉತ್ತರ ಸಾಗರದಲ್ಲಿರುವ ನೋವಸೆಂಬ್ಲ, ಸ್ಪಿಟ್ಸಬರ್ಗ್ನ, ಮತ್ತು ಅಸಂಖ್ಯಾಕಗಳಾಗಿರುವ ಲಾಫೋರ್ಡ್ನ ದ್ವೀಪಗಳು; ಅಟ್ಲಾಂಟಿಕ್ ಸಾಗರದಲ್ಲಿರುವ ಗ್ರೇಟ್‍ಬ್ರಿಟನ್, ಐರ್ಲಂಡ್, ಐಸ್ಲಂಡ್, ಮುಂತಾದುವು; ಬಾಲ್ಟಿಕ್ ಸಮುದ್ರದಲ್ಲಿರುವ ದ್ವೀಪಾನೇಕಗಳು; ಮೆಡಿಟರೇನಿಯನ್ ಸಮುದ್ರದಲ್ಲಿರುವ ಕಾರ್ಸಿಕ, ಸಾರ್ಡಿನಿಯ, ಸಿಸಿಲಿ, ಮಾಲ್ಟ, ಕ್ಯಾಂಡಿಯ ಮುಂತಾದುವು. ಇವಲ್ಲದೆ ಅನೇಕ ಸಣ್ಣ ದ್ವೀಪಗಳಿವೆ; ಅವುಗಳಲ್ಲಿ ಮುಖ್ಯವಾದುವು ಆಯಾದೇಶದ ವರ್ಣನೆಯಲ್ಲಿ ನಿರವಿಸಲ್ಪಡುವುವು.

8. ಈ ಖಂಡದ ಲಕ್ಷಣ.—[ಪೂರ್ವರೇಖಾಂಶ ೨೦ನ್ನು ತೋರಿಸುವ ಮಧ್ಯಾಹ್ನರೇಖೆಯನ್ನು ಗುರುತಾಗಿಟ್ಟುಕೊಂಡು ಈ ಖಂಡವನ್ನು ಪೂರ್ವಾರ್ಧ ಪಶ್ಚಿಮಾರ್ಧಗಳಾಗಿ ವಿಭಾಗಿಸಬಹುದು.] ಪೂರ್ವಾರ್ಧವೆಲ್ಲಾ ಒಂದು ಮೈದಾನವಾಗಿದೆ, ಇಲ್ಲಿ ಪರ್ವತಗಳು ಯಾವುವೂ ಇಲ್ಲ. ಪಶ್ಚಿಮಾರ್ಧದಲ್ಲಿ ಪರ್ವತಗಳೂ ಪ್ರಸ್ಥಭೂಮಿಗಳೂ ಮೈದಾನಗಳೂ ಇರುವುವು. ಆಲ್ಪ್ಸ್ ಪರ್ವತವು ಮಧ್ಯದಲ್ಲಿದೆ; ಇದಕ್ಕೆ ದಕ್ಷಿಣದಲ್ಲಿರುವ ಸ್ಪೇನ್, ಇಟಲಿ ಮತ್ತು ತುರ್ಕಿದೇಶಗಳಲ್ಲಿ ಪರ್ವತಗಳು ಹೆಚ್ಚು; ನೆಲವು ಆಲ್ಪ್ಸ್ ಪರ್ವತದಿಂದ ಬಾಲ್ಟಿಕ್ ಮತ್ತು ಜರ್ಮನ್ ಸಮುದ್ರಗಳ ಕಡೆಗೆ ಅಗಾಧವಾದ ಮೂರು ಮೆಟ್ಟಿಲಾಗಿ ಇಳಿದು ಬಂದಿದೆ; ಆಲ್ಪ್ಸ್ ಪರ್ವತವೇ ಮೇಲಣ ಮೆಟ್ಟಿಲು, ಫ್ರಾಂಕೋಜರ್ಮನ್ ಪ್ರಸ್ಥಭೂಮಿ ಎರಡನೆಯದು, ಫ್ರಾಂಕೋಜರ್ಮನ್ ಮೈದಾನವು ಕೊನೆಯದು.

9. ಪರ್ವತ ಪಙ್ಕ್ತಿಗಳು.—ಪರ್ವತಪ್ರದೇಶಗಳು ಈ ಖಂಡದ ದಕ್ಷಿಣ ಮತ್ತು ವಾಯುವ್ಯಭಾಗಗಳಲ್ಲಿವೆ. ನೈರುತ್ಯದಿಂದ ಈಶಾನ್ಯದ ಕಡೆಗೆ ಮೈದಾನಗಳಿವೆ.

ಮುಖ್ಯವಾದ ಪರ್ವತ ಪಙ್ಕ್ತಿಗಳು.

(1) ಆಲ್ಪ್ಸ್ ಪರ್ವತ ಇಟಲೀದೇಶಕ್ಕೆ ಉತ್ತರದಲ್ಲಿದೆ; ಬ್ಲಾಂಕ್ ಎಂಬ ಇದರ ಅತ್ಯುನ್ನತಶಿಖರ ೧೫,೭೮೪ ಅಡಿ ಎತ್ತರವಿದೆ.

(2) ಅಪೆನ್ನೈನ್ ಪರ್ವತವು ಇಟಲಿಯಲ್ಲಿದೆ.

(3) ಪಿರನೀಸ್ ಎಂಬುದು ಫ್ರಾನ್ಸಿಗೂ ಸ್ಪೇನಿಗೂ ನಡುವೆ ಇರುವುದು, ಇದರ ಅತ್ಯುನ್ನತ ಶಿಖರ ನೆತೌ (Nethou).

(4) ಬಾಲ್ಕನ್ ಪರ್ವತವು ಎಡ್ರಿಯಾಟಿಕ ಸಮುದ್ರದಿಂದ ಕಪ್ಪುಸಮುದ್ರದ ವರೆಗೂ ಹಬ್ಬಿದೆ.

(5) ಕಾರ್ಪೇತಿಯನ್ ಪರ್ವತವು ಆಸ್ಟ್ರಿಯಾದೇಶದಲ್ಲಿದೆ; ಕುದುರೆಯ ಲಾಳದ ಆಕಾರವಾಗಿ ಹಬ್ಬಿದೆ, ಮತ್ತು ಪೂರ್ವದಿಕ್ಕಿನಿಂದ ಬರುವ ಗಾಳಿಗಳನ್ನು ತಡೆದು ಹಂಗೇರಿ ದೇಶದ ಮೈದಾನವನ್ನು ರಕ್ಷಿಸುವುದು.

(6) ಸ್ಕಾಂಡಿನೇವಿಯಾ ದೇಶದ ಪರ್ವತಗಳು.

ಆಲ್ಪ್ಸ್ ಪರ್ವತವು ಯೂರೋಪ್ ಖಂಡದ ಅತ್ಯುನ್ನತವಾದ ಪರ್ವತ; ಇದು ಅಗಾಧವಾದ ಬಿಲ್ಲಿನಂತೆ ಫ್ರಾನ್ಸ್, ಸ್ವಿಟ್ಸರ್ಲಂಡ್, ಇಟಲಿ, ಬವೇರಿಯ, ಆಸ್ಟ್ರಿಯ ಎಂಬ ದೇಶಗಳ ಭಾಗಗಳಲ್ಲಿ ಹಬ್ಬಿ ಡಾನ್ಯೂಬ್, ರೈನ್, ರೋನ್, ಪೊ, ಅಡೀಜ್ ಎಂಬ ದೊಡ್ಡ ನದಿಗಳಿಗೆ ಜನ್ಮಸ್ಥಾನವಾಗಿದೆ. ಈ ಪರ್ವತದಲ್ಲಿ ಹುಟ್ಟುವ ನದಿಗಳು ನಾಲ್ಕು ದಿಕ್ಕುಗಳಿಗೂ ಹೋಗುವುವು. ಇದು ಉತ್ತರ ಮತ್ತು ಈಶಾನ್ಯದಿಂದ ಬೀಸುವ ಶೀತಮಾರುತಗಳಿಗೆ ತಡೆಯಾಗಿರುವುದು. [ಹಿಮಪಟ್ಟಿ ಸುಮಾರು ೯೦೦೦ ಅಡಿಯ ಎತ್ತರದಲ್ಲಿದೆ.] ಈ ಪರ್ವತವನ್ನು ದಾಟುವುದಕ್ಕೆ ಗಾಡಿಯ ರಸ್ತೆಗಳು ೬೦ ಇವೆ, ಇವಲ್ಲದೆ ೩ ಸ್ಥಳಗಳಲ್ಲಿ (ಮಾಂಟ್ಸಿನೇ, ಸೆಂಟಗೋಥಾರ್ಡ್, ಮತ್ತು ಆರಲ್‌ಬರ್ಗ್) ಈ ಪರ್ವತವನ್ನು ಕೊರೆದು ಸುರಂಗದ ದಾರಿಗಳನ್ನು ಮಾಡಿದ್ದಾರೆ. ಇವುಗಳಲ್ಲಿ ಸೆಂಟಗೋಥಾರ್ಡ್ ಎಂಬ ಸುರಂಗದ ಮಾರ್ಗವು ಪೃಥ್ವಿಯೊಳಗೆಲ್ಲಾ ಬಹಳ ಉದ್ದವಾದುದೆನಿಸಿಕೊಂಡಿದೆ; ಸುಮಾರು ೧೦ ಮೈಲಿಯಷ್ಟು ಉದ್ದವಾಗಿದೆ; ಮಾಡುವುದಕ್ಕೆ ೮ ವರ್ಷ ಹಿಡಿಯಿತು; ಗಜ ಒಂದಕ್ಕೆ ಸುಮಾರು ೨,೦೦೦ ರೂಪಾಯಿ ಖರ್ಚಾಯಿತು.

ಆಲ್ಪ್ಸ್ ಪರ್ವತಕ್ಕೂ ಏಷ್ಯಾಖಂಡದ ಮಧ್ಯಭಾಗದ ಉನ್ನತ ಪರ್ವತಶ್ರೇಣಿಗಳಿಗೂ ಬಹು ತಾರತಮ್ಯವುಂಟು. ಅವುಗಳಿಗಿಂತ ಇದು ವಾಸಾರ್ಹವಾಗಿಯೂ ಫಲವತ್ತಾಗಿಯೂ ನೂರಾರು ಕಣಿವೆಯ ದಾರಿಗಳುಳ್ಳುದಾಗಿಯೂ ಇದೆ.

10. ಜ್ವಾಲಾಮುಖಿಗಳು.—ಇವು ಮುಖ್ಯವಾಗಿ ಮೆಡಿಟರೇನಿಯನ್ ಸಮುದ್ರದಲ್ಲಿರುವ ದ್ವೀಪಗಳಲ್ಲಿಯೂ ಪರ್ಯಾಯ ದ್ವೀಪಗಳಲ್ಲಿಯೂ ಇವೆ. ಐಸ್ಲೆಂಡ್ ದ್ವೀಪದಲ್ಲೊಂದುಂಟು. ಹೆಕ್ಲ, ಎಟ್ನ, ವೆಸೂವಿಯಸ್, ಸ್ಟ್ರಾಂಬೋಲಿ ಎಂಬುವು ಮುಖ್ಯವಾದುವು. (1) ಹೆಕ್ಲ ಐಸ್ಲೆಂಡಿನಲ್ಲಿದೆ. (2) ಎಟ್ನ ಸಿಸಿಲಿಯಲ್ಲಿದೆ. (3) ವೆಸೂವಿಯಸ್ ಇಟಲಿಯಲ್ಲಿದೆ. (4) ಸ್ಟ್ರಾಂಬೋಲಿ ಮೆಡಿಟರೇನಿಯನ್ ಸಮುದ್ರದಲ್ಲಿರುವ ಲಿಪಾರಿ ದ್ವೀಪಗಳಲ್ಲಿದೆ. ಇದು ಐದು ಮಿನಿಟ್ಟಿಗೊಂದಾವೃತ್ತಿ ಆಡುವುದು, ಹೊಗೆಯನ್ನು ಮಾತ್ರ ಮೇಲಕ್ಕೆ ಎಸೆಯುತ್ತದೆ.

11. ಪ್ರಸ್ಥಭೂಮಿಗಳು.—ಏಷ್ಯದಲ್ಲಿರುವಂತೆ ವಿಸ್ತಾರವಾದ ಉನ್ನತ ಪ್ರಸ್ಥಭೂಮಿಗಳಿಲ್ಲ. ಈ ಖಂಡದ ಪಶ್ಚಿಮ ಭಾಗದಲ್ಲಿ ಸುಮಾರಾಗಿರುವ ನಾಲ್ಕು ಪ್ರಸ್ಥಭೂಮಿಗಳುಂಟು:—ಸ್ಪೇನಿನ ಪ್ರಸ್ಥಭೂಮಿ, ಸ್ವಿಸ್ ಮತ್ತು ಬವೇರಿಯನ್ ಪ್ರಸ್ಥಭೂಮಿ, ಟ್ರಾನ್ಸಿಲ್ವೇನಿಯಾ ಪ್ರಸ್ಥಭೂಮಿ, ಬಾಲ್ಕನ್ ಪ್ರಸ್ಥಭೂಮಿ.

12. ಮೈದಾನಗಳು.—ಪಿರನೀಸ್ ಪರ್ವತದಿಂದ ಯೂರಲ್ ಪರ್ವತದವರೆಗೂ ಮೈದಾನಗಳಿವೆ ; ಇವುಗಳಲ್ಲಿ ರಷ್ಯಾದೇಶದ ಮೈದಾನವು ಬಹಳ ವಿಶಾಲವಾದುದು. ಹಂಗೆರಿ, ಲಾಂಬರ್ಡಿ, ಆಂಡಲೂಷಿಯು ಎಂಬುವೂ ಮೈದಾನದ ಪ್ರದೇಶಗಳು. ಯೂರೋಪ್ ಖಂಡದಲ್ಲಿ ಮರುಭೂಮಿಗಳಿಲ್ಲ.

13. ನದಿಗಳು.—ಯೂರೋಪ್ ಖಂಡದಲ್ಲಿ ನದಿಗಳು ವಿಶೇಷವಾಗಿವೆ ; ಇವು ನಾನಾ ದಿಕ್ಕುಗಳಿಗೂ ಹರಿವುವು ; ಹಡಗಿನ ಪ್ರಯಾಣಕ್ಕೆ ಅನುಕೂಲವಾಗಿರುವುವು ; ಮತ್ತು ಮುಖದ ಕಡೆಗಳಲ್ಲಿ ಒಳ್ಳೆಯ ಅಳಿವೆಗಳನ್ನು ಉಂಟುಮಾಡಿವೆ. ಮುಖ್ಯವಾದ ನದಿಗಳು ಯಾವುವೆಂದರೆ :—

I. ಉತ್ತರ ಪಶ್ಚಿಮ ಭಾಗಗಳ ಇಳಿಜಾರು ಭೂಮಿಯಲ್ಲಿ—ಉತ್ತರಸಾಗರಕ್ಕೆ ಹೋಗುವ ಪೆಚೋರ ; ಬಿಳಿಯ ಸಮುದ್ರಕ್ಕೆ ಬೀಳುವ ಉತ್ತರಡ್ವೈನ ; ಬಾಲ್ಟಿಕ್ ಸಮುದ್ರಕ್ಕೆ ಹೋಗುವ ವಿಶ್ಚುಲ ಮತ್ತು ಓಡರ್ ; ಜರ್ಮನ್ ಸಮುದ್ರಕ್ಕೆ ಹರಿವ ಎಲ್ಬ್, ವೀಸರ್, ರ್ಹೈನ್, ಟೆಮ್ಸ್ ; ಅಟ್ಲಾಂಟಿಕ್ ಸಾಗರಕ್ಕೆ ಬೀಳುವ ಸೇನ್, ಲ್ವಾರ್, ಗೆರೋನ್, ಡೌರೋ, ಟೇಗಸ್, ಗ್ವಾಡಿಯಾನ, ಗ್ವಾಡಲ್‌ಕ್ವಿವರ್.

II. ದಕ್ಷಿಣ ಪೂರ್ವಭಾಗಗಳ ಇಳಿಜಾರು ಭೂಮಿಯಲ್ಲಿ—ಮೆಡಿಟರೇನಿಯನ್ ಸಮುದ್ರಕ್ಕೆ ಬೀಳುವ ಈಬ್ರೊ ಮತ್ತು ರ್ಹೋನ್ ; ಏಡ್ರಿಯಾಟಿಕ್‌ಸಮುದ್ರಕ್ಕೆ ಹರಿವ ಪೋ ; ಕಪ್ಪು ಸಮುದ್ರಕ್ಕೆ ಹರಿವ ಡಾನ್ಯೂಬ್ (೧,೭೦೦ ಮೈ), ನೀಸ್ಟರ್, ನೀಪರ್ ; ಏಸಾವ್ ಸಮುದ್ರವನ್ನು ಪ್ರವೇಶಿಸುವ ಡಾನ್ ; ಕ್ಯಾಸ್ಪಿಯನ್ ಸರೋವರಕ್ಕೆ ಬರುವ ವಾಲ್ಗ (೨,೨೦೦ ಮೈಲಿ), ಮತ್ತು ಯೂರಲ್ ನದಿ.

ಯೂರೋಪ್ ಖಂಡದ ಜಲವಿಭಾಗಭೂಮಿ ಈಶಾನ್ಯದಿಂದ ನೈರುತ್ಯಕ್ಕೆ ಹಬ್ಬಿದೆ. ನದಿಗಳು ಮುಖ್ಯವಾಗಿ ರಷ್ಯಾ ದೇಶದಲ್ಲಿರುವ ವಾಲ್ಡೈ ಪ್ರಸ್ಥಭೂಮಿಯಲ್ಲಿ ಮತ್ತು ಆಲ್ಪ್ಸ್ ಪರ್ವತದಲ್ಲಿ ಹುಟ್ಟುತ್ತವೆ. ರ್ಹೈನ್ ಮತ್ತು ಡಾನ್ಯೂಬ್ ನದಿಗಳು ಬಹು ಮುಖ್ಯವಾದುವುಗಳು.

ಡಾನ್ಯೂಬ್ ನದಿ ಈ ಖಂಡದ ನದಿಗಳೊಳಗೆ ದೊಡ್ಡದು ; ಬೇಡೆನ್ ಎಂಬ ರಾಷ್ಟ್ರದಲ್ಲಿ ಹುಟ್ಟಿ, ಅನೇಕ ದೇಶಗಳ ಮಾರ್ಗವಾಗಿ ಮೊದಲು ಪೂರ್ವವಾಹಿನಿಯಾಗಿ, ಆಮೇಲೆ ದಕ್ಷಿಣಕ್ಕೆ ತಿರುಗಿ, ಮರಳಿ ಪೂರ್ವವಾಹಿನಿಯಾಗಿ ಹರಿದು, ಕಪ್ಪು ಸಮುದ್ರಕ್ಕೆ ಬೀಳುತ್ತದೆ ಇದರ ಎಡಗಡೆಯ ಉಪನದಿಗಳು ಟೈಸ್ ಮತ್ತು ಪ್ರೂಟ್ ; ಬಲಗಡೆಯ ಉಪನದಿಗಳು ಲೆಚ್, ಈಸೆರ್, ಇನ್, ಡ್ರೇವ್, ಮತ್ತು ಸೇವ್. ಇದು ತನ್ನ ಮುಖಭಾಗದಲ್ಲಿ ಹೊಸ ಭೂಮಿಯನ್ನು ಮಾಡುತ್ತಿದೆ. ದೋಣಿ ಮುಂತಾದುವು ಸಂಚರಿಸುವುದಕ್ಕೆ ಯೋಗ್ಯವಾದ ಉಪನದಿಗಳು ೬೦ ಸೇರುವುವು. ಸೇತುವೆ ಕಟ್ಟುವುದಕ್ಕೆ ಈ ನದಿ ದೊಡ್ಡದು.

ರ್ಹೈನ್‌ನದಿ ಆಲ್ಪ್ಸ್ ಪರ್ವತದಲ್ಲಿ ಹುಟ್ಟಿ ೪೦೦ ಹಿಮನದಿಗಳಿಂದಲೂ ಹಿಮರಾಶಿಗಳಿಂದಲೂ ಪೋಷಿತವಾಗಿ ಉತ್ತರಕ್ಕೆ ಹರಿದು ಕಾನ್ಸ್ಟೆನ್ಸ್ ಎಂಬ ಸರೋವರ

ಕ್ಕೆ ಬಂದು, ಅಲ್ಲಿಂದ ಹೊರಟು ಎಡದ ಕಡೆ ಆರ್ (Aar) ಮತ್ತು ಮೊಸೆಲ್, ಬಲದ ಕಡೆ ನೆಕ್ಕಾರ್ ಮತ್ತು ಮೆಯಿನ್ ಎಂಬ ಮುಖ್ಯವಾದ ಉಪನದಿಗಳನ್ನು ಸ್ವೀಕರಿಸಿ ಗಮಿಸಿ ಜರ್ಮ್ಮ ಸಮುದ್ರವನ್ನು ಸೇರುವುದು. ಇದರ ಮುಖಭಾಗದಲ್ಲಿ ವಿಶಾಲವಾದ ನದೀಮುಖಜ ಭೂಮಿ ಇದೆ. ಈ ನದಿಗೂ ರ್ಹೋನ್, ಸ್ಕೆಲ್ಟ್, ಮೂಸ್, ಡಾನ್ಯೂಬ್ ನದಿಗಳಿಗೂ ಕಾಲುವೆಗಳ ಮೂಲಕ ಸಂಬಂಧವುಂಟು. ಜರ್ಮ್ಮ ಜನರು ಇದನ್ನು ಪಿತೃವಿನಂತೆ ಭಾವಿಸಿರುವರು.

ಅಟ್ಲಾಂಟಿಕ್ ಸಾಗರಕ್ಕೂ ಜರ್ಮ್ಮ ಸಮುದ್ರಕ್ಕೂ ಹರಿವ ನದಿಗಳ ಮುಖಭಾಗಗಳು ಸಮುದ್ರದ ಉಬ್ಬರವಿಳಿತಗಳಿಗೆ ಒಳಪಟ್ಟಿರುವುದರಿಂದ ವ್ಯಾಪಾರಕ್ಕೆ ಬಹು ಅನುಕೂಲವಾಗಿವೆ.

14. ಸರೋವರಗಳು.—ಈ ಖಂಡದಲ್ಲಿ ಅನೇಕ ಸರೋವರಗಳಿವೆ. ಇವು ಮುಖ್ಯವಾಗಿ ಬಾಲ್ಟಿಕ್ ಸಮುದ್ರದ ಸಮೀಪದಲ್ಲಿಯೂ ಪಶ್ಚಿಮ ಭಾಗದ ಆಲ್ಪ್ಸ್ ಪರ್ವತದಲ್ಲಿಯೂ ಇವೆ. ಇವುಗಳಲ್ಲಿ ಮುಖ್ಯವಾದುವು :—ಬಾಲ್ಟಿಕ್ ಸಮುದ್ರದ ಸಮೀಪದಲ್ಲಿ ಲಡೋಗ ಮತ್ತು ಒನೀಗ ; ಇವುಗಳ ನೀರು ನೀವ ಎಂಬ ನದಿಯ ಮೂಲಕ ಬಾಲ್ಟಿಕ್ ಸಮುದ್ರಕ್ಕೆ ಹೋಗಿ ಬೀಳುತ್ತದೆ. ಪಶ್ಚಿಮಭಾಗದ ಆಲ್ಪ್ಸ್ ಪರ್ವತದಲ್ಲಿ ಜಿನೀವ, ಕಾನ್‌ಸ್ಟೆನ್ಸ್, ಗಾರ್ಡ್, ಮೆಜಿಯೋರೆ, ಎಂಬುವು ಇವೆ. ಜಿನೀವ ಸರೋವರದಿಂದ ರ್ಹೋನ್, ಕಾನ್‌ಸ್ಟೆನ್ಸ್ ಸರೋವರದಿಂದ ರ್ಹೈನ್ ಹರಿಯುತ್ತದೆ.

15. ವಾಯುಗುಣ.—ಯೂರೋಪ್‌ಖಂಡವು ಉತ್ತರ ಸಮಶೀತೋಷ್ಣ ವಲಯದಲ್ಲಿದೆ ; ಏಷ್ಯಾಖಂಡದಲ್ಲಿರುವ ವಿಪರೀತವಾದ ಸೆಕೆಯೂ ಇಲ್ಲ, ವಿಪರೀತವಾದ ಚಳಿಯೂ ಇಲ್ಲ, ಸಮುದ್ರದ ಗಾಳಿಯ ದೆಸೆಯಿಂದ ಸೆಕೆ ಮತ್ತು ಚಳಿ ವಿಪರೀತವಾಗದಂತಿರುವುವು. ದಕ್ಷಿಣದಿಂದ ಉತ್ತರಕ್ಕೆ ಹೋಗುತ್ತ, ಸೆಕೆ ಕಡಿಮೆಯಾಗಿ ಚಳಿ ಹೆಚ್ಚುವುದು ; ಆದರೆ ಪಶ್ಚಿಮದಿಂದ ಪೂರ್ವಕ್ಕೆ ಹೋಗುವಾಗ ತೋರುವಷ್ಟು ಭೇದ ಈ ಕಡೆಯಲ್ಲಿ ಹೋಗುವಾಗ ತೋರುವುದಿಲ್ಲ. ಅನೇಕ ಭಾಗಗಳಲ್ಲಿ ಮಳೆ ಚೆನ್ನಾಗಿ ಹೊಯ್ಯುತ್ತದೆ.

ಅಟ್ಲಾಂಟಿಕ್ ಸಾಗರದಲ್ಲಿ ಹರಿವ ಗಲ್ಫ್‌ಸ್ಟ್ರೀಮ್ ಎಂಬ ಉಷ್ಣೋದಕ ಪ್ರವಾಹದ ದೆಸೆಯಿಂದ ಪಶ್ಚಿಮ ಭಾಗದ ವಾಯುಗುಣವು ಹಿತಕರವಾಗಿರುವುದು.

ಅಟ್ಲಾಂಟಿಕ್ ಸಾಗರದ ಕಡೆಯಿಂದ ಮಳೆಯ ಮೇಘಗಳು ಹೆಚ್ಚಾಗಿ ಬರುವುವು. ಪಶ್ಚಿಮದಿಂದ ಪೂರ್ವಕ್ಕೆ ಹೋಗುತ್ತಾ ಹೋಗುತ್ತಾ ಮಳೆ ಕಡಿಮೆಯಾಗುತ್ತದೆ.

16. ಉದ್ಭಿಜ್ಜಗಳು.—ಸೆಕೆ ಇರುವ ದಕ್ಷಿಣಭಾಗದಲ್ಲಿ ಭತ್ತ, ಕಬ್ಬು, ಹತ್ತಿ, ಗೋಧಿ, ಅಂಜೂರ, ಕಿತ್ತಿಳೆ, ಚಪ್ಪರದ್ರಾಕ್ಷೆ, ಬಾದಾಮಿ ಮುಂತಾದುವು ಬೆಳೆವುವು. ಮಧ್ಯಭಾಗದಲ್ಲಿ ಗೋಧಿ, ಜವೆಗೋಧಿ, ಬಗೆಬಗೆಯ ಹಣ್ಣುಗಳು

ಬಹಳ ಚೆನ್ನಾಗಿ ಆಗುತ್ತವೆ; ಮತ್ತು ಬಾನವೃಕ್ಷ, ಪೀತದಾರು ಮುಂತಾದ ವೃಕ್ಷಗಳು ಬೆಳೆಯುತ್ತವೆ. ಉತ್ತರಭಾಗದಲ್ಲಿ ಜವೆಗೋಧಿ, ಮತ್ತು ತೋಕೆಗೋಧಿ ಆಗುತ್ತವೆ; ಆದರೆ ಹಣ್ಣಿನ ಗಿಡಗಳು ಬೆಳೆವುದಿಲ್ಲ. ಉತ್ತರ ಅಕ್ಷಾಂಶ ೬೪ ರಿಂದ ಉತ್ತರಕ್ಕೆ ಚಳಿ ಬಹಳ ಹೆಚ್ಚು, ಮರ ಗಿಡಗಳು ಬೆಳೆವುದಿಲ್ಲ; ಪಾಚಿ ಶಿಲಾವಲ್ಕಗಳು ಮಾತ್ರ ಆಗುವುವು.

17. ಪ್ರಾಣಿಗಳು.—ವ್ಯವಸಾಯವು ಹೆಚ್ಚಿರುವುದರಿಂದ ದುಷ್ಟಮೃಗಗಳು ಬಹಳ ಕಡಿಮೆಯಾಗಿವೆ. ಕಾಡುಹಂದಿ (Boar) ಮತ್ತು ಕಪಿಲವರ್ಣದ ಕರಡಿಗಳು (Brown Bear) ಮಧ್ಯಭಾಗದಲ್ಲಿ ಇನ್ನೂ ಇವೆ. ಸಾಧುವಾಗಿರುವ ಪ್ರಾಣಿಗಳಲ್ಲಿ ಕುದುರೆ, ಎತ್ತು, ಕುರಿ, ಮೇಕೆ (goat) ಹಂದಿ ಮತ್ತು ನಾಯಿ ಮುಖ್ಯವಾದುವುಗಳು.

ಸ್ಪೇನ್‌ದೇಶದ ಕತ್ತೆ ಸುಂದರವಾಗಿಯೂ ದೊಡ್ಡದಾಗಿಯೂ ಇದೆ. ಹುಲಿ, ಸಿಂಹ, ಚಿರತೆ ಯೂರೋಪ್ ಖಂಡದಲ್ಲಿ ಇಲ್ಲ. ಜಿಬ್ರಾಲ್ಟರ್ ಹತ್ತಿರದಲ್ಲಿ ಮಾತ್ರ ಕೆಲವು ಕೋತಿಗಳಿವೆ. ಮಧುರವಾಗಿ ಗಾನಮಾಡುವ ಪಕ್ಷಿಗಳಿರುವುವು. ನದಿಗಳಲ್ಲಿಯೂ ಸಮುದ್ರದಲ್ಲಿಯೂ ಮೀನು ವಿಶೇಷವಾಗಿರುವುದು. ಕ್ರಿಮಿಗಳೂ, ಉರೋಗಮನಿಗಳೂ ಕಡಿಮೆ.

18. ಖನಿಜಗಳು.—ಗ್ರೇಟ್‌ಬ್ರಿಟನ್, ಜರ್ಮನಿ, ಆಸ್ಟ್ರಿಯ, ಹಂಗೆರಿ, ಈ ದೇಶಗಳಲ್ಲಿ ಖನಿಜಗಳು ವಿಶೇಷವಾಗಿವೆ. ಕಬ್ಬಿಣ, ಸೀಸ, ತಾಮ್ರ, ತವರ, ಪಾದರಸ, ಕಲ್ಲಿದ್ದಲು ಮತ್ತು ಉಪ್ಪು ಇವು ಮುಖ್ಯ ಖನಿಜಗಳು.

ಚಿನ್ನವೂ ಬೆಳ್ಳಿಯೂ ಇತರದೇಶಗಳಿಂದ ಬರಬೇಕಾಗಿದೆ. ಸ್ಪೇನ್, ಆಸ್ಟ್ರಿಯಗಳಲ್ಲಿ ಪಾದರಸ ಹೆಚ್ಚಾಗಿ ಸಿಕ್ಕುತ್ತದೆ. ಸ್ವೀಡನ್ನಿನ ಕಬ್ಬಿಣವು ಉತ್ಕೃಷ್ಟವಾದುದು. ಬ್ರಿಟನ್ ದ್ವೀಪದಲ್ಲಿ ಕಬ್ಬಿಣ ಮತ್ತು ಕಲ್ಲಿದ್ದಲು ಬಹಳ ಹೆಚ್ಚಾಗಿ ಸಿಕ್ಕುತ್ತವೆ.

19. ಜನರು ಮತ್ತು ಅವರ ಕುಲಗಳು.—ಯೂರೋಪ್ ಖಂಡದ ಜನಸಂಖ್ಯೆ ೪೩,೦೦,೦೦,೦೦೦.

[ಈ ಖಂಡದಲ್ಲಿರುವ ಜನರು ಆರ್ಯ ಕುಲಕ್ಕೂ ಮಂಗೋಲಿಯನ್ ಕುಲಕ್ಕೂ ಸೇರಿದವರು. ಆರ್ಯಕುಲದವರಲ್ಲಿ ಜರ್ಮಾನಿಕ್, ರೋಮಾನಿಕ್ (ಗ್ರೀಕೋ—ಲಾಟಿನ್), ಸ್ಲಾವಾನಿಕ್, ಮತ್ತು ಕೆಲ್ಟಿಕ್ ಎಂಬ ೪ ವಂಶಗಳುಂಟೆಂದು ತಿಳಿಯಬಹುದು. ತುರುಕರು ಮಂಗೋಲಿಯನ್ ಕುಲಕ್ಕೆ ಸೇರಿದವರು.]

ಯೂರೋಪ್ ಖಂಡದಲ್ಲಿ ಪ್ರಚುರವಾಗಿರುವ ಭಾಷೆಗಳು (ತುರುಕರ ಮತ್ತು ಇನ್ನು ಕೆಲವರ ಭಾಷೆಗಳು ವಿನಾ) ಆರ್ಯಭಾಷಾ ಕುಲಕ್ಕೆ ಸೇರಿದುವುಗಳಾಗಿವೆ.

20. ಮತಗಳು.—ಯೂರೋಪ್ ಖಂಡದಲ್ಲಿ ಕೆಲವರು ಮಹಮ್ಮದೀಯರೂ, ಯಹೂದ್ಯರೂ ಇದ್ದಾರೆ; ಉಳಿದವರೆಲ್ಲರೂ ಕ್ರಿಸ್ತರು.

ಕ್ರಿಸ್ತಮತಸ್ಥರಲ್ಲಿ ಮುಖ್ಯವಾಗಿ ಮೂರು ಭೇದಗಳುಂಟು—ರೋಮನ್ ಕ್ಯಾಥೊಲಿಕ್, ಪ್ರಾಟೆಸ್ಟೆಂಟ್ ಮತ್ತು ಗ್ರೀಕ್‌ಚರ್ಚ್. ರೋಮನ್‌ಕ್ಯಾಥೊಲಿಕ್ ಗುಂಪಿಗೆ ಸೇರಿರುವವರ ಸಂಖ್ಯೆ ಹೆಚ್ಚು.

21. ರಾಜ್ಯಭಾರ ಕ್ರಮಗಳು.—ಈ ಖಂಡದಲ್ಲಿ ಈಗ ರಷ್ಯದಲ್ಲಿ ವಿನಾ ಇನ್ನೆಲ್ಲಿಯೂ ನಿರಂಕುಶಪ್ರಭುತ್ವವಿಲ್ಲ. ಸಾಂಕುಶಪ್ರಭುತ್ವವೂ, ಪ್ರಜಾಪ್ರತಿನಿಧಿಪ್ರಭುತ್ವವೂ ವಾಡಿಕೆಯಾಗಿವೆ.

ತುರ್ಕಿಯ ಸುಲ್ತಾನನು ಏಷ್ಯಾ ಮತ್ತು ಆಫ್ರಿಕಾ ಖಂಡಗಳಲ್ಲಿರುವ ತನ್ನ ಪ್ರಜೆಗಳನ್ನು ಹಿಂಸಿಸುತ್ತಿರುವನಾದರೂ, ಯೂರೋಪ್ ಖಂಡದಲ್ಲಿರುವ ತನ್ನ ಪ್ರಜೆಗಳನ್ನು ಹಿಂಸಿಸದೆ ಇರುವನು.

22. ಯೂರೋಪ್ ಖಂಡದ ಸ್ಥಿತಿ.—ಯೂರೋಪ್ ಖಂಡವು ಚಿಕ್ಕದು; ಆದರೂ ಬಹು ಜನಭರಿತವಾಗಿದೆ.

ಯೂರೋಪ್ ಖಂಡದ ರಾಜರು ಇತರ ಖಂಡಗಳಲ್ಲಿ ಅನೇಕ ಭಾಗಗಳನ್ನು ತಮ್ಮ ಸ್ವಾಧೀನಮಾಡಿಕೊಂಡು ಆಳುತ್ತಾ ಬಹು ಸಂಪದ್ಯುಕ್ತರಾಗಿ ಬಾಳುತ್ತಿರುವರು.

ನಾಗರಿಕತೆಯಲ್ಲಿಯೂ, ಕೈಗಾರಿಕೆಯಲ್ಲಿಯೂ, ವ್ಯಾಪಾರದಲ್ಲಿಯೂ, ಶಾಸ್ತ್ರಜ್ಞಾನ ಮತ್ತು ಕುಶಲವಿದ್ಯೆಗಳಲ್ಲಿಯೂ ಯೂರೋಪ್ ಖಂಡವು ಇತರ ಖಂಡಗಳನ್ನು ಮೀರಿಸಿದೆ. ಇಷ್ಟು ಅಭಿವೃದ್ಧಿಗೆ ಬರುವುದಕ್ಕೆ ೬ ಬಗೆಯ ಕಾರಣಗಳುಂಟು ಅವು ಯಾವುವೆಂದರೆ:—

(1). ಸಮುದ್ರ ಶಾಖೆಗಳೂ, ಪರ್ಯಾಯ ದ್ವೀಪಗಳೂ, ದ್ವೀಪಗಳೂ ಹೆಚ್ಚಾಗಿವೆ. ತೀರಪ್ರದೇಶವೂ ಬಂದರುಗಳೂ ಹೆಚ್ಚು. ಸಮುದ್ರಕ್ಕೆ ಬಹುದೂರವಾಗಿರುವ ಪ್ರದೇಶಗಳು ಕಡಿಮೆ.

(2) ಮಳೆ ತಕ್ಕಷ್ಟು ಆಗುವುದು. ಅತಿವೃಷ್ಟ್ಯನಾವೃಷ್ಟಿ ಪ್ರದೇಶಗಳು ಬಹಳ ಕಡಿಮೆ. ನೆಲವು ಫಲವತ್ತಾಗಿರುವುದು.

(3) ಖನಿಜಗಳು ಪುಷ್ಕಳವಾಗಿವೆ, ವ್ಯಾಪಾರದ ಸಾಕರ್ಯಗಳು ಚೆನ್ನಾಗಿವೆ.

(4) ಒಂದು ಭಾಗದಿಂದ ಮತ್ತೊಂದು ಭಾಗಕ್ಕೆ ಸುಲಭವಾಗಿ ಹೋಗಬಹುದು. ದುರ್ಗಮವಾದ ಪರ್ವತಗಳೂ ಇಲ್ಲ, ದೊಡ್ಡ ಮರುಭೂಮಿಗಳೂ ಇಲ್ಲ.

(5). ವಾಯುಗುಣವು ಉತ್ತರದ ಕೆಲವು ಭಾಗಗಳಲ್ಲಿ ವಿನಾ ಉಳಿದ ಭಾಗಗಳಲ್ಲಿ ಏಕರೀತಿಯಾಗಿಯೂ ಹಿತಕರವಾಗಿಯೂ ಇರುವುದು.

(6). ಶಾಸ್ತ್ರ ವಿದ್ಯಾಭ್ಯಾಸಗಳು ಚನ್ನಾಗಿ ನಡೆಯುತ್ತಿವೆ. ಜನರು ಬುದ್ಧಿವಂತರಾಗಿಯೂ ಸಾಹಸಿಗಳಾಗಿಯೂ ಇದ್ದಾರೆ.

23. ಯೂರೋಪ್ ಖಂಡದ ದೇಶಗಳ ವಿಸ್ತೀರ್ಣವನ್ನೂ ಜನಸಂಖ್ಯೆಯನ್ನೂ ತೋರಿಸುವ ಪಟ್ಟಿ.

ದೇಶಗಳು.	ವಿಸ್ತೀರ್ಣ ಚ. ಮೈ.	ಜನಸಂಖ್ಯೆ.	ರಾಜಧಾನಿ.
1. ಗ್ರೇಟ್‌ಬ್ರಿಟನ್ ಮತ್ತು ಐರ್ಲೆಂಡ್.	1,21,030	4,19,00,000	ಲಂಡನ್
2. ಫ್ರಾನ್ಸ್	2,07,000	3,89,00,000	ಪಾರಿಸ್
3. ಬೆಲ್ಜಿಯಂ	11,300	66,00,000	ಬ್ರಸಲ್ಸ್
4. ಹಾಲೆಂಡ್ ...	12,600	55,00,000	ಆಮ್‌ಸ್ಟರ್ಡಾಮ್
5. ಸ್ವಿಟ್ಜರ್ಲೆಂಡ್....	15,900	33,00,000	ಬರ್ನ್
6. ಜರ್ಮನಿ	2,08,800	5,64,00,000	ಬರ್ಲಿನ್
7. ಆಸ್ಟ್ರಿಯ ಹಂಗೆರಿ.	2,65,000	4,70,00,000	ವಿಯನ್ನ
8. ಡೆನ್ಮಾರ್ಕ್	15,300	24,00,000	ಕೋಪನ್‌ಹೇಗನ್
9. ನಾರ್ವೆ ಮತ್ತು ಸ್ವೀಡೆನ್.	2,97,200	73,00,000	ಕ್ರಿಶ್ಚಿಯಾನಿಯ, ಮತ್ತು ಸ್ಟಾಕ್‌ಹೋಂ.
10. ಯೂರೋಪಿನ ರಷ್ಯ.	19,96,700	10,74,00,000	~~ಸೇಂಟ್‌ಪೀಟರ್ಸ್‌ಬರ್ಗ್~~
11. ಯೂರೋಪಿನ ತುರ್ಕಿ	65,300	61,00,000	ಕಾನ್‌ಸ್ಟಾಂಟಿನೋಪಲ್
12. ಮಾಂಟಿನೀಗ್ರೊ.	3,500	2,50,000	ಸೆಟಿನ್ಯೆ
13. ಸರ್ವಿಯ	18,600	24,00,000	ಬೆಲ್‌ಗ್ರೇಡ್
14. ರೊಮೇನಿಯ.	50,700	59,00,000	ಬುಕಾರೆಸ್ಟ್
15. ಗ್ರೀಸ್	25,000	24,00,000	ಆಥೆನ್ಸ್
16. ಇಟಲಿ	1,10,500	3,24,00,000	ರೋಮ್
17. ಸ್ಪೇನ್	1,94,700	1,86,00,000	ಮೆಡ್ರಿಡ್
18. ಪೋರ್ಚುಗಲ್.	35,400	54,00,000	ಲಿಸ್ಬನ್

ಬ್ರಿಟಿಷ್ ದ್ವೀಪಗಳು.

1. ಪೀಠಿಕೆ.—ಬ್ರಿಟಿಷ್ ದ್ವೀಪಗಳು ಜರ್ಮನ್ ಸಮುದ್ರಕ್ಕೂ ಅಟ್ಲಾಂಟಿಕ್ ಸಾಗರಕ್ಕೂ ನಡುವೆ ಇವೆ. ಸಂಖ್ಯೆಯನ್ನು ನೋಡುವ ಪಕ್ಷಕ್ಕೆ ೫೦೦ ಕ್ಕಿಂತ ಹೆಚ್ಚಾಗಿರುವುವು; ಆದರೆ ಇವುಗಳಲ್ಲಿ ಎರಡು ಮಾತ್ರ ದೊಡ್ಡವು—ಗ್ರೇಟ್ ಬ್ರಿಟನ್ ಮತ್ತು ಐರ್ಲೆಂಡ್. ಗ್ರೇಟ್‌ಬ್ರಿಟನ್ ಎಂಬುದರಲ್ಲಿ ಇಂಗ್ಲೆಂಡ್, ವೇಲ್ಸ್, ಮತ್ತು ಸ್ಕಾಟ್ಲೆಂಡ್ ಎಂಬ ಮೂರು ದೇಶಗಳಿವೆ. ಪೂರ್ವಕಾಲದಲ್ಲಿ ಬ್ರಿಟನ್ನಿನ ದೇಶಗಳೂ ಐರ್ಲೆಂಡೂ ಬೇರೆ ಬೇರೆ ರಾಜ್ಯಗಳಾಗಿದ್ದುವು. ಈಗ ಎಲ್ಲಾ ಒಬ್ಬರಾಜನ ಆಳಿಕೆಯಲ್ಲಿಯೇ ಇವೆ. ಇವುಗಳ ಒಟ್ಟು ವಿಸ್ತೀರ್ಣವು ೧,೨೧,೦೦೦ ಚ. ಮೈ. ಜನಸಂಖ್ಯೆ ಸುಮಾರು ೪,೮೯,೦೦,೦೦೦.

ಬ್ರಿಟಿಷ್ ದ್ವೀಪಗಳ ಐಶ್ವರ್ಯವೂ ಪ್ರಾಬಲ್ಯವೂ ಪೃಥ್ವಿಯಲ್ಲಿ ಇನ್ನು ಯಾವ ದೇಶಕ್ಕೂ ಇಲ್ಲ. ಇವು ವ್ಯಾಪಾರಕ್ಕೆ ಬಹು ಅನುಕೂಲವಾದ ಸ್ಥಳದಲ್ಲಿವೆ. ಸ್ಕಾಂಡಿನೇವಿಯದ ಸಂಗಡ ಎಷ್ಟು ಸುಲಭವಾಗಿ ವ್ಯಾಪಾರ ಮಾಡಬಹುದೋ ಅಷ್ಟು ಸುಲಭವಾಗಿ ಸ್ಪೇನಿನ ಸಂಗಡಲೂ ವ್ಯಾಪಾರ ಮಾಡಬಹುದು. ಸಾಗರಗಳ ಮಾರ್ಗವಾಗಿ ಏಷ್ಯಾಖಂಡದ ಸಂಗಡಲೂ ಉತ್ತರ ದಕ್ಷಿಣ ಅಮೆರಿಕಾ ಖಂಡಗಳ ಸಂಗಡಲೂ ವ್ಯಾಪಾರ ಮಾಡಬಹುದಾಗಿದೆ. ಈ ದ್ವೀಪಗಳಲ್ಲಿ ಬಂದರುಗಳೂ, ರೇವುಪಟ್ಟಣಗಳೂ ವಿಶೇಷವಾಗಿವೆ. ಜನರು ಸಾಹಸಿಗಳಾದ ನಾವಿಕರಾಗಿದ್ದಾರೆ. [ಪೃಥ್ವಿಯ ಸಕಲ ಖಂಡಗಳಲ್ಲಿಯೂ ಬ್ರಿಟಿಷರಿಗೆ ಸೇರಿದ ರಾಜ್ಯಗಳಿರುವುದರಿಂದ 'ಬ್ರಿಟಿಷ್ ಚಕ್ರಾಧಿಪತ್ಯದಲ್ಲಿ ಸೂರ್ಯನು ಕಾಣಿಸದ ಕಾಲವಿಲ್ಲ' ವೆಂಬುದು ನಿಜವಾಗಿಯೇ ಇದೆ.]

ಇಂಗ್ಲೆಂಡ್ ಮತ್ತು ವೇಲ್ಸ್.

2. ಮೇರೆ ಮುಂತಾದ ವಿಷಯಗಳು.—ವೇಲ್ಸಿನಿಂದ ಕೂಡಿದ ಇಂಗ್ಲೆಂಡಿಗೆ ಉತ್ತರದಲ್ಲಿ ಸ್ಕಾಟ್ಲೆಂಡ್; ಪೂರ್ವದಲ್ಲಿ ಜರ್ಮನ್‌ಸಮುದ್ರ; ದಕ್ಷಿಣದಲ್ಲಿ ಇಂಗ್ಲಿಷ್ ಕಡಲ್ಗಾಲುವೆ; ಪಶ್ಚಿಮದಲ್ಲಿ ಅಟ್ಲಾಂಟಿಕ್ ಸಾಗರ, ಸೆಂಟ್‌ಜಾರ್ಜ್ ಎಂಬ ಕಡಲ್ಗಾಲುವೆ, ಮತ್ತು ಐರಿಷ್ ಸಮುದ್ರ ಇವೆ. ವಿಸ್ತೀರ್ಣದಲ್ಲಿ ಇಂಗ್ಲೆಂಡ್ ೫೦,೮೦೦; ವೇಲ್ಸ್ ೭,೪೦೦ ಚ. ಮೈ. ಯಷ್ಟು ಇರುವುದು. ಜನಸಂಖ್ಯೆ ೩,೯೦,೦೦,೦೦೦.

(a) ಸಮುದ್ರಶಾಖೆಗಳು.—ಪೂರ್ವತೀರದಲ್ಲಿ—ಹಂಬರ್, ವಾಷ್, ಮತ್ತು ಟೇಮ್ಸ್‌ನದಿಗಳ ಅಳಿವೆಗಳು (Estuaries), ಪಶ್ಚಿಮತೀರದಲ್ಲಿ ಬ್ರಿಸ್ಟಲ್ ಚಾನಲ್

ಕಾರ್ಡಿಗನ್ ಕೊಲ್ಲಿ, ಮರ್ಸಿ ಎಂಬ ನದಿಯ ಅಳಿವೆ, ಮೊರೆಕಾಂಬೆ ಕೊಲ್ಲಿ ಮತ್ತು ಸಾಲ್ವೆ ಪರ್ತ್.

ಬ್ರಿಸ್ಟಲ್ ಚಾನಲ್ಲಿಗೆ ವಾಯುವ್ಯದಲ್ಲಿ ಮಿಲ್ ಫರ್ಡ್ ಹೇವನ್ ಎಂಬ ಬಹು ಅನುಕೂಲವಾದ ಬಂದರು ಇದೆ. ಇದಕ್ಕಿಂತ ಅನುಕೂಲವಾದ ಬಂದರು ಇನ್ನು ಯಾವುದೂ ಈ ದೇಶದಲ್ಲಿಲ್ಲ.

(*b*) ಮುಖ್ಯವಾದ ಭೂಶಿರಗಳು.—ಪೂರ್ವತೀರದಲ್ಲಿ ಫ್ಲಾಂಬರೊಶಿರ, ಸ್ಪರ್ನ್‌ಶಿರ, ಉತ್ತರಫೋರ್ಲೆಂಡ್; ದಕ್ಷಿಣತೀರದಲ್ಲಿ ದಕ್ಷಿಣ ಫೋರ್ಲೆಂಡ್, ಬೀಚಿಹೆಡ್, ಲಿಜರ್ಡ್ ಪಾಯಿಂಟ್; ಪಶ್ಚಿಮದಲ್ಲಿ ಲಾಂಡ್ಸೆಂಡ್, ಸೆಂಟ್ ಡೇವಿಡ್ಸ್ ಹೆಡ್.

(*c*) ಮುಖ್ಯವಾದ ದ್ವೀಪಗಳು.—ದಕ್ಷಿಣದಲ್ಲಿ ವೈಟ್ ದ್ವೀಪ, ಚಾನಲ್ ದ್ವೀಪಗಳು, ಸಿಲ್ಲಿದ್ವೀಪಗಳು; ಪಶ್ಚಿಮದಲ್ಲಿ ಆಂಗ್ಲಸಿ, ಮನ್‌ದ್ವೀಪ.

3. ದೇಶದ ಲಕ್ಷಣ.—ವೇಲ್ಸ್ ಬೆಟ್ಟದಸೀಮೆ. ಇಂಗ್ಲೆಂಡಿನಲ್ಲಿ ಪೂರ್ವಭಾಗದಲ್ಲಿ ಮೈದಾನಗಳು ಹೆಚ್ಚಾಗಿರುವುವು, ಪಶ್ಚಿಮದ ಕಡೆ ಬೆಟ್ಟಗಳು ಇರುವುವು.

ಬೆಟ್ಟಗಳು.—(1) ಪೆನ್ನೈನ್ ಬೆಟ್ಟದ ಸಾಲು. ಇದು ಸ್ಕಾಟ್ಲೆಂಡಿನ ಸರಹದ್ದಿನಿಂದ ಡರ್ಬಿಷೈರ್‌ವರೆಗೆ ಹಬ್ಬಿದೆ. ಈ ಬೆಟ್ಟದ ಸಾಲಿಗೆ ಪೂರ್ವಕ್ಕೂ ದಕ್ಷಿಣಕ್ಕೂ ಮೈದಾನಗಳಿವೆ. ಇದರ ಪಶ್ಚಿಮಕ್ಕೆ (2) ಕಂಬ್ರಿಯನ್ ಬೆಟ್ಟಗಳು ಇವೆ; ೩,೨೦೦ ಅಡಿ ಎತ್ತರವಿರುವ ಸ್ಕಾಫೆಲ್ ಎಂಬುದು ಈ ಬೆಟ್ಟಸಾಲುಗಳಲ್ಲಿದೆ. (3) ಕಾಂಬ್ರಿಯನ್ ಬೆಟ್ಟಗಳು ವೇಲ್ಸಿನಲ್ಲಿವೆ, ಸ್ನೋಡನ್ (೩,೫೬೦ ಅಡಿ) ಎಂಬುದು ಇಂಗ್ಲೆಂಡಿನ ಅತ್ಯುನ್ನತ ಶಿಖರ.

ಮೇಲೆ ಹೇಳಿರುವುವಲ್ಲದೆ ಇನ್ನೂ ಕೆಲವು ಸಣ್ಣ ಬೆಟ್ಟಗಳುಂಟು.

4. ನದಿಗಳು.—ಇಂಗ್ಲೆಂಡಿನಲ್ಲಿ ಕಾವೇರೀನದಿಯಷ್ಟು ಉದ್ದವಾದ ನದಿಗಳು ಕೂಡ ಇಲ್ಲ; ಈ ದೇಶದಲ್ಲಿ ಬಹು ಉದ್ದವಾದುದೆನಿಸಿಕೊಂಡಿರುವ ಸೆವರ್ನ್ ನದಿ ೨೧೦ ಮೈಲಿಯಷ್ಟು ಉದ್ದವಾಗಿದೆ; ಟೆಮ್ಸ್‌ನದಿಯ ಉದ್ದ ೨೧೫ ಮೈಲಿ. ಆದರೆ ಈ ದೇಶದ ದೊಡ್ಡ ನದಿಗಳು ನಿಧಾನವಾಗಿಯೂ ಅಗಲವಾಗಿಯೂ ಹರಿಯುತ್ತವೆ, ಸಮುದ್ರದ ಉಬ್ಬರವಿಳಿತಗಳಿಗೆ ಒಳಪಟ್ಟಿವೆ, ಹಡಗುಗಳ ಸಂಚಾರಕ್ಕೆ ಅನುಕೂಲವಾದುವುಗಳು.

ಮುಖ್ಯವಾದ ನದಿಗಳು ಯಾವುವೆಂದರೆ:—ಪೂರ್ವಭಾಗದ ಇಳಿಜಾರು ನೆಲದಲ್ಲಿ ಟೈನ್, ವೇರ್, ಊಸ್ ಮತ್ತು ಟ್ರೆಂಟ್ ಎಂಬ ನದಿಗಳು ಸೇರಿ ಆಗುವ ಹಂಬರ್, ಟೆಮ್ಸ್ (೨೧೫ ಮೈಲಿ); ದಕ್ಷಿಣದ ಇಳಿಜಾರುನೆಲದಲ್ಲಿ—ಎಕ್ಸ್, ಏವನ್; ಪಶ್ಚಿಮದ ಇಳಿಜಾರು ನೆಲದಲ್ಲಿ—ಮರ್ಸಿ, ಸೆವರ್ನ್ (೨೧೦ ಮೈಲಿ).

ಈ ದೇಶದ ವಾಯುವ್ಯಭಾಗದಲ್ಲಿ ಹೆಲ್ವೆಲಿನ್ ಎಂಬ ಬೆಟ್ಟದ ಸುತ್ತಲೂ ಏಳು ಸರೋವರಗಳಿವೆ. ವಿಂಡರ್‌ಮಿಯರ್ ಮತ್ತು ಅಲಿಸ್‌ವಾಟರ್ ಎಂಬುವು ಮುಖ್ಯವಾದುವು.

5. ವಾಯುಗುಣ.—ಗಲ್ಫ್‌ಸ್ಟ್ರೀಮ್ ಎಂಬ ಅಟ್ಲಾಂಟಿಕ್ ಸಾಗರದಲ್ಲಿ ಹರಿವ ಉಷ್ಣೋದಕಪ್ರವಾಹದ ದೆಸೆಯಿಂದಲೂ, ಸಮುದ್ರವು ಸಮೀಪವಾಗಿರುವುದರಿಂದಲೂ, ಈ ದೇಶದ ವಾಯುಗುಣವು ಹಿತಕರವಾಗಿದೆ, ಚಳಿ ಅಸಹ್ಯವಾಗಿಲ್ಲ. ಪೂರ್ವಭಾಗಕ್ಕಿಂತ ಪಶ್ಚಿಮಭಾಗದಲ್ಲಿ ಮಳೆ ಹೆಚ್ಚಾಗಿ ಹೊಯ್ಯುವುದು.

6. ಬೆಳೆಗಳು ಮತ್ತು ಮರಗಳು:—ಗೋಧಿ, ಜವೆಗೋಧಿ, ಮತ್ತು ತೋಕೆಗೋಧಿ ಮುಖ್ಯ ಧಾನ್ಯಗಳು; ಭತ್ತ, ರಾಗಿ, ಜೋಳ, ಮುಂತಾದ ಉಷ್ಣವಲಯದ ಧಾನ್ಯಗಳು ಬೆಳೆವುದಿಲ್ಲ. ಸೇಬಿನಹಣ್ಣು ಮುಂತಾದುವು ಚೆನ್ನಾಗಿ ಆಗುತ್ತವೆ; ಚಪ್ಪರ ದ್ರಾಕ್ಷೆಗೆ ಚಳಿ ಹೆಚ್ಚು; ಮಾವಿನಹಣ್ಣು, ಬಾಳೆಯಹಣ್ಣು ಮುಂತಾದುವು ಆಗುವುದಿಲ್ಲ. ಬಾನವೃಕ್ಷ, ಬೀಚ್, ಪೀತದಾರು ಮುಂತಾದ ಮರಗಳು ಚೆನ್ನಾಗಿ ಬೆಳೆಯುತ್ತವೆ.

7. ಪ್ರಾಣಿಗಳು.—ಕಪಿಲವರ್ಣದ ಕರಡಿಯೂ ತೋಳವೂ ಪೂರ್ವದಲ್ಲಿದ್ದುವು; ಜನರೂ ವ್ಯವಸಾಯವೂ ಬಹಳವಾಗಿ ಹೆಚ್ಚಿರುವುದರಿಂದ ಈಗ ಈ ಜಾತಿಯ ದುಷ್ಟಮೃಗಗಳು ಇಲ್ಲ. ಕುದುರೆ, ಎತ್ತು ಮತ್ತು ಕುರಿ ಬಹಳವಾಗಿವೆ. ನದಿಗಳಲ್ಲಿಯೂ ಸಮುದ್ರದಲ್ಲಿಯೂ ನಾನಾಬಗೆಯ ಮೀನುಗಳಿರುವುವು.

ಉಳುವುದಕ್ಕೆ ನಮ್ಮ ದೇಶದವರಂತೆ ಎತ್ತುಗಳನ್ನು ಕಟ್ಟುವುದಿಲ್ಲ, ಕುದುರೆಗಳನ್ನು ಉಪಯೋಗಿಸುತ್ತಾರೆ. ಹುಲಿ, ಸಿಂಹ, ಮುಂತಾದ ಉಷ್ಣವಲಯದ ದುಷ್ಟ ಮೃಗಗಳೂ, ನಾಗರ ಹಾವುಗಳೂ ಈ ದೇಶದಲ್ಲಿಲ್ಲ.

8. ಖನಿಜಗಳು.—ಇಂಗ್ಲೆಂಡಿನ ಅನ್ಯಾದೃಶ ಸಂಪತ್ತು ಅದರ ಕಬ್ಬಿಣ ಕಲ್ಲಿದ್ದಲುಗಳಿಂದ ಉಂಟಾಗಿದೆ. ಲೋಹಗಳನ್ನು ಕರಗಿಸುವುದಕ್ಕೂ ಹೊಗೆಯ ಯಂತ್ರಗಳನ್ನು ನಡೆಯಿಸುವುದಕ್ಕೂ ಅಡಿಗೆ ಮುಂತಾದ ಕೆಲಸಗಳಿಗೂ ಕಲ್ಲಿದ್ದಲನ್ನು ಉಪಯೋಗಿಸುತ್ತಾರೆ.

ಕಲ್ಲಿದ್ದಲು ಮತ್ತು ಕಬ್ಬಿಣ ಇಂಗ್ಲೆಂಡಿನ ಮುಖ್ಯವಾದ ಖನಿಜಗಳು, ವೇಲ್ಸಿನಲ್ಲಿ ಕಬ್ಬಿಣ, ಕಾರನ್ವಾಲ್ ಮತ್ತು ಆಂಗ್ಲಿಸಿ ದ್ವೀಪದಲ್ಲಿ ತಾಮ್ರ, ಕಾರನ್ವಾಲಿನಲ್ಲಿ ತವರ, ಡರ್ಬಿಷೈರಿನಲ್ಲಿ ಸೀಸ, ಉತ್ತರ ಭಾಗದಲ್ಲಿಯೂ ವೇಲ್ಸಿನಲ್ಲಿಯೂ ಕಲ್ಲಿದ್ದಲು, ಕಂಬರ್ಲೆಂಡಿನಲ್ಲಿ ಕರಿಯಸೀಸ, ಹೆಚ್ಚಾಗಿ ಸಿಕ್ಕುವುವು.

9. ಜನರು.—[ಇಂಗ್ಲಿಷು ಜನರು ಆರ್ಯಕುಲದ ಟ್ಯೂಟಾನಿಕ್ ವಂಶಕ್ಕೆ ಸೇರಿದವರು; ವೇಲ್ಸಿನ ಜನರು ಕೆಲ್ಟಿಕ್ ವಂಶದವರು.] ಜನಸಂಖ್ಯೆ ೩೦,೦೦,೦೦೦, ದೇಶಭಾಷೆ ಇಂಗ್ಲಿಷು.

10. ಕೈಗಾರಿಕೆಗಳು ಮತ್ತು ಕುಶಲವಿದ್ಯೆಗಳು.—ಬ್ರಿಟನ್ನಿನಲ್ಲಿ ನಡೆವಷ್ಟು ಕೈಗಾರಿಕೆಗಳು ಪೃಥ್ವಿಯ ಇನ್ನಾವ ದೇಶದಲ್ಲಿಯೂ ನಡೆವುದಿಲ್ಲ. ಕೃಷಿಯಿಂದ ಜೀವಿಸುವರು ಕಡಿಮೆ. ಇಂಗ್ಲೆಂಡನ್ನು ಪೃಥ್ವಿಯ ಕೈಗಾರಿಕೆಯ ಕೆಲಸದ ಕಾರ್ಖಾನೆ ಎಂದು ಕರೆಯಬಹುದು. ಅನೇಕ ಕೈಗಾರಿಕೆಗಳನ್ನು ಹೊಗೆಯ ಯಂತ್ರಗಳ ಸಹಾಯದಿಂದ ನಿರ್ಮಿಸುತ್ತಿದ್ದಾರೆ.

ಇಂಗ್ಲೆಂಡಿನ ಕೈಗಾರಿಕೆಯಲ್ಲಿ ಎರಡು ಬಹು ಮುಖ್ಯ—ನೆಯ್ದ ಬಟ್ಟೆಗಳು ಮತ್ತು ಲೋಹದ ಸಾಮಾನುಗಳು (Textiles and hardwares). ನೂಲಿನ ಬಟ್ಟೆಗಳ ನೆಯ್ಗೆಯ ಕೆಲಸವು ಲಾಂಕಾಷೈರಿನ ದಕ್ಷಿಣಭಾಗದಲ್ಲಿ, ಉಣ್ಣೆಯ ಬಟ್ಟೆಯ ನೆಯ್ಗೆಯ ಕೆಲಸವು ಯಾರ್ಕ್‌ಷೈರಿನ ಪಶ್ಚಿಮಭಾಗದಲ್ಲಿ, ಕಬ್ಬಿಣದ ಸಾಮಾನುಗಳ ಕೆಲಸವು ಸ್ಟಾಫರ್ಡ್ ಷೈರಿನ ದಕ್ಷಿಣಭಾಗದಲ್ಲಿ ನೆಲೆಗೊಂಡಿವೆ. ಈ ಕೈಗಾರಿಕೆಗಳಲ್ಲದೆ ಮಿರುಗುಟ್ಟುವ ಮಣ್ಣಿನ ಸಾಮಾನುಗಳು, ರೇಷ್ಮೆಯ ಬಟ್ಟೆಗಳು, ಲೇಸ್, ನಾರಿನ ವಸ್ತ್ರಗಳು, ಕಾಗದ, ಗಾಜಿನ ಸಾಮಾನು, ಗಡಿಯಾರ ಮುಂತಾದುವು ಅನೇಕ ಪಟ್ಟಣಗಳಲ್ಲಿ ತಯಾರಾಗುವುವು.

ಪೃಥ್ವಿಯ ಇತರ ದೇಶಗಳಲ್ಲಿ ಯಂತ್ರಗಳಿಂದ ನಡೆವ ಕದುರುಗಳೂ, ಮಗ್ಗಗಳೂ ಒಟ್ಟು ಎಷ್ಟು ಇವೆಯೋ ಅಷ್ಟು ಇಂಗ್ಲೆಂಡೊಂದರಲ್ಲಿ ಇವೆ.

11. ವ್ಯಾಪಾರ.—ಪೃಥ್ವಿಯಲ್ಲಿ ಇನ್ನು ಯಾವ ದೇಶದಲ್ಲಿಯೂ ನಡೆಯದಿರುವಷ್ಟು ವ್ಯಾಪಾರವು ಬ್ರಿಟಿಷ್ ದ್ವೀಪಗಳಲ್ಲಿ ನಡೆವುದು ; ಕೈಗಾರಿಕೆಗಳಲ್ಲಿ ಅಗ್ರಸ್ಥಾನವನ್ನು ಹೊಂದಿರುವುದಲ್ಲದೆ ವ್ಯಾಪಾರದಲ್ಲಿಯೂ ಅಗ್ರಸ್ಥಾನವನ್ನು ಹೊಂದಿದೆ. ವ್ಯಾಪಾರಕ್ಕೆ ಬೇಕಾದ ಅನುಕೂಲಗಳೆಲ್ಲಾ ಇವೆ. ೧,೨೧,೦೦೦ ಚ. ಮೈ. ವಿಸ್ತೀರ್ಣವುಳ್ಳ ಈ ದ್ವೀಪಗಳಲ್ಲಿ ೧,೫೦,೦೦೦ ಮೈಲಿ ರಸ್ತೆಯೂ, ೪೬,೦೦೦ ಮೈಲಿ ಜಲಮಾರ್ಗವೂ, ೨೧,೦೦೦ ಮೈಲಿ ರೈಲ್ವೆಯೂ, ೧,೨೩,೦೦೦ ಮೈಲಿ ಟೆಲಿಗ್ರಾಫಿನ ತಂತಿಯೂ, ೨೪,೦೦೦ ವ್ಯಾಪಾರದ ಹಡಗುಗಳೂ ಇವೆ.

ಸುಮಾರು ೩,೦೦,೦೦,೦೦,೦೦೦ ರೂಪಾಯಿನಷ್ಟು ವ್ಯಾಪಾರವು ಪ್ರತಿವರ್ಷದಲ್ಲಿಯೂ ನಡೆಯುತ್ತಿದೆ. ತರಿಸಿಕೊಳ್ಳುವ ಪದಾರ್ಥಗಳಲ್ಲಿ ಮುಖ್ಯವಾದುವು:—ಧಾನ್ಯ, ಹತ್ತಿ, ಉಣ್ಣೆ, ಸಕ್ಕರೆ, ಚಿನ್ನ, ಬೆಳ್ಳಿ, ಚೌಬೀನಿಯ ಮರ, ಟೀಯೆಲೆ, ಬೆಣ್ಣೆ ಮತ್ತು ಕಾಫಿ. ಕಳುಹಿಸುವ ಪದಾರ್ಥಗಳಲ್ಲಿ ಮುಖ್ಯವಾದುವು—ಹತ್ತಿಯನೂಲು ಮತ್ತು ಬಟ್ಟೆಗಳು, ಲೋಹದ ಸಾಮಾನುಗಳು, ಉಣ್ಣೆಯ ಬಟ್ಟೆಗಳು, ಕಲ್ಲಿದ್ದಲು.

ಅಮೆರಿಕಾಖಂಡದ ಸಂಯುಕ್ತ ಸಂಸ್ಥಾನ, ಇಂಡಿಯ, ಫ್ರಾನ್ಸ್, ಜರ್ಮನಿ, ಹಾಲೆಂಡ್, ಮತ್ತು ಆಸ್ಟ್ರೇಲಿಯ—ಇವುಗಳ ಸಂಗಡ ವ್ಯಾಪಾರವು ಹೆಚ್ಚಾಗಿ ನಡೆಯುತ್ತಿದೆ.

12. ರಾಜ್ಯಭಾರ ಮುಂತಾದ ವಿಷಯಗಳು.—ಬ್ರಿಟಿಷ್ ರಾಜ್ಯವು ಸಾಂಕುಶಪ್ರಭುತ್ವದ ತವರೂರಾಗಿದೆ. ಇಲ್ಲಿನ ಅಧಿಪತಿ ಪ್ರಜೆಗಳ ಅಭಿಪ್ರಾಯವನ್ನರಿತು ರಾಜ್ಯಭಾರ ಮಾಡಬೇಕೇ ಹೊರತು ಸ್ವೇಚ್ಛಾನುಸಾರಿಯಾಗಿ ನಡೆವುದಕ್ಕೆ ಆಸ್ಪದವಿಲ್ಲ. ಪಾರ್ಲಿಮೆಂಟಿನ ಅನುಮತಿಯನ್ನು ಪಡೆಯದೆ ಕಂದಾಯವನ್ನು ಹಾಕುವುದಕ್ಕೆ ಆಗಲಿ ಹಣವನ್ನು ಖರ್ಚುಮಾಡುವುದಕ್ಕೆ ಆಗಲಿ ಖಾನೂನುಗಳನ್ನು ಮಾಡುವುದಕ್ಕೆ ಆಗಲಿ ಅಧಿಪತಿಗೆ ಅಧಿಕಾರವಿಲ್ಲ.

ಪಾರ್ಲಿಮೆಂಟೆಂಬುದು ಎರಡು ಸಭೆಯಾಗಿದೆ :—ಸಾಮಂತರ ಸಭೆ (House

of Lords) ಮತ್ತು ಪ್ರಜಾಪ್ರತಿನಿಧಿಗಳ ಸಭೆ (House of Commons). ಡ್ಯೂಕ್, ಮಾರ್ಕ್ವಿಸ್, ಅರ್ಲ್, ವೈಕೌಂಟ್, ಬ್ಯಾರನ್ ಎಂಬ ಬಿರುದುಗಳಲ್ಲಿ ಒಂದನ್ನು ವಂಶಪಾರಂಪರ್ಯವಾಗಿ ಅನುಭವಿಸುವ ಸಾಮಂತರೂ, ಬಿಷಪ್ಪುಗಳೂ ಸಾಮಂತರ ಸಭೆಯಲ್ಲಿರುವವರು. ಇಂಗ್ಲೆಂಡ್ ಮತ್ತು ವೇಲ್ಸಿಗೆ ೪೯೫, ಸ್ಕಾಟ್ಲೆಂಡಿಗೆ ೭೨, ಐರ್ಲೆಂಡಿಗೆ ೧೦೩, ಒಟ್ಟು ೬೭೦ ಮಂದಿ ಪ್ರತಿನಿಧಿಗಳು ಆಯಾ ದೇಶಗಳ ಜನರಿಂದ ಚುನಾಯಿಸಲ್ಪಟ್ಟು ಪ್ರಜಾಪ್ರತಿನಿಧಿ ಸಭೆಯಲ್ಲಿ ಇದ್ದಾರೆ. ಈ ಸಭೆಯಲ್ಲಿ ಕನ್ಸರ್ವೆಟಿವ್ ಮತ್ತು ಲಿಬರಲ್ ಎಂಬ ಎರಡು ಕಕ್ಷಿಗಳಿರುವುವು. ಯಾವ ಕಕ್ಷಿ ಎಷ್ಟು ಕಾಲದವರೆಗೆ ಪ್ರಬಲವಾಗಿರುವುದೋ ಆ ಕಕ್ಷಿಯವರ ಮುಖಂಡರಲ್ಲಿ ಮಂತ್ರಿತ್ವವು ಅಷ್ಟು ಕಾಲದವರೆಗೆ ಇರುವುದು. ಮಂತ್ರಿಗಳು ನಿಯಮಿತರಾಜ್ಯಭಾರಕ್ರಮವನ್ನು ಉಲ್ಲಂಘಿಸಿದರೆ ದಂಡನೆಗೆ ಗುರಿಯಾಗುತ್ತಾರೆ; ಈ ದಂಡನೆಯನ್ನು ತಪ್ಪಿಸುವುದಕ್ಕೆ ಅಧಿಪತಿಗೆ ಅಧಿಕಾರವಿಲ್ಲ.

ಬ್ರಿಟಿಷ್‌ರಾಜ್ಯದ ಹುಟ್ಟುವಳಿ ೯೩,೦೦,೦೦,೦೦೦ ರೂಪಾಯಿ. ವಿದ್ಯಾಭ್ಯಾಸವು ಚೆನ್ನಾಗಿ ನಡೆಯುತ್ತದೆ. ಲೋಕವಿಖ್ಯಾತರಾದ ವಿದ್ವಾಂಸರೂ, ಶಾಸ್ತ್ರಜ್ಞರೂ, ಬಹುಮಂದಿ ಇದಾರೆ. ಇಂಗ್ಲೆಂಡಿನಲ್ಲಿ ಪ್ರಾಟೆಸ್ಟೆಂಟ್ ಗುಂಪಿಗೆ ಸೇರಿದ ಕ್ರಿಸ್ತರು ಹೆಚ್ಚಾಗಿದ್ದಾರೆ.

13. ರಾಜಕೀಯವಿಭಾಗಗಳು.—ಇಂಗ್ಲೆಂಡ್ ೪೦ ಕೌಂಟಿ ಅಥವಾ ಷೈರುಗಳಾಗಿಯೂ, ವೇಲ್ಸ್ ೧೨ ಕೌಂಟಿಗಳಾಗಿಯೂ ವಿಭಾಗಿಸಲ್ಪಟ್ಟಿವೆ.

[ಇಂಗ್ಲೆಂಡಿನ ಕೌಂಟಿಗಳು:—ಉತ್ತರದಲ್ಲಿ ೬—ಕಂಬರ್ಲೆಂಡ್, ನಾರ್ತಂಬರ್ಲೆಂಡ್, ವೆಸ್ಟ್‌ಮೋರ್ಲೆಂಡ್, ಡರ್ಹಾಂ, ಲಾಂಕಾಷೈರ್, ಮತ್ತು ಯಾರ್ಕ್‌ಷೈರ್; ಪಶ್ಚಿಮದಲ್ಲಿ ೬—ಚೆಸ್ಟರ್, ಷ್ರಾಪ್‌ಷೈರ್, ಹೆರಿಫರ್ಡ್, ಮಾನ್‌ಮತ್, ಗ್ಲಾಸ್ಟರ್ ಮತ್ತು ಸಾಮರ್‌ಸೆಟ್; ಪೂರ್ವಭಾಗದಲ್ಲಿ ೫—ಲಿಂಕನ್, ನಾರ್ಫಕ್, ಸಫಕ್, ಎಸೆಕ್ಸ್, ಕೇಂಬ್ರಿಡ್ಜ್; ದಕ್ಷಿಣದಲ್ಲಿ ೯—ಕೆಂಟ್, ಸರ್ರಿ, ಸಸೆಕ್ಸ್, ಬರ್ಕ್‌ಷೈರ್, ಹಾಂಪ್‌ಷೈರ್, ವಿಲ್ಟ್‌ಷೈರ್, ಡಾರ್‌ಸೆಟ್, ಡೆವನ್, ಮತ್ತು ಕಾರ್ನ್‌ವಾಲ್; ಮಧ್ಯಭಾಗದಲ್ಲಿ ೧೪—ಸ್ಟಾಫರ್ಡ್, ಡಾರ್ಬಿ, ನಾಟಿಂಘಾಂ, ವೂಸ್ಟರ್, ವಾರಿಕ್, ಲೀಸ್ಟರ್, ರಟ್ಲೆಂಡ್, ನಾರ್ಥಾಂಪ್ಟನ್, ಹಂಟಿಂಗ್ಡನ್, ಆಕ್ಸ್‌ಫರ್ಡ್, ಬಕಿಂಘಾಂ, ಮಿಡಿಲ್‌ಸೆಕ್ಸ್, ಹಾರ್‌ಫರ್ಡ್, ಮತ್ತು ಬೆಡ್‌ಫರ್ಡ್.

ವೇಲ್ಸಿನ ಕೌಂಟಿಗಳು:—ಉತ್ತರಭಾಗದಲ್ಲಿ ೬—ಆಂಗಲ್ಸಿ, ಕೇನಾರ್ವನ್, ಡೆನ್‌ಬಿ, ಫ್ಲಿಂಟ್, ಮೆರಿಯೋನೆತ್, ಮಾಂಟ್ಗಾಮರಿ; ದಕ್ಷಿಣದಲ್ಲಿ ೬—ಕಾರ್ಡಿಗನ್, ರಾಡ್ನಾರ್, ಪೆಂಬ್ರೋಕ್, ಕರ್ಮಾರ್ಥನ್, ಬ್ರೆಕ್ನಾಕ್ ಮತ್ತು ಗ್ಲಾಮರ್ಗನ್.]

14. ಹೆಚ್ಚಾಗಿ ವ್ಯಾಪಾರ ನಡೆವ ಪಟ್ಟಣಗಳು.—

(೧) <u>ಲಂಡನ್</u>. (4,200) ಬ್ರಿಟಿಷ್ ರಾಜ್ಯದ ಮತ್ತು ಬ್ರಿಟಿಷ್ ಚಕ್ರಾಧಿಪತ್ಯದ ರಾಜಧಾನಿ; ಥೇಮ್ಸ್ ನದಿಯ ದಡದಲ್ಲಿದೆ; ಪೃಥ್ವಿಯೊಳಗೆಲ್ಲಾ ಅತ್ಯಂತ

ವಿಸ್ತಾರವಾಗಿಯೂ, ಅತ್ಯಂತ ಸಂಪದ್ಯುಕ್ತವಾಗಿಯೂ, ಜನಭರಿತವಾಗಿಯೂ ಇರುವ ಮಹಾಪಟ್ಟಣ; ೧೫ ಮೈಲಿ ಉದ್ದವಾಗಿಯೂ ೧೦ ಮೈಲಿ ಅಗಲವಾಗಿಯೂ ಇದೆ. ಪೃಥ್ವಿಯ ವ್ಯಾಪಾರಕ್ಕೆಲ್ಲಾ ಇದು ಮುಖ್ಯಸ್ಥಾನವಾಗಿದೆ. ರೈಲ್ವೆಯಿಂದ ಪ್ರತಿದಿನವೂ ಈ ಪಟ್ಟಣಕ್ಕೆ ೧೧ ಲಕ್ಷ ಜನರು ಬರುತ್ತಾರೆ. ಇದರ ಬೀದಿಗಳ ಸಂಖ್ಯೆ ೨೮,೦೦೦. ಇಲ್ಲಿನ ಕಟ್ಟಡಗಳು ಅನೇಕ ಅಂತಸ್ತುಗಳುಳ್ಳವುಗಳಾಗಿಯೂ ಅದ್ಭುತಾಕಾರವಾಗಿಯೂ ಇವೆ. ಸ್ಥಳಸಂಕೋಚದಿಂದ ರೈಲ್ವೆಗಳನ್ನು ಕೆಲವು ಕಡೆಗಳಲ್ಲಿ ನೆಲದ ಕೆಳಗೆ ಸುರಂಗದಮಾರ್ಗಗಳಲ್ಲಿ ಮಾಡಿದ್ದಾರೆ. ಟೇಮ್ಸ್ ನದಿಯ ಆಚೆ ಭಾಗಕ್ಕೆ ಹೋಗುವುದಕ್ಕೆ ನೆಲದ ಕೆಳಗೆ ಇಂತಹ ಸುರಂಗದ ಮಾರ್ಗಗಳುಂಟು. ಇದರ ಸಮೀಪದ ಅಳಿವೆಯಲ್ಲಿ ನಿಲ್ಲುವ ಹಡಗುಗಳ ಸ್ತಂಭಗಳು ಅಸಂಖ್ಯಾತವಾಗಿ ದೊಡ್ಡ ಕಾಡಿನಂತೆ ಕಾಣುವುವು. ಲಂಡನ್ ಪಟ್ಟಣದಲ್ಲಿ ಆಶ್ಚರ್ಯ ವಸ್ತುಗಳಿವೆ ಎಂಬುದೊಂದೇ ಅಲ್ಲ; ಲಂಡನ್ ಎಂಬುದೇ ಪೃಥ್ವಿಯೊಳಗೆಲ್ಲಾ ಅತ್ಯಾಶ್ಚರ್ಯವಸ್ತುವಾಗಿದೆ. ಪೃಥ್ವಿಯಲ್ಲಿ ಇಂತಹ ಪಟ್ಟಣ ಇನ್ನು ಒಂದೂ ಇಲ್ಲ.

(೨) ಲಿವರ್ ಪೂಲ್. ಎರಡನೆಯ ರೇವೆಪಟ್ಟಣ. ಮರ್ಸೀನದಿಯ ಮುಖದ ಹತ್ತಿರ ಇದೆ. ಹತ್ತಿಯ ವ್ಯಾಪಾರವು ವಿಪರೀತವಾಗಿ ನಡೆವ ಸ್ಥಳ.

(೩) ಬ್ರಿಸ್ಟಲ್. ಸೆವರ್ನನದೀ ಮುಖದಲ್ಲಿದೆ; ಗಾಜಿನ ಸಾಮಾನಿನ, ಹಿತ್ತಾಳೆಯ ಎರಕದ, ಮತ್ತು ಸೋಪಿನ, ಕಾರ್ಖಾನೆಗಳು ಹೆಚ್ಚಾಗಿರುವುವು. (೪) ಟೈನಿನ ಮೇಲಿರುವ ನ್ಯೂಕಾಸಲ್ ಕಲ್ಲಿದ್ದಲ ವ್ಯಾಪಾರಸ್ಥಳ ಮತ್ತು ಹಡಗು ಕಟ್ಟುವ ಸ್ಥಳ. (೫) ಡೋವರ್ ಎಂಬುದು ಫ್ರಾನ್ಸ್‌ದೇಶಕ್ಕೆ ಹತ್ತಿರವಿರುವ ರೇವೆ ಪಟ್ಟಣ. (೬) ಸೌಥಾಂಪ್ಟನ್ ಎಂಬ ರೇವೆ ಪಟ್ಟಣವು ವೈಟ್ ದ್ವೀಪದ ಉತ್ತರಕ್ಕೆ ಇದೆ; ಇಲ್ಲಿಂದ ಹೊಗೆಯ ಜಹಜುಗಳು ನಾನಾ ದೇಶಗಳಿಗೂ ಹೊರಡುವುವು. (೭) ಸ್ವಾನ್ಸೀ ಎಂಬುದು ವೇಲ್ಸಿನ ದಕ್ಷಿಣಭಾಗದಲ್ಲಿ ಒಂದು ರೇವೆ ಪಟ್ಟಣ; ಇಲ್ಲಿ ಕರಗಿಸುವಷ್ಟು ತಾಮ್ರವನ್ನು ಪೃಥ್ವಿಯಲ್ಲಿ ಇನ್ನೆಲ್ಲಿಯೂ ಕರಗಿಸುವುದಿಲ್ಲ. (೮) ಕಾರ್ಡಿಫ್ ಎಂಬುದು ವೇಲ್ಸಿನ ದಕ್ಷಿಣಭಾಗದಲ್ಲಿದೆ. ಕಲ್ಲಿದ್ದಲಲ್ಲಿ ಬಹಳ ಹೆಚ್ಚಾಗಿ ವ್ಯಾಪಾರ ನಡೆಯುತ್ತದೆ. (೯) ಹಲ್, ಹಂಬರ್ ನದಿಯ ದಡದಲ್ಲಿದೆ, ವಿಶೇಷ ವ್ಯಾಪಾರಸ್ಥಳ.

15. ಕೈಗಾರಿಕೆಗಳು ಹೆಚ್ಚಾಗಿ ನಡೆವ ಪಟ್ಟಣಗಳು:—ಕಲ್ಲಿದ್ದಲೂ ಕಬ್ಬಿಣವೂ ಉತ್ತರ ಭಾಗದಲ್ಲಿ ಹೆಚ್ಚಾಗಿ ಸಿಕ್ಕುವುದರಿಂದ ಆ ಭಾಗದಲ್ಲಿ ಕೈಗಾರಿಕೆಯ ಪಟ್ಟಣಗಳು ಹೆಚ್ಚಾಗಿವೆ. ಅವು ಯಾವುವೆಂದರೆ:—

(೧) ಮ್ಯಾಂಚೆಸ್ಟರ್. ಕೈಗಾರಿಕೆಗಳ ವಿಷಯದಲ್ಲಿ ಇದಕ್ಕಿಂತ ವಿಶೇಷವಾದ ಪಟ್ಟಣ ಪೃಥ್ವಿಯಲ್ಲಿ ಇನ್ನು ಯಾವುದೂ ಇಲ್ಲ. ಈ ಪಟ್ಟಣದಲ್ಲಿಯೂ ಇದರ ಸುತ್ತು ಮುತ್ತು ಇರುವ ಪಟ್ಟಣಗಳಲ್ಲಿಯೂ ನೂಲಿನ ಬಟ್ಟೆಗಳು ತಯಾರಾಗುವುವು. ಇದರ ಸಮೀಪದಲ್ಲಿ ಹರಿವ ಇರ್ವೆಲ್ ನದಿಯ ನೀರು ಇಲ್ಲಿನ ಕಾರ್ಖಾನೆಗಳ

ಹೊಗೆಯಿಂದ ಮಸಿಯಂತೆ ಕಪ್ಪಾಗಿರುವುದು; ಇಲ್ಲಿನ ಕಾರ್ಖಾನೆಗಳ ಹೊಗೆಯಿಂದ ಪಟ್ಟಣದ ಮೇಲೆ ಧೂಮಾವರಣವೊಂದಿರುವುದು; ಪ್ರೆಸ್ಟನ್, ಓಲ್ಡಾಂ, ಬೋಲ್ಟನ್ ಬ್ಲಾಕ್ಬರ್ನ್, ಇಲ್ಲಿಯೂ ಹತ್ತಿಯ ಬಟ್ಟೆಗಳು ತಯಾರಾಗುವುವು. (೨) ಬರ್ಮಿಂಘಾಂ ಇಂಗ್ಲೆಂಡಿನ ಮಧ್ಯಭಾಗದಲ್ಲಿದೆ, ಲೋಹದ ಕೆಲಸಗಳು ಇಲ್ಲಿನಡೆವಷ್ಟು ಇನ್ನೆಲ್ಲಿಯೂ ನಡೆವುದಿಲ್ಲ. (೩) ಷೆಫೀಲ್ಡ್. ಮ್ಯಾಂಚೆಸ್ಟರಿಗೆ ಪೂರ್ವದಲ್ಲಿ ಯಾರ್ಕ್‌ಷೈರಿನಲ್ಲಿದೆ; ಅಲಗುಳ್ಳ ಲೋಹದ ಸಾಮಾನುಗಳಾಗುವ ಪಟ್ಟಣ. ವುಲ್ವರ್‌ಹಾಂಪ್ಟನ್, ವೆಡ್ನೆಸ್‌ಬರಿ, ಡಡ್ಲಿ—ಇಲ್ಲಿಯೂ ಕಬ್ಬಿಣದ ಸಾಮಾನುಗಳಾಗುವುವು; ವುಲ್ವರ್‌ಹಾಂಪ್ಟನ್ ಮತ್ತು ವೆಡ್ನೆಸ್‌ಬರಿ ಎಂಬುವು ಸ್ಟಾಫರ್ಡ್ ಷೈರಿನಲ್ಲಿವೆ, ಡಡ್ಲಿ ವೂಸ್ಟರ್ ಷೈರಿನಲ್ಲಿದೆ. (೪) ಮೆರ್ತರ್ ಟಿಡ್ವಿಲ್. ಗ್ಲಾಮರ್ಗನ್ ಷೈರಿನಲ್ಲಿದೆ, ವೇಲ್ಸಿನ ದೊಡ್ಡ ಪಟ್ಟಣ, ಕಲ್ಲಿದ್ದಲು ಮತ್ತು ಕಬ್ಬಿಣದ ಕಾರ್ಖಾನೆಗಳು ಅನೇಕವಿರುವುವು. (೫) ಲೀಡ್ಸ್. ಯಾರ್ಕ್‌ಷೈರಿನಲ್ಲಿದೆ, ಉಣ್ಣೆಯ ಬಟ್ಟೆಗಳು ತಯಾರಾಗುವ ಮುಖ್ಯಸ್ಥಳ, ಇದರ ಸುತ್ತು ಮುತ್ತು ಇರುವ ಬ್ರಾಡ್‌ಫರ್ಡ್, ಹಡ್ಡರ್‌ಫೀಲ್ಡ್, ಹಾಲಿಫಾಕ್ಸ್ ಎಂಬ ಪಟ್ಟಣಗಳಲ್ಲಿ ಇದೇ ಕೈಗಾರಿಕೆ ನಡೆಯುತ್ತಿದೆ.

ಲಂಡನ್ನಿನ ಒಂದುಭಾಗವಾದ ಸ್ಪಿಟಲ್‌ಫೀಲ್ಡ್, ಚೆಷೈರಿನಲ್ಲಿರುವ ಮಾಕ್ಲೆಸ್‌ಫೀಲ್ಡ್‌ಗಳಲ್ಲಿ ರೇಷ್ಮೆಯ ಬಟ್ಟೆಗಳೂ, ಮಧ್ಯಭಾಗದಲ್ಲಿರುವ ನಾಟಿಂಘಾಂ ಮತ್ತು ಡಾರ್ಬಿಗಳಲ್ಲಿ ಸ್ಟಾಕಿಂಗ್ ಮತ್ತು ಲೇಸ್, ಪೂರ್ವಭಾಗದಲ್ಲಿರುವ ನಾರಿಚ್ಚಿನಲ್ಲಿ ಶಾಲುಗಳು, ಕಿಡ್ಡರ್‌ಮಿನಿಸ್ಟರಿನಲ್ಲಿ ರತ್ನಕಂಬಳಿಗಳು, ನಾರ್ಥಾಂಪ್ಟನ್ನಿನಲ್ಲಿ ಮೋಜಗಳು ವಿಶೇಷವಾಗಿ ತಯಾರಾಗುತ್ತವೆ.

ಹಡಗುಗಳು ತಯಾರಾಗುವ ಸ್ಥಳಗಳು:—ಲಂಡನ್, ಲಿವರ್‌ಪೂಲ್, ಬರ್ಕನ್‌ಹೆಡ್, ಸಂಡರ್ಲಾಂಡ್, ಪೋರ್ಟ್ಸ್‌ಮತ್, ಪ್ಲಿಮತ್.

ಯುದ್ಧದ ಹಡಗುಗಳಿರುವ ಸ್ಥಳಗಳು:—ಪೋರ್ಟ್ಸ್‌ಮತ್, ಪ್ಲಿಮತ್, ವುಲಿಚ್, ಚಾಥಾಂ.

ಪೋರ್ಟ್ಸ್‌ಮತ್ತಿನಲ್ಲಿ ಬಹು ಬಲವಾದ ಕೋಟೆಯೊಂದುಂಟು; ಇದೇ ಯುದ್ಧದ ಹಡಗುಗಳಿರುವ ಮುಖ್ಯಸ್ಥಳ. ಪ್ಲಿಮತ್ತಿಗೆ ದಕ್ಷಿಣದಲ್ಲಿ ಎಡಿಸ್ಟೋನ್ ಎಂಬ ಲೈಟ್‌ಹೌಸ್ (ದೀಪದ ಮನೆ) ಇದೆ. ವುಲಿಚ್ಚಿನಲ್ಲಿ ಗನ್ ತುಪಾಕಿಗೆ ಸಂಬಂಧಪಟ್ಟ ದೊಡ್ಡ ಕಾರ್ಖಾನೆ ಇದೆ. ಚಾಥಾಮಿನಲ್ಲಿ ಹಡಗುಗಳಿಗೆ ಬೇಕಾದ ಸಾಮಾನಿನ ದೊಡ್ಡ ಕಾರ್ಖಾನೆಯುಂಟು.

16. ವಿದ್ಯಾಭ್ಯಾಸ ಮುಂತಾದ ವಿಷಯಗಳು:—ವಿದ್ಯಾಭ್ಯಾಸವೂ ಶಾಸ್ತ್ರವಿಚಾರಗಳೂ ಬಹು ಶ್ರದ್ಧೆಯಿಂದ ನಡೆಯಿಸಲ್ಪಡುತ್ತಿವೆ.

ಲಂಡನ್, ಆಕ್ಸ್‌ಫರ್ಡ್, ಕೇಂಬ್ರಿಡ್ಜ್, ಡರ್‌ಹಾಂ ಎಂಬ ಪಟ್ಟಣಗಳಲ್ಲಿ ಸಕಲವಿದ್ಯಾನಿಲಯಗಳಿವೆ. ಲಂಡನ್ನಿಗೆ ೬ ಮೈಲಿ ದೂರದಲ್ಲಿರುವ ಗ್ರೀನಿಚ್ಚೆಂಬ ಸ್ಥಳದಲ್ಲಿ ಪ್ರಸಿದ್ಧವಾದನಕ್ಷತ್ರಶಾಲೆ ಇದೆ; [ಇಲ್ಲಿಂದ ಇಂಗ್ಲಿಷರು ರೇಖಾಂಶವನ್ನು ಎಣಿಸುತ್ತಾರೆ.]

[ಆಕ್ಸ್ಫರ್ಡ್ ಎಂಬ ಸಕಲ ವಿದ್ಯಾನಿಲಯಕ್ಕೆ ಇರುವಷ್ಟು ಐಶ್ವರ್ಯವು ಪೃಥ್ವಿ ಯಲ್ಲಿ ಇನ್ನು ಯಾವ ಸಕಲ ವಿದ್ಯಾನಿಲಯಕ್ಕೂ ಇಲ್ಲ; ಇಲ್ಲಿ ಭಾಷೆಗಳನ್ನೂ, ಕಾವ್ಯಪಾಠಗಳನ್ನೂ ಬಲು ಚೆನ್ನಾಗಿ ಹೇಳಿಕೊಡುವರು. ಕೇಂಬ್ರಿಡ್ಜ್ ಎಂಬ ಸಕಲ ವಿದ್ಯಾನಿಲಯದಲ್ಲಿ ಗಣಿತಶಾಸ್ತ್ರವನ್ನು ಬಲು ಚೆನ್ನಾಗಿ ಬೋಧಿಸುವರು. ವಿಂಡ್ಸರಿಗೆ ಸಮೀಪದಲ್ಲಿರುವ ಈಟನ್, ಲಂಡನ್ನಿನ ಸಮೀಪದಲ್ಲಿರುವ ಹಾರೋ, ಲಂಡನ್ನಿಗೆ ದಕ್ಷಿಣದಲ್ಲಿರುವ ವಿಂಚೆಸ್ಟರ್, ಇಂಗ್ಲೆಂಡಿನ ಮಧ್ಯಭಾಗದಲ್ಲಿರುವ ರಗ್ಬಿ—ಈ ಪಟ್ಟಣಗಳ ಪಾಠಶಾಲೆಗಳು ಲೋಕಪ್ರಸಿದ್ಧವಾಗಿವೆ.]

ಪ್ರಸಿದ್ಧವಾದ ಇತರ ಸ್ಥಳಗಳು:—ದಕ್ಷಿಣ ತೀರದಲ್ಲಿರುವ ಬ್ರೈಟನ್, ಈಶಾನ್ಯತೀರದಲ್ಲಿರುವ ಸ್ಕಾರ್ಬರೋ—ಈ ಸ್ಥಳಗಳಿಗೆ ಸಾವಿರಾರು ಜನರು ಸಮುದ್ರಸ್ನಾನಕ್ಕೆಂದು ಬರುವರು. ಬ್ರಿಸ್ಟಲ್ಲಿಗೆ ಪೂರ್ವದಲ್ಲಿರುವ ಬಾತ್ ಎಂಬ ಪಟ್ಟಣದಲ್ಲಿ ಬಿಸುನೀರಿನ ಊಟೆಗಳಿರುವುವು. ಇವುಗಳ ನೀರು ಖನಿಜ ಮಿಶ್ರವಾಗಿಯೂ ರೋಗ ಪರಿಹಾರಕವಾಗಿಯೂ ಇರುವುದರಿಂದ ಅನೇಕರು ರೋಗನಿವಾರಣಾರ್ಥಿಗಳಾಗಿ ಇಲ್ಲಿಗೆ ಬರುವರು. ಚೆಲ್ಟನ್‌ಹಾಂ ಎಂಬ ಸ್ಥಳದಲ್ಲಿಯೂ ಈ ಬಗೆಯ ನೀರು ಸಿಕ್ಕುವುದು. ಟೆಮ್ಸ್ ನದಿಯ ದಡದಲ್ಲಿರುವ ವಿಂಡ್ಸರಿನಲ್ಲಿ ಬಹು ರಮಣೀಯವಾದ ಒಂದು ಅರಮನೆ ಇದೆ. ಇಲ್ಲಿ ಬ್ರಿಟಿಷ್ ದೇಶಾಧಿಪತಿಗಳು ವಾಸಮಾಡುತ್ತಾರೆ.

17. ಇಂಗ್ಲೆಂಡಿನಿಂದ ಇಂಡಿಯಕ್ಕೆ ಇರುವ ಮುಖ್ಯ ಮಾರ್ಗಗಳು ಮೂರು.

(೧) ಲಂಡನ್ನಿನಿಂದ ಹೊರಟು ರೈಲು ಮಾರ್ಗವಾಗಿ ಡೋವರ್ ಎಂಬ ರೇವೆ ಪಟ್ಟಣಕ್ಕೆ ಬಂದು, ಹೊಗೆಯ ಜಹಜಿನಲ್ಲಿ ಇಂಗ್ಲಿಷ್ ಕಡಲ್ಗಾಲುವೆಯನ್ನು ದಾಟಿ, ಪುನಃ ರೈಲ್ವೆಯಿಂದ ಇಟಲಿಯಲ್ಲಿರುವ ಬ್ರಿಂಡಿಸಿಯನ್ನು ಸೇರಿ, ಹೊಗೆಯ ಜಹಜಿನಲ್ಲಿ ಸುಯೆಸ್ ಕಾಲ್ವೆಯ ಮಾರ್ಗವಾಗಿ ಪ್ರಯಾಣಮಾಡಿ ಏಡನ್ ಎಂಬುದಕ್ಕೆ ಬಂದು ಬೊಂಬಾಯಿಯಲ್ಲಿ ಇಳಿಯಬಹುದು. ಇದು ೧೬ ದಿವಸದ ಪ್ರಯಾಣ.

(೨) ಲಂಡನ್ ಅಥವಾ ಸೌಥಾಂಪ್ಟನ್ನಿನಿಂದ ಹೊಗೆಯ ಜಹಜಿನಲ್ಲಿ ಹೊರಟು, ಜಿಬ್ರಾಲ್ಟರ್ ಜಲಸಂಧಿಯ ಮಾರ್ಗವಾಗಿ ಮೆಡಿಟರೇನಿಯನ್ ಸಮುದ್ರವನ್ನು ಪ್ರವೇಶಿಸಿ, ಸುಯೆಸ್ ಕಾಲ್ವೆಯ ಮಾರ್ಗವಾಗಿ ಬೊಂಬಾಯಿಗೆ ಬರಬಹುದು. ಇದು ೨೩ ದಿನಗಳ ಪ್ರಯಾಣ.

(೩) ಆಫ್ರಿಕಾ ಖಂಡದ ಗುಡ್‌ಹೋಪ್ ಭೂಶಿರವನ್ನು ಬಳಸಿಕೊಂಡು ಹಡಗಿನಲ್ಲಿ ಬರುವುದಾದರೆ ೩ ತಿಂಗಳ ಕಾಲ ಹಿಡಿವುದು.

ಸ್ಕಾಟ್ಲೆಂಡ್.

18. ವಿಸ್ತೀರ್ಣ ಮುಂತಾದ ವಿಷಯಗಳು.—ವಿಸ್ತೀರ್ಣವು ೩೦,೦೦೦ ಚ. ಮೈ. ಜನಸಂಖ್ಯೆ ೪೦,೦೦,೦೦೦.

(೧) ಮೇರೆಗಳು.—ಉತ್ತರಕ್ಕೂ ಪಶ್ಚಿಮಕ್ಕೂ ಅಟ್ಲಾಂಟಿಕ್ ಸಾಗರವಿದೆ. ಪೂರ್ವಕ್ಕೆ ಜರ್ಮನ್ ಸಮುದ್ರ, ದಕ್ಷಿಣಕ್ಕೆ ಇಂಗ್ಲೆಂಡ್ ಮತ್ತು ಐರಿಷ್ ಸಮುದ್ರ. ಸಾಲ್ವೆಫರ್ತ್ ಚಿವಿಯಟ್ ಬೆಟ್ಟ ಮತ್ತು ಟ್ವೀಡ್ ನದಿ—ಇವು ಮೂರು ಸ್ಕಾಟ್ಲೆಂಡನ್ನು ಇಂಗ್ಲೆಂಡಿಂದ ಪ್ರತ್ಯೇಕಿಸುತ್ತವೆ.

(೨) ಸಮುದ್ರಶಾಖೆಗಳು.—ಸಮುದ್ರವು ದೇಶದೊಳಕ್ಕೆ ಅನೇಕ ಕಡೆಗಳಲ್ಲಿ ವಿಶೇಷವಾಗಿ ನುಗ್ಗಿರುವುದರಿಂದ ಅನೇಕ ಶಾಖೆಗಳಿವೆ. ಪೂರ್ವ ದಿಕ್ಕಿನಲ್ಲಿ ಫೋರ್ತ್, ಟೆ, ಮೊರೆ; ಉತ್ತರದಲ್ಲಿ ಪೆಂಟ್ಲೆಂಡ್; ಪಶ್ಚಿಮದಲ್ಲಿ ಲಿನ್ಹೆ, ಕ್ಲೈಡ್, ಸಾಲ್ವೆ—ಇವು ಮುಖ್ಯವಾದುವು.

ಇಕ್ಕಟ್ಟಾದ ಸಮುದ್ರ ಶಾಖೆಗಳಿಂದ ಸ್ಕಾಟ್ಲೆಂಡ್ ಮೂರು ಪರ್ಯಾಯ ದ್ವೀಪಗಳಾಗಿದೆ. ಮೊರೆ ಮತ್ತು ಲಿನ್ಹೆ ಸಮುದ್ರ ಶಾಖೆಗಳನ್ನು ಕ್ಯಾಲಿಡೋನಿಯನ್ ಕಾಲ್ವೆ ಕೂಡಿಸುತ್ತದೆ. ಫೋರ್ತ್ ಮತ್ತು ಕ್ಲೈಡ್ ಎಂಬ ಸಮುದ್ರ ಶಾಖೆಗಳನ್ನು ಫೋರ್ತ್ ಕ್ಲೈಡ್ ಕಾಲ್ವೆ ಎಂಬುದು ಕೂಡಿಸುವುದು.

(೩) ಮುಖ್ಯವಾದ ಭೂಶಿರಗಳು.—ರಾತ್ ವಾಯವ್ಯದ ಕೊನೆ; ಡನೆಟ್ ಉತ್ತರಾಗ್ರ ಭೂಶಿರ, ಗ್ಯಾಲೋವೆ ಭೂಶಿರವು ದಕ್ಷಿಣಾಗ್ರದ ಕೊನೆ, ಸೆಂಟ್‌ಆಬ್ಸ್ ಭೂಶಿರವು ಬೆರಿಕ್ ಷೈರಿನಲ್ಲಿದೆ.

(೪) ಮುಖ್ಯ ದ್ವೀಪಗಳು.—ಉತ್ತರದಲ್ಲಿ ಷೆಟ್ಲೆಂಡ್ ಮತ್ತು ಆರ್ಕ್ನಿ ದ್ವೀಪಸ್ತೋಮಗಳು, ಪಶ್ಚಿಮದಲ್ಲಿ ಹೆಬ್ರಿಡಿಸ್ ದ್ವೀಪಸ್ತೋಮ, ನೈರುತ್ಯದಲ್ಲಿ ಬ್ಯೂಟ್ ಮತ್ತು ಆರನ್. ಪಶ್ಚಿಮದಲ್ಲಿರುವ ದ್ವೀಪಗಳು ಅಟ್ಲಾಂಟಿಕ್ ಸಾಗರದ ಅಲೆಗಳ ಹೊಡೆತವನ್ನು ತಡೆವುವು.

(೫) ಪರ್ವತಗಳು.—ಸ್ಕಾಟ್ಲೆಂಡ್ ಬೆಟ್ಟದ ಸೀಮೆ. ನೈರುತ್ಯದಿಂದ ಈಶಾನ್ಯದ ಕಡೆಗೆ ಬೆಟ್ಟದಸಾಲುಗಳು ಮೂರು ಇವೆ. ದಕ್ಷಿಣದಲ್ಲಿ ಲೌತರ್ಸ್ ಮತ್ತು ಚಿವಿಯಟ್ ಬೆಟ್ಟಗಳು, ಮಧ್ಯಭಾಗದಲ್ಲಿ ಗ್ರಾಂಪಿಯನ್ ಬೆಟ್ಟಗಳು. ಉತ್ತರದಲ್ಲಿ ಉತ್ತರದ ಬೆಟ್ಟಗಳು.

ಗ್ರಾಂಪಿಯನ್ ಬೆಟ್ಟದಲ್ಲಿರುವ ಬೆನ್ನವಿಸ್ ಎಂಬುದು ಬ್ರಿಟನ್ನಿನಲ್ಲಿರುವ ಅತ್ಯುನ್ನತವಾದ ಶಿಖರ, ಎತ್ತರ ೪,೪೦೬ ಅಡಿ.

(೬) ನದಿಗಳು.—ಪೂರ್ವಭಾಗದ ಇಳಿಜಾರಿನಲ್ಲಿ—ಟ್ವೀಡ್, ಫೋರ್ತ್, ಟೇ, ಡೀ, ಸ್ಪೇ, ನೆಸ್; ಪಶ್ಚಿಮದಲ್ಲಿ ಕ್ಲೈಡ್, ಟೇ (೧೦೫ ಮೈ.) ಸ್ಕಾಟ್ಲೆಂಡಿನಲ್ಲಿ ಅತಿ ದೀರ್ಘವಾದ ನದಿ.

(೭) ಸರೋವರಗಳು.—ಸ್ಕಾಟ್ಲೆಂಡಿನಲ್ಲಿ ಅನೇಕ ಸರೋವರಗಳುಂಟು; ಲಾವಂಡ್, ನೆಸ್, ಎಂಬುವು ಮುಖ್ಯ.

(೮) ವಾಯುಗುಣ ಮುಂತಾದುವು.—ಇಂಗ್ಲೆಂಡ್ ದೇಶಕ್ಕಿಂತ ಇಲ್ಲಿ ಚಳಿಯೂ, ಮಳೆಯೂ, ಹೆಚ್ಚು ದೇಶವು, ಕೆಲವು ಭಾಗಗಳಲ್ಲಿ ವಿನಾ, ಫಲವತ್ತಾಗಿಲ್ಲ. ಹುಲ್ಲಿರುವ ಕಡೆಗಳಲ್ಲಿ ಕುರಿಯನ್ನೂ ಎತ್ತನ್ನೂ ವಿಶೇಷವಾಗಿ ಸಾಕಿ ಮಾರುತ್ತಾರೆ. ಸ್ಕಾಟ್ಲೆಂಡಿನ ರೈತರು ವ್ಯವಸಾಯದಲ್ಲಿ ಬಹು ಬುದ್ಧಿವಂತರು.

19. ಖನಿಜಗಳು ಮತ್ತು ಕೈಗಾರಿಕೆಗಳು.—ಫೋರ್ತ್ ಮತ್ತು ಕ್ಲೈಡ್ ನದಿಗಳ ಹತ್ತಿರ ಕಲ್ಲಿದ್ದಲೂ ಕಬ್ಬಿಣವೂ ಹೇರಳವಾಗಿ ಸಿಕ್ಕುವುವು. ಲೌತರ್ ಬೆಟ್ಟದ ಸಮೀಪದಲ್ಲಿ ಸೀಸವು ಸಿಕ್ಕುತ್ತದೆ. ಕೈಗಾರಿಕೆಗಳು ವಿಶೇಷವಾಗಿ ನಡೆಯುತ್ತವೆ.

ಖನಿಜಗಳನ್ನು ತೆಗೆವುದು, ಕೈಗಾರಿಕೆಗಳು, ವ್ಯಾಪಾರ—ಇವು ಈ ದೇಶದ ಜನರ ಮುಖ್ಯವಾದ ಉದ್ಯೋಗಗಳು. ಪೂರ್ವಕಾಲದಲ್ಲಿ ಕೃಷಿಯೂ ಮುಖ್ಯೋದ್ಯೋಗವಾಗಿದ್ದಿತು. ಗ್ಲಾಸ್ಗೋ ಪಟ್ಟಣದ ಸುತ್ತುಮುತ್ತಲೂ ಕೈಗಾರಿಕೆಯ ಡಿಸ್ಟ್ರಿಕ್ಟುಗಳು ವಿಶೇಷವಾಗಿವೆ. ಬಗೆ ಬಗೆಯ ಯಂತ್ರಗಳೂ ಲೋಹದ ಸಾಮಾನುಗಳೂ ವಿಶೇಷವಾಗಿ ತಯಾರಾಗುತ್ತವೆ. ಹಡಗನ್ನು ಕಟ್ಟುವುದು ಮುಖ್ಯವಾದ ಕಸಬಾಗಿದೆ; ಈ ಕೆಲಸವು ಕ್ಲೈಡ್ ನದಿಯ ದಡದಲ್ಲಿರುವ ಪಟ್ಟಣಗಳಲ್ಲಿ ವಿಶೇಷವಾಗಿ ನಡೆವುದು; ಇಲ್ಲಿ ದೊಡ್ಡ ಹೊಗೆಯ ಜಹಜುಗಳನ್ನು ತಯಾರ್ಮಾಡುತ್ತಾರೆ ಮಿಡ್ಲೋಥಿಯನ್ ಮತ್ತು ಅಬರ್ಡೀನ್ ಷೈರುಗಳಲ್ಲಿ ಬಗೆ ಬಗೆಯಾದ ಕಾಗದಗಳು ಹೆಚ್ಚಾಗಿ ತಯಾರಾಗುವುವು.

20. ವ್ಯಾಪಾರ.—ಸ್ಕಾಟ್ಲೆಂಡಿನ ವ್ಯಾಪಾರವು ವರ್ಷವರ್ಷಕ್ಕೆ ಹೆಚ್ಚುತ್ತಲಿದೆ. ಪೃಥ್ವಿಯ ರೇವುಪಟ್ಟಣಗಳಿಗೆಲ್ಲಾ ಇಲ್ಲಿಯ ಹಡಗುಗಳು ಹೋಗುವುವು.

21. ಜನ.—[ದಕ್ಷಿಣ ಭಾಗದಲ್ಲಿರುವ ನಿಮ್ನಪ್ರದೇಶ ನಿವಾಸಿಗಳು (Lowlanders) ಇಂಗ್ಲಿಷಿನವರಂತೆ ಟ್ಯೂಟಾನಿಕ್ ವಂಶದವರಾಗಿದ್ದಾರೆ. ಉತ್ತರ ಭಾಗದಲ್ಲಿರುವ ಉನ್ನತಪ್ರದೇಶ ನಿವಾಸಿಗಳು ಕೆಲ್ಟಿಕ್ ಕುಲಕ್ಕೆ ಸೇರಿದ್ದಾರೆ.] ಪ್ರಾಟೆಸ್ಟೆಂಟ್ ಗುಂಪಿನ ಒಂದು ಶಾಖೆಯಾದ ಪ್ರೆಸ್ಬಿಟೇರಿಯಾನಿಸಮ್ ಎಂಬುದು ಮುಖ್ಯಮತ.

22. ರಾಜಕೀಯ ವಿಭಾಗಗಳು.—ಇಂಗ್ಲೆಂಡ್‌ದೇಶದ ಅಧಿಪತಿಯೇ ಈ ದೇಶಕ್ಕೂ ಅಧಿಪತಿ. ಈ ದೇಶದಲ್ಲಿ ೩೩ ಕೌಂಟಿ ಅಥವಾ ಷೈರುಗಳಿವೆ. [ಉತ್ತರಭಾಗದಲ್ಲಿ ೧೦—ಆರ್ಕ್ನೀ-ಷೆಟ್ಲೆಂಡ್, ಕೇತ್ನೆಸ್, ಸದರ್ಲೆಂಡ್, ರಾಸ್, ಕ್ರೊಮಾರ್ಟಿ, ಇನ್ವರ್‌ನೆಸ್, ನೇರ್ನ್, ಮೊರೆ, ಬಾನ್ಫ್, ಅಬರ್ಡೀನ್; ಮಧ್ಯಭಾಗದಲ್ಲಿ ೧೦—ಕಿಂಕಾರ್ಡಿನ್, ಫಾರ್‌ಫಾರ್, ಪರ್ತ್, ಫೈಫ್, ಕಿನ್ರಾಸ್, ಕ್ಲಾಕ್ಮನ್ನನ್, ಸ್ಟರ್ಲಿಂಗ್, ಡಂಬಾರ್ಟನ್, ಆರ್ಗೈಲ್, ಬ್ಯೂಟ್; ದಕ್ಷಿಣ ಭಾಗದಲ್ಲಿ ೧೩—ಏರ್, ರೆನ್ಫ್ರೂ, ಲಾನಾರ್ಕ್,

ಲಿನ್‌ಲಿತ್ಗೊ, ಎಡಿನ್ಬರ್ಗ್ ಅಥವಾ ಮಿಡ್ಲೋಥಿಯನ್, ಹಾಡಿಂಗ್ಟನ್ ಅಥವಾ ಈಸ್ಟ್ ಲೋಥಿಯನ್, ಬೆರಿಕ್, ರಾಕ್ಸ್‌ಬರ್ಗ್, ಸೆಲ್ಕರ್ಕ್, ಪೀಬಲ್ಸ್, ಡಂಫ್ರೀಸ್, ಕರ್ಕೂಬ್ರಿ ಮತ್ತು ವಿಗಟೌನ್.]

23. ದೊಡ್ಡ ಪಟ್ಟಣಗಳು.—(೧) ಎಡಿನ್‌ಬರ್ಗ್. ಮುಖ್ಯಪಟ್ಟಣ; ಬಹು ಸುಂದರವಾಗಿದೆ. ಇಲ್ಲಿ ಸಕಲ ವಿದ್ಯಾನಿಲಯವೊಂದುಂಟು. ಲೀತ್ ಎಂಬುದು ಇದರ ರೇವುಪಟ್ಟಣ. (೨) ಗ್ಲಾಸ್ಗೊ. (620) ಇದು ಸ್ಕಾಟ್ಲೆಂಡಿನ ದೊಡ್ಡ ಪಟ್ಟಣ. ಇಲ್ಲಿ ದೊಡ್ಡ ಹಡಗುಗಳನ್ನೂ ಹೊಗೆಯ ಜಹಜುಗಳನ್ನೂ ತಯಾರುಮಾಡುತ್ತಾರೆ; ವಿಶೇಷ ವ್ಯಾಪಾರ ನಡೆವ ಸ್ಥಳ. ಇಲ್ಲಿಯೂ ಒಂದು ಸಕಲ ವಿದ್ಯಾನಿಲಯವಿದೆ. (೩) ಪೇಸ್ಲಿ. ರೆನ್‌ಫ್ರೂಷೈರಿನಲ್ಲಿದೆ, ನೂಲೂ, ನೂಲಿನಬಟ್ಟೆಗಳೂ, ಶಾಲುಗಳೂ ಆಗುವ ಪಟ್ಟಣ. (೪) ಗ್ರೀನಾಕ್ ಎಂಬುದೂ ಮೇಲೆ ಹೇಳಿದ ಷೈರಿನಲ್ಲಿದೆ. ವ್ಯಾಪಾರ ಸ್ಥಳ. (೫) ಡಂಡಿ. ಸೆಣಬು (Jute) ಕಾರ್ಖಾನೆಗಳು ಅನೇಕವುಂಟು. ವ್ಯಾಪಾರ ಸ್ಥಳ. (೬) ಅಬರ್ಡೀನ್. ಇಲ್ಲಿ ಒಂದು ಸಕಲ ವಿದ್ಯಾನಿಲಯವಿದೆ, ವ್ಯಾಪಾರ ಸ್ಥಳ, ಮತ್ತು ಕೈಗಾರಿಕೆಗಳ ಸ್ಥಳ. ಡೀ ನದಿಯ ಸಮೀಪದಲ್ಲಿ ಬಾಲ್ಮೊರಲ್ ಎಂಬ ಸ್ಥಳವಿದೆ; ಬೇಸಿಗೆಯಲ್ಲಿ ಬ್ರಿಟಿಷ್ ರಾಜರವರು ಇಲ್ಲಿ ವಾಸಮಾಡುತ್ತಾರೆ.

ಐರ್ಲೆಂಡ್.

24. ವಿಸ್ತೀರ್ಣ ಮುಂತಾದ ವಿಷಯಗಳು.—ಐರ್ಲೆಂಡ್ ದ್ವೀಪವು ಗ್ರೇಟ್ ಬ್ರಿಟನ್ನಿಗೆ ಪಶ್ಚಿಮದಲ್ಲಿದೆ. ವಿಸ್ತೀರ್ಣವು ೩೨,೫೦೦ ಚ. ಮೈ. ಜನಸಂಖ್ಯೆ ೪೩,೫೦,೦೦೦.

(೧) ಮೇರೆಗಳು.—ದಕ್ಷಿಣ ಪಶ್ಚಿಮೋತ್ತರಗಳಿಗೆ ಅಟ್ಲಾಂಟಿಕ್ ಸಾಗರ, ಪೂರ್ವಕ್ಕೆ ಉತ್ತರ ಕಾಲ್ವೆ, ಐರಿಷ್ ಸಮುದ್ರ, ಮತ್ತು ಸೆಂಟ್‌ಜಾರ್ಜ್ ಕಾಲ್ವೆ.

(೨) ಸಮುದ್ರ ಶಾಖೆಗಳು.—ಅಟ್ಲಾಂಟಿಕ್ ಸಾಗರದ ಅಲೆಗಳು ಪಶ್ಚಿಮ ಭಾಗದಲ್ಲಿ ನೆಲವನ್ನು ಬಹಳವಾಗಿ ಕತ್ತರಿಸಿವೆ. ಉತ್ತರದಲ್ಲಿ ಫಾಯಲ್ ಲಾಕ್, ಮತ್ತು ಸ್ವಿಲಿಲಾಕ್; ಪಶ್ಚಿಮದಲ್ಲಿ ಗಾಲ್ವೆಕೊಲ್ಲಿ, ಡಾನಿಗಲ್ ಕೊಲ್ಲಿ; ಷಾನನ್ ನದೀ ಮುಖ; ನೈರುತ್ಯದಲ್ಲಿ ಬಾಂಟ್ರಿಕೊಲ್ಲಿ, ಡಿಂಗಲ್‌ಕೊಲ್ಲಿ; ಈಶಾನ್ಯದಲ್ಲಿ ಬೆಲ್‌ಫೆಸ್ಟ್ ಲಾಕ್—ಇವು ಮುಖ್ಯ ಸಮುದ್ರ ಶಾಖೆಗಳು.

[ಉತ್ತರದಲ್ಲಿರುವ ರಾತ್ಲಿನ್ ಎಂಬ ಭೂಶಿರದ ಹತ್ತಿರ 'ಜಯಂಟ್ಸ್ ಕಾಸ್ವೆ' ಎಂಬ ವಿಶೇಷಸ್ಥಳವುಂಟು. ಸ್ವಾಭಾವಿಕವಾಗಿ ೬ ಮೂಲೆಯುಳ್ಳ ಒಂದು ಬಗೆಯ ಕಲ್ಲಿನ ಸ್ತಂಭಗಳ ಸಾಲುಗಳಿರುವುವು. ಇವು ಸಮುದ್ರದೊಳಕ್ಕೆ ಚಾಚಿಕೊಂಡು ಹೋಗಿರುವುವು. ಇವುಗಳಲ್ಲಿ ಒಂದು ಬಂಡೆ ೩೦೦ ಅಡಿಯಷ್ಟು ಉದ್ದವಾಗಿರುವುದು. ಸ್ಕಾಟ್ಲೆಂಡಿನ ಪಶ್ಚಿಮದಲ್ಲಿ ಸ್ಟಾಫ಼ ಎಂಬ ಸ್ಥಳದಲ್ಲಿಯೂ ಈ ಬಗೆಯ ಕಲ್ಲಿನ ಸ್ತಂಭಗಳು ಇವೆ.]

(೩) ದ್ವೀಪಗಳು.—ಸುಮಾರು ೫,೦೦೦ ದ್ವೀಪಗಳೂ ನಡುಗಡ್ಡೆಗಳೂ ಇವೆ; ಇವುಗಳಲ್ಲಿ ೨೫೦ರಲ್ಲಿ ಜನವುಂಟು. ಪಶ್ಚಿಮದಲ್ಲಿ ದ್ವೀಪಗಳು ಬಹು ಹೆಚ್ಚಾಗಿವೆ.

(೪) ದೇಶದ ಲಕ್ಷಣ.—ಮಧ್ಯಭಾಗದಲ್ಲಿ ದೊಡ್ಡ ಮೈದಾನವಿದೆ. ದಕ್ಷಿಣದಲ್ಲಿಯೂ ಪಶ್ಚಿಮದಲ್ಲಿಯೂ ಬೆಟ್ಟಗಳು ಅಲ್ಲಲ್ಲಿರುವುವು. ಉತ್ತರದಲ್ಲಿಯೂ ಪೂರ್ವದಲ್ಲಿಯೂ ಉನ್ನತ ಪ್ರದೇಶಗಳುಂಟು. ನೈರುತ್ಯದಲ್ಲಿರುವ ಮ್ಯಾಗಿಲಿ ಕಡಿ ಎಂಬ ಬೆಟ್ಟದಲ್ಲಿರುವ ೩,೪೧೪ ಅಡಿ ಎತ್ತರವುಳ್ಳ ಕ್ಯಾರೇಟು ಆಲ್ ಎಂಬುದು ಈ ದ್ವೀಪದ ಅತ್ಯುನ್ನತವಾದ ಶಿಖರ.

[ಮಧ್ಯಭಾಗದಲ್ಲಿರುವ ದೊಡ್ಡ ಮೈದಾನವು ಈ ದೇಶದ ವಿಸ್ತೀರ್ಣದಲ್ಲಿ ೧-೫ ಭಾಗವನ್ನು ಒಳಕೊಂಡಿದೆ. ಈ ಮೈದಾನದ ಅನೇಕ ಸ್ಥಳಗಳಲ್ಲಿ ವಿಶಾಲವಾದ ಕೆಸರಿನ ನೆಲಗಳೂ, ಜೌಗು ಪ್ರದೇಶಗಳೂ ಇರುವುವು.

(೫) ನದಿಗಳು.—ನೈರುತ್ಯಕ್ಕೆ ಹರಿವ ಷಾನ್ನರ್ ಎಂಬುದು ಈ ದ್ವೀಪದ ದೊಡ್ಡನದಿ; ಇದರ ಉದ್ದ ೨೨೪ ಮೈಲಿ. ಬಾಯ್ನ್, ಲಿಫೆ, ಎಂಬುವು ಈಶಾನ್ಯಕ್ಕೆ ಹರಿಯುತ್ತವೆ. ಬಾರೋ ಎಂಬುದು ದಕ್ಷಿಣಕ್ಕೆ ಹರಿದು ಬರುತ್ತದೆ.

ಐರ್ಲೆಂಡಿನ ಮಧ್ಯದಲ್ಲಿ ದೊಡ್ಡ ಮೈದಾನವಿದೆ; ಇದರ ಸುತ್ತಲೂ ಉನ್ನತ ಪ್ರದೇಶಗಳಿವೆ; ಈ ಉನ್ನತ ಪ್ರದೇಶಗಳು ಸಮುದ್ರದ ಕಡೆಗೆ ಇಳಿಜಾರಾಗಿರುವುವು; ಹೀಗಿರುವುದರಿಂದ ಅಲ್ಲಲ್ಲಿ ಹುಟ್ಟುವ ನದಿಗಳು ಸಮೀಪದಲ್ಲಿರುವ ಸಮುದ್ರಗಳಿಗೆ ಹೋಗಿ ಬೀಳುವುವು; ಇವುಗಳಿಂದ ವ್ಯಾಪಾರಕ್ಕೂ ವ್ಯವಸಾಯಕ್ಕೂ ವಿಶೇಷ ಪ್ರಯೋಜನವಿಲ್ಲ. ಮಧ್ಯದ ಮೈದಾನದಲ್ಲಿ ಹರಿವ ಷಾನ್ನರ್‌ನದಿ ಮಾತ್ರ ಹೀಗಿಲ್ಲ; ಇದರಿಂದ ಬಹಳ ಪ್ರಯೋಜನವುಂಟು. ಇದು ಫರ್ಮನಾಂಗ್ ಮತ್ತು ಲೀಟ್ರಿಂ ಎಂಬ ಕೌಂಟಿಗಳ ಬೆಟ್ಟಗಳಲ್ಲಿ ಹುಟ್ಟಿ ಆಲ್ಲ್, ರೀ, ಡರ್ಗ್ ಎಂಬ ಸರೋವರಗಳ ಮಾರ್ಗವಾಗಿ ಹರಿದು ಲಿಮರಿಕ್ ಪಟ್ಟಣಕ್ಕೆ ಬಂದು ಅಲ್ಲಿಂದ ದೊಡ್ಡ ಅಳಿವೆಯಾಗಿ ಹರಡಿಕೊಂಡಿರುವುದು. ಆಲ್ಲ್ ಸರೋವರದ ವರೆಗೂ ಇದರ ಮೇಲೆ ಹಡಗುಗಳು ಹೋಗಬಹುದು. ಈ ನದಿಯಲ್ಲಿ ಸೆಳೆವು ಬಹು ಕಡಿಮೆ, ಆದುದರಿಂದ ವ್ಯಾಪಾರಕ್ಕೆ ಬಹು ಅನುಕೂಲವಾಗಿದೆ.

(೬) ಸರೋವರಗಳು.—ಐರ್ಲೆಂಡಿನಲ್ಲಿ ಅನೇಕ ಸರೋವರಗಳಿವೆ. ಇವುಗಳಲ್ಲಿ ಅನೇಕ ಬಹು ರಮಣೀಯವಾದ ಪ್ರದೇಶಗಳಲ್ಲಿವೆ. ಈಶಾನ್ಯದಲ್ಲಿರುವ ನೇ ಸರೋವರವೂ ನೈರುತ್ಯದಲ್ಲಿರುವ ಕಿಲಾರ್ನಿ ಸರೋವರಗಳೂ ಮುಖ್ಯ.

(೭) ಖನಿಜಗಳು.—ಕಬ್ಬಿಣ ಹೆಚ್ಚಾಗಿದೆ, ಆದರೆ ಅದನ್ನು ಕರಗಿಸುವುದಕ್ಕೆ ತಕ್ಕಷ್ಟು ಕಲ್ಲಿದ್ದಲು ಇಲ್ಲ. ಕಟ್ಟಡದ ಕಲ್ಲುಗಳೂ, ಅಮೃತ ಶಿಲೆಯೂ ಹೆಚ್ಚಾಗಿ ಸಿಕ್ಕುತ್ತವೆ.

25. ವಾಯುಗುಣ ಮುಂತಾದ ವಿಷಯಗಳು.—ವಾಯುಗುಣ ಹಿತಕ

ರವಾಗಿದೆ; ಮಳೆ ಹೆಚ್ಚಾಗಿ ಹೊಯ್ಯುತ್ತದೆ. ಜೌಗಿನ ನೆಲವು ಬಹಳ ಹೆಚ್ಚು. ನದಿಗಳಲ್ಲಿ ಹೆಚ್ಚಾಗಿ ಮೀನುಗಳಿವೆ.

ಜವೆಗೋಧಿ, ಉರುಳಗಡ್ಡೆ, ಮತ್ತು ತೋಕೆಗೋಧಿ—ಇವು ಮುಖ್ಯವಾದ ಬೆಳೆಗಳು. ಹುಲ್ಲುಗಾವಲುಗಳು ಹೆಚ್ಚಾಗಿವೆ. ದನ, ಕುರಿ, ಹಂದಿ, ಮುಂತಾದುವನ್ನು ಹೆಚ್ಚಾಗಿ ಸಾಕುತ್ತಾರೆ. ಇವುಗಳಲ್ಲಿ ವ್ಯಾಪಾರವು ನಡೆವುದು. ಉತ್ತರ ಭಾಗದಲ್ಲಿಯೂ ಪೂರ್ವಭಾಗದಲ್ಲಿಯೂ ನಾರುವಸ್ತ್ರಗಳೂ, ಉಣ್ಣೆಯ ಬಟ್ಟೆಗಳೂ ತಯಾರಾಗುವುವು. [ಜನರು ಮುಖ್ಯವಾಗಿ ಕೆಲ್ಟಿಕ್ ಕುಲಕ್ಕೆ ಸೇರಿದವರಾಗಿದ್ದಾರೆ.] ರೋಮನ್ ಕ್ಯಾಥೊಲಿಕ್ ಗುಂಪಿಗೆ ಸೇರಿದ ಕ್ರಿಸ್ತರು ಈ ದ್ವೀಪದಲ್ಲಿ ಹೆಚ್ಚಾಗಿದ್ದಾರೆ.

ಕಲ್ಲಿದ್ದಲು ಬಹಳ ಕಡಿಮೆಯಾದುದರಿಂದ ಕೈಗಾರಿಕೆಗಳು ವಿಶೇಷವಾಗಿಲ್ಲ; ಎತ್ತರದಿಂದ ಬೀಳುವ ನೀರಿನ ಶಕ್ತಿಯಿಂದ ಯಂತ್ರಾದಿಗಳು ನಡೆವಂತೆ ಮಾಡಬಹುದು; ಆದರೆ ಈ ಬಗೆಯ ಶಕ್ತಿಗಳನ್ನು ಉಪಯೋಗಿಸಿರುವುದು ಇಲ್ಲಿ ಬಹಳ ಕಡಿಮೆ.

[ಒಳ್ಳೆಯ ರಸ್ತೆಗಳು ಅನೇಕ ಇವೆ; ಜಲಮಾರ್ಗಗಳು ಚೆನ್ನಾಗಿವೆ. ರಾಯಲ್‌ಕೆನಾಲ್, ಗ್ರ್ಯಾಂಡ್‌ಕೆನಾಲ್, ಎಂಬ ಕಾಲ್ವೆಗಳು ಡಬ್ಲಿನ್ ಪಟ್ಟಣವನ್ನೂ ಷಾನ್‌ನದಿಯನ್ನೂ ಸಂಬಂಧಿಸುವುವು.]

26. ರಾಜಕೀಯ ವಿಭಾಗಗಳು.—ಅಲ್‌ಸ್ಟರ್, ಲೀನ್‌ಸ್ಟರ್, ಕನ್ನಾಟ್, ಮತ್ತು ಮನ್‌ಸ್ಟರ್ ಎಂಬ ನಾಲ್ಕು ತುಕಡಿಗಳಿವೆ, ಈ ತುಕಡಿಗಳು ಕೌಂಟಿಗಳಾಗಿ ವಿಭಾಗಿಸಲ್ಪಟ್ಟಿವೆ. ಕೌಂಟಿಗಳ ಒಟ್ಟು ಸಂಖ್ಯೆ ೩೨.

[ಲೀನ್‌ಸ್ಟರಿನಲ್ಲಿ ೧೨—ಲಾಂಗ್‌ಫರ್ಡ್, ವೆಸ್ಟ್‌ಮಿತ್, ಮೀತ್, ಲೌತ್, ಕಿಂಗ್ಸ್‌ಕೌಂಟಿ, ಕ್ವೀನ್ಸ್‌ಕೌಂಟಿ, ಕಿಲ್ಡೇರ್, ಡಬ್ಲಿನ್, ಕಿಲ್ಕೆನ್ನಿ, ಕಾರ್ಲೊ, ವಿಕ್ಲೊ, ವೆಕ್ಸ್‌ಫರ್ಡ್; ಅಲ್‌ಸ್ಟರಿನಲ್ಲಿ ೯—ಡಾನಿಗಲ್, ಲಂಡಂಡರಿ, ಆಂಟ್ರಿಂ, ಟೈರೋನ್, ಅರ್ಮ್ಯಾ, ಡೌನ್, ಫರ್ಮನಾಗ್, ಮೊನಘನ್, ಕಾವನ್; ಕನ್ನಾಟಿನಲ್ಲಿ ೫—ಮೇಯೊ, ಸ್ಲೈಗೋ, ಲೀಟ್ರಿಂ, ಗಾಲ್ವೆ, ರಾಸ್ಕಾಮನ್; ಮನ್‌ಸ್ಟರಿನಲ್ಲಿರುವುವು ೬—ಕ್ಲೇರ್, ಟಿಪ್ಪರೇರಿ, ಕೆರಿ, ಲಿಮರಿಕ್, ಕಾರ್ಕ್, ವಾಟರ್‌ಫರ್ಡ್.]

27. ದೊಡ್ಡ ಪಟ್ಟಣಗಳು—(೧) ಡಬ್ಲಿನ್ (360). ಲಿಫೆ ನದಿಯ ದಡದಲ್ಲಿದೆ; ಮುಖ್ಯಪಟ್ಟಣ; ದೊಡ್ಡ ವ್ಯಾಪಾರದ ಸ್ಥಳ. ಇಲ್ಲಿ ಸಕಲ ವಿದ್ಯಾನಿಲಯ ವೊಂದಿದೆ. ಕಿಂಗ್‌ಸ್ಟನ್ ಎಂಬುದು ಇದರ ರೇವೆ ಪಟ್ಟಣ. (೨) ಬೆಲ್‌ಫೆಸ್ಟ್ ಆಂಟ್ರಿಂ ಕೌಂಟಿಯಲ್ಲಿದೆ, ನಾರಿನ ವಸ್ತ್ರಗಳೂ, ಹತ್ತಿಯ ಬಟ್ಟೆಗಳೂ ತಯಾರಾಗುವ ಸ್ಥಳ. (೩) ಕಾರ್ಕ್. ಮನ್‌ಸ್ಟರ್ ತುಕಡಿಯಲ್ಲಿ ಇದೇ ದೊಡ್ಡ ಪಟ್ಟಣ; ಇಲ್ಲಿ ಕೆಲವು ಕೈಗಾರಿಕೆಗಳು ನಡೆಯುತ್ತವೆ. ಕ್ವೀನ್ಸ್‌ಟನ್ ಎಂಬುದು ಇದರ ರೇವೇ ಪಟ್ಟಣ. ಅಮೇರಿಕಾ ಖಂಡದಿಂದ ಬರುವ ಹೊಗೆಯ ಜಹಜುಗಳು ಮೊದಲು ಇಲ್ಲಿ ನಿಲ್ಲುತ್ತವೆ. (೪) ಲಿಮರಿಕ್. ಇದು ಷಾನ್‌ನದಿ ಮುಖದಲ್ಲಿದೆ; ವ್ಯಾಪಾರ ಸ್ಥಳ.

(೫) ಲಂಡಂಡರಿ. ಫಾಯಲ್‌ನದಿಯ ದಡದಲ್ಲಿದೆ; ಕೈಗಾರಿಕೆಗಳಿರುವ ರೇವೆಪಟ್ಟಣ.

(೬) ವಾಟರ್‌ಫರ್ಡ್. ಇಲ್ಲಿಂದ ಬ್ರಿಸ್ಟಲ್ಲಿಗೆ ಅನೇಕ ಪದಾರ್ಥಗಳು ರಫ್ತಾಗುವುವು.

28. ಬ್ರಿಟಿಷ್ ದ್ವೀಪಗಳಿಗೆ ವಿಶೇಷವಾಗಿ ಆಮದಾಗುವ ಪದಾರ್ಥಗಳಪಟ್ಟಿ.

ಪದಾರ್ಥಗಳ ಹೆಸರು.	ಪದಾರ್ಥಗಳನ್ನು ರಫ್ತು ಮಾಡುವ ದೇಶಗಳ ಹೆಸರು.
ಧಾನ್ಯ.	ಅಮೇರಿಕದ ಸಂಯುಕ್ತಸಂಸ್ಥಾನ, ಇಂಡಿಯ, ರಷ್ಯ ಜರ್ಮನಿ, ಕೆನಡ, ಮತ್ತು ಈಜಿಪ್ಟ್.
ಹತ್ತಿ (ಅರಳೆ)	ಸಂಯುಕ್ತಸಂಸ್ಥಾನ, ಇಂಡಿಯ, ಈಜಿಪ್ಟ್, ಬ್ರೆಸಿಲ್.
ಚಿನ್ನ, ಬೆಳ್ಳಿ.	ಸಂಯುಕ್ತಸಂಸ್ಥಾನ, ಅಸ್ಟ್ರೇಲಿಯ, ಮೆಕ್ಸಿಕೊ.
ಸಕ್ಕರೆ.	ಜರ್ಮನಿ, ವೆಸ್ಟ್‌ಇಂಡಿಯಾ ದ್ವೀಪಗಳು, ಫ್ರ್ಯಾನ್ಸ್, ಬ್ರೆಸಿಲ್
ಉಣ್ಣೆ.	ಆಸ್ಟ್ರೇಲಿಯ. ದಕ್ಷಿಣ ಆಫ್ರಿಕ, ಇಂಡಿಯ, ಜರ್ಮನಿ.
ರೇಷ್ಮೆ.	ಫ್ರ್ಯಾನ್ಸ್, ಚೀಣ, ಬೆಲ್ಜಿಯಂ.
ಚೌಬೀನಿಯ ಮರ.	ಕೆನಡ, ರಷ್ಯ, ಸ್ವೀಡ್ನ್, ಸಂಯುಕ್ತಸಂಸ್ಥಾನ.
ಟೀ (ತೇಯಲೆ)	ಚೀಣ, ಇಂಡಿಯ, ಸಿಂಹಳ ದ್ವೀಪ.
ತೊಗಲು.	ಇಂಡಿಯ, ಸಂಯುಕ್ತಸಂಸ್ಥಾನ, ದಕ್ಷಿಣ ಅಮೇರಿಕ.
ಬೆಣ್ಣೆ.	ಫ್ರಾನ್ಸ್, ಹಾಲೆಂಡ್, ಡೆನ್ಮಾರ್ಕ್.
ದನ ಕುರಿಗಳು.	ಜರ್ಮನಿ, ಹಾಲೆಂಡ್, ಸಂಯುಕ್ತಸಂಸ್ಥಾನ, ಡೆನ್ಮಾರ್ಕ್, ಸ್ಪೇನ್, ಪೋರ್ಟುಗಲ್.
ಎಣ್ಣೆಯ ಬೀಜಗಳು.	ಇಂಡಿಯ, ರಷ್ಯ.
ಕಾಫಿ (ಬೂಂದುಬೀಜ)	ಸಿಂಹಳ ದ್ವೀಪ, ಬ್ರೆಸಿಲ್, ಇಂಡಿಯ.
ವೈನ್.	ಫ್ರ್ಯಾನ್ಸ್, ಸ್ಪೇನ್, ಪೋರ್ಟುಗಲ್.
ಹಂದಿಯ ಮಾಂಸ.	ಸಂಯುಕ್ತ ಸಂಸ್ಥಾನ, ಜರ್ಮನಿ.
ಹಣ್ಣು.	ಗ್ರೀಸ್, ಸ್ಪೇನ್, ತುರ್ಕಿ, ಫ್ರಾನ್ಸ್.
ಹೊಗೆಯಸೊಪ್ಪು.	ಸಂಯುಕ್ತ ಸಂಸ್ಥಾನ, ವೆಸ್ಟಿಂಡಿಯಾ ದ್ವೀಪಗಳಲ್ಲಿ ಕೆಲವು.
ಸೆಣಬು (Jute)	ಇಂಡಿಯ.

ಬ್ರಿಟಿಷರಿಗೆ ಸೇರಿರುವ ಇತರ ರಾಷ್ಟ್ರಗಳು.

29. ಬ್ರಿಟಿಷರ ಆಳಿಕೆಯಲ್ಲಿರುವ ರಾಷ್ಟ್ರಗಳ ಒಟ್ಟು ವಿಸ್ತೀರ್ಣ, ೧೫,೦೦,೦೦೦ ಚದರ ಮೈಲಿಯಾಗುವುದು. ಈ ರಾಷ್ಟ್ರಗಳಲ್ಲಿ ೩೮,೦೦,೦೦,೦೦೦ ನಿವಾಸಿಗಳಿದ್ದಾರೆ.

(೧) ಯೂರೋಪ್ ಖಂಡದಲ್ಲಿರುವ ರಾಷ್ಟ್ರಗಳು—ಸ್ಪೇನ್ ದೇಶದಲ್ಲಿರುವ ಜಿಬ್ರಾಲ್ಟರ್, ಮತ್ತು ಮೆಡಿಟರೇನಿಯನ್ ಸಮುದ್ರದಲ್ಲಿರುವ ಮಾಲ್ಟಾದ್ವೀಪ.

(೨) ಏಷ್ಯಾಖಂಡದಲ್ಲಿರುವ ರಾಷ್ಟ್ರಗಳು—ಬ್ರಿಟಿಷ್ ಇಂಡಿಯ, ಬರ್ಮ, ಸಿಂಹಳ ದ್ವೀಪ, ಏಡನ್, ಸೈಪ್ರಸ್, ಸ್ಟ್ರೇಟ್‌ಸೆಟಲ್‌ಮೆಂಟುಗಳು, ಲಾಬುವನ್, ಹಾಂಕಾಂಗ್, ಮತ್ತು ಬೋರ್ನಿಯೊ ದ್ವೀಪದ ಉತ್ತರ ಭಾಗ.

(೩) ಆಫ್ರಿಕಾ ಖಂಡದಲ್ಲಿರುವ ರಾಷ್ಟ್ರಗಳು—ಸಿರ್ರಾಲಿಯೋನ್, ಪಶ್ಚಿಮ ತೀರದಲ್ಲಿರುವ ಗಿನಿಸೆಟಲ್‌ಮೆಂಟುಗಳು, ಸೆಂಟ್ ಹೆಲೀನ ಮತ್ತು ಅಸೆನ್ಷನ್ ದ್ವೀಪಗಳು, ದಕ್ಷಿಣ ಭಾಗದಲ್ಲಿರುವ ಕೇಪ್‌ಕಾಲೊನಿ, ನೇಟಾಲ್ ಮುಂತಾದುವು, ಪೂರ್ವದಲ್ಲಿ ಮಾರಿಷಸ್ ಮತ್ತು ಸುಗೋತ್ರ.

(೪) ಅಮೇರಿಕಾ ಖಂಡಗಳಲ್ಲಿರುವ ರಾಷ್ಟ್ರಗಳು—ಉತ್ತರದಲ್ಲಿರುವ ಕೆನಡ, ಮಧ್ಯದ ಅಮೇರಿಕದಲ್ಲಿರುವ ಹಾಂಡೂರಸ್, ಬ್ರಿಟಿಷ್ ವೆಸ್ಟಿಂಡಿಯಾ ದ್ವೀಪಗಳು; ದಕ್ಷಿಣ ಅಮೇರಿಕದಲ್ಲಿರುವ ಬ್ರಿಟಿಷ್‌ಗಯೇನ, ದಕ್ಷಿಣ ಅಮೇರಿಕದ ಆಗ್ನೇಯಕ್ಕೆ ಇರುವ ಫಾಕ್ಲೆಂಡ್‌ದ್ವೀಪಗಳು.

(೫) ಬಹುದ್ವೀಪಖಂಡದಲ್ಲಿರುವ ರಾಷ್ಟ್ರಗಳು.—ಆಸ್ಟ್ರೇಲಿಯಾ, ತಾಸ್ಮೇನಿಯ, ನ್ಯೂಜೀಲೆಂಡ್, ಫೀಜೀದ್ವೀಪಗಳು, ನ್ಯೂಗಿನಿಯಲ್ಲಿ ಕೆಲವು ಭಾಗ.

ಫ್ರಾನ್ಸ್.

1. ವಿಸ್ತೀರ್ಣ ಮುಂತಾದ ವಿಷಯಗಳು—ಫ್ರಾನ್ಸ್ ದೇಶವು ಗ್ರೇಟ್ ಬ್ರಿಟನ್ನಿಗೆ ದಕ್ಷಿಣದಲ್ಲಿದೆ. ವಿಸ್ತೀರ್ಣವು ೨,೦೩,೦೦೦ ಚದರ ಮೈಲಿ. ಜನಸಂಖ್ಯೆ ೩,೮೯,೦೦,೦೦೦.

(೧) ಮೇರೆಗಳು.—ಉತ್ತರಕ್ಕೆ ಇಂಗ್ಲಿಷ್ ಕಾಲುವೆ ಮತ್ತು ಬೆಲ್ಜಿಯಂ; ಪೂರ್ವಕ್ಕೆ ಜರ್ಮನಿ, ಸ್ವಿಟ್ಸರ್ಲೆಂಡ್, ಮತ್ತು ಇಟಲಿ; ದಕ್ಷಿಣಕ್ಕೆ ಮೆಡಿಟರೇನಿಯನ್ ಸಮುದ್ರ ಮತ್ತು ಸ್ಪೇನ್; ಪಶ್ಚಿಮಕ್ಕೆ ಅಟ್ಲಾಂಟಿಕ್ ಸಾಗರ.

(೨) ಸಮುದ್ರಶಾಖೆ ಮುಂತಾದುವು.—ಮೆಡಿಟರೇನಿಯನ್ ಸಮುದ್ರದ ಕಡೆ ಲಯನ್ಸ್ ಎಂಬ ಶಾಖೆ, ಅಟ್ಲಾಂಟಿಕ್ ಸಾಗರದ ಕಡೆ ಬಿಸ್ಕೆ ಎಂಬ ಕೊಲ್ಲಿ. ಇವೆರಡು ಕಡೆಯಲ್ಲಿಯೂ ಬಿರುಗಾಳಿಗಳು ಹೆಚ್ಚು. ಡೋವರ್ ಜಲಸಂಧಿ ಇಂಗ್ಲಿಷ್ ಕಾಲುವೆಯನ್ನೂ ಜರ್ಮನ್ ಸಮುದ್ರವನ್ನೂ ಸಂಬಂಧಿಸುವುದು.

ಈ ಜಲಸಂಧಿಯ ಅಗಲ ೨೦ ಮೈಲಿ. ಹಡಗುಗಳು ಅಸಂಖ್ಯಾತವಾಗಿ (೨ ಲಕ್ಷದವರೆಗೆ) ಇಲ್ಲಿ ಪ್ರತಿವರ್ಷದಲ್ಲಿಯೂ ಸಂಚರಿಸುವುವು. ಈ ಜಲಸಂಧಿಯ ಕೆಳಗೆ ೪೧೪ ಅಡಿಯ ಆಳದಲ್ಲಿ ಫ್ರಾನ್ಸಿಗೂ ಇಂಗ್ಲೆಂಡಿಗೂ ಸುರಂಗ ಮಾರ್ಗವನ್ನು ಮಾಡಿ ರೈಲ್ವೆಯನ್ನು ಏರ್ಪಡಿಸಬೇಕೆಂಬ ಯೋಚನೆಯುಂಟು.

(೧) ದೇಶದಲಕ್ಷಣ.—ಪಶ್ಚಿಮದಲ್ಲಿ ವಿಶಾಲವಾದ ಒಂದು ಮೈದಾನ, ಮಧ್ಯಭಾಗದಲ್ಲಿ ಪ್ರಸ್ಥಭೂಮಿ, ಪೂರ್ವಭಾಗದಲ್ಲಿ ಬೆಟ್ಟಗಳು, ದಕ್ಷಿಣದಲ್ಲಿ ರ್ಹೋನ್ ನದಿಯು ಇಕ್ಕಟ್ಟಾದ ಕಣಿವೆ, ಇವೇ ಈ ದೇಶದ ಲಕ್ಷಣ. ಈದೇಶವು ಅಟ್ಲಾಂಟಿಕ್ ಸಾಗರದ ಕಡೆಗೂ ಮೆಡಿಟರೇನಿಯನ್ನಿನ ಕಡೆಗೂ, ಜರ್ಮನ್ ಸಮುದ್ರದ ಕಡೆಗೂ ಇಳಿಜಾರಾಗಿ ಪ್ರಸರಿಸಿದೆ.

(೨) ಬೆಟ್ಟಗಳು.—ಮಧ್ಯಭಾಗದಲ್ಲಿ ಸೆರ್ವೆನ್ ಮತ್ತು ಒವರ್ನ್ ಬೆಟ್ಟಗಳು, ಆಗ್ನೇಯದಲ್ಲಿ ಜೂರಾ ಬೆಟ್ಟ ಮತ್ತು ಆಲ್ಪ್ಸ್ ಪರ್ವತ, ದಕ್ಷಿಣದಲ್ಲಿ ಪಿರಿನೀಸ್ ಪರ್ವತ.

(೩) ಮೈದಾನಗಳು.—ಬಿಸ್ಕೆ ಕೊಲ್ಲಿಯ ಪಕ್ಕದಲ್ಲಿ ಈ ದೇಶದ ನೈರುತ್ಯದ ಕಡೆ, ಲಾಂಡ್ಸ್ ಎಂಬ ತಗ್ಗಾದ ಮೈದಾನವಿದೆ. ರ್ಹೋನ್ ನದಿಯ ಪಶ್ಚಿಮಕ್ಕೆ ಇನ್ನೊಂದು ತಗ್ಗಾದ ಮತ್ತು ಚಪ್ಪಟೆಯಾದ ಮೈದಾನವುಂಟು.

2. ನದಿಗಳು.—ಹಡಗಿನ ಪ್ರಯಾಣಕ್ಕೆ ಅನುಕೂಲವಾದ ನದಿಗಳು ಅನೇಕ ಇವೆ. ಇವುಗಳಲ್ಲಿ ಮುಖ್ಯವಾದುವು—ಸೇನ್, ಲ್ವಾರ್, ಗೆರೋನ್, ರ್ಹೋನ್.

ಸೇನ್ ಇಂಗ್ಲಿಷ್ ಕಡಲ್ಗಾಲ್ವೆಗೆ, ಲ್ವಾರ್ ಮತ್ತು ಗೆರೋನ್ ಬಿಸ್ಕೆ ಕೊಲ್ಲಿಗೆ ಹರಿವುವು. ರ್ಹೋನ್ (೬೩೩ ಮೈ.) ಎಂಬುದು ವೇಗವಾಗಿ ಹರಿದು ಮೆಡಿಟರೇನಿಯನ್ ಸಮುದ್ರಕ್ಕೆ ಬೀಳುತ್ತದೆ. ಸ್ಕೆಲ್ಟ್, ಮ್ಯೂಸ್ ಮತ್ತು ಮೊಸೆಲ್ ನದಿಗಳ ಕೆಲವು ಭಾಗಗಳು ಫ್ರಾನ್ಸ್ ದೇಶದಲ್ಲಿ ಹರಿಯುತ್ತವೆ. ರ್ಹೋನ್ ನದಿಯನ್ನೂ ಸೇನ್ ನದಿಯನ್ನೂ ಸಂಬಂಧಿಸುವುದಕ್ಕೆ ಒಂದು ಕಾಲ್ವೆಯುಂಟು.

3. ವಾಯುಗುಣ ಮುಂತಾದ ವಿಷಯಗಳು.—ವಾಯುಗುಣವು ಹಿತಕರವಾಗಿದೆ; ಪೂರ್ವ ಭಾಗದಲ್ಲಿ ಬೆಟ್ಟಗಳು ಹೆಚ್ಚಾಗಿರುವುದರಿಂದ ಮಳೆ ಹೆಚ್ಚು. ಧಾನ್ಯಾದಿಗಳು ಚೆನ್ನಾಗಿ ಬೆಳೆಯುತ್ತವೆ.

ಗೋಧಿ, ಬೀಟ್ರೂಟ್, ಫಲಗಳು.—ಇವು ಉತ್ತರಭಾಗದಲ್ಲಿ ವಿಶೇಷವಾಗಿ ಆಗುವುವು. ಮಧ್ಯಭಾಗದಲ್ಲಿ ದ್ರಾಕ್ಷಿಯ ವ್ಯವಸಾಯವು ವಿಶೇಷವಾಗಿದೆ. ದಕ್ಷಿಣಭಾಗದಲ್ಲಿ ಆಲಿವ್‌ಮರ, ಮೆಕ್ಕೆಜೋಳ, ಹಿಪ್ಪಲಿ, ನೇರಳೆ, ಅನೇಕಜಾತಿಯ ಹಣ್ಣುಗಳು ಚೆನ್ನಾಗಿ ಬೆಳೆಯುತ್ತವೆ.

4. ಜನರು ಮತ್ತು ಅವರ ಉದ್ಯೋಗ.—[ಫ್ರೆಂಚ್‌ಜನರು ಮುಖ್ಯವಾಗಿ ಕೆಲ್ಟಿಕ್ ಕುಲಕ್ಕೆ ಸೇರಿದವರಾಗಿದ್ದಾರೆ.] ಇವರ ಭಾಷೆ ಯೂರೋಪ್ ಖಂಡದಲ್ಲಿ ಬಹು ಪ್ರಚುರವಾಗಿದೆ. ಜನರ ಮುಖ್ಯೋದ್ಯೋಗ ಕೃಷಿ. ಕೈಗಾರಿಕೆಗಳಲ್ಲಿ ಈ ದೇಶವು ಇಂಗ್ಲೆಂಡಿಗೆ ಎರಡನೆಯದೆನ್ನಿಸಿಕೊಂಡಿದೆ.

ಕಟ್ಟಡಕ್ಕೆ ಉಪಯೋಗವಾದ ಕಲ್ಲು, ಉಪ್ಪು, ಕಬ್ಬಿಣ, ಕಲ್ಲಿದ್ದಲು, ಇವು ಮುಖ್ಯವಾದ ಖನಿಜಗಳು. ಕಲ್ಲಿದ್ದಲು ಸಿಕ್ಕುವುದು ಕಡಿಮೆಯಾದುದರಿಂದ ಕೈಗಾರಿಕೆಗಳು ಹೆಚ್ಚುವುದಕ್ಕೆ ವಿಶೇಷ ಅವಕಾಶವಿಲ್ಲ. ರೇಷ್ಮೆಯ ಬಟ್ಟೆಗಳೂ,

ವೈನು, ಬ್ರಾಂದಿಗಳೂ, ಉಣ್ಣೆಯ ಬಟ್ಟೆ ಮುಂತಾದುವೂ ಹೆಚ್ಚಾಗಿ ತಯಾರಾಗುತ್ತವೆ. ಆಭರಣಾದಿಗಳನ್ನು ಮಾಡುವುದರಲ್ಲಿ ಫ್ರೆಂಚರು ಬಹು ನಿಪುಣರು, ಯುಕ್ತಿಯಾಗಿಯೂ ಸೊಗಸಾಗಿಯೂ ಕೆಲಸಮಾಡುವುದರಲ್ಲಿ ಈ ಜನರಿಗೆ ಸಮಾನರಾದವರು ಪೃಥ್ವಿಯಲ್ಲಿ ಎಲ್ಲಿಯೂ ಇಲ್ಲ. ಒಳದೇಶದ ವ್ಯಾಪಾರವು ಬಹಳ ಹೆಚ್ಚು, ಹೊರದೇಶದ ವ್ಯಾಪಾರವು ಅದಕ್ಕಿಂತ ಕಡಿಮೆ.

ಉತ್ತರ ಭಾಗದಲ್ಲಿ ಒಂದು ಕಡೆ, ಪೂರ್ವಭಾಗದಲ್ಲಿ ಒಂದು ಕಡೆ, ಕಲ್ಲಿದ್ದಲಿನ ಗಣಿಗಳು ಸ್ವಲ್ಪ ವಿಶೇಷವಾಗಿವೆ. ಮೇಲಿನಿಂದ ಬೀಳುವ ನೀರಿನ ಶಕ್ತಿಯಿಂದಲೂ, ಸಮುದ್ರದ ಉಬ್ಬರವಿಳಿತಗಳ ಶಕ್ತಿಯಿಂದಲೂ, ಕೈಗಾರಿಕೆಯ ಯಂತ್ರಗಳನೇಕಗಳು ನಡೆವಂತೆ ಮಾಡಿದ್ದಾರೆ. ರೇಷ್ಮೆ, ಉಣ್ಣೆ ಮತ್ತು ಹತ್ತಿಯ ಸಾಮಾನುಗಳನ್ನು ಬಹು ವಿಶೇಷವಾಗಿ ತಯಾರ್ಮಾಡುತ್ತಾರೆ.

5. ರಾಜ್ಯಭಾರ ಮುಂತಾದ ವಿಷಯುಗಳು.—ಈಗಿರುವ ರಾಜ್ಯಭಾರವು ಪ್ರಜಾ ಪ್ರತಿನಿಧಿ ಪ್ರಭುತ್ವ. ಹೆಚ್ಚಾದ ಸೈನ್ಯವನ್ನೂ, ಯುದ್ಧದ ಹಡಗುಗಳನ್ನೂ ಇಟ್ಟಿದ್ದಾರೆ. ವ್ಯಾಪಾರಕ್ಕೆ ಬೇಕಾದ ಅನುಕೂಲ್ಯಗಳು ವಿಶೇಷವಾಗಿವೆ. ವಿದ್ಯಾಭ್ಯಾಸವೂ ಶಾಸ್ತ್ರವಿಚಾರಗಳೂ ಚೆನ್ನಾಗಿ ನಡೆಯುತ್ತಲಿವೆ. ಜನರು ಮುಖ್ಯವಾಗಿ ರೋಮನ್ ಕ್ಯಾಥೊಲಿಕ್ ಕ್ರಿಸ್ತರಾಗಿದ್ದಾರೆ.

ಇಟಲಿ ದೇಶಕ್ಕೆ ಮಾಡಿರುವ ರೈಲ್ವೆ ಆಲ್ಪ್ಸ್‌ಪರ್ವತದಲ್ಲಿರುವ ಸಿನೇಬೆಟ್ಟದೊಳಗೆ ಸುರಂಗಮಾರ್ಗವಾಗಿ ಹೋಗುತ್ತದೆ.

6. ದೊಡ್ಡ ಪಟ್ಟಣಗಳು:—(೧) ಪಾರಿಸ್ (2,500) ರಾಜಧಾನಿ; ಸೇನ್ ನದಿಯ ದಡದಲ್ಲಿದೆ; ಪೃಥ್ವಿಯಲ್ಲಿ ಇದಕ್ಕಿಂತ ಸುಂದರವಾದ ಪಟ್ಟಣವಿನ್ನಿಲ್ಲ; ಸರ್ವೋತ್ಕೃಷ್ಟವಾದ ಕಟ್ಟಡಗಳು ಅನೇಕ ಇವೆ; ಕುಶಲ ವಿದ್ಯೆಗಳಲ್ಲಿ ಇದು ಪೃಥ್ವಿಯಲ್ಲಿ ಅಗ್ರಸ್ಥಾನವನ್ನು ಹೊಂದಿದೆ; ಈಫಲ್‌ಟವರ್ ಎಂಬ ಕಟ್ಟಡವು ೧,೦೦೦ ಅಡಿಯಷ್ಟು ಎತ್ತರವಿರುವುದು. ಇದಕ್ಕಿಂತಲೂ ಉನ್ನತವಾದ ಕಟ್ಟಡ ಪೃಥ್ವಿಯಲ್ಲಿ ಇನ್ನೆಲ್ಲಿಯೂ ಇಲ್ಲ. (೨) ಲಯನ್ಸ್. ರೋನ್ ನದಿಯ ದಡದಲ್ಲಿದೆ. ರೇಷ್ಮೆಯ ಕೈಗಾರಿಕೆಗಳು ಬಹು ವಿಶೇಷ. (೩) ಮಾರ್ ಸೇಲ್ಸ್. ಕೈಗಾರಿಕೆಯ ಸ್ಥಳ ಮತ್ತು ಅತ್ಯಂತ ದೊಡ್ಡದಾದ ರೇವೆಪಟ್ಟಣ, ಮೆಡಿಟರೇನಿಯನ್ ತೀರದಲ್ಲಿದೆ (೪) ಬೋರ್ಡೋ. ವೈನ್ ವ್ಯಾಪಾರದ ಸ್ಥಳ, ಅಟ್ಲಾಂಟಿಕ್ ಸಾಗರದ ತೀರದಲ್ಲಿದೆ. (೫) ಲೀಲ್. ಉತ್ತರಭಾಗದಲ್ಲಿದೆ, ಇಲ್ಲಿ ಹತ್ತಿಯ ಮತ್ತು ಉಣ್ಣೆಯ ಬಟ್ಟೆಗಳು ವಿಶೇಷವಾಗಿ ತಯಾರಾಗುವುವು. (೬) ಟುಲೂಸ್. ಅಟ್ಲಾಂಟಿಕ್ ಸಾಗರಕ್ಕೂ ಮೆಡಿಟರೇನಿಯನ್ ಸಮುದ್ರಕ್ಕೂ ನಡುವೆ ಇದೆ. ವ್ಯಾಪಾರಸ್ಥಳ. (೭) ನಾಂಟ್ಸ್. ಲ್ವಾರ್ ನದಿಯ ದಡದಲ್ಲಿರುವ ದೊಡ್ಡ ರೇವೆ ಪಟ್ಟಣ. (೮) ಸಾನ್ಟಿಟೀನ್. ಲ್ವಾರ್‌ನದಿಯ ದಡದಲ್ಲಿದೆ, ಕಬ್ಬಿಣದ ಕೈಗಾರಿಕೆಗಳಿಗೆ ಮುಖ್ಯಸ್ಥಳ. (೯) ಹಾವರ್. ಸೇನ್ ನದಿಯ ಮುಖದಲ್ಲಿದೆ, ಪಾರಿಸ್ ಎಂಬ ರಾಜಧಾನಿಗೆ ಇದು ರೇವೆಪಟ್ಟಣ. (೧೦) ರೋವನ್. ಸೇನ್ ನದಿಯ ದಡದಲ್ಲಿದೆ, ಹತ್ತಿಯ ಬಟ್ಟೆಯ ಕಾರ್ಖಾನೆಗಳು ವಿಶೇಷ.

ಮೆಡಿಟರೇನಿಯನ್ ತೀರದಲ್ಲಿರುವ ಟೂಲಾನ್, ಅಟ್ಲಾಂಟಿಕ್ ತೀರದಲ್ಲಿರುವ ಬ್ರೆಸ್ಟ್, ಇಂಗ್ಲಿಷ್ ಕಾಲ್ವೆಯು ತೀರದಲ್ಲಿರುವ ಷರ್ಬರ್ಗ್—ಇವು ಯುದ್ಧದ ಹಡಗು ಗಳಿರುವ ಸ್ಥಳಗಳು.

7. ಕಾರ್ಸಿಕಾದ್ವೀಪ.—ಇದು ಫ್ರೆಂಚರಿಗೆ ಸೇರಿದೆ. ಮುಖ್ಯಪಟ್ಟಣ ಅಯಾಚ್ಚೊ. ಇಲ್ಲಿ ಕಲ್ಲುನೆಲ ಹೆಚ್ಚಾಗಿರುವದರಿಂದ ವ್ಯವಸಾಯ ಕಡಿಮೆ. ಚೌ ಬೀನಿಯ ಮರಗಳೂ, ಹಣ್ಣುಗಳೂ, ವಿಶೇಷವಾಗಿ ಆಗುವುವು.

8. ಫ್ರೆಂಚರಿಗೆ ಸೇರಿದ ಇತರ ರಾಷ್ಟ್ರಗಳು.—ಆಫ್ರಿಕಾಖಂಡದ ಉತ್ತರದಲ್ಲಿ ಆಲ್ಜೀರಿಯ, ಪಶ್ಚಿಮದಲ್ಲಿ ಸೆನಿಗಾಲ್ ಮತ್ತು ಕಾಂಗೊರಾಷ್ಟ್ರ; ದಕ್ಷಿಣ ಅಮೇರಿಕದಲ್ಲಿ ಫ್ರೆಂಚ್‌ಗಯೇನ. ಹಿಂದೂಸಾಗರದಲ್ಲಿ ಬೋರ್ಬನ್ ದ್ವೀಪ; ಇಂಡಿ ಯದಲ್ಲಿ ಪುದುಚೇರಿ ಮುಂತಾದುವು; ಏಷ್ಯಾಖಂಡದಲ್ಲಿ ಟಾಂಕಿನ್, ಮತ್ತು ಫ್ರೆಂಚ್ ಕೊಚಿನ್ ಚೀಣ; ಪೆಸಿಫಿಕ್ ಸಾಗರದಲ್ಲಿ ನ್ಯೂಕೆಲಿಡೋನಿಯ ಮುಂತಾದುವು; ವೆಸ್ಟಿಂಡಿಯಾ ದ್ವೀಪಗಳಲ್ಲಿ ಕೆಲವು ಫ್ರೆಂಚರಿಗೆ ಸೇರಿವೆ.

ಬೆಲ್ಜಿಯಂ.

1. ವಿಸ್ತೀರ್ಣ ಮುಂತಾದ ವಿಷಯಗಳು:—[ಕ್ರಿ. ಶ. ೧೮೧೫ ರಲ್ಲಿ ಬೆಲ್ಜಿಯಂ ದೇಶವು ಹಾಲೆಂಡ್ ರಾಜ್ಯಕ್ಕೆ ಸೇರಿತು. ಆದರೆ ೧೮೩೦ ರಲ್ಲಿ ಬೇರೆ ರಾಜ್ಯವಾಯಿತು.] ವಿಸ್ತಾರ ೧೧,೩೭೩ ಚ. ಮೈಲಿ. ಜನ ಸಂಖ್ಯೆ ೭೫,೦೦,೦೦೦. ಜನಸಾಂದ್ರತೆ ಹೆಚ್ಚಾಗಿರುವ ದೇಶ; ಚದರ ಮೈಲಿಯೊಂದಕ್ಕೆ ೬೫೮ ಜನ ವಿದ್ದಂತೆ ಇದೆ.

(೧) ಮೇರೆಗಳು.—ಉತ್ತರಕ್ಕೆ ಹಾಲೆಂಡ್; ಪೂರ್ವಕ್ಕೆ ಪ್ರಷ್ಯ; ದಕ್ಷಿಣಕ್ಕೆ ಫ್ರಾನ್ಸ್; ಪಶ್ಚಿಮಕ್ಕೆ ಜರ್ಮನ್ ಸಮುದ್ರ.

(೨) ದೇಶದ ಲಕ್ಷಣ.—ತಗ್ಗಾಗಿಯೂ, ಫಲವತ್ತಾಗಿಯೂ, ಇರುವ ನೆಲವು ಪಶ್ಚಿಮದಲ್ಲಿದೆ, ಮಧ್ಯಭಾಗದಲ್ಲಿರುವ ನೆಲವು ಹಳ್ಳದಿಣ್ಣೆಗಳಿಂದ ಕೂಡಿರುವುದು; ಆಗ್ನೇಯ ಪೂರ್ವಭಾಗಗಳಲ್ಲಿ ಬೆಟ್ಟಗುಡ್ಡಗಳು ಹೆಚ್ಚು. ದಕ್ಷಿಣದಿಂದ ಉತ್ತರಕ್ಕೂ ಪೂರ್ವದಿಂದ ಪಶ್ಚಿಮಕ್ಕೂ ನೆಲವು ಇಳಿಜಾರಾಗುತ್ತಾ ಬಂದಿದೆ.

ಸಮುದ್ರವು ನೆಲವನ್ನು ಆಕ್ರಮಿಸಿಕೊಳ್ಳದಿರುವಂತೆ ತೀರದಲ್ಲಿ ಮರಳು ದಿಣ್ಣೆಗಳಿವೆ. ಪೂರ್ವಭಾಗದಲ್ಲಿ ಮ್ಯೂಸನದಿ, ಪಶ್ಚಿಮಭಾಗದಲ್ಲಿ ಸ್ಕೆಲ್ಟ್ ನದಿ ಹರಿಯುತ್ತದೆ. ಕಾಲ್ವೆಗಳು ಬಹುವಿಶೇಷ. ಇಂಗ್ಲೆಂಡಿಗಿಂತ ಇಲ್ಲಿ ಸೆಕೆ ಮತ್ತು ಚಳಿ ಸ್ವಲ್ಪ ಹೆಚ್ಚು.

(೩) ಬೆಳೆಗಳು ಮತ್ತು ಖನಿಜಗಳು.—ನೆಲ ಫಲವತ್ತಾಗಿದೆ; ಧಾನ್ಯ, ಹೊಗೆಸೊಪ್ಪು, ಮುಂತಾದುವು ಆಗುವುವು. ದಕ್ಷಿಣಭಾಗದಲ್ಲಿಯೂ ಪೂರ್ವದ

ಲ್ಲಿಯೂ ಕಾಡುಗಳಿವೆ. ಕಬ್ಬಿಣ ಕಲ್ಲಿದ್ದಲು ಮತ್ತು ಅಮೃತಶಿಲೆ (Marble) ಬಹಳ ಹೆಚ್ಚಾಗಿ ಸಿಕ್ಕುವುವು; ಕೈಗಾರಿಕೆಗಳು ಬಹಳ ಹೆಚ್ಚಾಗಿರುವುವು.

2. ಜನ ಮತ್ತು ವ್ಯಾಪಾರ.—[ಕೆಲ್ಟಿಕ್ ಕುಲಕ್ಕೆ ಸೇರಿದ ವಲೂನರೂ ಜರ್ಮನ್ ಕುಲಕ್ಕೆ ಸೇರಿದ ಫ್ಲೆಮಿಂಗರೂ ವಾಸವಾಗಿದ್ದಾರೆ.] ಸಾಂಕುಶ ಪ್ರಭುತ್ವವು ನೆಲೆಗೊಂಡಿದೆ. ವ್ಯಾಪಾರ ಹೆಚ್ಚಾಗಿ ನಡೆಯುತ್ತದೆ.

ಕಬ್ಬಿಣದ ಸಾಮಾನುಗಳು, ಹತ್ತಿಯ ಮತ್ತು ಉಣ್ಣೆಯ ಬಟ್ಟೆಗಳು, ನಾರು ವಸ್ತ್ರಗಳು ತಯಾರಾಗುವುದು ಹೆಚ್ಚು. ಬೆಲ್ಜಿಯಂ ಲೇಸ್ ಲೋಕಪ್ರಸಿದ್ಧವಾಗಿದೆ. ಜಲ ಮಾರ್ಗಗಳೂ, ರೈಲ್ವೆಯೂ, ಬಹುವಿಶೇಷ.

3. ದೊಡ್ಡ ಪಟ್ಟಣಗಳು.—(೧) ಬ್ರುಸಲ್ಸ್. (480) ರಾಜಧಾನಿ, ಕೈಗಾರಿಕೆಗಳು ವಿಶೇಷವಾಗಿ ನಡೆವುವು. ಬಹು ಸುಂದರವಾಗಿರುವುದರಿಂದ "ಸಣ್ಣ ಪಾರಿಸ್" ಎನಿಸಿಕೊಂಡಿದೆ. ಈ ಪಟ್ಟಣದಲ್ಲಿರುವ ಟೌನ್‌ಹಾಲ್ ಪೃಥ್ವಿಯೊಳಗೆಲ್ಲಾ ಬಹು ಸುಂದರವಾದುದೆನಿಸಿಕೊಂಡಿರುವುದು. ಅರಮನೆಗಳೂ, ದೊಡ್ಡ ಬಂಗಲೆಗಳೂ, ಅಗಲವಾದ ಬೀದಿಗಳೂ, ಎತ್ತರವಾದ ಮನೆಗಳೂ, ವಿಶೇಷವಾಗಿರುವುವು. ಈ ಪಟ್ಟಣದಲ್ಲಿರುವ ವಿವಿಧ ವಿಚಿತ್ರ ಪದಾರ್ಥ ಸಂಗ್ರಹ ಶಾಲೆಯಲ್ಲಿ ಅಪೂರ್ವವಾದ ಚಿತ್ರ ಪಟಗಳೂ, ಕೆತ್ತನೆಯ ಕೆಲಸಗಳೂ, ರತ್ನಗಳೂ ವಿಶೇಷವಾಗಿವೆ. (೨) ಆಂಟ್ವರ್ಪ್. ಸ್ಕೆಲ್ಟ್ ನದಿಯ ದಡದಲ್ಲಿದೆ; ವಿಶೇಷವ್ಯಾಪಾರಸ್ಥಳ. ಈ ಪಟ್ಟಣದಲ್ಲಿರುವ ಕ್ರಿಸ್ತರ ಗುಡಿಯ ಗೋಪುರವು ೪೦೨ ಅಡಿಯಷ್ಟು ಎತ್ತರವಾಗಿದೆ. (೩) ಘೆಂಟ್. ಹತ್ತಿಯ ಬಟ್ಟೆಯ ಕಾರ್ಖಾನೆಗಳು ಹೆಚ್ಚಾಗಿವೆ; ಇದು ಸ್ಕೆಲ್ಟ್ ನದಿಯ ದಡದಲ್ಲಿದೆ. (೪) ಲಿಯಾಜ್. ಮ್ಯೂಸ್ ನದಿಯ ದಡದಲ್ಲಿದೆ; ಕಬ್ಬಿಣದ ಕೈಗಾರಿಕೆಯ ಸ್ಥಳ. ಇದರ ಹತ್ತಿರ ಇರುವ ಸಿರೇಯಿಂಗ್ (Seraing) ಎಂಬ ಸ್ಥಳದಲ್ಲಿ ಬಹು ದೊಡ್ಡದಾದ ಕಬ್ಬಿಣದ ಕಾರ್ಖಾನೆಯುಂಟು; ಇಲ್ಲಿ ಹೊಗೆಯ ಯಂತ್ರಗಳು ತಯಾರಾಗುತ್ತವೆ.

ಹಾಲೆಂಡ್ ಅಥವಾ ತಗ್ಗುದೇಶ.

1. ವಿಸ್ತೀರ್ಣ ಮುಂತಾದ ವಿಷಯಗಳು.—ಹಾಲೆಂಡ್ ದೇಶವು ಬೆಲ್ಜಿಯಂ ದೇಶಕ್ಕೆ ಉತ್ತರದಲ್ಲಿದೆ. ವಿಸ್ತಾರ ೧೨,೬೦೦ ಚ. ಮೈ. ಜನ ಸಂಖ್ಯೆ ೫೫,೦೦,೦೦.

(೧) ಮೇರೆಗಳು.—ಉತ್ತರಕ್ಕೂ ಪಶ್ಚಿಮಕ್ಕೂ ಜರ್ಮನ್ ಸಮುದ್ರ; ಪೂರ್ವಕ್ಕೆ ಪ್ರುಷ್ಯ; ದಕ್ಷಿಣಕ್ಕೆ ಬೆಲ್ಜಿಯಂ.

(೨) ದೇಶದ ಲಕ್ಷಣ.—ಈ ದೇಶದಲ್ಲಿ ದಿಣ್ಣೆಗಳು ವಿನಾ ಬೆಟ್ಟಗಳಿಲ್ಲ. ದೇಶವೆಲ್ಲಾ ಬಂದು ಮೈದಾನವಾಗಿದೆ; ಇದರಲ್ಲಿ ಅನೇಕ ಭಾಗಗಳು ಸಮುದ್ರ ಮಟ್ಟಕ್ಕಿಂತ

ಕೆಳಗೆ ಇವೆ. ರ್ಹೈನ್, ಮ್ಯೂಸ್, ಸ್ಕೆಲ್ಟ್, ಎಂಬ ನದಿಗಳ ಕೆಳಭಾಗಗಳು ಹರಿಯುತ್ತವೆ. ಈ ನದಿಗಳ ಪಾತ್ರವು ಅನೇಕ ಕಡೆಗಳಲ್ಲಿ ಸುತ್ತ ಮುತ್ತ ಇರುವ ನೆಲದ ಮಟ್ಟಕ್ಕಿಂತ ಎತ್ತರದಲ್ಲಿದೆ. ಅಂತು ನೀರಿನ ಕಾಟ ವಿಪರೀತವಾಗಿದೆ.

ಈ ದೇಶಕ್ಕೆ ಮುಖ್ಯವಾದ ಶತ್ರು ನೀರು. ಈ ಶತ್ರುವನ್ನು ನಿರ್ಬಂಧಿಸಿರುವುದೇ ಈ ದೇಶಿಯರ ಮುಖ್ಯ ಯೋಚನೆ. ಕೆಲವು ಕಡೆಗಳಲ್ಲಿ ಮರಳು ದಿಣ್ಣೆಗಳು ಸಮುದ್ರವನ್ನು ದೇಶದೊಳಕ್ಕೆ ಬಾರದಂತೆ ತಡೆದಿರುವುವು. ಈ ದಿಣ್ಣೆಗಳ ಮೇಲೆ ಹುಲ್ಲು ಜೊಂಡುಗಳನ್ನು ಬೆಳೆಯಿಸಿ ಭದ್ರಪಡಿಸಿದ್ದಾರೆ. ಈ ಮರಳು ದಿಣ್ಣೆಗಳು ತಕ್ಕಷ್ಟು ಇಲ್ಲದಿರುವ ಕಡೆಗಳಲ್ಲಿ ಡೈಕುಗಳೆಂಬ ಏರಿಗಳನ್ನು ಕಟ್ಟಿ ಸಮುದ್ರವನ್ನು ದೂರವಾಗಿಟ್ಟಿರುವರು. ಹಾಲೆಂಡ್ ದೇಶದಲ್ಲಿರುವ ಈ ಏರಿಗಳ ಉದ್ದ ೧,೫೫೦ ಮೈಲಿ; ಇವು ೩೫೦ ಅಡಿ ದಪ್ಪವಾಗಿಯೂ ೩೦ ಅಡಿ ಎತ್ತರವಾಗಿಯೂ ಇರುವುವು.

(೩) ಸಮುದ್ರ ಶಾಖೆಗಳು ಮತ್ತು ದ್ವೀಪಗಳು—ಸೂಡರ್‌ಸಿ (ದಕ್ಷಿಣ ಸಮುದ್ರ), ಲಾವರ್‌ಸಿ, ಮತ್ತು ಡಾಲರ್ಟ್ ಎಂಬುವು ಮುಖ್ಯ ಸಮುದ್ರ ಶಾಖೆಗಳು. ಪಶ್ಚಿಮದಲ್ಲಿಯೂ ಉತ್ತರದಲ್ಲಿಯೂ ಅನೇಕ ದ್ವೀಪಗಳಿರುವುವು.

(೪) ವಾಯುಗುಣ—ಇಂಗ್ಲೆಂಡಿಗಿಂತ ಇಲ್ಲಿ ಚಳಿ ಹೆಚ್ಚು, ನೆಲದಲ್ಲಿ ತೇವ ವಿಪರೀತವಾಗಿದೆ, ಬಿರುಗಾಳಿ ಬೀಸುವುದು ಹೆಚ್ಚು.

ನೀರು ನಿಂತಕಡೆ ಹುಟ್ಟುವ ಕಟ್ಟ ವಾಯುವನ್ನು ಈ ಗಾಳಿ ಹೊತ್ತುಕೊಂಡು ಹೋಗುತ್ತದೆ. ಕೆಸರ ನೆಲವು ವಿಶೇಷವಾಗಿರುವುದರಿಂದ ಜಲಚರಗಳು ಬಹಳ ಹೆಚ್ಚು. ಈ ಕಾರಣದಿಂದ ಬಕಪಕ್ಷಿಗಳಿಗೆ ಶ್ರೇಷ್ಠತ್ವ ಬಂದಿದೆ; ಇವುಗಳನ್ನು ಕೊಲ್ಲಕೂಡದೆಂದು ಸರ್ಕಾರದವರು ವಿಧಿಸಿದ್ದಾರೆ.

2. ವ್ಯವಸಾಯ ಮತ್ತು ಕೈಗಾರಿಕೆಗಳು.—ವ್ಯವಸಾಯವು ಬಹಳ ಚನ್ನಾಗಿ ನಡೆಯುತ್ತದೆ. ರೈತರಿಗೆ ಬೇಸರಿಕೆ ಸ್ವಲ್ಪವೂ ಇಲ್ಲ. ಹುಲ್ಲುಗಾವಲುಗಳು ಹೆಚ್ಚಾಗಿರುವುದರಿಂದ ದನಕರುಗಳೂ ಹೆಚ್ಚಾಗಿವೆ. ಮೀನಿನ ವ್ಯಾಪಾರವು ವಿಶೇಷ; ಕೈಗಾರಿಕೆಗಳೂ ಉಂಟು.

ಕ್ರಿ. ಶ. ೧೮೩೩ರಲ್ಲಿ ಹಾಲೆಂಡಿನ ವಿಸ್ತೀರ್ಣವು ಸುಮಾರು ೯,೦೦೦ ಚ. ಮೈ. ಯಾಗಿದ್ದಿತು; ಈಗ ೧೨,೬೦೦ ಚ. ಮೈಲಿಯಾಗಿದೆ. ೪,೦೦೦ ಚ. ಮೈಲಿಯಷ್ಟು ನೆಲವನ್ನು ಸಮುದ್ರದಿಂದ ಬಿಡಿಸಿಕೊಂಡು ವ್ಯವಸಾಯವನ್ನು ಹೆಚ್ಚಿಸಿದ್ದಾರೆ. ಗಾಳಿ ಹೆಚ್ಚಾಗಿ ಬೀಸುವುದರಿಂದ ಗಾಳಿಯ ಯಂತ್ರಗಳಿಂದಲೂ, ಹೊಗೆಯ ಯಂತ್ರಗಳಿಂದಲೂ, ನೀರನ್ನು ಮೇಲಕ್ಕೆ ಎತ್ತಿಹಾಕಿ ಭೂಮಿಯನ್ನು ವ್ಯವಸಾಯಕ್ಕೆ ಅನುಕೂಲಪಡಿಸಿಕೊಳ್ಳುತ್ತಾರೆ. ಜವೆಗೋಧಿ, ತೋಕೆಗೋಧಿ, ಉರುಳೆಗಡ್ಡೆ ಮುಂತಾದುವು ಹುಲುಸಾಗಿ ಬೆಳೆವುವು. ಹೂವಿನ ತೋಟಗಳು ಹೆಚ್ಚಾಗಿವೆ.

ಕಲ್ಲಿದ್ದಲು ಬಹಳ ಕೊಂಚವಾಗಿದೆ; ಗಾಳಿಮಾತ್ರ ವಿಶೇಷವಾಗಿದೆ. ಗಾಳಿ

ಯಿಂದ ತಿರುಗುವ ಯಂತ್ರಗಳಿಂದ ಅನೇಕ ಕೆಲಸಗಳನ್ನು ಮಾಡಿಸುತ್ತಾರೆ. ಇವು ಧಾನ್ಯವನ್ನು ಬೀಸುವುವು, ಅಗಸೆಯ ನಾರನ್ನು ತೊಳೆವುವು, ಎಣ್ಣೆಯ ಬೀಜಗಳನ್ನು ಜಜ್ಜುವುವು, ಬಟ್ಟೆಯ ಚಿಂದಿಯನ್ನು ಬಡಿದು ಕಾಗದವಾಗುವಂತೆ ಮಾಡುವುವು, ಮರವನ್ನು ಕೊಯ್ಯುವುವು, ನೀರನ್ನು ಎತ್ತುವುವು.

3. ರಾಜ್ಯಭಾರ ಮುಂತಾದ ವಿಷಯಗಳು.—ಈ ದೇಶದ ಜನರಿಗೆ ಡಚ್ಚರೆಂದು ಹೆಸರು; [ಇವರು ಜರ್ಮನ್ ಕುಲಕ್ಕೆ ಸೇರಿದವರಾಗಿದ್ದಾರೆ.] ವ್ಯಾಪಾರವು ವಿಶೇಷವಾಗಿ ನಡೆಯುತ್ತಿದೆ. ಮತದಲ್ಲಿ ಕೆಲವರು ಪ್ರಾಟೆಸ್ಟೆಂಟು ಗುಂಪಿಗೆ ಸೇರಿರುವರು, ಉಳಿದವರು ರೋಮನ್ ಕ್ಯಾಥೊಲಿಕ್ ಗುಂಪಿಗೆ ಸೇರಿದವರಾಗಿದ್ದಾರೆ. ಸಾಂಕುಶ ಪ್ರಭುತ್ವವು ಇಲ್ಲಿ ಸ್ಥಾಪಿತವಾಗಿದೆ.

ಡಚ್ಚರು ಶುಚಿರ್ಭೂತರು; ಕಷ್ಟಪಟ್ಟು ಕೆಲಸಮಾಡುತ್ತಾರೆ. ಸಕಲ ವಿದ್ಯಾನಿಲಯಗಳು ನಾಲ್ಕು ಇವೆ, ಮತ್ತು ವಿದ್ಯಾಭ್ಯಾಸವು ಚೆನ್ನಾಗಿ ನಡೆವುದು. ವ್ಯಾಪಾರಕ್ಕೆ ಬೇಕಾದ ಅನುಕೂಲ್ಯಗಳೆಲ್ಲಾ ಇವರ ದೇಶದಲ್ಲಿವೆ. ಇತರ ದೇಶಗಳಲ್ಲಿ ರಸ್ತೆಗಳು ಹೆಚ್ಚಾಗಿರುವಹಾಗೆ ಇವರ ದೇಶದಲ್ಲಿ ಜಲಮಾರ್ಗಗಳು ಹೆಚ್ಚಾಗಿವೆ.

4. ದೊಡ್ಡ ಪಟ್ಟಣಗಳು.—(೧) ಆಂಸ್ಟರ್ಡಾಂ. (430) ರಾಜಧಾನಿ. ಝೂಡರ್‌ಸೀಯ ಸಮೀಪದಲ್ಲಿದೆ. ಈ ಪಟ್ಟಣವು ೯೦ ದ್ವೀಪಗಳನ್ನು ಒಳಕೊಂಡಿರುವುದು; ೩೦೦ ಸೇತುವೆಗಳಿವೆ. ಕೆಸರು ಹೆಚ್ಚಾಗಿರುವುದರಿಂದ ನೆಲದಲ್ಲಿ ಕಂಬಗಳನ್ನು ನಟ್ಟು, ಅವುಗಳ ಮೇಲೆ ಮನೆಗಳನ್ನು ಕಟ್ಟಿದ್ದಾರೆ. ವಜ್ರವನ್ನು ಸಾಣೆಗೆ ಕೊಟ್ಟು ಕಮಲವನ್ನು ಬಿಡಿಸುವುದರಲ್ಲಿ ಇಲ್ಲಿಯವರು ನಿಪುಣರು. ದೊಡ್ಡ ವ್ಯಾಪಾರದ ಸ್ಥಳ. (೨) ದಿಹೇಗ್. ರಾಜನು ವಾಸವಾಗಿರುವ ಪಟ್ಟಣ; ನೋಟಕ್ಕೆ ಚೆನ್ನಾಗಿದೆ. (೩) ರಾಟರ್ಡಾಂ. ಮ್ಯೂಸ್ ನದಿಯ ಪಡದಲ್ಲಿದೆ. ದೊಡ್ಡ ರೇವೆ ಪಟ್ಟಣ. (೪) ಯುಟ್ರೆಕ್ಟ್ ಪುರಾತನ ಪಟ್ಟಣ. (೫) ಹಾರ್ಲೆಂ. ಪಶ್ಚಿಮದಲ್ಲಿದೆ, ಇಲ್ಲಿ ಪ್ರಸಿದ್ಧವಾದ ಹೂವಿನ ತೋಟಗಳಿರುವುವು. (೬) ಲೇಡನ್. ಪ್ರಸಿದ್ಧವಾದ ಸಕಲ ವಿದ್ಯಾನಿಲಯವಿರುವ ಪಟ್ಟಣ.

5. ಡಚ್ಚರಿಗೆ ಸೇರಿರುವ ಇತರ ರಾಷ್ಟ್ರಗಳು—ಏಷ್ಯಾ ಖಂಡದಲ್ಲಿರುವ ಯವದ್ವೀಪ, ಮೊಲಕ್ಕಾ ದ್ವೀಪಗಳು; ಬೋರ್ನಿಯೊ, ಸಿಲಿಬಿಸ್, ಸುಮಾತ್ರ ಮತ್ತು ನ್ಯೂಗಿನಿಗಳಲ್ಲಿ ಕೆಲವು ಭಾಗಗಳು; ದಕ್ಷಿಣಅಮೆರಿಕದಲ್ಲಿ ಡಚ್ಚುಗಯೇನ ಮುಂತಾದುವು ಇವರಿಗೆ ಸೇರಿವೆ.

ಸ್ವಿಟ್‌ಸರ್ಲೆಂಡ್.

1. ವಿಸ್ತೀರ್ಣ ಮುಂತಾದುವುಗಳು.—ಸ್ವಿಟ್ಜರ್ಲೆಂಡ್ ಬೆಟ್ಟದಸೀಮೆ. ವಿಸ್ತೀರ್ಣವು ೧೫,೯೭೦ ಚ. ಮೈ. ಜನಸಂಖ್ಯೆ ೩೩,೦೦,೦೦೦.

(೧) ಮೇರೆ.—ಉತ್ತರಕ್ಕೆ ಜರ್ಮನಿ, ಪೂರ್ವಕ್ಕೆ ಆಸ್ಟ್ರಿಯ, ದಕ್ಷಿಣಕ್ಕೆ ಇಟಲಿ, ಪಶ್ಚಿಮಕ್ಕೆ ಫ್ರಾನ್ಸ್. ಈ ಖಂಡದ ದೇಶಗಳೊಳಗೆಲ್ಲಾ ಇದೊಂದಕ್ಕೇ ತೀರವಿಲ್ಲ.

(೨) ದೇಶದ ಲಕ್ಷಣ.—ಪ್ರಸ್ಥಭೂಮಿಯಿಂದ ಹುಟ್ಟುವ ಪರ್ವತಪಙ್ಕ್ತಿಗಳು ನಾನಾ ದಿಕ್ಕಿಗೆ ಹಬ್ಬಿವೆ. ಜೂರಾ ಪರ್ವತ ಫ್ರಾನ್ಸಿನಕಡೆ, ಆಲ್ಪ್ಸ್ ಪರ್ವತ ಇಟಲಿಯ ಕಡೆ, ತಂತಮ್ಮ ಉನ್ನತ ಶಿಖರಗಳೊಡನೆ ಇವೆ. ಹಿಮರಾಶಿಗಳಿಂದ ಕೂಡಿದ ಅನೇಕ ಶಿಖರಗಳುಂಟು. ಪರ್ವತದ ಪಕ್ಕಗಳಿಂದ ಕೆಲವು ಕಡೆಗಳಲ್ಲಿ ಈ ಎತ್ತರದ ಮೇಲಿನಿಂದ ಅದ್ಭುತಾಕಾರವಾದ ಹಿಮನದಿಗಳು (Glaciers) ಇಳಿಯುತ್ತಿರುವುವು. ಬರ್ನಾರ್ಡ್ (೮,೧೧೦ ಅಡಿ), ಸರ್ವಿ (೧೧,೦೦೦ ಅಡಿ), ಸಿಂಪ್ಲನ್, ಗೋಥಾರ್ಡ್ ಮುಂತಾದುವು ಕಣಿವೆಯ ದಾರಿಗಳು. ಈ ದೇಶದಿಂದ ಇಟಲಿಯ ಕಡೆಗೆ ಮಾಡಿರುವ ರೈಲ್ವೆ ಗೋಥಾರ್ಡ್ ಬೆಟ್ಟದಲ್ಲಿ ಮಾಡಲ್ಪಟ್ಟ ಸುರಂಗದ ಮಾರ್ಗವಾಗಿ ಹೋಗುತ್ತದೆ.

(೩) ನದಿಗಳು ಮತ್ತು ಸರೋವರಗಳು.—ಕಾನ್ಸ್ಟೆನ್ಸ್ ಸರೋವರದಿಂದ ರ್ಹೈನ್‌ನದಿ ಉತ್ತರಕ್ಕೆ, ಜಿನೀವ ಸರೋವರದಿಂದ ರ್ಹೋನ್ ನದಿ ಪಶ್ಚಿಮಕ್ಕೆ, ಹರಿಯುತ್ತವೆ. ನ್ಯೂಷಾಟಲ್, ಲ್ಯೂಸರ್ನ್, ಜ್ಯೂರಿಕ್ ಎಂಬುವು ಇತರ ಸರೋವರಗಳು. ಈ ದೇಶದ ಸರೋವರಗಳು ಬಹಳ ಆಳವಾಗಿರುವುವು.

(೪) ವಾಯುಗುಣ ಮತ್ತು ಬೆಳೆಗಳು.—ಇದು ಬೆಟ್ಟದ ಸೀಮೆಯಾದುದರಿಂದ ಯೂರೋಪ್ ಖಂಡದ ವಾಯುಗುಣಗಳೆಲ್ಲವೂ ಇರುವುವು. ಪರ್ವತಗಳ ಬುಡದಲ್ಲಿ ಚಳಿ ಇಲ್ಲವಾದುದರಿಂದ ಧಾನ್ಯಾದಿಗಳೂ ಹಣ್ಣುಗಳೂ ಬೆಳೆಯುತ್ತವೆ. ಇವುಗಳ ಮೇಲೆ ದ್ರಾಕ್ಷೆಯ ವ್ಯವಸಾಯ ನಡೆಯುತ್ತಿದೆ. ಚಿಕ್ಕಗೋಧಿ (Rye) ೫,೯೦೦ ಅಡಿಯ ಮಟ್ಟದವರೆಗೂ ಆಗುವುದು. ನೀರು ಸರ್ವಕಾಲದಲ್ಲಿಯೂ ಯಥೇಷ್ಟವಾಗಿರುವುದರಿಂದ ಹುಲ್ಲುಗಾವಲುಗಳು ಬಹುವಿಶೇಷ. ೯,೦೦೦ ಅಡಿಯ ಮೇಲೆ ಹಿಮರಾಶಿ ವಿನಾ ಮತ್ತೊಂದೂ ಇಲ್ಲ.

2. ಜನರ ಉದ್ಯೋಗ ಮತ್ತು ಕೈಗಾರಿಕೆಗಳು.—ವ್ಯವಸಾಯವೂ ಪಶುಪಾಲನೆಯೂ ಜನರ ಮುಖ್ಯೋದ್ಯೋಗ. ಕೈಗಾರಿಕೆಗಳೂ ಉಂಟು. ರೇಷ್ಮೆಯ

ಮತ್ತು ಹತ್ತಿಯ ಬಟ್ಟೆಗಳು, ದೊಡ್ಡ ಗಡಿಯಾರ, ಕೈ ಗಡಿಯಾರಗಳು, ಗಿಣ್ಣು ಮುಂತಾದುವು ವಿಶೇಷವಾಗಿ ರಫ್ತಾಗುತ್ತವೆ.

ಸ್ವಿಟ್ಸರ್ಲೆಂಡಿನಲ್ಲಿ ಕಲ್ಲಿದ್ದಲೆಲ್ಲಿಯೂ ಇಲ್ಲ. ಝರಿಗಳ ನೀರಿನಿಂದ ಅನೇಕ ಯಂತ್ರಗಳು ತಿರುಗುವಂತೆ ಮಾಡಿ ಕೈಗಾರಿಕೆಗಳನ್ನು ಹೆಚ್ಚಿಸುತ್ತಿದ್ದಾರೆ.

3. ರಾಜ್ಯಭಾರ ಮುಂತಾದ ವಿಷಯಗಳು.—[ಈ ದೇಶದಲ್ಲಿ ಜರ್ಮಾನಿಕ್ ಮತ್ತು ಕೆಲ್ಟಿಕ್ ಕುಲಕ್ಕೆ ಸೇರಿದವರು ಇದ್ದಾರೆ.] ಜರ್ಮನ್, ಫ್ರೆಂಚ್, ಇಟಾಲಿಯನ್ ಮತ್ತು ರೋಮಾನಿಕ್ ಭಾಷೆಗಳು ಪ್ರಚುರವಾಗಿವೆ. ಅನೇಕರು ಪ್ರಾಟೆಸ್ಟೆಂಟ್ ಗುಂಪಿನವರಾಗಿ; ಉಳಿದವರು ರೋಮನ್ ಕ್ಯಾಥೊಲಿಕ್ ಗುಂಪಿನವರಾಗಿ ಇದ್ದಾರೆ. (ಈ ದೇಶವು ಪ್ರಜಾಪ್ರತಿನಿಧಿ ಪ್ರಭುತ್ವದ ಸಂಯುಕ್ತದೇಶ.)

ಇದರಲ್ಲಿ ಚಿಕ್ಕಚಿಕ್ಕದಾಗಿರುವ ೨೨ ಸ್ವತಂತ್ರ ಸಂಸ್ಥಾನಗಳಿವೆ, ಇವುಗಳಲ್ಲಿ ಪ್ರತಿಯೊಂದರಲ್ಲಿಯೂ ಪ್ರಜಾಪ್ರತಿನಿಧಿ ಪ್ರಭುತ್ವವಿದೆ. ಇವೆಲ್ಲವೂ ಪರಸ್ಪರ ರಕ್ಷಣಾರ್ಥವಾಗಿ ಒಟ್ಟಿಗೆ ಸೇರಿರುವುದರಿಂದ ಈ ದೇಶವು ಪ್ರಜಾಪ್ರತಿನಿಧಿ ಪ್ರಭುತ್ವದ ಸಂಯುಕ್ತ ದೇಶವೆನಿಸಿಕೊಂಡಿದೆ.

4. ದೊಡ್ಡ ಪಟ್ಟಣಗಳು.—(೧) ಜೆನೀವ. ವಿಶೇಷವಾಗಿ ಗಡಿಯಾರಗಳು ತಯಾರಾಗುವ ಸ್ಥಳ. (೨) ಬಾಸಲ್. ಕೈಗಾರಿಕೆಯ ಸ್ಥಳ. (೩) ಬರ್ನ್. ಈ ದೇಶದ ರಾಜಧಾನಿ. (೪) ಜ್ಯೂರಿಕ್. ಬಟ್ಟೆಗಳ ಕಾರ್ಖಾನೆಗಳೂ ಯಂತ್ರಗಳ ಅಂಗಡಿಗಳೂ ಹೆಚ್ಚು.

5. ಹೋಟೇಲುಗಳು.—ಈ ದೇಶದಲ್ಲಿ ರೋಗನಿವಾರಕಜಲವೂ ನೋಡತಕ್ಕ ಸ್ಥಳಗಳೂ ವಿಶೇಷವಾಗಿರುವುದರಿಂದ ರೋಗಿಗಳೂ ನೋಟಗಾರರೂ ವಿಶೇಷವಾಗಿ ಬರುತ್ತಿರುವರು. ಇವರ ಅನುಕೂಲ್ಯಕ್ಕಾಗಿ ಅನೇಕ ಹೋಟೇಲುಗಳಿವೆ.

ರೋಗನಿವಾರಕ ಜಲವಿರುವ ಸ್ಥಳಗಳು ಕೆಲಮಟ್ಟಿಗೆ ಹೆಚ್ಚಾಗಿವೆ. ರಿಗಿ ಎಂಬ ಶಿಖರವು ನೋಡತಕ್ಕ ಸ್ಥಳ; ಇದಕ್ಕೆ ಎರಡು ರೈಲ್ ರಸ್ತೆಗಳನ್ನು ಮಾಡಿದ್ದಾರೆ.

ಆಸ್ಟ್ರಿಯನ್ ಚಕ್ರಾಧಿಪತ್ಯ.

1. ಮೇರೆ ಮುಂತಾದುವು.—ಉತ್ತರಕ್ಕೆ ಪ್ರುಷ್ಯ ಮತ್ತು ರಷ್ಯ; ಪೂರ್ವಕ್ಕೆ ರಷ್ಯ ಮತ್ತು ರೊಮೇನಿಯ; ದಕ್ಷಿಣಕ್ಕೆ ಮಾಂಟಿನೀಗ್ರೊ, ಸರ್ವಿಯ ಮತ್ತು ರೊಮೇನಿಯ; ಪಶ್ಚಿಮಕ್ಕೆ ಇಟಲಿ, ಸ್ವಿಟ್ಸರ್ಲೆಂಡ್, ಮತ್ತು ಬವೇರಿಯ. ವಿಸ್ತೀರ್ಣವು ೨,೬೫,೦೦೦ ಚ. ಮೈ. ಜನಸಂಖ್ಯೆ ೪,೩೦,೦೦,೦೦೦.

(೧) ದೇಶದ ಲಕ್ಷಣ.—ಪೂರ್ವ ಭಾಗದಲ್ಲಿ ವಿಸ್ತಾರವಾದ ಮೈದಾನವುಂಟು; ಇದರ ಸರಹದ್ದು ಕಾರ್ಪೇತಿಯನ್ ಪರ್ವತ. ನೈರುತ್ಯ ಭಾಗವು ಆಲ್ಪ್ಸ್ ಪರ್ವತ ಪಙ್ಕ್ತಿಗಳಿಂದ ಕೂಡಿದೆ ವಾಯುವ್ಯದಲ್ಲಿರುವ ಬೊಹೀಮಿಯ ಎಂಬ ಪ್ರಸ್ಥಭೂಮಿ ಪರ್ವತಗಳಿಂದ ಆವೃತವಾಗಿದೆ. ಡಾನ್ಯೂಬ್ ಮತ್ತು ಅದರ ಉಪನದಿಗಳು ಈ ದೇಶದಲ್ಲಿ ಹರಿಯುತ್ತವೆ; ಉತ್ತರ ಪ್ರಾಂತ್ಯಗಳಲ್ಲಿ ನೀಸ್ಟರ್, ವಿಶ್ಚುಲ, ಮತ್ತು ಎಲ್ಬ್ ನದಿಗಳು ಕೊಂಚ ದೂರದಮಟ್ಟಿಗೆ ಹರಿಯುತ್ತವೆ. ಪಶ್ಚಿಮದಲ್ಲಿರುವ ಇಲ್ಲಿರಿಯದಲ್ಲಿ ಆಳವಾದ ಗವಿಗಳೂ, ಗುಪ್ತಗಾಮಿನಿಗಳಾದ ನದಿಗಳೂ ಉಂಟು. ಪ್ಲಾಟೆನ್ಸಿ ಎಂಬುದು ಮುಖ್ಯಸರೋವರ.

(೨) ಖನಿಜಗಳು.—ಪಾದರಸ ಹೆಚ್ಚಾಗಿ ಸಿಕ್ಕುತ್ತದೆ. ತಾಮ್ರ, ಕಬ್ಬಿಣ, ಸೀಸ ಮತ್ತು ಕಲ್ಲಿದ್ದಲು ಅನೇಕ ಭಾಗಗಳಲ್ಲಿ ಸಿಕ್ಕುವುವು. ಉತ್ತರದಲ್ಲಿ ಕ್ರೇಕೋ ಪಟ್ಟಣದ ಸಮೀಪದಲ್ಲಿ ಉಪ್ಪಿನ ಖನಿಗಳು ವಿಪರೀತವಾಗಿವೆ. ಚಿನ್ನ ಬೆಳ್ಳಿ ಸ್ವಲ್ಪ ಸ್ವಲ್ಪ ಸಿಕ್ಕುತ್ತವೆ. ಕ್ಷೀರಸ್ಫಟಿಕ (Opal) ವೆಂಬ ರತ್ನವು ಹಂಗೆರಿಯಲ್ಲಿ ದೊರೆವುದು.

(೩) ವಾಯುಗುಣ ಮತ್ತು ಬೆಳೆಗಳು.—ಫ್ರಾನ್ಸ್ ದೇಶದಲ್ಲಿರುವುದಕ್ಕಿಂತ ಇಲ್ಲಿ ಸೆಕೆಯೂ ಚಳಿಯೂ ಹೆಚ್ಚು. ಉತ್ತರದಲ್ಲಿ ಪುಂಡಿಯ (Hemp) ವ್ಯವಸಾಯ, ಮಧ್ಯಭಾಗದಲ್ಲಿ ದ್ರಾಕ್ಷೆಯ ವ್ಯವಸಾಯ, ದಕ್ಷಿಣಭಾಗದಲ್ಲಿ ಆಲಿವ್ (ಸೀಮೆಯ ಹಿಪ್ಪೆ) ಮತ್ತು ಭತ್ತಗಳ ವ್ಯವಸಾಯ ವಿಶೇಷವಾಗಿದೆ.

2. ಜನರು ಮತ್ತು ಅವರ ಉದ್ಯೋಗ.—ಸ್ಲೊವೋನಿಯನ್, ಜರ್ಮನ್, ಹಂಗೇರಿಯನ್ ಮುಂತಾದ ಜನರು ವಾಸವಾಗಿದ್ದಾರೆ. ಏಹೂದ್ಯರನೇಕರಿರುವರು. ಬಹು ಜನರು ರೋಮನ್ ಕ್ಯಾಥೊಲಿಕ್ ಗುಂಪಿಗೆ ಸೇರಿದವರಾಗಿದ್ದಾರೆ; ಉಳಿದವರು ಪ್ರಾಟೆಸ್ಟೆಂಟರು ಅಥವಾ ಗ್ರೀಕ್ ಚರ್ಚ್ ಗುಂಪಿಗೆ ಸೇರಿದವರು. ಜನರ ಮುಖ್ಯೋದ್ಯೋಗ ಕೃಷಿ; ಕೈಗಾರಿಕೆಗಳೂ ಉಂಟು.

ಈ ಚಕ್ರಾಧಿಪತ್ಯದ ಜರ್ಮನ್ ಭಾಗದಲ್ಲಿಯೂ, ಬೊಹೀಮಿಯ, ಮೊರೇವಿಯ, ಸೈಲೀಷಿಯ, ಮತ್ತು ಸ್ಟೀರಿಯ ಎಂಬುವುಗಳಲ್ಲಿಯೂ ಕೈಗಾರಿಕೆಗಳು ಹೆಚ್ಚಾಗಿವೆ. ಹಂಗೆರಿಯಲ್ಲಿ ಕೈಗಾರಿಕೆಗಳಿರುವುದು ಕೊಂಚ. ಬೊಹೀಮಿಯವು ಈ ದೇಶಕ್ಕೆ ಸೀಮಂತರತ್ನಪ್ರಾಯವಾಗಿದೆ; ಇಲ್ಲಿ ಸರ್ವೋತ್ಕೃಷ್ಟವಾದ ಗಾಜಿನ ಸಾಮಾನುಗಳು ತಯಾರಾಗುವುವು. ನಾರು ವಸ್ತ್ರಗಳ, ಬಟ್ಟೆಗಳ, ಮತ್ತು ಲೋಹದ ಸಾಮಾನುಗಳ ಕೈಗಾರಿಕೆಗಳು ಹೆಚ್ಚಾಗಿವೆ. ಹೊರದೇಶದ ವ್ಯಾಪಾರವು ಹೆಚ್ಚಾಗಿಲ್ಲ.

3. ರಾಜ್ಯಭಾರ.—ಈ ಚಕ್ರಾಧಿಪತ್ಯವು ಎರಡು ಭಾಗವಾಗಿದೆ— ಜರ್ಮನ್ ರಾಷ್ಟ್ರ ಮತ್ತು ಹಂಗೇರಿಯನ್ ರಾಷ್ಟ್ರ; ಎರಡು ರಾಷ್ಟ್ರಗಳಿಗೂ ಅಧಿಪತಿ ಒಬ್ಬನೇ ಇದ್ದರೂ, ರಾಜ್ಯಭಾರಗಳುಮಾತ್ರ ಬೇರೆಬೇರೆಯಾಗಿವೆ. ಚಕ್ರವರ್ತಿ ಸಾಂಕುಶಪ್ರಭುವಾಗಿದ್ದಾನೆ.

ಈ ಅಧಿಪತಿಗೆ ಆಸ್ಟ್ರಿಯನ್ ಚಕ್ರವರ್ತಿ ಮತ್ತು ಹಂಗೇರಿಯನ್ ದೊರೆ ಎಂದು ಹೆಸರು. [ಜರ್ಮನ್ ರಾಷ್ಟ್ರಕ್ಕೆ ಸೇರಿದ ಮುಖ್ಯ ಪ್ರಾಂತಗಳು.—ಉತ್ತರ ಭಾಗದಲ್ಲಿರುವ ಬೊಹೀಮಿಯ, ಮೊರೇವಿಯ, ಮತ್ತು ಸೈಲೀಷಿಯ; ಮಧ್ಯಭಾಗದಲ್ಲಿರುವ ಆಸ್ಟ್ರಿಯ; ದಕ್ಷಿಣಭಾಗದಲ್ಲಿರುವ ಟೈರೋಲ್, ಸ್ಟೀರಿಯ, ಕೋಸ್ಟ್ಲೆಂಡ್, (ತೀರಪ್ರದೇಶ) ಮತ್ತು ಡಾಲ್ಮೇಷಿಯ. ಈಶಾನ್ಯದಲ್ಲಿರುವ ಗಲೀಷಿಯ, ಬುಕೋವೀನ ಎಂಬುವು ಆಸ್ಟ್ರಿಯಕ್ಕೆ ಸೇರಿದ ಪೋಲಿಷ್ ಪ್ರಾಂತಗಳು. ಹಂಗೇರಿಯನ್ ರಾಷ್ಟ್ರದಲ್ಲಿ ಹಂಗೆರಿ, ಟ್ರಾನ್ಸಿಲ್ವೇನಿಯ, ಸ್ಲವೋನಿಯ, ಕ್ರೋಷಿಯ ಮತ್ತು ತುರ್ಕಿಯ ಸರಹದ್ದಿನ ಪ್ರಾಂತ ಇವು ಸೇರಿವೆ.]

4. ಜರ್ಮನ್ ರಾಷ್ಟ್ರದ ಮುಖ್ಯ ಪಟ್ಟಣಗಳು:—

(೧) ವಿಯನ್ನ. (1,400) ಡಾನ್ಯೂಬ್ ನದಿಯ ದಡದಲ್ಲಿದೆ. ರಾಜಧಾನಿ ಮತ್ತು ಮುಖ್ಯ ವ್ಯಾಪಾರಸ್ಥಳ. ಸೆಂಟ್‌ಸ್ಟೀವನ್ ಕೆಥೀಡ್ರಲ್ ಎಂಬುದರ ಗೋಪುರವು ೪೫೦ ಅಡಿಯಷ್ಟು ಎತ್ತರವಿದೆ.

(೨) ಪ್ರೇಗ್. ಬೊಹೀಮಿಯದಲ್ಲಿದೆ; ವಿಶೇಷ ವ್ಯಾಪಾರದ ಮತ್ತು ಕೈಗಾರಿಕೆಗಳ ಸ್ಥಳ; ಬಹು ಸುಂದರವಾದ ಪಟ್ಟಣ; "ಶತಗೋಪುರ ನಗರ"ವೆಂದೆನಿಸಿಕೊಂಡಿದೆ. (೩) ಗ್ರಾಟ್ಸ್. ಸ್ಟೀರಿಯದಲ್ಲಿರುವ ಮುಖ್ಯ ಪಟ್ಟಣ; ಖನಿಜಗಳನೇಕವಿರುವುವು. (೪) ಸಾಲ್ಸ್‌ಬರ್ಗ್. ಪಶ್ಚಿಮ ಸರಹದ್ದಿನಲ್ಲಿದೆ; ಉಪ್ಪಿನ ಗಣಿಗಳಿರುವ ಸ್ಥಳ. (೫) ಇಡ್ರಿಯ. ಇಲ್ಲಿರಿಯದಲ್ಲಿದೆ, ಪಾದರಸದ ಗಣಿಗಳು ವಿಶೇಷ.

(೬) ಟ್ರಿಯಸ್ಟ್.—ಈ ಚಕ್ರಾಧಿಪತ್ಯದಲ್ಲಿರುವ ಮುಖ್ಯವಾದ ರೇವೆ ಪಟ್ಟಣ. (೭) ಲೆಂಬರ್ಗ್. ಗೆಲೀಷಿಯದಲ್ಲಿದೆ; ವಿಶೇಷ ವ್ಯಾಪಾರಸ್ಥಳ.

5. ಹಂಗೆರಿ ರಾಷ್ಟ್ರದ ದೊಡ್ಡ ಪಟ್ಟಣಗಳು.—(೧) ಬ್ಯುಡಪೆಸ್ಟ್.

ಹಂಗೆರಿಯ ರಾಜಧಾನಿ, ಡಾನ್ಯೂಬ್ ನದಿಯ ಇಕ್ಕಡೆಗಳಲ್ಲಿಯೂ ಇದೆ, ಡಾನ್ಯೂಬ್ ನದಿಗೆ ಇಲ್ಲಿ "ಸಸ್ಪೆನ್ಷನ್‌ಬ್ರಿಡ್ಜ್" (ತೂಗುಹಾಕಿದ ಸೇತುವೆ) ಇದೆ. (೨) ಟೋಕೇ, ಇದು ವೈನಿಗೆ ಪ್ರಸಿದ್ಧಿಯಾಗಿದೆ.

[ಹಂಗೆರಿಯ ಉತ್ತರದಲ್ಲಿರುವ ಷೆಮ್ನಿಟ್ಸ್, ಕ್ರೆಮ್ನಿಟ್ಸ್, ನ್ಯೂಸೋಲ್ ಎಂಬ ಮೂರು ಪಟ್ಟಣಗಳಲ್ಲಿ ತಾಮ್ರ, ಬೆಳ್ಳಿ, ಮತ್ತು ಚಿನ್ನ ಸಿಕ್ಕುವುವು. "ತಾಮ್ರದ ಗೋಡೆಯಿಂದ ನ್ಯೂಸೋಲ್, ಬೆಳ್ಳಿಯ ಗೋಡೆಯಿಂದ ಷೆಮ್ನಿಟ್ಸ್, ಚಿನ್ನದ ಗೋಡೆಯಿಂದ ಕ್ರೆಮ್ನಿಟ್ಸ್ ಆವೃತವಾಗಿರುವುದು," ಎಂದು ಹಂಗೇರಿಯನ್ ಗಾಥೆಯೊಂದುಂಟು.

6. ಇತರ ಪ್ರಾಂತಗಳು.—ತುರ್ಕಿಗೆ ಸೇರಿದ್ದ ಬಾಸ್ನಿಯ, ಮತ್ತು ಹರ್ಸ್ಸಗೋವೀನ ಎಂಬ ಪ್ರಾಂತಗಳು ೧೮೭೮ರಲ್ಲಿ ಆಸ್ಟ್ರಿಯನ್ ಚಕ್ರವರ್ತಿಯ ವಶಕ್ಕೆ ಬಂದುವು. ೧೯೦೮ರಲ್ಲಿ ಅವು ಚಕ್ರಾಧಿಪತ್ಯದಲ್ಲಿ ಐಕ್ಯವಾದುವು.

ಜರ್ಮನ್ ಚಕ್ರಾಧಿಪತ್ಯ.

1. ಮೇರೆ ಮತ್ತು ವಿಸ್ತೀರ್ಣ.—ಜರ್ಮನ್ ಚಕ್ರಾಧಿಪತ್ಯವು ೨೬ ಸಂಸ್ಥಾನಗಳನ್ನು ಒಳಕೊಂಡಿದೆ. ಇದರ ಮೇರೆಗಳು—ಉತ್ತರಕ್ಕೆ ಜರ್ಮನ್ ಸಮುದ್ರ, ಡೆನ್ಮಾರ್ಕ್, ಮತ್ತು ಬಾಲ್ಟಿಕ್ ಸಮುದ್ರ; ಪೂರ್ವಕ್ಕೆ ರಷ್ಯ ಮತ್ತು ಬೊಹೀಮಿಯ; ದಕ್ಷಿಣಕ್ಕೆ ಬೊಹೀಮಿಯ, ಆಸ್ಟ್ರಿಯ ಮತ್ತು ಸ್ವಿಟ್ಸರ್ಲೆಂಡ್; ಪಶ್ಚಿಮಕ್ಕೆ ಫ್ರಾನ್ಸ್, ಬೆಲ್ಜಿಯಂ, ಮತ್ತು ಹಾಲೆಂಡ್. ವಿಸ್ತೀರ್ಣವು ೨,೦೮,೮೦೦ ಚ. ಮೈಲಿ. ಜನಸಂಖ್ಯೆ ೫,೬೪,೦೦,೦೦೦.

ಜರ್ಮನ್ ಚಕ್ರಾಧಿಪತ್ಯಕ್ಕೆ ಸೇರಿದ ಮುಖ್ಯರಾಜ್ಯಗಳು ಯಾವುವೆಂದರೆ:—ಉತ್ತರಭಾಗದಲ್ಲಿರುವ ಪ್ರಷ್ಯ, ದಕ್ಷಿಣಭಾಗದಲ್ಲಿರುವ ಸಾಕ್ಸೊನಿ, ಬವೇರಿಯ, ವರ್ಟಂಬರ್ಗ್ ಮತ್ತು ಬೇಡನ್.

2. ದೇಶದ ಲಕ್ಷಣ.—ಉತ್ತರಭಾಗವೆಲ್ಲಾ ದೊಡ್ಡ ಮೈದಾನ; ಮಧ್ಯಭಾಗದಲ್ಲಿಯೂ ದಕ್ಷಿಣಭಾಗದಲ್ಲಿಯೂ ಪ್ರಸ್ಥಭೂಮಿ ಇದೆ; ಇದರಲ್ಲಿ ಅಲ್ಲಲ್ಲಿ ಪರ್ವತಪಙ್ತಿಗಳಿರುವುವು.

(೧) ಪರ್ವತಗಳು ಮತ್ತು ನದಿಗಳು.—ಹಾನೋವರಿಗೆ ದಕ್ಷಿಣದಲ್ಲಿ ಹಾರ್ಸ್ ಬೆಟ್ಟಗಳು; ದಕ್ಷಿಣ ಸರಹದ್ದಿನಲ್ಲಿ ಏರ್ಸ್‌ಗಬೀರ್ಗ, ಅರ್ಟ್ಸಗಬೀರ್ಗ ಮತ್ತು ಆಲ್ಪ್ಸ್ ಪರ್ವತದ ಶಾಖೆಗಳು ಇರುವುವು; ರೈನ್ ನದಿಯ ಮೇಲ್ಭಾಗದ ಇಕ್ಕಡೆಗಳಲ್ಲಿಯೂ ಕೆಲವು ಬೆಟ್ಟಗಳಿರುವುವು. ಡಾನ್ಯೂಬ್ ನದಿ ದಕ್ಷಿಣದಲ್ಲಿ ಪೂರ್ವಾಭಿಮುಖವಾಗಿ ಹರಿಯುತ್ತದೆ; ಉಳಿದುವು ಉತ್ತರಾಭಿಮುಖವಾಗಿ ಹರಿವುವು.

ರ್ಹೈನ್, ವೀಸರ್, ಎಲ್ಬ್ ಜರ್ಮನ್ ಸಮುದ್ರಕ್ಕೆ ಬೀಳುತ್ತವೆ; ನೀಮೆನ್, ವಿಸ್ಚುಲ, ಓಡರ್ ಬಾಲ್ಟಿಕ ಸಮುದ್ರಕ್ಕೆ ಹರಿವುವು. ತೀರಪ್ರದೇಶವು ತಗ್ಗಾಗಿದೆ.

(೨) ವಾಯುಗುಣ. ಗ್ರೀಷ್ಮರ್ತುವಿನಲ್ಲಿ ಸೆಕೆಯಾಗಿರುವುದು; ಹೇಮಂತರ್ತುವಿನಲ್ಲಿ ಚಳಿ ಹೆಚ್ಚು.

3. ಬೆಳೆಗಳು ಮತ್ತು ಖನಿಜಗಳು.—ಚಿಕ್ಕಗೋಧಿ (Rye) ಹೆಚ್ಚಾಗಿ ಬೆಳೆಯುತ್ತದೆ; ಗೋಧಿ, ಜವೆಗೋಧಿ, ತೋಕೆ ಗೋಧಿಗಳೂ ಬೆಳೆವುವು. ರ್ಹೈನ್ ನದಿಯ ಹತ್ತಿರದಲ್ಲಿಯೂ ದಕ್ಷಿಣಭಾಗದಲ್ಲಿಯೂ ದ್ರಾಕ್ಷೆ ವಿಶೇಷ. ಬೆಟ್ಟಗಳ ಪ್ರದೇಶಗಳಲ್ಲಿ ದೊಡ್ಡ ಕಾಡುಗಳಿವೆ. ಕಬ್ಬಿಣ, ಸತು, ಸೀಸ, ಕಲ್ಲಿದ್ದಲು, ಬೆಳ್ಳಿ, ತಾಮ್ರ, ಮತ್ತು ಉಪ್ಪು ಮುಖ್ಯವಾದ ಖನಿಜಗಳು.

ರೀಸೆನ್‌ಗಬೀರ್ಗೆಯ ಹತ್ತಿರ ಕಲ್ಲಿದ್ದಲು, ಕಬ್ಬಿಣ, ಮತ್ತು ಸತು ವಿಶೇಷವಾಗಿವೆ; ಮತ್ತು ಇಲ್ಲಿ ದೊಡ್ಡ ಪಟ್ಟಣಗಳೂ ಹೆಚ್ಚು. ಎಷ್ಟು ತೆಗೆದರೂ ಮುಗಿಯದಷ್ಟು ಕಲ್ಲಿದ್ದಲೂ ಕಬ್ಬಿಣವೂ ಹಾರ್ಸ್ ಬೆಟ್ಟದ ಹತ್ತಿರ ಸಿಕ್ಕುವುವು. ಇಲ್ಲಿಯೂ ದೊಡ್ಡ ಪಟ್ಟಣಗಳು ಹೆಚ್ಚಾಗಿವೆ.

4. ಜನರ ಉದ್ಯೋಗ.—ಪಶುಪಾಲನೆಯೂ ಕೃಷಿಯೂ ಜನರ ಮುಖ್ಯೋದ್ಯೋಗ; ಕಬ್ಬಿಣದ ಮತ್ತು ಉಕ್ಕಿನ ಸಾಮಾನುಗಳು ವಿಶೇಷವಾಗಿ ತಯಾರಾಗುವುವು; ನೆಯ್ಗೆಯ ಕೆಲಸವೂ ನಡೆವುದು. ವ್ಯಾಪಾರವು ಹೆಚ್ಚುತ್ತಲಿದೆ.

ಧಾನ್ಯ, ಉಣ್ಣೆ, ಮತ್ತು ಚೌಬೀನಿಯ ಮರ ರಫ್ತಾಗುತ್ತವೆ; ಹತ್ತಿಯ ಮತ್ತು ರೇಷ್ಮೆಯ ಬಟ್ಟೆಗಳು, ವೈನು ಮುಂತಾದುವು ಆಮದಾಗುತ್ತವೆ.

5. ಜನ.—[ಈ ಚಕ್ರಾಧಿಪತ್ಯದವರು ಮುಖ್ಯವಾಗಿ ಟ್ಯೂಟಾನಿಕ್ ಕುಲಕ್ಕೆ ಸೇರಿದವರು; ಪೂರ್ವಭಾಗದಲ್ಲಿ ಸ್ಲೆವಾನಿಕ್ ಕುಲದವರು ಹೆಚ್ಚಾಗಿದ್ದಾರೆ, ಯೆಹೂದ್ಯರನೇಕರು ಅಲ್ಲಲ್ಲಿರುವರು.] ಮಕ್ಕಳಿಗೆಲ್ಲರಿಗೂ ವಿದ್ಯೆ ಕಲಿಸಬೇಕೆಂದು ಸರ್ಕಾರದ ವಿಧಿಯಿದೆ; ವಿದ್ಯಾಭ್ಯಾಸವೂ ಶಾಸ್ತ್ರವಿಚಾರವೂ ಅತಿಶಯವಾಗಿ ನಡೆಯುತ್ತಿರುವುವು. ಹೈಜರ್ಮನ್ ಎಂಬುದು ಗ್ರಂಥಭಾಷೆ.

ಜನರಲ್ಲಿ $\frac{2}{3}$ ಪಾಲು ಪ್ರಾಟೆಸ್ಟೆಂಟರಾಗಿದ್ದಾರೆ, ಉಳಿದವರು ರೋಮನ್ ಕ್ಯಾಥೊಲಿಕ್ ಗುಂಪಿನವರು. ಈ ಸಣ್ಣ ಚಕ್ರಾಧಿಪತ್ಯದಲ್ಲಿ ೨೧ ಸಕಲವಿದ್ಯಾನಿಲಯಗಳು ಇವೆ. ವಿದ್ಯೆಗಾಗಿ ಬಹು ಹಣವನ್ನು ಖರ್ಚು ಮಾಡುತ್ತಾರೆ. ಪೃಥ್ವಿಯಲ್ಲಿ ವಿದ್ಯೆಯು ಇನ್ನೆಲ್ಲಿಯೂ ಇಷ್ಟು ಅಭಿವೃದ್ಧಿಗೆ ಬಂದಿಲ್ಲ.

6. ರಾಜ್ಯಭಾರ.—ಪ್ರಷ್ಯಾ ದೇಶದ ರಾಜನು ಈ ಚಕ್ರಾಧಿಪತ್ಯಕ್ಕೆ ಚಕ್ರವರ್ತಿ. ಯುದ್ಧಮಾಡುವುದಕ್ಕೂ ಸಂಧಿಯನೆಸಗುವುದಕ್ಕೂ ಈತನು ಸ್ವತಂತ್ರನು. ಆದರೆ ಪರರಾಜರಮೇಲೆ ತಾನಾಗಿ ಯುದ್ಧ ಪ್ರಾರಂಭಮಾಡಬೇಕಾದರೆ "ಫೆಡರಲ್ ಕೌನ್ಸಿಲ್" ಎಂಬ ಸಭೆಯಲ್ಲಿರುವವರ ಅನುಮತಿಯನ್ನು ಪಡೆಯಬೇಕು; ಈ ಚಕ್ರಾಧಿಪತ್ಯಕ್ಕೆ ಸೇರಿದ ಸಂಸ್ಥಾನಗಳು ತಮ್ಮ ತಮ್ಮ ಕಡೆಯವರನ್ನು

ಈ "ಫೆಡರಲ್ ಕೌನ್ಸಿಲ್ಗೆ" ಕಳುಹಿಸುವುವು. ರೈಷ್ಟಾಗ್ ಅಥವಾ ಇಂಪೀರಿಯಲ್ ಡಯಟ್ ಎಂಬ ಪ್ರಜಾಪ್ರತಿನಿಧಿಸಭೆಯ ಅನುಮತಿ ಇಲ್ಲದೆ ಈತನು ಕಾನೂನು ಗಳನ್ನು ಮಾಡಕೂಡದು. ಗಂಡಸರೆಲ್ಲರೂ ವಯಸ್ಕರಾದ ಮೇಲೆ ಮೂರು ವರ್ಷದವರೆಗೆ ಸೈನ್ಯದಲ್ಲಿ ಕೆಲಸ ಮಾಡಿ ತರಪೇತಾಗಬೇಕೆಂದು ಸರ್ಕಾರದ ವಿಧಿ ಇದೆ.

7. ಜರ್ಮನ್ ಚಕ್ರಾಧಿಪತ್ಯದಲ್ಲಿ ಸೇರಿರುವ ಮುಖ್ಯಸಂಸ್ಥಾನಗಳು.— ರಾಜ್ಯಗಳೆಂದೆನಿಸಿಕೊಂಡಿರುವ ಬವೇರಿಯ, ಸಾಕ್ಸೊನಿ, ವರ್ಟಂಬರ್ಗ್; ಇಂಪೀರಿಯಲ್ ಪ್ರಾವಿನ್ಸ್ ಎಂಬ ಆಲ್ಸೇಸ್ ಲೊರೇನ್; ಗ್ರಾಂಡ್ ಡಚಿಗಳಾದ ಬೇಡನ್, ಸಾಕ್ಸೆ ವೀಮರ್, ಓಲ್ಡನ್‌ಬರ್ಗ್ ಮುಂತಾದುವು. ಇವುಗಳಲ್ಲಿ ಕೆಲವುಗಳ ವಿಸ್ತೀರ್ಣವು ಬಹಳ ಸ್ವಲ್ಪವಾಗಿದೆ.

8. ಪ್ರಷ್ಯಾದೇಶ.—ವಿಸ್ತಾರ ೧,೩೬,೦೦ ಚ. ಮೈಲಿ. ಜನಸಂಖ್ಯೆ ೩,೦೦,೦೦,೦೦೦. ಜರ್ಮನ್ ಚಕ್ರಾಧಿಪತ್ಯದಲ್ಲಿ ಸಕಲ ವಿಷಯಗಳಲ್ಲಿಯೂ ಪ್ರಷ್ಯವೇ ಮುಖ್ಯವಾದುದಾಗಿದೆ.

9. ಪ್ರಷ್ಯಾದೇಶದ ದೊಡ್ಡ ಪಟ್ಟಣಗಳು.—(೧) ಬರ್ಲಿನ್. (1600) ಎಲ್ಬ್ ನದಿಯ ಉಪನದಿಯಾದ ಸ್ಪ್ರೀ ಎಂಬುದರ ದಡದಲ್ಲಿದೆ. ಪ್ರಷ್ಯಾ ದೇಶದ ಮತ್ತು ಜರ್ಮನ್ ಚಕ್ರಾಧಿಪತ್ಯದ ರಾಜಧಾನಿ; ವ್ಯಾಪಾರ ಹೆಚ್ಚಾಗಿ ನಡೆವ ಸ್ಥಳ; ಬಹು ಸಂಪದ್ಯುಕ್ತವಾದ ವಿದ್ಯಾನಿಲಯವೊಂದಿದೆ. (೨) ಬ್ರೆಸ್ಲ. ಓಡರ್ ನದಿಯ ದಡದಲ್ಲಿದೆ; ಧಾನ್ಯದ ವ್ಯಾಪಾರಕ್ಕೂ, ಉಣ್ಣೆಯ ಕೈಗಾರಿಕೆಗಳಿಗೂ ಮುಖ್ಯ ಸ್ಥಳ. (೩) ಕೊಲೋನ್. ರೈನ್ ನದಿಯ ದಡದಲ್ಲಿದೆ; ಬಹು ವ್ಯಾಪಾರವೂ ಕೈಗಾರಿಕೆಗಳೂ ನಡೆವ ಸ್ಥಳ. (೪) ಮೆಯಿನ್ ನದಿಯ ದಡದಲ್ಲಿರುವ ಫ್ರಾಂಕ್ ಫರ್ಟ್. ದೊಡ್ಡ ಬ್ಯಾಂಕುಗಳಿರುವ ಸ್ಥಳ. (೫) ಕೋನಿಗ್ಸ್‌ಬರ್ಗ್. ಡಾಂಟ್ಸಿಗ್ಗೆ ಈಶಾನ್ಯದಲ್ಲಿದೆ; ವ್ಯಾಪಾರಸ್ಥಳ. (೬) ಹಾನೋವರ್. ಹಾನೋವರ್ ಸಂಸ್ಥಾನ ದಲ್ಲಿದೆ; ಕೈಗಾರಿಕೆಗಳ ಸ್ಥಳ. (೭) ಡಾಂಟ್ಸಿಗ್. ವಿಶ್ಚುಲಾನದಿಯ ಮುಖದಲ್ಲಿದೆ; ದೊಡ್ಡ ರೇವೆ ಪಟ್ಟಣ. (೮) ಡುಸೆಲ್‌ಡಾರ್ಫ್. ರೈನ್ ನದಿಯ ದಡ ದಲ್ಲಿದೆ: ವಿಶೇಷವಾದ ಕೈಗಾರಿಕೆಗಳಿರುವ ಸ್ಥಳ.

10. ಬವೇರಿಯ.—ಕೃಷಿ ಹೆಚ್ಚಾಗಿ ನಡೆವುದು, ಕೈಗಾರಿಕೆಗಳೂ ಉಂಟು. (೧) ಮ್ಯೂನಿಕ್. ರಾಜಧಾನಿ, ಡಾನ್ಯೂಬಿನ ಉಪನದಿಯಾದ ಈಸರಿನ ದಡ ದಲ್ಲಿದೆ, ಚಿತ್ರವಿಚಿತ್ರಗಳಾದ ಕಟ್ಟಡಗಳೂ, ಪ್ರತಿಮೆಗಳೂ, ಪ್ರಸಿದ್ಧವಾದ ಚಿತ್ರ ಪಟಗಳೂ ಇರುವುವು. ಧಾನ್ಯದ ವ್ಯಾಪಾರ ಹೆಚ್ಚು. (೨) ನ್ಯೂರೆಂಬರ್ಗ್. ವಿಶೇಷವಾಗಿ ಕೈಗಾರಿಕೆಗಳು ನಡೆವ ಸ್ಥಳ. ಕೈ ಗಡಿಯಾರಗಳನ್ನು ಇಲ್ಲಿ ಮೊದಲು ನಿರ್ಮಿಸಿದರು. ಇವುಗಳಿಗೆ ನ್ಯೂರೆಂಬರ್ಗ್ ಮೊಟ್ಟೆಗಳೆಂಬ ಚೋದ್ಯವಾದ ಹೆಸರಿದ್ದಿತು.

11. ಸಾಕ್ಸೊನಿ.—(೧) ಡ್ರೆಸ್ಡನ್. ಎಲ್ಬ ನದಿಯ ದಡದಲ್ಲಿದೆ, ರಾಜಧಾನಿ, ವಿಚಿತ್ರವಸ್ತುಸಂಗ್ರಹಶಾಲೆಗಳನೇಕ ಇವೆ. ಇದಕ್ಕೆ ಜರ್ಮನ್ ಫ್ಲಾರೆನ್ಸ್ ಎಂಬ ಹೆಸರುಂಟು. (೨) ಲೈಪ್ಜಿಕ್. ಇಲ್ಲಿನ ಸಕಲ ವಿದ್ಯಾನಿಲಯವು ಬಹು ಪ್ರಸಿದ್ಧವಾದುದು. ಪುಸ್ತಕದ ವ್ಯಾಪಾರವು ಬಹಳ ಹೆಚ್ಚು. (೩) ಕೆಮ್ನಿಟ್ಸ್. ಇದಕ್ಕೆ "ಸಾಕ್ಸನ್ ಮಾಂಚೆಸ್ಟರ್" ಎಂಬ ಬಿರುದು ಇದೆ.

12. ವರ್ಟೆಂಬರ್ಗ್.—ಮುಖ್ಯಪಟ್ಟಣ ಸ್ಟುಟ್‌ಗಾರ್ಟ್, ಬಹು ರಮಣೀಯವಾದ ಪ್ರದೇಶದಲ್ಲಿದೆ.

13. ಬೇಡನ್.—ಗ್ರಾಂಡ್‌ಡಚಿಯಾದ ಬೇಡನ್, ರ್ಹೈನ್ ನದಿಯ ಬಲದ ದಡದಲ್ಲಿದೆ. ಜನರ ಮುಖ್ಯೋದ್ಯೋಗ ಕೃಷಿ. ಕಾರಲ್‌ಸ್ರೂ ರಾಜಧಾನಿ.

14. ಆಲ್ಸೇಸ್‌ಲೊರೇನ್.—ರ್ಹೈನ್ ನದಿಗೆ ಪಶ್ಚಿಮದಲ್ಲಿದೆ, ಇದು ಜರ್ಮನಿ ದೇಶಕ್ಕೆ ೧೮೭೧ನೆಯ ಇಸವಿಯಲ್ಲಿ ಸೇರಿತು. ಸ್ಟ್ರಾಸ್‌ಬರ್ಗ್ ಎಂಬುದು ಮುಖ್ಯ ಪಟ್ಟಣ. ಇದರಲ್ಲಿ ಬಹು ಬಲವಾದ ಕೋಟೆ ಇದೆ. ಇಲ್ಲಿರುವ ಕ್ರಿಸ್ತರ ಗುಡಿಯ ಗೋಪುರದಲ್ಲಿ (Spire) ವಿಚಿತ್ರ ತರವಾದ ಜ್ಯೋತಿಷಕ ಗಡಿಯಾರ ವೊಂದಿದೆ.

15. ಜರ್ಮನ್ ಚಕ್ರಾಧಿಪತ್ಯದ ಕಾಲೊನಿಗಳು.—ಆಫ್ರಿಕಾ ಖಂಡದ ಪಶ್ಚಿಮ ನೈರುತ್ಯ ತೀರಗಳಲ್ಲಿ ಕೆಲವು ಭಾಗವನ್ನೂ, ಕೇಪ್‌ಕಾಲೊನಿಗೆ ಉತ್ತರದಲ್ಲಿ ಕೆಲವು ಭಾಗವನ್ನೂ, ಪೂರ್ವ ತೀರದಲ್ಲಿ ಕೆಲವು ಭಾಗವನ್ನೂ; ಪೆಸಿಫಿಕ್ ಸಾಗರದಲ್ಲಿ ಕೆಲವು ದ್ವೀಪಗಳನ್ನೂ ಇವರು ಸೇರಿಸಿಕೊಂಡಿದ್ದಾರೆ.

ಡೆನ್ಮಾರ್ಕ್.

1. ವಿಸ್ತೀರ್ಣ ಮುಂತಾದ ವಿಷಯಗಳು.—ಜೂಟ್ಲೆಂಡ್ ಎಂಬ ಪರ್ಯಾಯ ದ್ವೀಪದ ಒಂದು ಭಾಗವು ಡೆನ್ಮಾರ್ಕ್ ಎಂಬ ಹೆಸರನ್ನು ಹೊಂದಿದೆ. ವಿಸ್ತಾರ ೧೫,೩೦೦ ಚ. ಮೈ. ಜನಸಂಖ್ಯೆ ೨೪,೦೦,೦೦೦.

ದೇಶದ ಲಕ್ಷಣ.—ಈ ದೇಶವೆಲ್ಲಾ ತಗ್ಗಾಗಿರುವ ಒಂದು ಮೈದಾನ; ಹಾಲೆಂಡ್ ದೇಶದಂತೆ ಇಲ್ಲಿಯೂ ಕೆಲವು ಕಡೆಗಳಲ್ಲಿ ಸಮುದ್ರವನ್ನು ಏರಿಗಳಿಂದ (ಡೈಕ್) ದೂರವಾಗಿಟ್ಟಿದ್ದಾರೆ. ಉತ್ತರಭಾಗದಲ್ಲಿ ಲೀಮ್‌ಫ್ಯೋರ್ಡ್ ಎಂಬ ಸಮುದ್ರಶಾಖೆ ದೇಶವನ್ನು ಎರಡು ಭಾಗವಾಗಿ ಮಾಡಿದೆ. ಸ್ಕಾ ಎಂಬುದೊಂದು ಭೂಶಿರ. ಸೀಲೆಂಡ್ (ಸಮುದ್ರ ಭೂಮಿ), ಫ್ಯೂನೆನ್, ಲೋಲೆಂಡ್ (ತಗ್ಗುಭೂಮಿ), ಬಾರನ್ಹೋಂ ಮುಂತಾದ ದ್ವೀಪಗಳು ಈ ದೇಶಕ್ಕೆ ಸೇರಿವೆ. ಉಪ್ಪುನೀರಿನ ಸರೋವರಗಳು ಮತ್ತು ಕೆಸರಿನ ಪ್ರದೇಶಗಳು ಹೆಚ್ಚು; ಬೆಟ್ಟಗುಡ್ಡಗಳಿಲ್ಲ, ನದಿಯಾಗುವುದಕ್ಕೆ

ಡೆನ್ಮಾರ್ಕಿನಲ್ಲಿ ಅವಕಾಶವಿಲ್ಲ; ಗುಡಿನಾ ಎಂಬ ಒಂದು ಸಣ್ಣ ಹೊಳೆ ಮಾತ್ರ ಇದೆ. ತೇವವೂ ಮೋಡವೂ ಹೆಚ್ಚು.

2. ಜನ ಮತ್ತು ಅವರ ಉದ್ಯೋಗ.—[ಈ ದೇಶದವರು ಸ್ಕಾಂಡಿನೇವಿಯನ್ ವಂಶಕ್ಕೆ ಸೇರಿದವರಾಗಿದ್ದಾರೆ;] ಇವರಿಗೆ ಡೇನರು ಎಂದು ಹೆಸರು; ಇವರು ವಿದ್ಯಾವಂತರು ಮತ್ತು ಕಷ್ಟಪಟ್ಟು ಕೆಲಸಮಾಡುವವರು; ಇವರ ಮುಖ್ಯೋದ್ಯೋಗಗಳು ಕೃಷಿ ಮತ್ತು ಪಶುಪಾಲನೆ.

ಕೈಗಾರಿಕೆ ಹೆಚ್ಚಾಗಿರುವುದಕ್ಕೆ ಅವಕಾಶವಿಲ್ಲ. ಹುಲ್ಲು ಬಹಳವಾಗಿರುವುದರಿಂದ ಪಶುಪಾಲನವೃತ್ತಿಯೇ ವಿಶೇಷ. ಬೆಣ್ಣೆ ಮತ್ತು ಗಿಣ್ಣು ವಿಶೇಷವಾಗಿ ತಯಾರಾಗುತ್ತವೆ. ಬೆಣ್ಣೆ, ಉಣ್ಣೆ ಮತ್ತು ದನ ರಫ್ತಾಗುತ್ತವೆ; ಕಲ್ಲಿದ್ದಲು, ಕಬ್ಬಿಣ, ಬಟ್ಟೆ, ಸಕ್ಕರೆ ಆಮದಾಗುವ ಪದಾರ್ಥಗಳು.

3. ರಾಜ್ಯಭಾರ ಮತ್ತು ಪಟ್ಟಣಗಳು.—ಸಾಂಕುಶಪ್ರಭುತ್ವವು ನೆಲೆಗೊಂಡಿದೆ. ಕೋಪನ್‌ಹೇಗನ್ ಎಂಬುದು ರಾಜಧಾನಿ. ಇಲ್ಲಿ ಕೊಂಚ ಕೈಗಾರಿಕೆ ನಡೆಯುತ್ತದೆ; ಪ್ರಸಿದ್ಧವಾದ ಸಕಲ ವಿದ್ಯಾನಿಲಯವಿರುವ ಸ್ಥಳ. ಒಡೆನ್ಸಿ ಫ್ಯೂನೆನ್ ದ್ವೀಪದ ಮುಖ್ಯಪಟ್ಟಣ.

4. ಡೇನ್‌ಜನರಿಗೆ ಸೇರಿದ ಇತರ ರಾಷ್ಟ್ರಗಳು.—ಅಟ್ಲಾಂಟಿಕ್ ಸಾಗರದ ಉತ್ತರ ಭಾಗದಲ್ಲಿರುವ ಐಸ್ಲಂಡ್ ಮತ್ತು ಫೇರೋದ್ವೀಪಗಳು; ವೆಸ್ಟಿಂಡಿಯಾ ದ್ವೀಪಗಳಲ್ಲಿ ಮೂರು; ಗ್ರೀನ್‌ಲಂಡಿನ ತೀರಪ್ರದೇಶದಲ್ಲಿ ಕೆಲವು ಸ್ಥಳಗಳು ಇವರಿಗೆ ಸೇರಿವೆ.

(೧) ಐಸ್ಲಂಡ.—ವಿಸ್ತೀರ್ಣ ಸುಮಾರು ೪೦,೦೦೦ ಚ. ಮೈ. ಜನಸಂಖ್ಯೆ ೮೦,೦೦೦. ಮುಖ್ಯಪಟ್ಟಣ ರೇಖಿಯಾವಿಕ್.

ಈ ದ್ವೀಪವು ಉತ್ತರ [ಮೇರುವೃತ್ತದ ಸಮೀಪ] ದಲ್ಲಿದೆ; ಹಿಮರಾಶಿಗಳಿಂದಲೂ ಜ್ವಾಲಾಮುಖಿಗಳಿಂದಲೂ ಕೂಡಿದ ಅನೇಕ ಪರ್ವತಗಳಿರುವುವು. ಉರುಳುಗಡ್ಡೆ, ಕ್ಯಾಬೆಜ್ ವಿನಾ ಧಾನ್ಯ ಮುಂತಾದುವು ಆಗುವುದಿಲ್ಲ; ಚಳಿ ವಿಪರೀತ; ಕುದಿವ ನೀರನ್ನು ೬೦ ಅಡಿಯ ಎತ್ತರಕ್ಕೆ ಉಗಿವ ಊಟೆಗಳು ಇಲ್ಲಿ ಇವೆ; ಇವುಗಳಿಗೆ ಗೈಸರ್ಸ್ ಎಂದು ಹೆಸರು.

(೨). ಫೆರೋದ್ವೀಪಗಳು.—ಐಸ್ಲಂಡಿಗೂ ಷೆಟ್ಲಂಡಿಗೂ ನಡುವೆ ಇವೆ. ಇವುಗಳಲ್ಲಿ ಕೆಲವು ಹಳ್ಳಿಗಳಿರುವುವು. ಬಹು ಬೆಲೆಯಾಗುವ ಐಡರ್‌ಡಕ್ ಎಂಬುದರ ತೂಲಿಕವು ರಫ್ತಾಗುತ್ತದೆ.

ಸ್ಕಾಂಡಿನೇವಿಯ.

1. ಮೇರೆ ಮತ್ತು ವಿಸ್ತೀರ್ಣ.—[ಸ್ಕಾಂಡಿನೇವಿಯವು ಉ. ಅ. ೫೬ರಿಂದ ೭೧ರವರೆಗೆ ಪ್ರಸರಿಸಿದೆ;] ಇದರಲ್ಲಿ ನಾರ್ವೆ ಮತ್ತು ಸ್ವೀಡ್ನ್ ಎಂಬ ಎರಡು ದೇಶಗಳಿರುವುವು. ವಿಸ್ತೀರ್ಣ ಸುಮಾರು ೨,೯೭,೨೦೦ ಚ. ಮೈ. ಜನಸಂಖ್ಯೆ ೭೭,೦೦,೦೦೦.

ಮೇರೆಗಳು.—ಉತ್ತರಕ್ಕೆ ಉತ್ತರ ಸಾಗರ; ಪೂರ್ವಕ್ಕೆ ರಷ್ಯ, ಬೋತ್ನಿಯಾ ಸಮುದ್ರಶಾಖೆ, ಮತ್ತು ಬಾಲ್ಟಿಕ್ ಸಮುದ್ರ; ದಕ್ಷಿಣಕ್ಕೆ ಬಾಲ್ಟಿಕ್ ಸಮುದ್ರ, ಕಾಟಗಾಟ್, ಮತ್ತು ಸ್ಕಾಗರ್ರಾಕ್; ಪಶ್ಚಿಮಕ್ಕೆ ಜರ್ಮನ್ ಸಮುದ್ರ ಮತ್ತು ಅಟ್ಲಾಂಟಿಕ್ ಸಾಗರ.

ನಾರ್ವೆ.

2. ವಿಸ್ತೀರ್ಣ ಮುಂತಾದ ವಿಷಯಗಳು.—ನಾರ್ವೆ ಸ್ಕಾಂಡಿನೇವಿಯದ ಪಶ್ಚಿಮಭಾಗ. ವಿಸ್ತೀರ್ಣ ಸುಮಾರು ೧,೨೪,೪೦೦ ಚ. ಮೈ.

(೧) ದೇಶದ ಲಕ್ಷಣ.—ನಾರ್ವೆ ಬೆಟ್ಟದ ಸೀಮೆ; ಅನೇಕ ಶಿಖರಗಳು ಏಳೆಂಟು ಸಾಸಿರ ಅಡಿಗಳಿಗಿಂತ ಹೆಚ್ಚಾಗಿರುವುವು. ಪಶ್ಚಿಮತೀರವು ವಿಪರೀತವಾಗಿ ಒಡೆದಿದೆ; ತೀರದ ಸಮೀಪದಲ್ಲಿ ದ್ವೀಪಗಳು ಅಸಂಖ್ಯಾತವಾಗಿರುವುವು; ಇವುಗಳಲ್ಲಿ ಲಾಫೊಡನ್ ದ್ವೀಪಗಳು ಮುಖ್ಯ. (ಈ ದ್ವೀಪಗಳಲ್ಲಿ ಎರಡರ ನಡುವೆ ಇದಿರಿದಿರಾಗಿ ಬರುವ ಸಮುದ್ರ ಪ್ರವಾಹಗಳೆರಡು ಸಂಧಿಸಿ ಮಹತ್ತರವಾದ ಸುಳಿಯೊಂದನ್ನುಂಟುಮಾಡಿವೆ.) ಇದಕ್ಕೆ ಮಿಲ್‌ಸ್ಟ್ರೀಮ್ (ಗಿರ್ರನೆ ಸುತ್ತುವ ಪ್ರವಾಹ) ಎಂದು ಹೆಸರು. ನಾರ್ವೆಯಲ್ಲಿ ಅನೇಕ ಝರಿಗಳು ಉನ್ನತವಾದ ಜಲಪಾತಗಳಾಗಿ ಅಟ್ಲಾಂಟಿಕ್ ಸಾಗರಕ್ಕೆ ಬೀಳುವುವು; ಬೆಟ್ಟಗಳು ಹಿಮದಿಂದಲೂ ಮೋಡಗಳಿಂದಲೂ ಮುಚ್ಚಲ್ಪಟ್ಟಿರುವುದರಿಂದ ಈ ಝರಿಗಳು ಆಕಾಶದಿಂದ ಧುಮುಕುವಂತೆ ಕಾಣುವುವು. ಗ್ಲೋಮೆನ್ ಎಂಬ ನದಿ ದಕ್ಷಿಣವಾಹಿನಿಯಾಗಿ ಬಂದು ಸ್ಕಾಗರ್ರಾಕ್ಕನ್ನು ಸೇರುತ್ತದೆ.

(೨) ವಾಯುಗುಣ.—ಈ ದೇಶದೊಳಭಾಗದಲ್ಲಿ ಚಳಿ ಏಳೆಂಟುತಿಂಗಳವರೆಗೂ ಹೆಚ್ಚಾಗಿರುವುದು; ಗ್ರೀಷ್ಮರ್ತು ಸುಮಾರು ೪ ತಿಂಗಳಿರುವುದು. ಗಲ್ಫ್ ಸ್ಟ್ರೀಮ್ ಎಂಬ ಸಾಗರದ ಉಷ್ಣೋದಕ ಪ್ರವಾಹದ ದೆಸೆಯಿಂದ ಚಳಿ ದುಸ್ಸಹವಾಗದಂತೆ ಇದೆ. ಉತ್ತರಾಗ್ರಭಾಗದಲ್ಲಿ ಗ್ರೀಷ್ಮರ್ತುವಿನಲ್ಲಿ ಸುಮಾರು ೨½ ತಿಂಗಳ

ವರೆಗೆ ಸೂರ್ಯನ ಕಿರಣಗಳು ಎಡೆಬಿಡದೆ ಬೀಳುತ್ತಿರುವುವು; ಈ ಎರಡು ತಿಂಗಳಲ್ಲಿಯೂ ರಾತ್ರಿಯಿಲ್ಲ.

(೩) ಖನಿಜಗಳು ಮತ್ತು ಬೆಳೆಗಳು.—ಕಬ್ಬಿಣವೂ ತಾಮ್ರವೂ ಸ್ವಲ್ಪ ಸಿಕ್ಕುತ್ತವೆ. ಚಳಿ ಬಹಳ ಹೆಚ್ಚಾಗಿಲ್ಲದ ಕಡೆಗಳಲ್ಲಿ ಗ್ರೀಷ್ಮರ್ತುವಿನಲ್ಲಿ ಜವೆಗೋಧಿ, ತೋಕೆಗೋಧಿ, ಮತ್ತು ಚಿಕ್ಕ ಗೋಧಿಗಳು ಸುಮಾರು 90 ದಿವಸಗಳಲ್ಲಿ ಬೆಳೆಯಾಗುವುವು. ಪೈನ್ ಗಿಡಗಳ ಕಾಡುಗಳು ವಿಶೇಷವಾಗಿವೆ. ಕಾಡ್ ಮುಂತಾದ ಮೀನುಗಳನ್ನು ಹಿಡಿವುದೇ ಜನರ ಮುಖ್ಯೋದ್ಯೋಗ.

3. ಜನಸಂಖ್ಯೆ ಮತ್ತು ವ್ಯಾಪಾರ.—[ನಾರ್ವಿಜಿಯನ್ ಜನರು ಸ್ಕಾಂಡಿನೇವಿಯನ್ ವಂಶಕ್ಕೆ ಸೇರಿದವರಾಗಿದ್ದಾರೆ.] ಜನಸಂಖ್ಯೆ ಸುಮಾರು ೨೨,೦೦,೦೦೦. ವ್ಯಾಪಾರವು ಸುಮಾರಾಗಿ ನಡೆಯುತ್ತಿದೆ.

ಚೌಬೀನೆಯ ಮರ, ಮೀನು, ಕಬ್ಬಿಣ, ನೀರ್ಗಲ್ಲು, ಇವು ರಫ್ತಾಗುತ್ತವೆ. ಲೋಹಗಳು, ಕಲ್ಲಿದ್ದಲು, ಬಟ್ಟೆಗಳು, ಧಾನ್ಯ—ಇವು ಆಮದಾಗುವ ಪದಾರ್ಥಗಳು.

4. ದೊಡ್ಡ ಪಟ್ಟಣಗಳು.—(೧) ಕ್ರಿಸ್ಟಿಯಾನ, ರಾಜಧಾನಿ, ಸಕಲ ವಿದ್ಯಾನಿಲಯವೊಂದಿದೆ. (೨) ಬರ್ಗನ್. ಮೀನಿನ ವ್ಯಾಪಾರದ ಸ್ಥಳ. (೩) ಉತ್ತರದಲ್ಲಿರುವ ಹಾಮರ್ಫೆಸ್ಟ್ ಎಂಬ ಪಟ್ಟಣದಲ್ಲಿ ಗ್ರೀಷ್ಮಕಾಲದ ಅಹಸ್ಸು 3½ ತಿಂಗಳು. ಜವೆಗೋಧಿ ಇಲ್ಲಿ ೬ ವಾರದೊಳಗಾಗಿ ಬೆಳೆಯಾಗುತ್ತದೆ.

ಸ್ವೀಡನ್.

5. ವಿಸ್ತೀರ್ಣ ಮುಂತಾದ ವಿಷಯಗಳು.—ಸ್ವೀಡನ್ ದೇಶವು ಸ್ಕಾಂಡಿನೇವಿಯನ್ ಪರ್ಯಾಯ ದ್ವೀಪದ ಪೂರ್ವಭಾಗ. ವಿಸ್ತೀರ್ಣವು ೧,೭೩,೮೦೦ ಚ. ಮೈ. ಜನಸಂಖ್ಯೆ ಸುಮಾರು ೫೧,೦೦,೦೦೦.

(೧) ದೇಶದ ಲಕ್ಷಣ.—ನಾರ್ವೆಯ ಕಡೆಯಿಂದ ನೆಲವು ಮೆಟ್ಟಲು ಮೆಟ್ಟಲಾಗಿ ಪೂರ್ವಕ್ಕೆ ಇಳಿದು ಬಂದಿದೆ. ತೀರ ಪ್ರದೇಶವೂ ದಕ್ಷಿಣಭಾಗವೂ ತಗ್ಗು ನೆಲ; ನದಿಗಳು ಪೂರ್ವವಾಹಿನಿಗಳಾಗಿವೆ; ಟಾರ್ನಿಯ ಎಂಬ ನದಿ ರಷ್ಯಕ್ಕೆ ಮೇರೆಯಾಗಿದೆ. ಗೋಟ ಎಂಬ ನದಿ ಕಾಟಗಾಟ್ಟಿಗೆ ಹರಿದು ಬರುತ್ತದೆ. ಅನೇಕ ಸರೋವರಗಳು ಇವೆ, ದಕ್ಷಿಣದಲ್ಲಿರುವ ವೆನರ್ ಮತ್ತು ವೆಟ್ಟರ್ ಎಂಬುವು ಮುಖ್ಯ. ಗೋಟಾ ಕಾಲ್ವೆ ಈ ಸರೋವರಗಳ ಮಾರ್ಗವಾಗಿ ಕಾಟಗಾಟ್ಟನ್ನೂ ಬಾಲ್ಟಿಕ್ ಸಮುದ್ರವನ್ನೂ ಸಂಬಂಧಿಸುವುದು.

(೨) ವಾಯುಗುಣ ಮತ್ತು ಬೆಳೆಗಳು.—ವಾಯುಗುಣವು ನಾರ್ವೆಯಲ್ಲಿರುವಂತೆ ಇದೆ. ಆದರೆ ಮಳೆ ಅಲ್ಲಿಗಿಂತ ಕಡಿಮೆ, ಫರ್ ಮರದ ಕಾಡುಗಳು ಹೆಚ್ಚು. ಗೋಧಿ, ಜವೆಗೋಧಿ, ತೋಕೆಗೋಧಿ ಮುಖ್ಯ ಬೆಳೆಗಳು.

6. ಜನರ ಉದ್ಯೋಗ ಮತ್ತು ವ್ಯಾಪಾರ.—[ಸ್ವೀಡ್ ಜನರು ಸ್ಕಾಂಡಿನೇವಿಯನ್ ವಂಶಕ್ಕೆ ಸೇರಿದವರು.] ಕೃಷಿ ಇವರ ಮುಖ್ಯೋದ್ಯೋಗ; ಕಬ್ಬಿಣದ ಕೈಗಾರಿಕೆಗಳೂ ಉಂಟು; ವ್ಯಾಪಾರವು ಹೆಚ್ಚಾಗಿ ನಡೆಯುತ್ತಿದೆ.

ಚೌಬೀನಿಯಮರ, ಧಾನ್ಯ ಮತ್ತು ಕಬ್ಬಿಣ ರಫ್ತಾಗುತ್ತವೆ. ಇತರ ಲೋಹಗಳು, ಕಲ್ಲಿದ್ದಲು, ಬಟ್ಟೆ ಆಮದಾಗುವುವು.

7. ರಾಜ್ಯಭಾರ.—೧೮೧೪ರಿಂದ ೧೯೦೫ರ ವರೆಗೆ ನಾರ್ವೆ ಮತ್ತು ಸ್ವೀಡ್ ಎಂಬ ಎರಡು ದೇಶಗಳಿಗೂ ಒಬ್ಬನೇ ದೊರೆ, ಆದರೆ ರಾಜ್ಯಭಾರಗಳು ಬೇರೆಬೇರೆಯಾಗಿದ್ದುವು. ಈಗ ೧೯೦೫ರಿಂದ ಸಕಲ ವಿಷಯಗಳಲ್ಲಿಯೂ ಎರಡು ಪ್ರತ್ಯೇಕ ರಾಜ್ಯಗಳಾಗಿವೆ. ಕಾನೂನುಗಳನ್ನು ಮಾಡುವುದಕ್ಕೆ ಎರಡು ದೇಶಗಳಿಗೂ ಬೇರೆ ಬೇರೆ ಪ್ರಜಾಪ್ರತಿನಿಧಿ ಸಭೆಗಳುಂಟು.

8. ದೊಡ್ಡ ಪಟ್ಟಣಗಳು.—(೧) ಸ್ಟಾಕ್‌ಹೋಂ. ಮಿಲಾರ್ ಸರೋವರದ ಮುಖದಲ್ಲಿದೆ. ರಾಜಧಾನಿ, ಬಹು ಸುಂದರವಾದ ಪಟ್ಟಣ, "ಉತ್ತರ ದಿಕ್ಕಿನ ವೆನಿಸ್" ಎಂಬ ಹೆಸರುಂಟು. ಇದಕ್ಕೆ ಅನತಿದೂರದಲ್ಲಿ ಅಪ್ಸಾಲ ಎಂಬ ಪಟ್ಟಣದಲ್ಲಿ ಹೆಸರುವಾಸಿಗೆ ಬಂದಿರುವ ಸಕಲ ವಿದ್ಯಾನಿಲಯವೊಂದಿದೆ. (೨) ಗಾತನ್ಬರ್ಗ್. ವ್ಯಾಪಾರಸ್ಥಳ. ಗೋಟಾನದಿಯ ದಡದಲ್ಲಿದೆ. (೩) ಕಾರಲ್ಸ್‌ಕ್ರೋನ. ಆಗ್ನೇಯದಲ್ಲಿದೆ. ಯುದ್ಧದ ಹಡಗುಗಳಿರುವ ಸ್ಥಳ.

9. ಲಾಪ್ಲೆಂಡ್.—ಇದು ಬೋತ್ನಿಯ ಸಮುದ್ರ ಶಾಖೆಗೆ ಉತ್ತರದಲ್ಲಿದೆ. ಇದರ ಕೆಲವು ಭಾಗವು ಸ್ಕಾಂಡಿನೇವಿಯಕ್ಕೆ ಸೇರಿದೆ. ಉಳಿದ ಭಾಗವು ರಷ್ಯಕ್ಕೆ ಸೇರಿದೆ.

ನೆಲವು ಅನೇಕ ತಿಂಗಳುಗಳವರೆಗೆ ಹಿಮದಿಂದ ಮುಚ್ಚಲ್ಪಟ್ಟಿರುವುದು. ಧಾನ್ಯ ಬೆಳೆವುದಿಲ್ಲ. [ಮಂಗೋಲಿಯನ್ ಕುಲಕ್ಕೆ ಸೇರಿದ] ಲಾಪ್ಲೆಂಡರು, ಪಾಚಿಯನ್ನು ತಿಂದು ಜೀವಿಸುವ ಹಿಮಸಾರಂಗಗಳ ಮಂದೆಯನ್ನು ಮೇಯಿಸಿಕೊಂಡು ಜೀವಿಸುತ್ತಿದ್ದಾರೆ.

ರಷ್ಯ.

1. ಮೇರೆ ಮತ್ತು ವಿಸ್ತೀರ್ಣ.—[ರಷ್ಯಾ ದೇಶವು ಉ. ಅ. ಸುಮಾರು ೪೦ರಿಂದ ೭೦ರ ವರೆಗೆ ಪ್ರಸರಿಸಿದೆ;] ಯೂರೋಪ್ ಖಂಡದ ಪೂರ್ವಾರ್ಧವು ಈ ದೇಶದಲ್ಲಿ ಸೇರಿದೆ. ವಿಸ್ತೀರ್ಣ ಸುಮಾರು ೧೯,೯೬,೭೦೦ ಚ. ಮೈ. ಜನಸಂಖ್ಯೆ ೧೦,೩೪,೦೦,೦೦೦.

ಮೇರೆಗಳು.—ಉತ್ತರಕ್ಕೆ ಉತ್ತರ ಸಾಗರ, ಪೂರ್ವಕ್ಕೆ ಯೂರಲ್ ಪರ್ವತ, ಯೂರಲ್‌ನದಿ, ಮತ್ತು ಕಾರಾನದಿ; ದಕ್ಷಿಣಕ್ಕೆ ಕಾಕಸಸ್ ಪರ್ವತ, ಕಪ್ಪು ಸಮುದ್ರ, ಮತ್ತು ಕ್ಯಾಸ್ಪಿಯನ್ ಸಮುದ್ರ; ಪಶ್ಚಿಮಕ್ಕೆ ರೊಮೇನಿಯ, ಆಸ್ಟ್ರಿಯ, ಪ್ರಷ್ಯ, ಬಾಲ್ಟಿಕ್ ಸಮುದ್ರ, ಮತ್ತು ಸ್ವೀಡನ್.

2. ದ್ವೀಪಗಳು.—ಬಾಲ್ಟಿಕ್ ಸಮುದ್ರದಲ್ಲಿ ಈಸಲ್, ಡೇಗೋ, ಮತ್ತು ಆಲೆಂಡ್; ಉತ್ತರಸಾಗರದಲ್ಲಿ ನೋವಸೆಂಬ್ಲ, ವೈಗಾಟ್ಸ್, ಮತ್ತು ಸ್ಪಿಟ್ಸ್‌ಬರ್ಗನ್.

ಸ್ಪಿಟ್ಸ್‌ಬರ್ಗನ್ ದ್ವೀಪಸ್ತೋಮದಲ್ಲಿ ಜನರು ಯಾರೂ ವಾಸವಾಗಿಲ್ಲ. ಬೆಸ್ತರೂ ಬೇಟೆಗಾರರೂ ಆಗಾಗ ಹೋಗಿ ಬರುವರು.

3. ದೇಶದ ಲಕ್ಷಣ.—ರಷ್ಯಾ ದೇಶವೆಲ್ಲಾ ವಿಸ್ತಾರವಾದ ಒಂದು ಮೈದಾನ. ವಿಶೇಷ ಎತ್ತರವಿಲ್ಲದ ವಾಲ್ಡಯಿ (೧,೧೦೦ ಅಡಿ) ಬೆಟ್ಟಗಳು ಸೇಂಟ್‌ಪೀಟರ್ಸ್‌ಬರ್ಗ್ ಮಾಸ್ಕೋಗಳಿಗೆ ನಡುವೆ ಹಬ್ಬಿವೆ. ಇವೇ ಈ ದೇಶಕ್ಕೆ ಮುಖ್ಯವಾದ ಜಲವಿಭಾಗಸ್ಥಾನ.

(೧) ನದಿಗಳು.—ಈ ದೇಶವು ದೊಡ್ಡ ಮೈದಾನವಾದುದರಿಂದ ನದಿಗಳು ಬಹು ನಿದಾನವಾಗಿಯೂ ಬಹಳ ಡೊಂಕಾಗಿಯೂ ಹರಿಯುತ್ತವೆ; ಇವುಗಳ ಉದ್ದಕ್ಕೆ ತಕ್ಕಷ್ಟು ನೀರಿಲ್ಲ. ಮುಖ್ಯವಾದ ನದಿಗಳು ಯಾವುವೆಂದರೆ.—ಉತ್ತರ ಸಾಗರಕ್ಕೆ ಹೋಗುವ ಪೆಚೋರ; ಬಿಳಿಯ ಸಮುದ್ರಕ್ಕೆ ಹೋಗುವ ಉತ್ತರ ಡ್ವೈನ; ಲಡೋಗ ಸರೋವರದಿಂದ ಹರಿದು ಫಿನ್ಲೆಂಡ್ ಸಮುದ್ರಶಾಖೆಗೆ ಹೋಗುವ ನೀವ; ಬಾಲ್ಟಿಕ್ ಸಮುದ್ರಕ್ಕೆ ಹೋಗಿ ಬೀಳುವ ಡೂನ, ನೀಮೆನ್ ಮತ್ತು ವಿಶ್ಚುಲ; ಕಪ್ಪು ಸಮುದ್ರಕ್ಕೆ ಹೋಗುವ ನೀಸ್ಟರ್ ಮತ್ತು ನೀಪರ್, ಏಸೋವ್ ಸಮುದ್ರಕ್ಕೆ ಹೋಗುವ ಡಾನ್; ಕಾಸ್ಪಿಯನ್ ಸಮುದ್ರಕ್ಕೆ ಬೀಳುವ ವಾಲ್ಗ ಮತ್ತು ಯೂರಲ್ ನದಿ. ಮೇಲಣ ನದಿಗಳಲ್ಲಿ ಕೆಲವು ಹೇಮಂತರ್ತುವಿನಲ್ಲಿ ಗಡ್ಡೆಕಟ್ಟಿರುತ್ತವೆ. ವಾಲ್ಗ, ನೀಪರ್, ಡಾನ್ ಎಂಬ ನದಿಗಳು ಬಹು ಪ್ರಯೋಜನಕಾರಿಗಳು. ಆಗ್ನೇಯದಲ್ಲಿ ಅನೇಕ ನದಿಗಳು ನೀರು ಕಡಿಮೆಯಾಗಿ ನೆಲದಲ್ಲಿಯೇ ಇಂಗಿಹೋಗುವುವು.

(೨) ಸರೋವರಗಳು.—ಸರೋವರಗಳು ಅನೇಕ ಇವೆ; ಇವುಗಳಲ್ಲಿ ಮುಖ್ಯವಾದುವು ಲಡೋಗ ಮತ್ತು ಒನೀಗ. ಆಗ್ನೇಯದಲ್ಲಿ ಉಪ್ಪುನೀರಿನ ಸರೋವರಗಳು ಇವೆ.

(೩) ವಾಯುಗುಣ.—ಪೂರ್ವದಿಂದ ಪಶ್ಚಿಮಕ್ಕೆ ಹಬ್ಬಿರುವ ಉನ್ನತವಾದ ಪರ್ವತಗಳು ಯಾವುವೂ ಇಲ್ಲದಿರುವುದರಿಂದ ಉತ್ತರದಿಂದ ಶೀತಮಾರುತಗಳೂ ದಕ್ಷಿಣದಿಂದ ಉಷ್ಣಮಾರುತಗಳೂ ತಡೆಯಿಲ್ಲದೆ ಬೀಸುವುವು; ಆದುದರಿಂದ ಸೆಕೆಯೂ ಚಳಿಯೂ ಬಹಳ ಹೆಚ್ಚು. ಮಳೆಯಾಗುವುದು ಬಹಳ ಕಡಿಮೆ.

4. ಉದ್ಭಿಜ್ಜಗಳು.—ಉತ್ತರಭಾಗದಲ್ಲಿ ಚಳಿ ವಿಪರೀತವಾಗಿರುವುದರಿಂದ ಬೆಳೆಯುವುದೂ ಆಗುವುದಿಲ್ಲ. ಆಗ್ನೇಯ ಭಾಗದಲ್ಲಿ ಮರವಿಲ್ಲದ ಮೈದಾನಗಳು ಮಾತ್ರ ಇವೆ. ಮಧ್ಯಭಾಗವೂ ನೈರುತ್ಯಭಾಗವೂ ಬಹು ಫಲವತ್ತಾಗಿವೆ; ಇಲ್ಲಿ ಕರಿಯಮಣ್ಣು ಹೆಚ್ಚು. ನೈರುತ್ಯದಲ್ಲಿ ಗೋಧಿ, ಇದಕ್ಕೆ ಉತ್ತರದಲ್ಲಿ ಚಿಕ್ಕ ಗೋಧಿ ಮುಂತಾದ ಧಾನ್ಯಗಳು, ಪಶ್ಚಿಮದಲ್ಲಿ ಅಗಸೆ ಮತ್ತು ಸಣಬಿನಗಿಡ, ಬಹಳ ಹುಲುಸಾಗಿ ಬೆಳೆಯುತ್ತವೆ. ದೇಶದಲ್ಲಿ $\frac{1}{3}$ ಭಾಗವು ದೊಡ್ಡಕಾಡು.

5. ಪ್ರಾಣಿಗಳು.—ಉತ್ತರಭಾಗದಲ್ಲಿ ಮೃದುರೋಮವುಳ್ಳ ಸೇಬಲ್ ಅರ್ಮೈನ್ ಮುಂತಾದ ಪ್ರಾಣಿಗಳು ವಿಶೇಷವಾಗಿವೆ; ದನ ಕುರಿ ಕುದುರೆಗಳು ದಕ್ಷಿಣ ಭಾಗದಲ್ಲಿ ಬಹಳ ವಿಶೇಷ, ಅನೇಕ ಜಾತಿಯ ಮೀನುಗಳು ಹೇರಳವಾಗಿರುವುವು.

ತೋಳ ಮತ್ತು ಕರಡಿ ಮುಖ್ಯವಾದ ದುಷ್ಟಮೃಗಗಳು. ಉತ್ತರದಲ್ಲಿ ಹಿಮಸಾರಂಗಗಳು ಬಹು ಮುಖ್ಯ; ಆಗ್ನೇಯದಲ್ಲಿ ಒಂಟೆಗಳು ಇರುವುವು.

6. ಖನಿಜಗಳು.—ಯೂರಲ್ ಪರ್ವತದಲ್ಲಿ ಚಿನ್ನ, ಕಬ್ಬಿಣ, ಮತ್ತು ತಾಮ್ರ ಹೆಚ್ಚಾಗಿ ಸಿಕ್ಕುತ್ತವೆ. ಪ್ಲಾಟಿನಂ ಎಂಬ ಲೋಹವು ಈ ದೇಶದಲ್ಲಿ ಸಿಕ್ಕುವಷ್ಟು ಪೃಥ್ವಿಯಲ್ಲಿ ಇನ್ನೆಲ್ಲಿಯೂ ಸಿಕ್ಕುವುದಿಲ್ಲ. ಮಾಸ್ಕೋ ಹತ್ತಿರದಲ್ಲಿಯೂ ಯೂರಲ್ ಪರ್ವತದಲ್ಲಿಯೂ ಕಲ್ಲಿದ್ದಲು ವಿಶೇಷವಾಗಿದೆ. ಕಾಸ್ಪಿಯನ್ ಸಮುದ್ರದ ಹತ್ತಿರ ಕೆರೋಸಿನ್ ಎಣ್ಣೆ ತಯಾರಾಗುತ್ತದೆ.

7. ಜನರು ಮತ್ತು ಅವರ ಉದ್ಯೋಗ.—[ರಷ್ಯನ್ ಜನರು ಸ್ಲಾವಾನಿಕ್ ಕುಲಕ್ಕೆ ಸೇರಿದವರು.] ಇವರ ಮುಖ್ಯೋದ್ಯೋಗ ಕೃಷಿ. ಮೃಗಬೇಟೆ, ಮೀನುಬೇಟೆ, ಪಶುಪಾಲನೆ—ಇವೂ ಮುಖ್ಯವೃತ್ತಿಗಳು.

ರಷ್ಯನ್ ಜನರು ಗ್ರೀಕ್ ಚರ್ಚಿಗೆ ಸೇರಿದ್ದಾರೆ; ಮೂಢಭಕ್ತಿ ಹೆಚ್ಚು, ನಾಗರಿಕತೆ ಕಡಿಮೆ. ಆಗ್ನೇಯದಲ್ಲಿ ಮಹಮ್ಮದೀಯರು ಕೆಲವರಿದ್ದಾರೆ. ಪಶ್ಚಿಮಭಾಗದಲ್ಲಿ ಪ್ರಾಟೆಸ್ಟೆಂಟ್ ಮತ್ತು ರೋಮನ್ ಕ್ಯಾಥೊಲಿಕ್ ಗುಂಪಿನವರೂ ಯಹೂದ್ಯರೂ ಉಂಟು.

8. ವ್ಯಾಪಾರ.—ಗೋಧಿ, ಅಗಸೆಯ ನಾರು, ಸಣಬು, ಚೌಬೀನಿಯ

ಮರ, ಉಣ್ಣೆ—ಇವು ರಫ್ತಾಗುತ್ತವೆ. ಹೆಚ್ಚಾಗಿ ಆಮದಾಗುವ ಪದಾರ್ಥಗಳು—ಹತ್ತಿ, ಟೀ, ಕಾಫಿ, ಮತ್ತು ಲೋಹಗಳು.

ಮುಖ್ಯವಾದ ನದಿಗಳನ್ನು ಕಾಲ್ವೆಗಳ ಮೂಲಕ ಒಂದಕ್ಕೊಂದಕ್ಕೆ ಸಂಬಂಧಿಸಿದ್ದಾರೆ. ಕಲ್ಲು ಸಿಕ್ಕದಿರುವುದರಿಂದ ಛಾಡಿಯ ರಸ್ತೆಗಳಿಲ್ಲ. ಹೇಮಂತರುತುವಿನಲ್ಲಿ ನೆಲವು ಹಿಮದಿಂದ ಮುಚ್ಚಲ್ಪಟ್ಟಿರುವುದರಿಂದ ಜಾರುಬಂಡಿಗಳಲ್ಲಿ ಜನರು ಪ್ರಯಾಣಮಾಡುವರು.

9. ರಾಜ್ಯಭಾರ.—ಸಾರ್ ಎಂಬ ಈ ದೇಶದ ಚಕ್ರವರ್ತಿ ಸ್ವೇಚ್ಛಾನುಸಾರವಾಗಿ ರಾಜ್ಯಭಾರ ಮಾಡುತ್ತಾನೆ, ಈತನು ನಿರಂಕುಶಪ್ರಭು; ಸೈನ್ಯವನ್ನು ಹೆಚ್ಚಾಗಿಟ್ಟಿರುವನು. ಗಂಡಸರೆಲ್ಲರೂ ೬ ವರ್ಷದವರೆಗೆ ಸೈನ್ಯದಲ್ಲಿದ್ದು ಯುದ್ಧಕ್ಕೆ ತರಪೇತಾಗಬೇಕೆಂದು ರಾಜವಿಧಿ ಇದೆ. ಸೇಂಟ್‌ಪೀಟರ್ಸ್‌ಬರ್ಗ್ ಎಂಬುದು ರಾಜಧಾನಿ.

ಯೂರೋಪ್‌ಖಂಡದಲ್ಲಿರುವ ರಷ್ಯದ ಮುಖ್ಯಭಾಗಗಳು ಯಾವುವೆಂದರೆ:—ಉತ್ತರ ಮತ್ತು ಮಧ್ಯಭಾಗದಲ್ಲಿರುವ ಮಸ್ಕೊವಿ; ಫಿನ್ಲೆಂಡ್ ಸಮುದ್ರಶಾಖೆಗೆ ಉತ್ತರದಲ್ಲಿರುವ ಫಿನ್ಲೆಂಡ್; ಬಾಲ್ಟಿಕ್ ಪ್ರಾಂತಗಳು; ಪಶ್ಚಿಮದಲ್ಲಿ ಪೋಲೆಂಡ್, ಪಶ್ಚಿಮರಷ್ಯ; ನೈರುತ್ಯದಲ್ಲಿರುವ ಚಿಕ್ಕರಷ್ಯ; ದಕ್ಷಿಣರಷ್ಯ; ಪೂರ್ವರಷ್ಯ; ಕಾಕಸಸ್ ಪರ್ವತಕ್ಕೆ ಉತ್ತರದಲ್ಲಿರುವ ಸಿಸ್ ಕಕೇಷಿಯ.

10. ದೊಡ್ಡಪಟ್ಟಣಗಳು.—(೧) ಸೇಂಟ್ ಪೀಟರ್ಸ್‌ಬರ್ಗ್. ರಾಜಧಾನಿ; ನೀವಾನದಿಯ ಮೇಲೆ ಇದೆ; ೪೦ ಚದರ ಮೈಲಿಯಷ್ಟು ವಿಸ್ತಾರವಾಗಿದೆ; ರಷ್ಯಾದೇಶದ ಅರ್ಧವ್ಯಾಪಾರವು ಇಲ್ಲಿ ನಡೆವುದು; ಬಹು ಸುಂದರವಾದ ಬಂಗಲೆಗಳೂ ಅರಮನೆಗಳೂ ಉಂಟು; ೩ ಮೈಲಿ ಉದ್ದವಿರುವ ಮತ್ತು ಸೌಧಾನೇಕಗಳಿಂದ ಶೋಭಿಸುವ ರಾಜವೀಧಿಯೊಂದಿದೆ; ಇದರಷ್ಟು ಸೊಗಸಾದ ಬೀದಿ ಯೂರೋಪ್ ಖಂಡದಲ್ಲಿ ಇನ್ನು ಯಾವ ಪಟ್ಟಣದಲ್ಲಿಯೂ ಇಲ್ಲ; ಪ್ರಸಿದ್ಧವಾದ ಸಕಲವಿದ್ಯಾನಿಲಯವಿದೆ.

(೨) ಮಾಸ್ಕೊ. ಪೂರ್ವಕಾಲದ ರಾಜಧಾನಿ; ಒಳದೇಶದ ವ್ಯಾಪಾರಕ್ಕೆ ಮುಖ್ಯಸ್ಥಳವಾಗಿಯೂ ಗ್ರೀಕ್‌ಚರ್ಚಿನವರ ಪುಣ್ಯಸ್ಥಳವಾಗಿಯೂ ಇದೆ. (೩) ವಾರ್ಸ. ಪೋಲೆಂಡ್ ಪ್ರಾಂತದ ಮುಖ್ಯಪಟ್ಟಣ, ಹೆಚ್ಚು ವ್ಯಾಪಾರಸ್ಥಳ. (೪) ರೈಗ. ಬಾಲ್ಟಿಕ್ ಪ್ರಾಂತದ ಮುಖ್ಯಪಟ್ಟಣ, ಹೆಚ್ಚು ವ್ಯಾಪಾರಸ್ಥಳ. (೫) ಒಡೆಸ್ಸ. ದಕ್ಷಿಣರಷ್ಯದ ಮುಖ್ಯಪಟ್ಟಣ; ಕಪ್ಪು ಸಮುದ್ರದ ತೀರದಲ್ಲಿದೆ. ವಿಶೇಷ ವ್ಯಾಪಾರಸ್ಥಳ. (೬) ಕಾಸ್ಸಾನ್. ವಾಲ್ಗಾನದಿಯ ಎಡ ದಡದಲ್ಲಿದೆ, ವ್ಯಾಪಾರಸ್ಥಳ. (೭) ಟೂಲ (Tula). ಮಾಸ್ಕೊವಿಗೆ ದಕ್ಷಿಣದಲ್ಲಿದೆ; ಕಬ್ಬಿಣದ ಕೈಗಾರಿಕೆಗಳು ಹೆಚ್ಚು. ಮಾಸ್ಕೊವಿಗೆ ಪೂರ್ವದಲ್ಲಿರುವ (೮) ನಿಜ್ನಿ ನೌಗರಾಡ್ ಎಂಬ ಪಟ್ಟಣದಲ್ಲಿ ಆಗುವಷ್ಟು ದೊಡ್ಡ ಸಂತೆ ಇನ್ನೆಲ್ಲಿಯೂ ಇಲ್ಲ.

ಮುಖ್ಯವಾದ ರೇವೆಪಟ್ಟಣಗಳು.—ಸೆಂಟ್ ಪೀಟರ್ಸ್‌ಬರ್ಗ್, ಒಡೆಸ್ಸ, ರೈಗ, ಕಾಸ್ಪಿಯನ್ ಸಮುದ್ರ ತೀರದಲ್ಲಿರುವ ಆಸ್ಟ್ರಖಾನ್, ಮತ್ತು ಆರ್ಕೇಂಜಲ್.

ನಾವಿಕಾಯುಧ ಶಾಲೆಗಳು.—ಬಾಲ್ಟಿಕ್ ತೀರದಲ್ಲಿ ನಿಕೊಲೇವ, ಮತ್ತು ಕ್ರಾನ್‌ಸ್ಟಾಡ್ಟ್; ಕಪ್ಪುಸಮುದ್ರ ತೀರದಲ್ಲಿ ಸಿಬಾಸ್ಟೊಪೂಲ್, ಮತ್ತು ಬಟೂಂ.

11. ರಷ್ಯನ್ ಚಕ್ರಾಧಿಪತ್ಯಕ್ಕೆ ಸೇರಿದ ಇತರ ರಾಷ್ಟ್ರಗಳು.—ಯೂರೋಪ್ ಖಂಡದಲ್ಲಿ ರಷ್ಯವಲ್ಲದೆ ಈ ಚಕ್ರಾಧಿಪತ್ಯಕ್ಕೆ ಏಷ್ಯಾಖಂಡದಲ್ಲಿ $\frac{1}{3}$ ಭಾಗವು ಸೇರಿದೆ. ರಷ್ಯನ್ ಚಕ್ರಾಧಿಪತ್ಯದ ಒಟ್ಟು ವಿಸ್ತೀರ್ಣವು ೮೮,೦೦,೦೦೦ ಚ. ಮೈಲಿ; ಜನಸಂಖ್ಯೆ ಸುಮಾರು ೧೨,೫೦,೦೦೦. ಪೃಥ್ವಿಯ ಚಕ್ರಾಧಿಪತ್ಯಗಳಲ್ಲಿ ಇದು ವಿಸ್ತೀರ್ಣದಲ್ಲಿ ಎರಡನೆಯದಾಗಿಯೂ ಜನಸಂಖ್ಯೆಯಲ್ಲಿ ಮೂರನೆಯದಾಗಿಯೂ ಇದೆ.

ಯೂರೊಪಿನ ತುರ್ಕಿ.

1. ವಿಸ್ತೀರ್ಣ ಮುಂತಾದ ವಿಷಯಗಳು.—ವಿಸ್ತೀರ್ಣವು ೬೫,೩೦೦ ಚ. ಮೈಲಿ. ಜನಸಂಖ್ಯೆ ೬೧,೦೦,೦೦೦. ಕ್ರಿಸ್ತಶಕ ೧೮೭೭—೮ರಲ್ಲಿ ರಷ್ಯನ್ ಜನರಿಗೂ ತುರುಕರಿಗೂ ಯುದ್ಧ ನಡೆಯಿತು, ಇದರಲ್ಲಿ ತುರುಕರು ಪರಾಜಿತರಾದರು [೧೮೭೮ರಲ್ಲಿ ಆದ ಬರ್ಲಿನ್‌ಕರಾರಿನಲ್ಲಿ ತುರ್ಕಿಗೆ ವಿಶೇಷವಾಗಿ ರಾಜ್ಯನಷ್ಟವಾಯಿತು. ರೊಮೇನಿಯ, ಸರ್ವಿಯ, ಮಾಂಟನೀಗ್ರೊ ಎಂಬ ರಾಷ್ಟ್ರಗಳು ಸ್ವತಂತ್ರ ರಾಜ್ಯಗಳಾದುವು; ಬಾಸ್ನಿಯ, ಹರ್ಸೆಗೊವೀನ ಎಂಬುವು ಆಸ್ಟ್ರಿಯಕ್ಕೆ ಸೇರಿದುವು; ಬಲ್ಗೇರಿಯ ಮತ್ತು ಪೂರ್ವಭಾಗದ ರೊಮೇಲಿಯಗಳು ಸ್ವಕಾರ್ಯ ನಿರ್ವಾಹಕ ಶಕ್ತಿಯನ್ನು ಹೊಂದಿದುವು, ಮತ್ತು ತುರ್ಕಿಯ ಸುಲ್ತಾನನಿಗೆ ಪಗುದಿ ಮಾತ್ರ ಕೊಡುವಂತೆ ಆಯಿತು.]

(೧) ದೇಶದ ಲಕ್ಷಣ.—ತುರ್ಕೀದೇಶವು ಬೆಟ್ಟಸೀಮೆ; ಬಾಲ್ಕನ್‌ಪರ್ವತವು ನಾನಾದಿಕ್ಕುಗಳಲ್ಲಿ ಶಾಖೆಗಳನ್ನು ಚಾಚುತ್ತ ಪೂರ್ವದಿಂದ ಪಶ್ಚಿಮಕ್ಕೆ ಹಬ್ಬಿದೆ; ಪಿಂಡಸ್ ಪರ್ವತವು ಗ್ರೀಸ್ ದೇಶದ ಕಡೆಗೆ ಹಬ್ಬಿದೆ. ಈಜಿಯನ್ ಸಮುದ್ರಕ್ಕೆ ಅನೇಕ ನದಿಗಳು ಹರಿದು ಬರುತ್ತವೆ. ವಾಯುಗುಣವು ಹಿತಕರವಾಗಿದೆ.

(೨) ಬೆಳೆಗಳು.—ನೆಲ ಫಲವತ್ತಾಗಿದ್ದರೂ ವ್ಯವಸಾಯ ಚೆನ್ನಾಗಿ ನಡೆವುದಿಲ್ಲ; ಗೋಧಿ, ಹತ್ತಿ, ಹೊಗೆಯಸೊಪ್ಪು ಮತ್ತು ಪುಂಡಿಯನಾರು.—ಇವುಗಳ ಬೆಳೆಯಾಗುವುದು; ದನಕರುಗಳು ಹೆಚ್ಚಾಗಿವೆ; ಧಾನ್ಯ, ಹಣ್ಣುಗಳು, ಅಫೀಮು ಮತ್ತು ರೇಷ್ಮೆ ರಫ್ತಾಗುತ್ತವೆ; ಬಟ್ಟೆಗಳೂ, ಲೋಹಗಳೂ ಆಮದಾಗುವುವು.

2. ರಾಜ್ಯಭಾರ.—ತುರ್ಕಿಯ ಅಧಿಪತಿಗೆ ಸುಲ್ತಾನನೆಂದು ಹೆಸರು;

ಈತನ ಮುಖ್ಯಮಂತ್ರಿಗೆ ಮಹಾ ವಜೀರನೆಂದು ಹೆಸರು. ಈ ರಾಜ್ಯದ ಡಿಸ್ಟ್ರಿಕ್ಟುಗಳು ಪಾಷಾಗಳ ವಶದಲ್ಲಿವೆ. ಸುಲ್ತಾನನು ಖುರಾನಿಗೆ ಅನುಸಾರವಾಗಿ ಆಳಬೇಕೆಂದು ವಿಧಿಯಿದೆ; ಆದರೂ ಜನರಿಗೆ ಹಿಂಸೆ ಹೆಚ್ಚು, ಸೌಖ್ಯವಿಲ್ಲ.

ತುರುಕರು ವಿಶೇಷವಾಗಿದ್ದಾರೆ. ಉಳಿದವರು ಬಲ್ಗೇರಿಯನ್ ಆಲ್ಬೇನಿಯನ್ ಮತ್ತು ಗ್ರೀಕಜನರು. ತುರುಕರೆಲ್ಲರೂ ಮಹಮ್ಮದೀಯರು; ಉಳಿದವರು ಗ್ರೀಕ ಚರ್ಚಿಗೆ ಸೇರಿದವರು. ತುರುಕರ ರಾಜ್ಯವು ಕ್ಷೀಣಗತಿಗೆ ಬರುತ್ತಲಿದೆ.

3. ದೊಡ್ಡ ಪಟ್ಟಣಗಳು.—(೧) ಕಾನ್‌ಸ್ಟಾಂಟಿನೋಪಲ್. ರಾಜಧಾನಿ, ಬಾಸ್ಪೊರಸ್ ಜಲಸಂಧಿಯ ತೀರದಲ್ಲಿದೆ; ದೊಡ್ಡ ಪಟ್ಟಣ; ವ್ಯಾಪಾರಕ್ಕೆ ಅನುಕೂಲವಾದ ಸ್ಥಳದಲ್ಲಿದೆ; ಪೂರ್ವಕಾಲದಲ್ಲಿ ಇದು ರೋಮ್‌ರಾಜಧಾನಿಯಾಗಿದ್ದಿತು; ಕ್ರಿ. ಶ. ೧೪೫೩ರಲ್ಲಿ ತುರುಕರು ಈ ಪಟ್ಟಣವನ್ನು ತಮ್ಮ ಸ್ವಾಧೀನಮಾಡಿಕೊಂಡರು. (೨) ಏಡ್ರಿಯನೋಪಲ್. ಉತ್ತರಭಾಗದಲ್ಲಿ ಮೆರಿಟ್ಸಾನದಿಯ ದಡದಲ್ಲಿದೆ; ಬಹು ಪ್ರಸಿದ್ಧವಾದ ಗುಲಾಬಿಯ ಅತ್ತರ್ ತಯಾರಾಗುವ ಸ್ಥಳ. (೩) ಸಾಲೋನಿಕ. ಈಜಿಯನ್ ಸಮುದ್ರತೀರದಲ್ಲಿದೆ; ವ್ಯಾಪಾರಸ್ಥಳ. (೪) ಸೋಫಿಯ. ಬಲ್ಗೇರಿಯದ ರಾಜಧಾನಿ. (೫) ಫಿಲಿಪ್ಪೊಪೋಲಿಸ್. ಈಸ್ಟರ್ನ್ ರೊಮೇಲಿಯದ ರಾಜಧಾನಿ.

5. ಕಾಂಡಿಯಾ ದ್ವೀಪ.—ಈ ದ್ವೀಪವು ತುರುಕರಿಗೆ ಸೇರಿದೆ; ಕಾಂಡಿಯ ಎಂಬುದು ಮುಖ್ಯಪಟ್ಟಣ.

6. ತುರ್ಕೀ ಚಕ್ರಾಧಿಪತ್ಯ.—ಯೂರೋಪಿನ ತುರ್ಕಿ, ಏಷ್ಯದ ತುರ್ಕಿ, ಆಫ್ರಿಕದ ತುರ್ಕಿ—ಇವು ತುರ್ಕೀ ಚಕ್ರಾಧಿಪತ್ಯದ ಮುಖ್ಯ ಭಾಗಗಳು. ಒಟ್ಟು ವಿಸ್ತೀರ್ಣ ೧೭,೫೦,೦೦೦ ಚ. ಮೈಲಿ. ಜನಸಂಖ್ಯೆ ಸುಮಾರು ೩,೫೦,೦೦,೦೦೦.

ರೊಮೇನಿಯ, ಸರ್ವಿಯ ಮತ್ತು ಮೊಂಟಿನೀಗ್ರೊ ಸಂಸ್ಥಾನಗಳು.

7. ರೊಮೇನಿಯ.—ಡಾನ್ಯೂಬ್ ನದಿಯ ಉತ್ತರಕ್ಕೆ ಇರುವ ವಲೇಕಿಯ ಮತ್ತು ಮಾಲ್ಡೇವಿಯಾ ಪ್ರಾಂತಗಳು ಇದಕ್ಕೆ ಸೇರಿವೆ. ವಿಸ್ತೀರ್ಣ ೫೦,೭೦೦ ಚ. ಮೈ. ಜನಸಂಖ್ಯೆ ೫೮,೦೦,೦೦೦. ರಾಜಧಾನಿ ಬುಕಾರೆಸ್ಟ್.

ಫಲವತ್ತಾದ ದೇಶ, ಧಾನ್ಯಗಳು ರಫ್ತಾಗುತ್ತವೆ. ಮೂರು ದೊಡ್ಡ ಪಟ್ಟಣಗಳಿರುವುವು; ಬುಕಾರೆಸ್ಟ್, ಯಾಸ್ಸಿ, ಗಲಾಟ್ಸ್.

8. ಸರ್ವಿಯ.—ಡಾನ್ಯೂಬ್ ನದಿಗೆ ದಕ್ಷಿಣದಲ್ಲಿ ಬಲ್ಗೇರಿಯ ಮತ್ತು ಬಾಸ್ನಿಯಗಳ ನಡುವೆ ಈ ಸಂಸ್ಥಾನವು ಇದೆ. ವಿಸ್ತೀರ್ಣವು ೨೦,೦೦೦ ಚ. ಮೈ. ಜನಸಂಖ್ಯೆ ೨೦,೦೦,೦೦೦. ರಾಜಧಾನಿ ಬೆಲ್ಗ್ರೇಡ್. ಜನರು ಪಶುಪಾಲನವೃತ್ತಿಯಲ್ಲಿದ್ದಾರೆ; ಶೂರರು; ಹಂದಿಗಳನ್ನು ವಿಶೇಷವಾಗಿ ಸಾಕುತ್ತಾರೆ.

9. ಮಾಂಟಿನೀಗ್ರೊ.—ಏಡ್ರಿಯಾಟಿಕ ಸಮುದ್ರಕ್ಕೆ ಪೂರ್ವದಲ್ಲಿರುವ ಬೆಟ್ಟಸೀಮೆ. ಮುಖ್ಯಪಟ್ಟಣ ಸೆಟಿನ್ಯೆ.

ಗ್ರೀಸ್ ದೇಶ.

1. ವಿಸ್ತೀರ್ಣ ಮುಂತಾದ ವಿಷಯಗಳು.—ಗ್ರೀಸ ದೇಶವು ಪರ್ಯಾಯ ದ್ವೀಪವಾಗಿದೆ. ಪರ್ಯಾಯ ದ್ವೀಪತ್ವವು ದಕ್ಷಿಣಕ್ಕೆ ಹೋಗುತ್ತ ಹೋಗುತ್ತ ಹೆಚ್ಚುತ್ತದೆ. ವಿಸ್ತೀರ್ಣ ೨೫,೦೦೦ ಚ. ಮೈ. ಜನಸಂಖ್ಯೆ ಸುಮಾರು ೨೪,೦೦,೦೦೦ ರಾಜಧಾನಿ ಅಥೆನ್ಸ್.

(೧) ಮೇರೆಗಳು.—ಉತ್ತರಕ್ಕೆ ತುರ್ಕಿ; ಪಶ್ಚಿಮಕ್ಕೂ ದಕ್ಷಿಣಕ್ಕೂ ಮೆಡಿಟರೇನಿಯನ್ ಸಮುದ್ರ; ಪೂರ್ವಕ್ಕೆ ಈಜಿಯನ್ ಸಮುದ್ರ.

(೨) ದೇಶದ ಲಕ್ಷಣ.—ಸಮುದ್ರವು ದೇಶದೊಳಕ್ಕೆ ಅನೇಕ ಪ್ರದೇಶಗಳಲ್ಲಿ ನುಗ್ಗಿ ನೆಲವನ್ನು ಬಹಳವಾಗಿ ಕೊರೆದಿದೆ; ಇಜೀನ, ಲಿಪಾಂಟೊ ಎಂಬುವು ಮುಖ್ಯವಾದ ಸಮುದ್ರಶಾಖೆಗಳು. ಕಾರಿಂತ್ ಎಂಬ ಭೂಕಂಠವು ನಾಲ್ಕು ಮೈಲಿಯಷ್ಟು ಅಗಲ ಮಾತ್ರ ಇದೆ. ದೇಶವೆಲ್ಲಾ ಬೆಟ್ಟದಸೀಮೆ; ಕೆಲವು ಶಿಖರಗಳು ೮,೦೦೦ ಅಡಿಯಷ್ಟು ಎತ್ತರ ಇವೆ. ಹಡಗು ಹೋಗುವ ನದಿ ಥಸಲಿಯಲ್ಲಿ ಮಾತ್ರ ಒಂದು ಇದೆ; ಉಳಿದುವುಗಳೆಲ್ಲಾ ಝರಿಗಳು; ದೊಡ್ಡನದಿ ಇರುವುದಕ್ಕೆ ಈ ದೇಶದಲ್ಲಿ ಸ್ಥಳವಿಲ್ಲ.

(೩) ದ್ವೀಪಗಳು.—ಗ್ರೀಸ ದೇಶದ ಸುತ್ತು ಮುತ್ತ ದ್ವೀಪಗಳು ಬಹಳವಾಗಿರುವುವು. ಪಶ್ಚಿಮದಲ್ಲಿರುವ ದ್ವೀಪಗಳಿಗೆ ಅಯೋನಿಯನ್ ದ್ವೀಪಸ್ತೋಮವೆಂದೂ ಪೂರ್ವದಲ್ಲಿರುವ ದೊಡ್ಡ ದ್ವೀಪಕ್ಕೆ ನೆಗ್ರೋಪಾಂಟ (ಅಥವಾ ಯೂಬಿಯ) ಎಂದೂ ಆಗ್ನೇಯದಲ್ಲಿರುವ ದ್ವೀಪಸ್ತೋಮಕ್ಕೆ ಸೈಕ್ಲಡೀಸ್ ಎಂದೂ ಹೆಸರು.

(೪) ವಾಯುಗುಣ ಮತ್ತು ಬೆಳೆಗಳು.—ವಾಯುಗುಣ ಹಿತಕರವಾಗಿದೆ. ದ್ವೀಪದ್ರಾಕ್ಷೆಯೂ ಆಲಿವ್ ಮರವೂ ಬಹುವಿಶೇಷ. ದ್ವೀಪದ್ರಾಕ್ಷೆಯೂ ಆಲಿವ್ ಎಣ್ಣೆಯೂ ಹೆಚ್ಚಾಗಿ ರಫ್ತಾಗುವುವು.

2. ರಾಜ್ಯಭಾರ.—ಗ್ರೀಕರು ಪೂರ್ವಕಾಲದಲ್ಲಿ ಬಹು ಪ್ರಸಿದ್ಧರಾಗಿದ್ದರು. ಇವರು ಸ್ಫುರದ್ರೂಪಿಗಳು, ಧೈರ್ಯಶಾಲಿಗಳು, ಸಾಹಸಿಗಳು, ಮತ್ತು ಯುಕ್ತಿವಂತರಾದ ನಾವಿಕರು. ಸಾಂಕುಶಪ್ರಭುತ್ವವು ನೆಲೆಗೊಂಡಿದೆ.

[ಸುಮಾರು ೨,೪೫೦ ವರುಷಗಳ ಮುಂಚೆ ಗ್ರೀಕರು ತಮ್ಮ ಸಾಹಸದಿಂದ ದೊಡ್ಡ ಚಕ್ರಾಧಿಪತ್ಯವನ್ನು ಸ್ಥಾಪಿಸಿ ಸಕಲ ವಿದ್ಯಾಪಾರಂಗತರೆನ್ನಿಸಿಕೊಂಡಿದ್ದರು. ಕ್ರಿ. ಶ. ಕ್ಕೆ ಮುಂಚೆ ೧೪೬ನೆಯ ವರುಷದಲ್ಲಿ ರೋಮನ್ ಜನರು ಇವರನ್ನು ಜಯಿಸಿದರು; ಸುಮಾರು ೪೦೦ ವರುಷಗಳಿಗೆ ಹಿಂದೆ ತುರುಕರ ಆಳಿಕೆಗೆ ಒಳಪಟ್ಟರು.

ಕ್ರಿ. ಶ. ೧೮೨೧ರಲ್ಲಿ ತುರುಕರಿಗೆ ಇದಿರುಬಿದ್ದು ಬಹಳವಾಗಿ ಹೊಡೆದಾಡಿ, ಕ್ರಿ. ಶ. ೧೮೨೯ರಲ್ಲಿ ಸ್ವಾತಂತ್ರ್ಯವನ್ನು ಹೊಂದಿದರು. ಈಚೆಗೆ ಇವರ ರಾಜ್ಯವು ಹೆಚ್ಚುತ್ತ ಬಂದಿತು]

3. ದೊಡ್ಡ ಪಟ್ಟಣಗಳು—ಅಥೆನ್ಸ್. ರಾಜಧಾನಿ; ಕ್ರಿ. ಶ. ಕ್ಕೆ ಮುಂಚೆ ೫ನೆಯ ಶತಮಾನದಲ್ಲಿ ಅಥಿನಿಯರ್ ಜನರು ದೊಡ್ಡ ಚಕ್ರಾಧಿಪತ್ಯವನ್ನು ಸ್ಥಾಪಿಸಿ ಬಹು ಪ್ರಸಿದ್ಧಿಗೆ ಬಂದಿದ್ದರು. ಈ ಪಟ್ಟಣವು ಆಗ ಶಾರದಾಜನ್ಮಗೃಹವೆನ್ನಿಸಿ ಕೊಂಡಿದ್ದಿತು. ಕಾವ್ಯ, ತರ್ಕ, ವೇದಾಂತ, ಶಿಲ್ಪಶಾಸ್ತ್ರ ಮುಂತಾದುವುಗಳಲ್ಲಿ ಅಥಿನಿಯರ್ ಜನರಿಗೆ ಸಮಾನರು ಇರಲಿಲ್ಲ. ಪಿರಿಯಸ್ ಎಂಬುದು ಅಥೆನ್ಸಿನ ರೇವೆ ಪಟ್ಟಣ. ಪಾಟ್ರಾಸ್ ಎಂಬುದು ಕಾರಿಂತ್ ಸಮುದ್ರ ಶಾಖೆಯ ದಕ್ಷಿಣತೀರದಲ್ಲಿದೆ.

ಇಟಲಿ.

1. ವಿಸ್ತೀರ್ಣ ಮುಂತಾದ ವಿಷಯಗಳು.—ಇಟಲೀದೇಶವು ಉದ್ದವಾಗಿಯೂ ಇಕ್ಕಟ್ಟಾಗಿಯೂ ಇದೆ. ಇದರ ಮೇರೆಗಳು—ಉತ್ತರಕ್ಕೆ ಸ್ವಿಟ್ಸರ್ಲೆಂಡ್ ಮತ್ತು ಆಸ್ಟ್ರಿಯ; ಪೂರ್ವಕ್ಕೆ ಏಡ್ರಿಯಾಟಿಕ್ ಸಮುದ್ರ, ದಕ್ಷಿಣಕ್ಕೆ ಮೆಡಿಟರೇನಿಯರ್ ಸಮುದ್ರ; ಪಶ್ಚಿಮಕ್ಕೆ ಮೆಡಿಟರೇನಿಯರ್ ಸಮುದ್ರ; ಮತ್ತು ಫ್ರಾನ್ಸ್. ವಿಸ್ತಾರ ೧,೧೦,೫೦೦ ಚ. ಮೈ. ಜನಸಂಖ್ಯೆ ಸುಮಾರು ೩,೪೫,೦೦,೦೦೦.

(೧) ದೇಶದ ಲಕ್ಷಣ.—ಇಟಲಿಯ ದಕ್ಷಿಣದಲ್ಲಿ ಕೆಲೇಬ್ರಿಯ ಮತ್ತು ಅಪೂಲಿಯ ಎಂಬ ಎರಡು ಪರ್ಯಾಯದ್ವೀಪಗಳಿವೆ; ಇವುಗಳ ನಡುವೆ ಟಾರಂಟೋ ಸಮುದ್ರಶಾಖೆ ಇರುವುದು. ಆಲ್ಪ್ಸ್ ಪರ್ವತವು ಉತ್ತರ ಭಾಗದ ಮೇರೆಯಾಗಿದೆ, ಪರ್ಯಾಯ ದ್ವೀಪವಾಗಿರುವ ಭಾಗದಲ್ಲಿ ಆಪೆನೈನ್ ಪರ್ವತವು ತನ್ನ ಶಾಖೆಗಳೊಡನೆ ಹಬ್ಬಿರುವುದು. ಆಲ್ಪ್ಸ್ ಪರ್ವತಕ್ಕೂ ಆಪೆನೈನ್ ಪರ್ವತಕ್ಕೂ ನಡುವೆ ಇರುವ ಫಲವತ್ತಾದ ದೊಡ್ಡ ಮೈದಾನದಲ್ಲಿ ಪೋ ಮತ್ತು ಅಡಿಜ್ ಎಂಬ ದೊಡ್ಡ ನದಿಗಳು ಹರಿದು ಏಡ್ರಿಯಾಟಿಕ್ ಸಮುದ್ರಕ್ಕೆ ಹೋಗುವುವು. ಪರ್ಯಾಯದ್ವೀಪವಾಗಿರುವ ಭಾಗದಲ್ಲಿ ಪರ್ವತ ಝರಿಗಳು ಅನೇಕ ಇವೆ. ಇವುಗಳಲ್ಲಿ ಟೈಬರ್ ಎಂಬುದು ಮುಖ್ಯ. ಪಶ್ಚಿಮದಲ್ಲಿ ಟಸ್ಕನಿಯಿಂದ ನೇಪಲ್ಸ್‌ವರೆಗೆ ಇರುವ ತೀರಪ್ರದೇಶವು ಜ್ವರದ ಗಾಳಿಯಿಂದ ಕೂಡಿದೆ. ಅನೇಕ ಸರೋವರಗಳಿರುವುವು.

(೨) ಇಟಲಿಗೆ ಸೇರಿದ ಮುಖ್ಯದ್ವೀಪಗಳು.—ಸಿಸಿಲಿ, ಸಾರ್ಡಿನಿಯ ಲಿಪಾರಿ ದ್ವೀಪಗಳು ಮತ್ತು ಎಲ್ಬ.

(೩) ವಾಯುಗುಣ ಮತ್ತು ಭೂಮ್ಯುತ್ಪನ್ನಗಳು.—ವಾಯುಗುಣವು ಹಿತಕರವಾಗಿದೆ; ಆಫ್ರಿಕಾ ಖಂಡದಿಂದ ಬೀಸುವ ಸಿರಾಕೊ ಎಂಬ ಉಷ್ಣವಾರು

ತವು ಆಗಾಗ್ಗೆ ದಕ್ಷಿಣ ಭಾಗದಲ್ಲಿ ಬೀಸುತ್ತದೆ. ಪಶ್ಚಿಮದಲ್ಲಿರುವ ಎಲ್ಲಾ ದ್ವೀಪಗಳಲ್ಲಿಯೂ ಕಬ್ಬಿಣ, ಆಪೆನ್ನೈನ್ ಪರ್ವತದಲ್ಲಿ ಅಮೃತಶಿಲೆ (marble), ಸಿಸಿಲಿ ದ್ವೀಪದಲ್ಲಿ ಗಂಧಕ, ವಿಶೇಷವಾಗಿರುವುವು. ಗೋಧಿ, ಆಲಿವ್ (ಸೀಮೆಯಹಿಪ್ಪೆ), ದ್ರಾಕ್ಷೆ, ಹಿಪ್ಪಲಿ, ನೇರಳೆ ಮುಖ್ಯವಾದ ಬೆಳೆಗಳು. ದನಕರುಗಳು ಬಹಳ ಹೆಚ್ಚಾಗಿವೆ. ಲಾಂಬರ್ಡಿಯಲ್ಲಿ ಭತ್ತ ಬೆಳೆಯುತ್ತದೆ. ಪೋ ನದಿಯ ದಡದಲ್ಲಿ ವರ್ಷಕ್ಕೆ ೮ ಬೆಳೆಗಳನ್ನು ತೆಗೆವರು. ಸಿಸಿಲಿ ದ್ವೀಪದ ಹತ್ತಿರ ಪ್ರವಾಳವೂ ಸ್ಪಂಜೂ ಸಿಕ್ಕುವುವು.

(೪) ವ್ಯಾಪಾರ.—ರೇಷ್ಮೆ, ವೈನು, ಆಲಿವ್ಎಣ್ಣೆ, ಪ್ರವಾಳ, ಹಣ್ಣು, ಮೊಟ್ಟೆ, ಮತ್ತು ಗಂಧಕ ರಫ್ತಾಗುವುವು. ಬಟ್ಟೆಗಳು, ಕಲ್ಲಿದ್ದಲು, ಮತ್ತು ಕಬ್ಬಿಣದ ಸಾಮಾನುಗಳು ಆಮದಾಗುತ್ತವೆ.

2. ಜನರು ಮತ್ತು ರಾಜ್ಯಭಾರ.—[ಇಟಾಲಿಯನ್ ಜನರು ಸಂಕಲಿತ ಕುಲದವರು ;] ಕೃಷಿಯೇ ಇವರ ಮುಖ್ಯೋದ್ಯೋಗ ; ರೋಮನ್ ಕ್ಯಾಥೊಲಿಕ್ ಗುಂಪಿಗೆ ಸೇರಿದ್ದಾರೆ. ಇಟಾಲಿಯನ್‌ಭಾಷೆ ಬಹು ಶ್ರಾವ್ಯವಾಗಿದೆ. ರಾಜ್ಯಭಾರ ಕ್ರಮವು ಸಾಂಕುಶಪ್ರಭುತ್ವವು.

ಮುಖ್ಯ ವಿಭಾಗಗಳು.—ಪೈಡ್ಮಾಂಟ್, ಸಾರ್ಡಿನಿಯ, ಲಾಂಬರ್ಡಿ, ವೆನಿಷಿಯ, ಇಮಿಲಿಯ, ಟಸ್ಕನಿ, ಪೇಪಲ್ ಸಂಸ್ಥಾನಗಳು, ನಿಯೊಪಾಲಿಟನ್ ಪ್ರಾಂತಗಳು, ಸಿಸಿಲಿ.

3. ದೊಡ್ಡ ಪಟ್ಟಣಗಳು.—(೧) ರೋಮ್. ರಾಜಧಾನಿ; ರೋಮನ್ ಕ್ಯಾಥೊಲಿಕ್ ಜನರಿಗೆ ಪರಮಗುರುವಾದ ಪೋಪ್ ಎಂಬಾತನು ಇಲ್ಲಿ ವಾಸವಾಗಿದ್ದಾನೆ ; ಈತನಿರುವ ವಾಟಿಕನ್ ಎಂಬ ಅರಮನೆ ಪೃಥ್ವಿಯೊಳಗೆಲ್ಲಾ ಅತಿ ವಿಸ್ತಾರವಾದುದೆನಿಸಿಕೊಂಡಿದೆ ; ಇದರಲ್ಲಿ ಅಪೂರ್ವ ವಸ್ತುಗಳಿಂದ ಅಲಂಕೃತವಾದ ೪,೦೦೦ ಕೊಟಡಿಗಳಿರುವುವು; ಸೆಂಟ್‌ಪೀಟರಿನ ಚರ್ಚ್ ಎಂಬ ರೋಮನ್ ಕ್ಯಾಥೊಲಿಕ್ಕರ ದೇವಾಲಯವು ಪೃಥ್ವಿಯೊಳಗೆಲ್ಲಾ ಅತಿ ಸುಂದರವಾದುದೆನಿಸಿಕೊಂಡಿದೆ; ಇದನ್ನು ಕಟ್ಟುವುದಕ್ಕೆ ೧೨,೦೦,೦೦,೦೦೦ ರೂಪಾಯಿ ಮುಟ್ಟಿತಂತೆ. ಪ್ರಪಂಚದಲ್ಲಿನ್ನೆಲ್ಲಿಯೂ ಇಲ್ಲದ ತಸ್ವೀರುಗಳೂ ಪ್ರತಿಮೆಗಳೂ ಇಲ್ಲಿ ತುಂಬಿರುವುವು. ರೋಮ್‌ಪಟ್ಟಣವು, ಕ್ರಿ. ಶ. ಕ್ಕೆ ಪೂರ್ವದ (೭೫೩ನೆಯ) ವರುಷದಲ್ಲಿ ಸ್ಥಾಪಿತವಾಯಿತು. ರೋಮನ್ ಜನರು ಮೆಡಿಟರೇನಿಯನ್ ಸಮುದ್ರದ ಸುತ್ತಲೂ ಇರುವ ದೇಶಗಳನ್ನೆಲ್ಲಾ ಜಯಿಸಿದುದಲ್ಲದೆ ಬ್ರಿಟಿಷ್‌ದ್ವೀಪ ಮುಂತಾದುವುಗಳನ್ನೂ ಜಯಿಸಿ ಅತಿವಿಸ್ತಾರವಾದ ಚಕ್ರಾಧಿಪತ್ಯವನ್ನು ಸ್ಥಾಪಿಸಿ ಬಾಳಿದರು. ಕ್ರಿ. ಶ. ೪೭೬ರಲ್ಲಿ ಇವರು ಪರಾಜಿತರಾಗಲು; ಇವರ ಚಕ್ರಾಧಿಪತ್ಯವು ಕ್ಷೀಣಗತಿಯನ್ನು ಹೊಂದಿತು. (೨) ನೇಪಲ್ಸ್. ಇಟಲಿಯಲ್ಲಿರುವ ಪಟ್ಟಣಗಳಲ್ಲೆಲ್ಲಾ ದೊಡ್ಡದು ; ಇದಿರುವ ಸ್ಥಾನವು ಪೃಥ್ವಿಯೊಳಗೆಲಾ ಸುಂದರತಮವೆಂದೆನಿಸಿ ಕೊಂಡಿದೆ. “ನೇಪಲ್ಸ್ ಪಟ್ಟಣವನ್ನು ನೋಡಿ ಸಾಯಿ” ಎಂದು ಇಟಾಲಿಯನ್ ಗಾಥೆ ಯಿದೆ. (೩) ಮಿಲಾನ್. ಲಾಂಬರ್ಡಿಯ ಮುಖ್ಯ ಪಟ್ಟಣ; ವಿಶೇಷ ವ್ಯಾಪಾರಸ್ಥಳ; ಅಮೃತ ಶಿಲೆಯಿಂದ ಕಟ್ಟಿದ ಬಹುಸುಂದರವಾದ

ಗುಡಿಯೊಂದಿದೆ; ಇದರ ಅಲಂಕಾರಕ್ಕಾಗಿಟ್ಟಿರುವ ರಾಜರ ಮತ್ತು ಅರ್ಚ್ಯಾಶಿಷ್ಟರ ಪ್ರತಿಮೆಗಳು ೪,೦೦೦ಕ್ಕಿಂತ ಹೆಚ್ಚಾಗಿವೆ. (೪) ಟ್ಯೂರಿನ್. ಪೈಡ್ಮಾಂಟಿನಲ್ಲಿದೆ; ರೇಷ್ಮೆ ತಯಾರಾಗುವುದು ಹೆಚ್ಚು. (೫) ಪೆಲರ್ಮೊ. ಸಿಸಿಲಿ ದ್ವೀಪದ ಮುಖ್ಯಪಟ್ಟಣ; ವ್ಯಾಪಾರಸ್ಥಳ. (೬) ಜೆನೋವ. ಪೈಡ್ಮಾಂಟಿನಲ್ಲಿದೆ, ಇದಕ್ಕೆ ಇಟಲಿಯ ಲಿವರ್ಪೂಲ್ ಎಂಬ ಹೆಸರುಂಟು. (೭) ಫ್ಲಾರೆನ್ಸ್. ಟಸ್ಕನಿಯ ಮುಖ್ಯಪಟ್ಟಣ, ನೋಟಕ್ಕೆ ಬಹುರಮಣೀಯವಾಗಿದೆ; ರೇಷ್ಮೆಯ ಕೈಗಾರಿಕೆಗಳು ಹೆಚ್ಚು. (೮) ವೆನಿಸ್. ವೆನಿಷಿಯದ ಮುಖ್ಯಪಟ್ಟಣ; ಏಡ್ರಿಯಾಟಿಕ್ ಸಮುದ್ರದ ರಾಣಿಯೆಂದು ಹೆಸರು, ೭೦ ದ್ವೀಪಗಳನ್ನು ಒಳಕೊಂಡಿದೆ. ಕಾಲ್ವೆಗಳೇ ಇದರ ಬೀದಿಗಳು, ದೋಣಿಯೇ ಇಲ್ಲಿನ ಗಾಡಿ; ತೇಲಾಡುವ ಪಟ್ಟಣದಂತೆ ಕಾಣುವುದು; ಕನ್ನಡಿ; ಲೇಸ್, ಮತ್ತು ಮಣಿಗಳ ವ್ಯಾಪಾರವು ಹೆಚ್ಚು. (೯) ಬೊಲೋನ. ವ್ಯಾಪಾರಸ್ಥಳ.

ರೇವೆಯ ಪಟ್ಟಣಗಳು.—ಜೆನೋವ, ಲೆಗ್ಹಾರ್ನ್, ಅಂಕೋನ, ಸ್ಪೆಸಿಯ ಮತ್ತು ಬ್ರಿಂಡಿಸಿ.

ಸ್ಪಾನಿಷ್ ಪರ್ಯಾಯ ದ್ವೀಪ.

1. ಸ್ಪಾನಿಷ್ ಅಥವಾ ಐಬೀರಿಯನ್ ಪರ್ಯಾಯದ್ವೀಪದಲ್ಲಿ ಸ್ಪೇನ್ ಮತ್ತು ಪೋರ್ಟುಗಲ್ ಎಂಬ ದೇಶಗಳು ಸೇರಿವೆ.

ಸ್ಪೇನ್.

2. ವಿಸ್ತೀರ್ಣ ಮುಂತಾದ ವಿಷಯಗಳು.—ಸ್ಪೇನ್ ದೇಶದ ವಿಸ್ತೀರ್ಣವು ೧,೯೪,೭೦೦ ಚ. ಮೈ. ಜನಸಂಖ್ಯೆ ೧,೮೬,೦೨,೦೦೦. ಮೇರೆಗಳು.—ಉತ್ತರಕ್ಕೆ ಬಿಸ್ಕೆಕೊಲ್ಲಿ ಮತ್ತು ಫ್ರಾನ್ಸ್; (ಪೂರ್ವಕ್ಕೂ) ದಕ್ಷಿಣಕ್ಕೂ ಮೆಡಿಟರೇನಿಯನ್ ಸಮುದ್ರ; ಪಶ್ಚಿಮಕ್ಕೆ ಪೋರ್ಟುಗಲ್ ಮತ್ತು ಅಟ್ಲಾಂಟಿಕ್ ಸಾಗರ.

(೧) ದೇಶದ ಲಕ್ಷಣ.—ಒಳದೇಶವು ಬೆಟ್ಟಸಾಲುಗಳಿಂದ ಕೂಡಿದ ಪ್ರಸ್ಥಭೂಮಿ. ಪಿರನೀಸ ಪರ್ವತವು ಫ್ರಾನ್ಸಿಗೂ ಈ ದೇಶಕ್ಕೂ ನಡುವೆ ಇದೆ; ಮತ್ತು ಕಂಟೇಬ್ರಿಯನ್ ಪರ್ವತವೆಂಬ ಹೆಸರಿನಲ್ಲಿ ಪಶ್ಚಿಮಕ್ಕೆ ತೀರದವರೆಗೂ ಹಬ್ಬಿದೆ; ಕ್ಯಾಸ್ಟೀಲಿಯನ್, ಟೊಲೀಡೊ, ಮೊರೀನ, ಮತ್ತು ನಿವಾಡ ಎಂಬ ಬೆಟ್ಟಗಳು ಮಧ್ಯಭಾಗದಲ್ಲಿ ಮತ್ತು ದಕ್ಷಿಣಭಾಗದಲ್ಲಿ ಹಬ್ಬಿವೆ. ಐದು ಪರ್ವತಪಙ್ಕ್ತಿಗಳ ನಡುವೆ ನಾಲ್ಕು ನದಿಗಳು ಪಶ್ಚಿಮವಾಹಿನಿಗಳಾಗಿ ಅಟ್ಲಾಂಟಿಕ್ ಸಾಗರಕ್ಕೆ ಹೋಗುವುವು,—ಡೌರೋ, ಟೇಗಸ್, ಗ್ವಾಡಿಯಾನ, ಗ್ವಾಡಲ್ ಕ್ವಿವರ್. (ಈಬ್ರೋನದಿ) ಆಗ್ನೇಯವಾಹಿನಿಯಾಗಿ ಹರಿದು ಮೆಡಿಟರೇನಿಯನ್ ಸಮುದ್ರಕ್ಕೆ ಬೀಳುತ್ತದೆ. ಮಧ್ಯಭಾಗದ ಪ್ರಸ್ಥಭೂಮಿಯಲ್ಲಿ ಸೆಕೆ ಮತ್ತು ಚಳಿ ಹೆಚ್ಚು; ಉತ್ತರತೀರದಲ್ಲಿ ಮಳೆ ಹೆಚ್ಚಾಗಿ

ಹೊಯ್ಯುತ್ತದೆ; ಮೆಡಿಟರೇನಿಯನ್ ತೀರದಲ್ಲಿ ವಾಯುಗುಣ ಬಹು ಹಿತಕರ. ದಕ್ಷಿಣದಿಂದ ಸೊಲೆನೊ ಎಂಬ ಉಷ್ಣ ಮಾರುತವು ಕೆಲವು ವೇಳೆಗಳಲ್ಲಿ ಬೀಸುತ್ತದೆ.

(೨) ಭೂಮ್ಯುತ್ಪನ್ನಗಳು.—ಮೊರೀನ ಪರ್ವತದ ಹತ್ತಿರ ಪಾದರಸವು ಇನ್ನೆಲ್ಲಿಯೂ ಸಿಕ್ಕದಷ್ಟು ಸಿಕ್ಕುತ್ತದೆ; ಸೀಸ ಸಿಕ್ಕುವುದೂ ಹೆಚ್ಚು. ತೀರದಲ್ಲಿರುವ ಭೂಮಿ ಫಲವತ್ತಾಗಿದೆ. ಹುಲ್ಲುಗಾವಲುಗಳು ಹೆಚ್ಚು. ದ್ರಾಕ್ಷೆಯ ಮತ್ತು ಹಿಪ್ಪಲಿ, ನೇರಳೆಯ ವ್ಯವಸಾಯ ವಿಶೇಷ. ಕಾರ್ಕ (ಬಿರಡೆಯ ಮರ) ಚೆನ್ನಾಗಿ ಬೆಳೆಯುತ್ತದೆ.

(೩) ಪ್ರಾಣಿಗಳು.—ಸ್ಪೇನ್‌ದೇಶದ ಕುದುರೆ, ಹೇಸರಕತ್ತೆ, ಮತ್ತು ಕತ್ತೆ ಪ್ರಸಿದ್ಧವಾಗಿವೆ. ಮೆರೀನೋ ಕುರಿ ಎಂಬುದು ಬಹು ವಿಶೇಷ.

3. ಜನರು.—ಈ ದೇಶದ ಜನರು ರೋಮನ್‌ಕ್ಯಾಥೊಲಿಕ್ ಗುಂಪಿಗೆ ಸೇರಿದವರು; ಕೃಷಿಯೇ ಮುಖ್ಯೋದ್ಯೋಗ; ಸಾಂಕುಶಪ್ರಭುತ್ವವು ನೆಲೆಗೊಂಡಿದೆ; ವಿದ್ಯಾಭ್ಯಾಸವು ಸರಿಯಾಗಿ ನಡೆಯುತ್ತ ಇಲ್ಲ; ದೇಶವು ಕ್ಷೀಣಗತಿಯಲ್ಲಿದೆ.

ವ್ಯಾಪಾರ.—ವೈನ್, ಸೀಸ, ಕಬ್ಬಿಣದ ಮತ್ತು ತಾಮ್ರದ ಅದುರು, ಹಣ್ಣು ಮತ್ತು ಕಾರ್ಕ್ (ಬಿರಡೆ), ಇವು ರಫ್ತಾಗುವ ಪದಾರ್ಥಗಳು. ಹತ್ತಿ, ಬ್ರಾಂದಿ, ಸಕ್ಕರೆ, ಲೋಹದ ಯಂತ್ರಗಳು ಆಮದಾಗುವುವು. ಸ್ಪೇನ್ ರಾಜ್ಯವು ಕ್ರಿ. ಶ. ೧೬ನೆಯ ಶತಮಾನದಲ್ಲಿ ಬಹು ಪ್ರಸಿದ್ಧಿಗೆ ಬಂದಿದ್ದಿತು.

4. ದೊಡ್ಡ ಪಟ್ಟಣಗಳು.—(೧) ಮೆಡ್ರಿಡ್. ರಾಜಧಾನಿ; ಮಧ್ಯಭಾಗದಲ್ಲಿದೆ. (೨) ಬಾರ್ಸಿಲೋನ. ಆಗ್ನೇಯ ತೀರದಲ್ಲಿದೆ; ಹತ್ತಿಯ ಕೈಗಾರಿಕೆಗಳು ಹೆಚ್ಚು; ಇದಕ್ಕೆ ಸ್ಪಾನಿಷ್ ಮಾಂಚೆಸ್ಟರ್ ಎಂಬ ಹೆಸರುಂಟು. (೩) ವೆಲೆನ್ಷಿಯ, ಮೆಡಿಟರೇನಿಯನ್ ತೀರದಲ್ಲಿದೆ; ರೇಷ್ಮೆಯ ವ್ಯಾಪಾರಕ್ಕೆ ಮುಖ್ಯಸ್ಥಳ. (೪) ಸೆವಿಲ್. ಗ್ವಾಡಲ್‌ಕ್ವಿವರ್ ನದಿಯ ದಡದಲ್ಲಿದೆ; ಹೊಗೆಯಸೊಪ್ಪಿನ ವ್ಯಾಪಾರ ಹೆಚ್ಚು. (೫) ಮಾಲಾಗ. ಮೆಡಿಟರೇನಿಯನ್ ತೀರದಲ್ಲಿದೆ; ಇಲ್ಲಿಂದ ಒಣಗಿದ ಹಣ್ಣೂ ವೈನೂ ರಫ್ತಾಗುವುವು. (೬) ಮರ್ಷಿಯ. ಆಗ್ನೇಯದಲ್ಲಿದೆ; ಕೈಗಾರಿಕೆಯ ಪಟ್ಟಣ. (೭) ಗ್ರನಡ. ಮೂರ್ ಜನರ ರಾಜಧಾನಿಯಾಗಿದ್ದಿತು, ದಕ್ಷಿಣದಲ್ಲಿದೆ. ಬಹು ಸುಂದರವಾದ ಪಟ್ಟಣ. (೮) ಕಾರ್ತಜೀನ, ಆಗ್ನೇಯದಲ್ಲಿದೆ; ಬಹು ಪುರಾತನ ಪಟ್ಟಣ. (೯) ಕೇಡಿಸ್. ನೈರುತ್ಯದಲ್ಲಿದೆ, ವ್ಯಾಪಾರಸ್ಥಳ.

ಮುಖ್ಯ ರೇವುಪಟ್ಟಣಗಳು.—ಬಾರ್ಸಿಲೋನ, ಮಾಲಾಗ, ಕೇಡಿಸ್, ಮತ್ತು ವೆಲೆನ್ಷಿಯ.

ಯುದ್ಧದ ಹಡಗುಗಳಿರುವ ಸ್ಥಳಗಳು.—ಕೊರನ್ನ, ಕಾರ್ತಜೀನ, ಬಾರ್ಸಿಲೋನ, ಫೆರ್ರೋಲ್. ಜಿಬ್ರಾಲ್ಟರ್ ದಕ್ಷಿಣದಲ್ಲಿದೆ ಮತ್ತು ಇಂಗ್ಲಿಷರಿಗೆ ಸೇರಿದೆ.

5 ಸ್ಪೇನ್ ದೇಶಕ್ಕೆ ಸೇರಿದ ದ್ವೀಪಗಳು.—ಮೆಜಾರ್ಕ, ಮೈನಾರ್ಕ ಮತ್ತು ಇವೀಸ; ಇವುಗಳೆಲ್ಲಾ ಮೆಡಿಟರೇನಿಯನ್ ಸಮುದ್ರದಲ್ಲಿವೆ.

ಫಿನಿಷ್ಯರ ಯುದ್ಧದ ಹಡಗು.

6. ಸ್ಪೇನ್ ದೇಶಕ್ಕೆಸೇರಿದ ಇತರ ರಾಷ್ಟ್ರಗಳು.—ವೆಸ್ಟಿಂಡಿಯಾ ದ್ವೀಪಗಳಲ್ಲಿ ಕ್ಯೂಬ, ಪೋರ್ಟೋರಿಕೊ; ಅಟ್ಲಾಂಟಿಕ್ ಸಾಗರದಲ್ಲಿ ಕೆನೇರಿ ದ್ವೀಪಗಳು; ಪೆಸಿಫಿಕ್ ಸಾಗರದಲ್ಲಿ ಫಿಲಿಪೈನ್ ಮತ್ತು ಲಡ್ರೊ ದ್ವೀಪಗಳು ಸ್ಪೇನ್ ದೇಶಕ್ಕೆ ಸೇರಿವೆ.

ಪೋರ್ಟುಗಲ್.

7. ವಿಸ್ತೀರ್ಣ ಮುಂತಾದ ವಿಷಯಗಳು.—ಪೋರ್ಟುಗಲ್ ದೇಶವು ಸ್ಪೇನಿಗೆ ಪಶ್ಚಿಮದಲ್ಲಿದೆ. ವಿಸ್ತೀರ್ಣವು ೩೫,೪೦೦ ಚ. ಮೈ. ಜನಸಂಖ್ಯೆ ಸುಮಾರು ೫೪,೦೦,೦೦೦

ಸ್ಪೇನ್‌ದೇಶದ ಪರ್ವತಗಳು ಇಲ್ಲಿಗೂ ಹಬ್ಬಿವೆ. ಉತ್ತರದಲ್ಲಿ ಮಿನ್ಹೋನದಿ ಇದೆ; ಡೌರೊ, ಟೇಗಸ್, ಗ್ವಾಡಿಯಾನ ಎಂಬುವು ಸ್ಪೇನಿನಿಂದ ಹರಿದು ಬರುವುವು. ವಾಯುಗುಣ ಹಿತಕರವಾಗಿದೆ. ದ್ರಾಕ್ಷೆ ಮುಖ್ಯ ಬೆಳೆ. ವೈನ್ ಮತ್ತು ಕಾರ್ಕ್ ಹೆಚ್ಚಾಗಿ ರಫ್ತಾಗುತ್ತವೆ. ಪೋರ್ಟುಗೀಸ್ ಜನರು [ಸಂಕಲಿತ ಕುಲದವರಾಗಿದ್ದಾರೆ;] ರೋಮನ್ ಕ್ಯಾಥೊಲಿಕ್ ಗುಂಪಿಗೆ ಸೇರಿದವರು. ಈ ದೇಶದ ದೊರೆ ಸಾಂಕುಶಪ್ರಭು.

8. ದೊಡ್ಡ ಪಟ್ಟಣಗಳು.—(೧) ಲಿಸ್‌ಬನ್. ರಾಜಧಾನಿ; ಟೇಗಸ್ ನದಿಯ ದಡದಲ್ಲಿದೆ; ಬಹು ಸುಂದರವಾದ ಪಟ್ಟಣ; ವ್ಯಾಪಾರಸ್ಥಳ. (೨) ಒಪೋರ್ಟೋ. ಡೌರೋನದಿಯ ಮುಖದಲ್ಲಿದೆ; ವೈನು ವ್ಯಾಪಾರದ ಸ್ಥಳ. (೩) ಕೊಯಿಂಬ್ರ ಎಂಬುದು ಲಿಸ್ಬನ್ನಿಗೂ ಒಪೋರ್ಟೋವಿಗೂ ನಡುವೆ ಇದೆ; ವರ್ಷಕ್ಕೆ ಸುಮಾರು ೧೯೨ ಅಂಗುಲದಷ್ಟು ಮಳೆ ಹೊಯ್ಯುವುದು; ಇದಕ್ಕಿಂತ ಹೆಚ್ಚಾಗಿ ಯೂರೋಪ್ ಖಂಡದಲ್ಲಿ ಇನ್ನೆಲ್ಲಿಯೂ ಮಳೆ ಹೊಯ್ಯುವುದಿಲ್ಲ.

9. ಪೋರ್ಟುಗಲ್ ದೇಶಕ್ಕೆ ಸೇರಿರುವ ಇತರ ರಾಷ್ಟ್ರಗಳು.—ಅಟ್ಲಾಂಟಿಕ್ ಸಾಗರದಲ್ಲಿರುವ ಅಸೋರ್ಸ್, ಮೆಡೀರಾಸ್, ಮತ್ತು ಕೇಪ್‌ವರ್ಡ್ ದ್ವೀಪಗಳು; ಆಫ್ರಿಕಾ ಖಂಡದಲ್ಲಿ ಅಂಗೋಲ, ಕಾಂಗೊ ಮತ್ತು ಮೊಸಾಂಬೀಕ್ ರಾಷ್ಟ್ರಗಳು; ಇಂಡಿಯದಲ್ಲಿ ಗೋವೆ ಮುಂತಾದುವು; ಚೀಣದಲ್ಲಿ ಮೇಕೌದ್ವೀಪ,—ಇವು ಪೋರ್ಟುಗೀಸರಿಗೆ ಸೇರಿವೆ.

ಆಫ್ರಿಕಾ ಖಂಡ.

ಸಾಮಾನ್ಯ ವರ್ಣನೆ.

[ಆಫ್ರಿಕಾ ಖಂಡವು ಉ. ಅ. ೩೭ರಿಂದ ದ. ಅ. ೩೫ರ ವರೆಗೂ, ಪ. ರೇ. ೧೮ರಿಂದ ಪೂ. ರೇ. ೫೧ರ ವರೆಗೂ ಪ್ರಸರಿಸಿದೆ. ಈ ಖಂಡದ ಮಧ್ಯಭಾಗದಲ್ಲಿ ವಿಷುವದ್ರೇಖೆ ಇದೆ.]

1. ಮೇರೆ ಮತ್ತು ವಿಸ್ತೀರ್ಣ.—ಉತ್ತರಕ್ಕೆ ಮೆಡಿಟರೇನಿಯನ್ ಸಮುದ್ರ; ಪೂರ್ವಕ್ಕೆ ಕೆಂಪುಸಮುದ್ರ ಮತ್ತು ಹಿಂದೂಸಾಗರ; ಪಶ್ಚಿಮಕ್ಕೆ ಅಟ್ಲಾಂಟಿಕ್ ಸಾಗರ. ವಿಸ್ತೀರ್ಣವು ೧,೧೫,೦೦,೦೦೦ ಚ. ಮೈ.

೭೦ ಮೈಲಿ ಅಗಲವಿರುವ ಸುಯೆಸ್ ಭೂಕಂಠವು ಏಷ್ಯಾ ಮತ್ತು ಆಫ್ರಿಕಾ ಖಂಡಗಳನ್ನು ಕೂಡಿಸಿದೆ; ಈ ಭೂಕಂಠದಲ್ಲಿ ಸುಯೆಸ್ ಕಾಲುವೆಯನ್ನು ಅಗೆದಿದ್ದಾರೆ. ಈ ಖಂಡದ ದಕ್ಷಿಣೋತ್ತರದ ಉದ್ದ ೫,೬೦೦ ಮೈಲಿ; ಪೂರ್ವಪಶ್ಚಿಮದ ಉದ್ದವೂ ಸುಮಾರು ಅಷ್ಟೇ ಇದೆ.

2. ದೇಶಗಳು.—ಉತ್ತರದಲ್ಲಿ—ಈಜಿಪ್ಟ್, ಟ್ರಿಪೋಲಿ, ಟ್ಯೂನಿಸ್, ಆಲ್ಜಿರಿಯ, ಮೊರಾಕೊ; ಮಧ್ಯಭಾಗದಲ್ಲಿ—ಅಬಿಸೀನಿಯ, ಆಂಗ್ಲೋ ಇಜಿಪ್ಷನ್ ಸೂಡಾನ್, ಸಹರ, ಸೂಡಾನ್; ಪಶ್ಚಿಮದಲ್ಲಿ—ಸೆನಿಗಾಂಬಿಯ, ಮೇಲಣ ಗಿನಿ, ಕೆಳಗಣ ಗಿನಿ, ಕಾಂಗೊರಾಷ್ಟ್ರ, ಪೋರ್ಚುಗೀಸ ಪಶ್ಚಿಮ ಆಫ್ರಿಕ, ಜರ್ಮನ್ ನೈರುತ ಆಫ್ರಿಕ; ದಕ್ಷಿಣದಲ್ಲಿ—ಕೇಪ್ ಕಾಲೊನಿ, ನೆಟಾಲ್, ಆರೆಂಜ್ ರಿವರ್ ಕಾಲೊನಿ, ಟ್ರಾನ್ಸ್‌ವಾಲ್, ರೊಡೀಷಿಯ; ಪೂರ್ವದಲ್ಲಿ—ಪೋರ್ಚುಗಲ್, ಜರ್ಮನ್, ಇಟಲಿ, ಬ್ರಿಟನ್ನುಗಳಿಗೆ ಸೇರಿದ ಪೂರ್ವ ಆಫ್ರಿಕ ದೇಶಗಳು.

3. ಸಮುದ್ರದ ಕೊಲ್ಲಿಗಳು ಮತ್ತು ಶಾಖೆಗಳು.—ಆಫ್ರಿಕಾ ಖಂಡದ ತೀರದ ಅಳತೆ ಕಡಿಮೆಯಾಗಿದೆ. ಯೂರೋಪ್ ಖಂಡದಲ್ಲಿರುವಂತೆ ದೀರ್ಘವಾದ ಸಮುದ್ರಶಾಖೆಗಳು ಇಲ್ಲಿಲ್ಲ. ಇರುವುವುಗಳಲ್ಲಿ ಮುಖ್ಯವಾದುವು ಯಾವುವೆಂದರೆ:—ಟ್ರಿಪೋಲಿಗೆ ಉತ್ತರದಲ್ಲಿ ಸಿಡ್ರ, ಟ್ಯೂನಿಸ್ಸಿಗೆ ಉತ್ತರದಲ್ಲಿ ಕೇಬ್ಸ್, ಪಶ್ಚಿಮ ತೀರದ ಮಧ್ಯದಲ್ಲಿ ಗಿನಿ, ಪೂರ್ವದಲ್ಲಿ ಏಡನ್. ಗಿನೀ ಸಮುದ್ರಶಾಖೆಯಲ್ಲಿ ಬಯಾಫ್ರ ಮತ್ತು ಬೆನಿನ್ ಕೊಲ್ಲಿಗಳು, ದಕ್ಷಿಣದಲ್ಲಿ ಟೇಬಲ್ ಕೊಲ್ಲಿ ಮತ್ತು ಆಲ್ಗೊವಾ ಕೊಲ್ಲಿ; ಆಗ್ನೇಯದಲ್ಲಿ ಡೆಲಗೋವಾ ಮತ್ತು ಸೊಫಾಲಾ ಕೊಲ್ಲಿಗಳು ಇವೆ.

4. ಭೂಶಿರಗಳು.—ಟ್ಯೂನಿಸ್ಸಿನ ಉತ್ತರದಲ್ಲಿ ಬಾನ್; ಪಶ್ಚಿಮದಲ್ಲಿ ಬ್ಲಾಂಕೊ ಮತ್ತು ವರ್ಡ್; ಗಿನೀ ದೇಶದಲ್ಲಿ ಪಾಲ್ಮಸ್; ಕೇಪ್ ಕಾಲೊನಿಯಲ್ಲಿ ಗುಡ್ ಹೋಪ್ ಮತ್ತು ಆಗೂಲ್ಯಾಸ್; ಪೂರ್ವದಲ್ಲಿ ಗಾರ್ಡಾಫ್ಯಿ.

ಬಾನ್ ಎಂಬುದು ಈ ಖಂಡದ ಉತ್ತರದ ಕೊನೆ; ವರ್ಡ್ ಎಂಬುದು ಪಶ್ಚಿಮದ ಕೊನೆ; ಗುಡ್‌ಹೋಪ್ ಎಂಬುದು ದಕ್ಷಿಣದ ಕೊನೆ; ಗಾರ್ಡಾಫ್ಯಿ ಎಂಬುದು ಪೂರ್ವದ ಕೊನೆ. ಕ್ಯೂಟ ಎಂಬ ಭೂಶಿರವು ಜಿಬ್ರಾಲ್ಟರಿಗೆ ಇದಿರಾಗಿದೆ.

5. ದ್ವೀಪಗಳು.—ಯೂರೋಪ್ ಮತ್ತು ಏಷ್ಯಾ ಖಂಡಗಳಲ್ಲಿರುವಂತೆ ವಿಸ್ತಾರವಾದ ದ್ವೀಪಸ್ತೋಮಗಳು ಮತ್ತು ದ್ವೀಪಸ್ತೋಮ ಸಮುದಾಯಗಳು ಇಲ್ಲಿಲ್ಲ. ಇರುವ ದ್ವೀಪಗಳಲ್ಲಿ ಮುಖ್ಯವಾದುವು ಯಾವುವೆಂದರೆ;—ಪೂರ್ವತೀರದ ಸಮೀಪದಲ್ಲಿ ಸುಗೋತ್ರ, ಪೆಂಬ, ಝಾಂಝಿಬಾರ್ ಮತ್ತು ಮಾಫಿಯ; ಕೆಂಪು ಸಮುದ್ರದಲ್ಲಿ ಪೆರಿಂ ಮುಂತಾದುವು; ಗಿನೀಸಮುದ್ರಶಾಖೆಯಲ್ಲಿ ಸೇಂಟ್ ಥಾಮಸ್, ಪ್ರಿನ್ಸ್, ಫರ್ನಾಂಡೊಪೊ; ಅಟ್ಲಾಂಟಿಕ್ ಸಾಗರದಲ್ಲಿ ಮಡೀರ, ಕೆನೇರಿ, ವರ್ಡ್ ದ್ವೀಪಸ್ತೋಮ, ಸೇಂಟ್‌ಹೆಲೀನ, ಅಸೆನ್ಷನ್.—ಇವುಗಳಲ್ಲಿ ಅನೇಕಗಳು ಸಮುದ್ರದ ನಡುವಣ ಗುಡ್ಡಗಳಾಗಿವೆ. ಈ ಖಂಡಕ್ಕೆ ಪೂರ್ವದಲ್ಲಿರುವ ಮಡಗಾಸ್ಕರ್ ದ್ವೀಪವು ಬಹು ದೊಡ್ಡದು; ಇದರ ಪಶ್ಚಿಮದಲ್ಲಿರುವ ಮೊಸಾಂಬೀಕ್ ಕಾಲ್ವೆ ಸುಮಾರು ೩,೦೦೦ ಅಡಿಯಷ್ಟು ಆಳವಾಗಿದೆ.

6. ಈ ಖಂಡದ ಲಕ್ಷಣ.—ಯೂರೋಪ್ ಮತ್ತು ಏಷ್ಯಾ ಖಂಡಗಳಲ್ಲಿರುವಂತೆ ದೀರ್ಘವಾದ ಸಮುದ್ರಶಾಖೆಗಳು, ಇಕ್ಕಟ್ಟಾದ ಭೂಕಂಠಗಳು, ವಿಶಾಲವಾದ ಮತ್ತು ಖಂಡದ ಮಧ್ಯಭಾಗದಲ್ಲಿ ಹಬ್ಬಿರುವ ಉನ್ನತವಾದ ಪರ್ವತಗಳು ಮತ್ತು ಜಲವಿಭಾಗಭೂಮಿಗಳು ಇಲ್ಲಿಲ್ಲ. ಈ ಖಂಡವನ್ನು ಪ್ರಸ್ಥಭೂಮಿಯ ಖಂಡವೆಂದು ಕರೆಯಬಹುದು. ಇಲ್ಲಿಯ ಪ್ರಸ್ಥಭೂಮಿಗಳು ಬಹು ವಿಸ್ತಾರವಾಗಿ ಪ್ರಸರಿಸಿರುವುದಲ್ಲದೆ ೨,೦೦೦ ಅಡಿಯಿಂದ ೯,೦೦೦ ಅಡಿಯಷ್ಟು ಎತ್ತರವಾಗಿಯೂ ಇವೆ. ಇವುಗಳ ಅಂಚಿನಲ್ಲಿ ಪರ್ವತಪಙ್ಕ್ತಿಗಳು ತೀರಕ್ಕಿದಿರಾಗಿ ಹಬ್ಬಿಕೊಂಡು ಬಂದಿವೆ. ಪ್ರಸ್ಥಭೂಮಿಗಳು ಮಧ್ಯಭಾಗದಲ್ಲಿ ತಗ್ಗಾಗಿ, ಸುತ್ತಲೂ ಎತ್ತರವಾಗಿ, ಇವೆ. ಪ್ರಸ್ಥಭೂಮಿಗೂ ಸಾಗರಕ್ಕೂ ನಡುವೆ ಇರುವ ತಗ್ಗಾದ ಸಮಭೂಮಿ ಇಕ್ಕಟ್ಟಾಗಿರುವುದು.

ಈ ಖಂಡದ ದಕ್ಷಿಣಾರ್ಧವು ಉತ್ತರಾರ್ಧಕ್ಕಿಂತ ಸುಮಾರು ಮೂರು ಪಾಲಷ್ಟು ಎತ್ತರವಾಗಿರುವುದು. ದಕ್ಷಿಣಾರ್ಧದ ಸರಾಸರಿ ಎತ್ತರ ೩,೫೦೦ ಅಡಿಗಿಂತ ಹೆಚ್ಚಾಗಿದೆ; ಉತ್ತರಾರ್ಧದ ಸರಾಸರಿ ಎತ್ತರ ಸುಮಾರು ೧,೩೦೦ ಅಡಿ.

7. ಪರ್ವತಗಳು.—ಉತ್ತರದಲ್ಲಿ ಅಟ್ಲಾಸ್; ಪಶ್ಚಿಮದಲ್ಲಿ ಕಾಂಗ್ ಪರ್ವತ, ಬಯಾಫ್ರಕೊಲ್ಲಿಯ ಹತ್ತಿರ ಕಾಮರೂನ್ ಪರ್ವತ; ಕಾಂಗೊ ಮತ್ತು ನೈಲ್ ನದಿಗಳ ಜಲಾನಯನ ಭೂಮಿಗಳ ನಡುವೆ ಉಲೆಗ್ಗವೆಂಬ ಬೆಟ್ಟಸಾಲು; ಕಾಂಗೊ

ಮತ್ತು ಗ್ಯಾಂಬೀಸಿ ನದಿಗಳ ನಡುವೆ ಲೊಕಿಂಗ ಪರ್ವತ; ಆಗ್ನೇಯದಲ್ಲಿ ಡ್ರೇಕೆನ್‌ಬರ್ಗ್ ಎಂಬುದು; ಅಬಿಸೀನಿಯಾ ದೇಶದ ಪರ್ವತಗಳು. ಈ ಖಂಡದ ಅತ್ಯುನ್ನತ ಶಿಖರಗಳು ಕಿಲಿಮಾಂಜೇರೊ (೧೯,೭೦೦ ಅಡಿ) ಮತ್ತು ಕೆನಿಯಾ (೧೭,೦೦೦ ಅಡಿ.)

ಅಟ್ಲಾಸ್ ಪರ್ವತವು ನನ್ ಭೂಶಿರದಿಂದ ಬಾನ್ ಭೂಶಿರದ ವರೆಗೆ ಹಬ್ಬಿದೆ; ಇದು ಯೂರೋಪ್ ಖಂಡದ ಪರ್ವತದಂತೆ ಇರುವುದು; ಇಲ್ಲಿ ಮಾತ್ರ ಒಂದೊಂದು ವೇಳೆ ಭೂಕಂಪವಾಗುವುದು, ಮತ್ತೆಲ್ಲಿಯೂ ಇಲ್ಲ. ಕಾಮರೂನ್ ಪರ್ವತದಲ್ಲಿ ಒಂದೇ ಶಿಖರವಿದೆ, ಇದರ ಎತ್ತರ ೧೩,೦೦೦ ಅಡಿ. ಡ್ರೇಕೆನ್‌ಬರ್ಗ್ ಎಂಬ ಪರ್ವತವು ೩,೫೦೦ ಅಡಿಯಷ್ಟು ಎತ್ತರವಿರುವ ಗೋಡೆಯಂತೆ ಸಮುದ್ರದ ಕಡೆಯಿಂದ ಕಾಣುತ್ತದೆ. ಅಬಿಸೀನಿಯದ ಪರ್ವತಗಳು ಏಳೆಂಟುಸಾವಿರದ ಅಡಿಯಷ್ಟು ಎತ್ತರವಿರುವ ಪ್ರಸ್ಥಭೂಮಿಯಿಂದ ಎದ್ದಿವೆ; ಮತ್ತು ೧೫,೦೦೦ ಅಡಿ ಎತ್ತರವಿರುವ ಶಿಖರಗಳು ಅನೇಕವಿರುವುವು.

8. ಮೈದಾನಗಳು ಮತ್ತು ಮರುಭೂಮಿಗಳು.—ಸಿಡ್ರಾ ಸಮುದ್ರಶಾಖೆಗೂ ಕೈರೊ ಪಟ್ಟಣಕ್ಕೂ ನಡುವೆ ತಗ್ಗಾದ ಮೈದಾನ ವೊಂದುಂಟು; ಇದರಲ್ಲಿ ಒಂದು ಭಾಗವು ಮೆಡಿಟರೇನಿಯನ್ ಸಮುದ್ರದ ಮಟ್ಟಕ್ಕಿಂತ ತಗ್ಗಿನಲ್ಲಿದೆ. ಕೇಪ್ ಸಮುದ್ರಶಾಖೆಯ ಪಕ್ಕದಲ್ಲಿ ಒಂದು ತಗ್ಗಿನ ಮೈದಾನವಿದೆ. ಹಿಂದೆ ಹೇಳಿದಂತೆ ಈ ಖಂಡದಲ್ಲಿ ಪ್ರಸ್ಥಭೂಮಿಗಳಿರುವುದು ಹೆಚ್ಚು; ಇವುಗಳಲ್ಲಿ ಸಹರ ಮತ್ತು ಕಲಹರಿ ಎಂಬ ಮರುಭೂಮಿಗಳು ಮುಖ್ಯವಾದುವು

(೧) ಸಹರದಷ್ಟು ವಿಸ್ತಾರವಾದ ಮರುಭೂಮಿ ಪೃಥ್ವಿಯಲ್ಲಿ ಇನ್ನಿಲ್ಲ. ಇದರ ಉದ್ದ ೩,೦೦೦ ಮೈಲಿ; ಅಗಲ ೧,೦೦೦ ಮೈಲಿ; ವಿಸ್ತೀರ್ಣವು ೨೫,೦೦,೦೦ ಚ. ಮೈ. ಅಟ್ಲಾಸ್‌ಪರ್ವತದ ದಕ್ಷಿಣಕ್ಕೆ ಇದು ಪ್ರಾರಂಭವಾಗುವುದೆಂದು ಹೇಳಬಹುದು. ಪೂರ್ವಕಾಲದಲ್ಲಿ ಇದು ನೀರಿನಿಂದ ಮುಚ್ಚಲ್ಪಟ್ಟಿದ್ದಿತು; ಇದನ್ನು ಒಣಗಿದ ಸಮುದ್ರ ತಲವೆಂದು ಕರೆಯಬಹುದಾಗಿದೆ. ಇದರಲ್ಲಿ ಮರಳ್ಗಲ್ಲಿನ ಪ್ರಸ್ಥಭೂಮಿಗಳು ಅನೇಕ ಇವೆ, ಎರೆಮಣ್ಣಿನ (Clay) ನಿಮ್ನಪ್ರದೇಶಗಳೂ ಅಲ್ಲಲ್ಲಿವೆ; ಸುಮಾರು ೪,೦೦ ಅಡಿಯಷ್ಟು ಎತ್ತರವಿರುವ ಬೆಟ್ಟದ ಸಾಲುಗಳೂ ಉಂಟು. ಮಳೆ ಹೊಯ್ಯುವುದೇ ಇಲ್ಲವೆಂದು ಹೇಳುವುದಕ್ಕಾಗುವುದಿಲ್ಲ; ಮಳೆ ಹೊಯ್ಯುವುದು ಬಹಳ ಅಪೂರ್ವವೆಂದು ಹೇಳಬಹುದು. ಮಳೆಗಾಲದಲ್ಲಿ ಮಾತ್ರ ಹರಿವ ಹೊಳೆಗಳು ಕೆಲವು ಕಡೆಗಳಲ್ಲಿರುವುವು. ಇವು ಇರುವ ಕಡೆಗಳಲ್ಲಿಯೂ ನೆಲದಲ್ಲಿ ನೀರು ಸಿಕ್ಕುವ ಕಡೆಗಳಲ್ಲಿಯೂ ಜನರು ವಾಸವಾಗಿದ್ದಾರೆ, ಈ ಸ್ಥಳಗಳಿಗೆ "ಒಯೇಸಿಸ್" ಎಂದು ಹೆಸರು; ಇವುಗಳಲ್ಲಿ ಕೆಲವು ಸಾಸಿರಾರು ಚದರ ಮೈಲಿಯಷ್ಟು ವಿಸ್ತಾರವಾಗಿವೆ. "ಸೈಮೂಂ" ಎಂಬ ಉಗ್ರೋಷ್ಣ ಮಾರುತವು ಈ ಮರುಭೂಮಿಯ ಮೇಲೆ ಬೀಸುವುದು; ಸೆಕೆಯೂ ಚಳಿಯೂ ವಿಪರೀತವಾಗಿವೆ; ಹಗಲಿನಲ್ಲಿ ಕಲ್ಲುಗಳು ೨೦೦ ಡಿಗ್ರಿಯಷ್ಟು ಕಾಯುವುವು. ಇವುಗಳ ಮೇಲೆ ನೀರಿನ ಪಾತ್ರೆಯನ್ನು

ಇಟ್ಟರೆ, ನೀರು ಕೈ ಇಡಲಿಕ್ಕಾಗದಷ್ಟು ಕಾಯುತ್ತದೆ; ರಾತ್ರಿಯಲ್ಲಿ ಚಳಿ ವಿಪರೀತವಾಗಿ ನೀರು ಗಡ್ಡೆಯಾಗುತ್ತದೆ. (೨) ಕಲಹರಿ ಎಂಬ ಮರುಭೂಮಿ ಈ ಖಂಡದ ದಕ್ಷಿಣಾರ್ಧದಲ್ಲಿದೆ; ಇದು ಆರೆಂಜ್ ನದಿಯಿಂದ (ದ. ಅ. ೨೦ರ ವರೆಗೂ) ಪ್ರಸರಿಸಿದೆ. ಇದು ಹರಿವ ನೀರಿಲ್ಲದ ಮರುಭೂಮಿ.

9. ಸರೋವರಗಳು.—ಈ ಖಂಡದಲ್ಲಿ ಬಹು ವಿಶಾಲವಾದ ಸರೋವರಗಳು ಅನೇಕ ಇವೆ. ಇವುಗಳಲ್ಲಿ ಕೆಲವನ್ನು ಸಿಹಿ ನೀರಿನ ಸಮುದ್ರಗಳೆಂದು ಕರೆಯಬಹುದು. ಉತ್ತರ ಅಮೆರಿಕವನ್ನು ಬಿಟ್ಟರೆ, ಪೃಥ್ವಿಯಲ್ಲಿ ಇನ್ನೆಲ್ಲಿಯೂ ಇಷ್ಟು ಹೆಚ್ಚಾಗಿಯೂ ಇಷ್ಟು ವಿಶಾಲವಾಗಿಯೂ ಇರುವ ಸರೋವರಗಳಿಲ್ಲ. ಆದರೆ ಕೆಲವು ವಿನಾ, ಇವೆಲ್ಲವೂ ಈ ಖಂಡದ ದಕ್ಷಿಣಾರ್ಧದ ಪೂರ್ವಭಾಗದಲ್ಲಿವೆ. ಈ ಖಂಡದ ಸರೋವರಗಳಲ್ಲಿ ಬಹು ವಿಶಾಲವಾದ ೫ ಸರೋವರಗಳು ಯಾವುವೆಂದರೆ:— ವಿಕ್ಟೋರಿಯಾ ನ್ಯಾನ್ಸ, ಆಲ್ಬರ್ಟ್ ನ್ಯಾನ್ಸ, ತಾಂಗನೀಕ, ನ್ಯಸ್ಸ, ಬೆಂಬ ಅಥವಾ ಬಾಂಗ್ವಿಯೋಲೋ. ಚಾಡ್ ಸರೋವರವು ಸಹರಮರುಭೂಮಿಯಲ್ಲಿ, ನಾಮಿ ಎಂಬುದು ಕಲಹರಿಯ ಮರುಭೂಮಿಯ ಸಮೀಪದಲ್ಲಿ ಇವೆ.

ನ್ಯಾನ್ಸಗಳೆರಡೂ ನೈಲ್ ನದಿಯ ಜಲಾನಯನ ಭೂಮಿಯಲ್ಲಿವೆ. ವಿಕ್ಟೋರಿಯಾ ನ್ಯಾನ್ಸ ವೆಂಬುದು ಸ್ಕಾಟ್ಲೆಂಡಿಗಿಂತ ವಿಸ್ತಾರವಾಗಿದೆ. ಆಲ್ಬರ್ಟ್ ನ್ಯಾನ್ಸ ವೆಂಬುದು ೧೫೦ ಮೈಲಿಯಷ್ಟು ಉದ್ದವಾಗಿಯೂ, ೪೦ ಮೈಲಿಯಷ್ಟು ಅಗಲವಾಗಿಯೂ ಇರುವುದು. ಅಬಿಸೀನಿಯದಲ್ಲಿ ಡೆಂಬಿಯಾ ಸರೋವರವು ೬,೦೦೦ ಅಡಿಯಷ್ಟು ಎತ್ತರದಲ್ಲಿದೆ. ತಾಂಗನೀಕ ವೆಂಬುದು ೧೨,೦೦೦ ಚ. ಮೈ. ವಿಸ್ತೀರ್ಣವುಳ್ಳುದಾಗಿದೆ. ನ್ಯಸ್ಸ ವೆಂಬುದು ೩೫೦ ಮೈಲಿಯಷ್ಟು ಉದ್ದವಾಗಿಯೂ ೪೦ ಮೈಲಿಯಷ್ಟು ಅಗಲವಾಗಿಯೂ, ೬೦೦ ಅಡಿಯಷ್ಟು ಆಳವಾಗಿಯೂ, ಇರುವುದು. ಬಾಂಗ್ವಿಯೋಲೋ ಅಥವಾ ಬೆಂಬ ಸರೋವರವು ಚಂಬೀಸಿ ಎಂಬ ಉಪನದಿಯ ಮೂಲಕ ಕಾಂಗೋನದಿಗೆ ನೀರನ್ನು ಒದಗಿಸಿ ಕೊಡುತ್ತದೆ.

ಚಾಡ್ ಎಂಬ ಸರೋವರವು ಬೇಸಗೆಯಲ್ಲಿ ೧೦,೦೦೦ ಚದರ ಮೈಲಿಯಷ್ಟು ವಿಸ್ತೀರ್ಣವುಳ್ಳುದಾಗಿದ್ದು ಮಳೆಗಾಲದಲ್ಲಿ ಐದು ಪಾಲಷ್ಟು ಹೆಚ್ಚುವುದು. ಹಿಪ್ಪೊಪೊಟೇಮಸ್, ಮೊಸಳೆ, ಗಂಡಮೃಗ, ಆನೆ ಮುಂತಾದುವು ಈ ಪ್ರದೇಶದಲ್ಲಿ ವಿಶೇಷವಾಗಿರುವುವು. ನಾಮಿ ಎಂಬ ಸರೋವರದ ದಡದ ಹತ್ತಿರ ಜಿಂಕೆ, ಆನೆ, ಎಮ್ಮೆ, ಗಂಡಮೃಗ ಮುಂತಾದುವು ವಿಶೇಷವಾಗಿರುವುವು.

10. ನದಿಗಳು.—ಈ ಖಂಡದಲ್ಲಿ ನದಿಗಳಿರುವುದು ಕಡಿಮೆ; ಸೆಳವು ಹೆಚ್ಚು, ಮತ್ತು ಅಲ್ಲಲ್ಲಿ ಧುಮಿಧುಮಿಕಿ ಬರುತ್ತವೆ; ಸಮುದ್ರವನ್ನು ಸೇರುವ ಕಡೆಗಳಲ್ಲಿ ಅಪಾಯಕರವಾದ ಮರಳ ದಿಣ್ಣೆಗಳಿವೆ; ಆದುದರಿಂದ ಹಡಗಿನ ಪ್ರಯಾಣಕ್ಕೆ ಅನುಕೂಲವಾದುವುಗಳಲ್ಲ. ಮುಖ್ಯವಾದ ನದಿಗಳು ನಾಲ್ಕು:—ಕಾಂಗೊ, ನೈಲ್, ನೈಜರ್ ಮತ್ತು ಸಾಂಬೀಸಿ. ಇವುಗಳಲ್ಲಿ ಕಾಂಗೊ ಎಂಬುದು ಬಹು ದೊಡ್ಡದು, ನೈಲ್ ಎಂಬುದು ಬಹಳ ಉದ್ದವಾದುದು.

(೧) ನೈಲ್‌ನದಿ ಮೆಡಿಟರೇನಿಯನ್ ಸಮುದ್ರಕ್ಕೆ ಬೀಳುತ್ತದೆ. ಇದರ ಉದ್ದ ಸುಮಾರು ೪,೩೦೦ ಮೈ. ಮುಖ್ಯವಾಗಿ ಎರಡು ಹೊಳೆಗಳು ಸೇರಿ ಈ ನದಿಯಾಗಿದೆ: ಆಲ್ಬರ್ಟ್ ನ್ಯಾನ್ಜಸರಿಂದ ಹೊರಡುವ ಬಿಳಿಯ ನೈಲ್ (ಬಾಹರಲ್ ಅಬಿಯಾದ್), ಮತ್ತು ವಿಕ್ಟೋರಿಯಾ ನ್ಯಾನ್ಜಸರಿಂದ ಬರುವ ವಿಕ್ಟೋರಿಯಾನೈಲ್. [ನೈಲ್‌ನದಿಯ ಉದ್ಭವಸ್ಥಾನವು ದ. ಅ. ೫ರಲ್ಲಿದೆ.] ಈ ನದಿಗೆ ಮುಖ್ಯವಾಗಿ ಎರಡು ಉಪನದಿಗಳಿವೆ—ಬಾಹರಲ್ ಅಜ಼ರಿಕ್ ಎಂಬ ನೀಲವರ್ಣದನದಿ ಅಬಿಸೀನಿಯದಲ್ಲಿರುವ ಡೆಂಬಿಯಾ ಸರೋವರದಿಂದ ಬರುತ್ತದೆ; ಅತ್ಬರವೆಂಬ (ಕರಿಯಬಣ್ಣದನದಿ) ಇನ್ನೊಂದೂ ಅಬಿಸೀನಿಯದಲ್ಲಿ ಹುಟ್ಟುತ್ತದೆ. ಇವೆರಡೂ ಕರಿಯ ಮೆಕ್ಕಲನ್ನು ತರುವುವು. ಇದರಿಂದ ನೈಲ್‌ನದಿಯ ಬಯಲು ಬಹು ಫಲವತ್ತಾಗಿದೆ. [ಉ. ಅ. ೧೮ರಿಂದ ಉತ್ತರಕ್ಕೆ ಯಾವ ಉಪನದಿಯೂ ಸಂಗಮವಾಗುವುದಿಲ್ಲ, ಮತ್ತು] ಉಷ್ಣವಲಯದ ಮರುಭೂಮಿಯಲ್ಲಿ ಇದು ಹರಿವುದರಿಂದ ಹೋಗುತ ಹೋಗುತ್ತ ಇದರ ನೀರು ಕಡಿಮೆಯಾಗುತ್ತ ಬರುವುದು. ಅಸ್ಸಾವನ್ ಎಂಬ ಪಟ್ಟಣದವರೆಗೆ ಈ ನದಿ ೬ ಕಡೆಗಳಲ್ಲಿ ಧುಮಿಕುವುದು. ಅಲ್ಲಿಂದ ಸಮುದ್ರದವರೆಗೂ ಹಡಗಿನ ಪ್ರಯಾಣಕ್ಕೆ ಅನುಕೂಲವಾಗಿದೆ. ಮುಖದ ಕಡೆಯಲ್ಲಿ ಇದರಿಂದ ಹುಟ್ಟಿದ ಹೊಸಭೂಮಿ ೯,೦೦೦ ಚದರ ಮೈಲಿ ವಿಸ್ತೀರ್ಣವುಳ್ಳುದಾಗಿದೆ. (೨) ಕಾಂಗೋನದಿಯ ಉದ್ದ ಸುಮಾರು ೩,೦೦೦ ಮೈಲಿ. ಇದರಲ್ಲಿ ನೀರು ಬಹಳ ಹೆಚ್ಚಾಗಿದೆ; ಈ ಖಂಡದ ಇತರ ನದಿಗಳ ನೀರನ್ನೆಲ್ಲಾ ಕೂಡಿಸಿದರೆ, ಇಷ್ಟಾಗಬಹುದು. ನೀರಿನ ಪರಿಮಾಣದಲ್ಲಿ ಯಾಂಗ್ಟಿಸಿಕಿಯಾಂಗ್ ನದಿಗೆ ಎರಡನೆಯದಾಗಿದೆ. ಈ ನದಿ ನ್ಯಾಸ್ಸಾ ಸರೋವರದ ಉತ್ತರಭಾಗದಲ್ಲಿ ಹುಟ್ಟಿ ಚಂಬೀಸಿ ಲುವಲಾಬ ಮುಂತಾದ ಹೆಸರುಗಳಿಂದ ಹರಿದು, ಅಟ್ಲಾಂಟಿಕ್ ಸಾಗರವನ್ನು ಸೇರುವುದು. ಕೆಲವು ಸ್ಥಳಗಳಲ್ಲಿ ಇದರ ಅಗಲವು ಎರಡು ಮೈಲಿಯಿಂದ ನಾಲ್ಕು ಮೈಲಿಯವರೆಗೂ ಇರುವುದು; ಇದರ ನೀರಿನ ಗುರುತು ಸಾಗರದಲ್ಲಿ ೪೦ ಮೈಲಿಯವರೆಗೂ ತಿಳಿವುದು. (೩) ನೈಜರ್‌ನದಿ ಕಾಂಗ್ ಪರ್ವತದಲ್ಲಿ ಲೋಮವೆಂಬ ಶಿಖರದಲ್ಲಿ ಹುಟ್ಟಿ ಟಿಂಬಕ್ಟುವಿನವರೆಗೂ ಈಶಾನ್ಯಾಭಿಮುಖವಾಗಿ ಹರಿದು, ಅಲ್ಲಿಂದ ದಕ್ಷಿಣವಾಹಿನಿಯಾಗಿ ಹರಿದು ಗಿನೀ ಸಮುದ್ರಶಾಖೆಗೆ ಬರುತ್ತದೆ. ಇದರ ಉದ್ದ ೨,೬೦೦ ಮೈಲಿ. ಮೇಲಣ ಭಾಗದಲ್ಲಿ ಇದಕ್ಕೆ ಜೋಲೀಬ ವೆಂಬ, ಮಧ್ಯಭಾಗ ಮತ್ತು ಕೆಳಭಾಗದಲ್ಲಿ ಕ್ವೋರ್ರ ಎಂಬ ಹೆಸರು ಇದೆ. ಇದರ ಮೇಲೆ ಹೊಗೆಯ ಜಹಜುಗಳು ಟಿಂಬಕ್ಟುವಿನ ವರೆಗೂ ಸಂಚರಿಸುವುವು. (೪) ಜ಼ಾಂಬೀಸಿನದಿ ದಕ್ಷಿಣಭಾಗದಲ್ಲಿ ಹರಿದು ಹಿಂದೂ ಸಾಗರವನ್ನು ಸೇರುತ್ತದೆ. ಈ ನದಿಯಲ್ಲಿ ಪ್ರಸಿದ್ಧವಾದ ಒಂದು ಜಲಪಾತವಿರುವುದು; ಇದು ಉತ್ತರ ಅಮೆರಿಕದಲ್ಲಿರುವ ಲೋಕಪ್ರಸಿದ್ಧವಾದ ನಯಾಗರ ಜಲಪಾತಕ್ಕೆ ಎರಡನೆಯದಾಗಿದೆ. ೧,೦೦೦ ಗಜದ ಅಗಲಕ್ಕೂ ಹರಿವ ಈ ನದಿ ವಿಕ್ಟೋರಿಯ ಫಾಲ್ಸ್ ಎಂಬ ಸ್ಥಳದಲ್ಲಿ ೩೦ ಅಥವಾ ೮೦ ಅಡಿಗಳ ಅಗಲವಿರುವ ಪಾತ್ರದೊಳಗೆ ಸೇರಿ, ೩೦೦

ಅಡಿಯಷ್ಟು ಕೆಳಕ್ಕೆ ಧುಮಿಕಿ, ಒಂದು ಕಮರಿಯೊಳಗೆ ಸ್ವಲ್ಪದೂರ ಹರಿದು, ಹೊರಕ್ಕೆ ಬರುವುದು.

ಆಫ್ರಿಕಾ ಖಂಡದ ಇತರ ನದಿಗಳು ಯಾವುವೆಂದರೆ—ಅಟ್ಲಾಂಟಿಕ್ ಸಾಗರಕ್ಕೆ ಹರಿವ ಸೆನಿಗಾಲ್, ಗಾಂಬಿಯು, ಒಗೋವೈ, ಕೋರ್ಯಾನ್ಸ, ಮತ್ತು ಆರೆಂಜು; ಹಿಂದೂಸಾಗರಕ್ಕೆ ಹೋಗುವ ಲಿಂಪೋಪೋ ಮತ್ತು ಜೂಬ; ಚಾಡ್ ಸರೋವರಕ್ಕೆ ಹರಿವ ಷಾರಿ; ನಾಮಿಾ ಸರೋವರಕ್ಕೆ ಹೋಗುವ ಟಿಯೋಜ್.

ಸೆನಿಗಾಲ್ ಮತ್ತು ಗಾಂಬಿಯಾ ನದಿಗಳ ಮೇಲೆ ಹಡಗುಗಳು ಸುಮಾರು ೪೦೦ ಮೈಲಿಗಳ ವರೆಗೆ ಹೋಗಬಹುದು. ಕೋರ್ಯಾನ್ಸ ವೆಂಬುದು ಅಂಗೋಲದ ಮುಖ್ಯ ನದಿ. ಆರೆಂಜುನದಿ ಕೆಳಭಾಗದಲ್ಲಿ ಬೆಂಗಾಡಿನಲ್ಲಿ ಹರಿಯುತ್ತದೆ, ಮತ್ತು ಜಲಪಾತಗಳು ಅನೇಕ ಇವೆ.

11. ವಾಯುಗುಣ.—ಈ ಖಂಡದ ಸುಮಾರು ಮುಕ್ಕಾಲು ಭಾಗವು 7—10 ಉಷ್ಣವಲಯದಲ್ಲಿದೆ. ಈ ಖಂಡವನ್ನು ಉಷ್ಣಾತಿಶಯದ ಖಂಡವೆಂದು ಕರೆಯಬಹುದು. [ಮಳೆಗಾಲವು ಸೂರ್ಯಗತಿಯನ್ನನುಸರಿಸಿ ನಡೆಯುತ್ತದೆ. ಉ. ಅ. ೧೮ ಮತ್ತು ದ. ಅ. ೨೦—ಇವುಗಳ ನಡುವೆ ಇರುವ ಪ್ರದೇಶದಲ್ಲಿ ಚೆನ್ನಾಗಿ ಮಳೆಯಾಗುತ್ತದೆ; ಉಳಿದ ಕಡೆಗಳಲ್ಲಿ ಅಪೂರ್ವವಾಗಿ ಮಳೆ ಹೊಯ್ಯುವುದು. ಸಂಕ್ರಾಂತಿ ವೃತ್ತಗಳ ಸಮಿಾಪದಲ್ಲಿರುವ ಪ್ರದೇಶಗಳಲ್ಲಿ ಮಳೆ ಬಹಳ ಕಡಿಮೆ, ಸೆಕೆ ಬಹಳ ಹೆಚ್ಚು.] ಪರ್ವತದ ಶಿಖರಗಳಲ್ಲಿಯೂ ಉನ್ನತವಾದ ಪ್ರಸ್ಥಭೂಮಿಗಳಲ್ಲಿಯೂ ಹೇಮಂತಋತು ಕಾಣಬರುವುದು. ಉಳಿದ ಕಡೆಗಳಲ್ಲಿ ಮಳೆಗಾಲ ಮತ್ತು ಬೇಸಗೆಗಳೆಂಬ ಎರಡು ಋತುಗಳು ಮಾತ್ರ ಕಾಣಬರುವುವು. ಉನ್ನತವಾದ ಪ್ರಸ್ಥಭೂಮಿಗಳು ಆರೋಗ್ಯಕರವಾಗಿವೆ; ಸಮುದ್ರದ ಹತ್ತಿರವಿರುವ ಪ್ರದೇಶಗಳಲ್ಲಿ ಅನಾರೋಗ್ಯವು ಹೆಚ್ಚು.

ಆಫ್ರಿಕಾ ಖಂಡದ ವಾಯುಗುಣವನ್ನು ನಿರ್ಣಯಿಸುವುದಕ್ಕೆ ಮೂರು ವಿಷಯಗಳನ್ನು ಜ್ಞಾಪಕದಲ್ಲಿ ಇಟ್ಟಿರಬೇಕು;—ಈಶಾನ್ಯದಿಂದ ಬೀಸುವ ವಾಣಿಜ್ಯ ಸಹಾಯಕ ಮಾರುತವು ಏಷ್ಯಾಖಂಡದ ಮೇಲೆ ಬೀಸಿಕೊಂಡು ಬರುವುದರಿಂದಲೂ ಸಾಗರದ ಮೇಲೆ ಬೀಸಿಕೊಂಡು ಬಾರದಿರುವುದರಿಂದಲೂ, ಮೋಡಗಳನ್ನು ತರುವುದಿಲ್ಲ. (೨) ಸಾಗರವು ಖಂಡದೊಳಕ್ಕೆ ಹೆಚ್ಚಾಗಿ ಶಾಖೆಗಳನ್ನು ಚಾಚದಿರುವುದರಿಂದ ಈ ಖಂಡದ ಅಂತರ್ಭಾಗವು ಸಮುದ್ರಕ್ಕೆ ಬಹುದೂರವಾಗಿದೆ. (೩) ಖಂಡದ ಸುತ್ತಲೂ ಸಾಗರಕ್ಕೆದಿರಾಗಿ ಉನ್ನತವಾದ ಪರ್ವತಶ್ರೇಣಿ ಇರುವುದರಿಂದ, ಇದು ಮೋಡವನ್ನು ತಡೆದು, ಅದರಲ್ಲಿರುವ ನೀರನ್ನು ತೆಗೆದುಕೊಂಡು ಬಿಡುವುದು.

ಆಫ್ರಿಕಾಖಂಡದಲ್ಲಿ ಶೀತೋಷ್ಣಗಳ ವೈಪರೀತ್ಯವೂ, ಅತಿವೃಷ್ಟ್ಯನಾವೃಷ್ಟಿಗಳೂ, ಚಂಡ ಮಾರುತಗಳೂ ವಿಶೇಷವಾಗಿವೆ. ಮೇಲಣ ಈಜಿಪ್ಟಿನಲ್ಲಿಯೂ ನ್ಯೂಬಿಯದಲ್ಲಿಯೂ ಮೊಟ್ಟೆಗಳು ಮರಳಲ್ಲಿ ಹೂಳಲ್ಪಟ್ಟರೆ ಪಕ್ವವಾಗುವುವು.

"ನ್ಯೂಬಿಯದಲ್ಲಿ ನೆಲವೇ ಬೆಂಕಿ, ಗಾಳಿಯೇ ಉರಿ" ಎಂದು ಅರಬ್ಬಿಯವರು ಹೇಳುವರು.

12. ಉದ್ಭಿಜ್ಜಗಳು.—ಅನೇಕ ಭಾಗಗಳು ಬೆಂಗಾಡಾಗಿ ಅಥವಾ ಮರುಭೂಮಿಯಾಗಿವೆ; ನೀರಿರುವ ಕಡೆಗಳಲ್ಲಿ ಮರಗಿಡಗಳು ಬಹಳ ಚೆನ್ನಾಗಿ ಬೆಳೆವುವು. ಯೂರೋಪ್ ಖಂಡದ ದಕ್ಷಿಣ ಭಾಗದ ಸಸಿಗಳು ಈ ಖಂಡದ ಉತ್ತರ ಭಾಗದಲ್ಲಿ ಆಗುತ್ತವೆ. ಕಿತ್ತಿಳೆಯ ಗಿಡಗಳೂ ಸೀಮೆಯ ಹಿಪ್ಪೆಯ ಮರಗಳೂ (Olive) ವಿಶೇಷ. ಅಟ್ಲಾಸ್ ಪರ್ವತದ ದಕ್ಷಿಣಕ್ಕೂ ಸಹರ ಮರುಭೂಮಿಯ ಜಲವತ್ಪ್ರದೇಶಗಳಲ್ಲಿಯೂ ಖರ್ಜೂರದ ಮರಗಳು (Date palms) ಉತ್ತಮವಾಗಿ ಬೆಳೆಯುತ್ತವೆ. ಸಹರ ಮರುಭೂಮಿಗೆ ದಕ್ಷಿಣದಲ್ಲಿರುವ ಫಲವತ್ತಾದ ಸೂಡಾನ್ ಪ್ರದೇಶಗಳಲ್ಲಿ *ಬೇಯೋಬಾಬ್ (Baobab) ಮರಗಳು ಬಹು ವಿಶೇಷ. ಇವಲ್ಲದೆ ಇಲ್ಲಿ ಕೆಸಾವ, ಮುಡಿಗೆಣಸು (Yam) ನೆಲಗಡಲೆ ಮುಂತಾದುವು ಆಗುತ್ತವೆ. ದಕ್ಷಿಣ ಭಾಗದ ಒಳಗಡೆಯ ಮೈದಾನಗಳಲ್ಲಿ ನಾನಾಬಗೆಯ ಕಳ್ಳಿಗಳು (Euphorbias) ಕತ್ತಾಳೆಗಳು (Aloes) ವಿಶೇಷ. ಗೋದುವೆ, ಜೋಳ, ಮೆಕ್ಕೆಜೋಳ, ಬಾಳೆ ಮುಂತಾದುವು ಆಗುತ್ತವೆ. ಸೂಡಾನ್‌ದೇಶದಲ್ಲಿ ಹತ್ತಿಯಗಿಡ, ಕಬ್ಬು, ನೀಲಿಯ ಗಿಡ ಇವು ವ್ಯವಸಾಯವಿಲ್ಲದೆ ಬೆಳೆವುವು; ಅಬಿಸೀನಿಯದ ದಕ್ಷಿಣಭಾಗವು ಕಾಫಿಯಗಿಡದ ತವರ್ಮನೆ.

ಖರ್ಜೂರವು "ಮರುಭೂಮಿಯ ಅನ್ನ" ಎನ್ನಿಸಿಕೊಂಡಿದೆ. ಇದನ್ನು ಜನರು ತಿಂದು ಜೀವಿಸುವುದಲ್ಲದೆ, ಇದರ ಬೀಜವನ್ನು ಕುದುರೆಗೆ ಹಾಕುತ್ತಾರೆ. ಕಾಂಗೋ ನದಿಯ ಪ್ರದೇಶದಲ್ಲಿ ವಿಪರೀತವಾದ ಕಾಡುಗಳಿರುವುವು; ಇವುಗಳಲ್ಲಿ ತೇಗು, ಎಬೊನಿ ಮುಂತಾದ ಮರಗಳು ವಿಶೇಷವಾಗಿವೆ. ಗೋಂದಾಗುವ ಗಿಡಗಳು ಪಶ್ಚಿಮಭಾಗದಲ್ಲಿ ವಿಶೇಷ. ಈ ಖಂಡದಲ್ಲಿ ಸುಗಂಧ ದ್ರವ್ಯದ ಗಿಡಗಳು ಪುಷ್ಕಳವಾಗಿವೆ.

13. ಪ್ರಾಣಿಗಳು.—ಈ ಖಂಡದಲ್ಲಿ ಬಹಳ ಗಾತ್ರವಾದ ಚತುಷ್ಪಾದಿಗಳಿರುವುದಲ್ಲದೆ, ಇತರ ಜಾತಿಯ ಪ್ರಾಣಿಗಳೂ ಇರುವುವು. ಒಂಟೆ, ದನ, ಕುದುರೆ —ಇವು ಮುಖ್ಯವಾದ ಸಾಧುಪ್ರಾಣಿಗಳು. ಅನೇಕ ಕಡೆಗಳಲ್ಲಿ ನಾನಾ ಬಗೆಯ ಕಪಿಗಳು, ಸಿಂಹ, ಆನೆ, ಗಂಡಮೃಗ, ನೀರ್ಗುದುರೆ (Hippopotamus) ಜಿರಾಫ್, ಜೀಬ್ರ, ಅಗ್ನಿಪಕ್ಷಿ (Ostrich) ಮತ್ತು ನಾನಾ ಬಗೆಯ ಜಿಂಕಗಳು ಹೇರಳವಾಗಿರುವುವು. ನದಿಗಳಲ್ಲಿ ದೊಡ್ಡ ಮೊಸಳೆಗಳಿವೆ, ಮಿಡಿತೆಗಳು ಬಹಳ ಹೆಚ್ಚು,

* ಇದು ಪೃಥ್ವಿಯಲ್ಲಿ ಬಹು ದೊಡ್ಡ ಮರವೆನಿಸಿಕೊಂಡಿದೆ, ಸುಮಾರು ೬೦ ಅಡಿಯಷ್ಟು ಎತ್ತರ ಬೆಳೆವುದು; ಇದರ ಬುಡದ ಸುತ್ತಳತೆ ೯೫ ಅಡಿಗಳವರೆಗೆ ಇರುತ್ತದೆ. ಇದರ ಹಣ್ಣನ್ನು ಆಹಾರಕ್ಕಾಗಿ ಉಪಯೋಗಿಸುತ್ತಾರೆ.

ಮತ್ತು ಪೈರುಗಳನ್ನು ಹಾಳುಮಾಡುತ್ತವೆ. ಗಿನಿಯ ತೀರದಲ್ಲಿ ಗೆದ್ದಲು ಬಹು ವಿಶೇಷ.

ಆಫ್ರಿಕಾ ಖಂಡದಲ್ಲಿ ಹುಲಿ ಕರಡಿಗಳಿಲ್ಲ. ಜಿರಾಫ್, ನೀರ್ಗುದುರೆ ಮತ್ತು ಸೀಬ್ರುವೆಂಬುವು ಈ ಖಂಡದಲ್ಲಿ ವಿನಾ ಇತರ ಖಂಡಗಳಲ್ಲಿಲ್ಲ. ಮಧ್ಯ ಭಾಗದಲ್ಲಿಯೂ ದಕ್ಷಿಣ ಭಾಗದಲ್ಲಿಯೂ "ಸೆಟ್‌ಸಿ" ಎಂಬ ಒಂದು ಬಗೆಯ ಕಾಡು ನೊಣವು ಇದೆ; ಇದು ಕಚ್ಚಿದರೆ ಕುದುರೆ, ಒಂಟೆ, ದನ ಮತ್ತು ನಾಯಿಗಳು ಸಾಯುವುವು; ನಾಗರಿಕತೆ ಅಭಿವೃದ್ಧಿಯಾಗದಿರುವುದಕ್ಕೆ ಇದೂ ಒಂದು ಕಾರಣವಾಗಿದೆ.

14. ಖನಿಜಗಳು.—ಉಪ್ಪು ಅನೇಕ ಕಡೆಗಳಲ್ಲಿ ಸಿಕ್ಕುತ್ತದೆ. ಚಿನ್ನವು ನದಿಗಳ ಪಾತ್ರದಲ್ಲಿಯೂ ದಕ್ಷಿಣ ಭಾಗದಲ್ಲಿಯೂ ಸಿಕ್ಕುವುದು. ಅಟ್ಲಾಸ್ ಪರ್ವತದಲ್ಲಿ ಕಬ್ಬಿಣ ತಾಮ್ರ ಸೀಸಗಳಿವೆ. ಕಾಂಗೋ ನದಿಯ ಜಲಾನಯನ ಭೂಮಿಯಲ್ಲಿಯೂ, ನಾಮಕ್ವಾನಾಡಿನಲ್ಲಿಯೂ ತಾಮ್ರ ವಿಶೇಷವಾಗಿದೆ. ಆರೆಂಜ್ ನದಿಗೆ ಉಪನದಿಯಾದ ವಾಲ್ ಎಂಬುದರ ಸಮೀಪದಲ್ಲಿ ವಜ್ರವು ಹೆಚ್ಚಾಗಿ ಸಿಕ್ಕುವುದು.

ಅಬಿಸೀನಿಯದಲ್ಲಿ ಉಪ್ಪು ಹಣದಂತೆ ಚಲಾವಣೆಯಲ್ಲಿದೆ: ಈ ಖಂಡದಲ್ಲೆಲ್ಲಾ ಉಪ್ಪನ್ನು ಮಿಠಾಯಿಯಂತೆ ಭಾವಿಸಿ ಉಪಯೋಗಿಸುತ್ತಿದ್ದಾರೆ; ದೇಶೀಯರ ರಾಜ್ಯಗಳಲ್ಲಿ ಉಪ್ಪಿನ ಖನಿಗಳು ರಾಜನ ವಶದಲ್ಲಿವೆ; ಮತ್ತು ಅವುಗಳಿಗೆ ಕಾವಲುಗಾರರನ್ನು ನೇಮಿಸಿದ್ದಾರೆ.

15. ಜನ.—ಈ ಖಂಡದಲ್ಲಿ ಅನಾದಿವಾಸಿಗಳಾದ ದೇಶೀಯರಲ್ಲದೆ ಯೂರೋಪ್ ಮತ್ತು ಏಷ್ಯಾ ಖಂಡದವರು ಅನೇಕರು ವಾಸವಾಗಿದ್ದಾರೆ. ಒಟ್ಟು ಜನ ಸಂಖ್ಯೆ ಸುಮಾರು ೨೦,೦೦,೦೦,೦೦೦.

ಈ ಖಂಡದ ನಿವಾಸಿಗಳನ್ನು ಮೂರು ಗುಂಪಾಗಿ ವಿಂಗಡಿಸಬಹುದು—(೧) ಅನಾದಿವಾಸಿಗಳು, (೨) ಪೂರ್ವಕಾಲದಲ್ಲಿ ಬಂದ ಅನ್ಯದೇಶೀಯರು, ಮತ್ತು (೩) ಈಚಿನ ಕಾಲದಲ್ಲಿ ಬಂದ ಅನ್ಯದೇಶೀಯರು. ಅನಾದಿವಾಸಿಗಳಲ್ಲಿ ಹಾಟೆಂಟಾಟ್ ಜನರು, ಬುಷ್ಮೆನ್ನುಗಳು, ಬಾಂಟು ಜನರು, ಮತ್ತು ನೀಗ್ರೋ ಜನರು ಸೇರಿದ್ದಾರೆ. ಪೂರ್ವ ಕಾಲದಲ್ಲಿ ಬಂದ ಅನ್ಯದೇಶೀಯರು ಯಾರು ಯಾರೆಂದರೆ,—(a) ಪೂರ್ವಕಾಲದ ಈಜಿಪ್ಷಿಯನ್ ಜನರು. (b) ಅರಬ್ಬಿಯರು ಮತ್ತು (c) ಅಬಿಸೀನಿಯನ್ ಜನರು. ಈಗಿನ ಕಾಪ್ಟ ಜನರೂ, ಸೋಮಾಲಿಗಳೂ, ನ್ಯೂಬಿಯನ್ ಜನರೂ, ಬರ್ಬರರೂ ಪೂರ್ವಕಾಲದ ಈಜಿಪ್ಷಿಯನ್ ಜನರ ಕುಲಕ್ಕೆ ಸೇರಿದವರಾಗಿದ್ದಾರೆ. ಈಚಿನ ಕಾಲದಲ್ಲಿ ಬಂದ ಅನ್ಯದೇಶೀಯರು ಡಚ್ಚರು, ಇಂಗ್ಲಿಷರು, ಫ್ರೆಂಚರು ಮುಂತಾದವರು.

ಹಾಟೆಂಟಾಟ್ ಜನರೂ ಬುಷ್ಮೆನ್ನುಗಳೂ ದಕ್ಷಿಣ ನೈರುತ್ಯ ಭಾಗಗಳಲ್ಲಿಯೂ, ಬಾಂಟು ಜನರು ಹಾಟೆಂಟಾಟರ ರಾಷ್ಟ್ರಕ್ಕೂ ಸಮಭಾಜಕ ವೃತ್ತಕ್ಕೂ ನಡುವೆಯೂ, ನೀಗ್ರೋಜನರು ಸೂಡಾನಿನಲ್ಲಿಯೂ, ವಾಸವಾಗಿದ್ದಾರೆ. ಕಾಪ್ಟರೂ

ಬರ್ಬರರೂ ಉತ್ತರಭಾಗದಲ್ಲಿಯೂ, ಸೋಮಾಲಿಗಳೂ ನ್ಯೂಬಿಯನ್ ಜನರೂ ಪೂರ್ವಭಾಗದಲ್ಲಿಯೂ ನೆಲೆಗೊಂಡಿದ್ದಾರೆ.

16. ಮತ, ಭಾಷೆ ಮುಂತಾದುವು.—ಈ ಖಂಡದ ಉತ್ತರ ಭಾಗದಲ್ಲಿಯೂ ಚಾಡ್ ಸರೋವರದ ವರೆಗೂ, ಪೂರ್ವದಿಕ್ಕಿನ ತೀರಪ್ರದೇಶದಲ್ಲಿ ಝಾಂಬೀಸಿ ನದಿಯ ವರೆಗೂ ಮಹಮ್ಮದೀಯರ ಮತವು ಪ್ರಚುರವಾಗಿದೆ. ದಕ್ಷಿಣಾರ್ಧ ಖಂಡದಲ್ಲಿಯೂ ನೈರುತ್ಯ ತೀರದಲ್ಲಿಯೂ ಜನರು ತಮಗೆ ಶ್ರೇಷ್ಠವಸ್ತುವೆಂದು ತೋರಿದುದನ್ನು ಪೂಜಿಸುತ್ತಾರೆ. ಕೇಪ್ ಕಾಲೊನಿ ಮತ್ತು ಡಚ್ ಸೆಟ್ಲಮೆಂಟುಗಳಲ್ಲಿ ಪ್ರಾಟೆಸ್ಟೆಂಟರು ಇದ್ದಾರೆ. ಅಬಿಸೀನಿಯದಲ್ಲಿ ಒಂದು ಬಗೆಯ ಕ್ರಿಸ್ತಮತವು ಪ್ರಚುರವಾಗಿದೆ. ನೀಗ್ರೋ ಜನರ ಭಾಷೆಗಳು ಲಿಖಿತಸ್ಥಿತಿಗೆ ಬಂದಿಲ್ಲ. ನೈಲ್ ನದಿಯ ಮುಖದಿಂದ ಸೆನಿಗಾಲ್‌ನದಿಯ ಮುಖದ ವರೆಗೂ ತೀರಪ್ರದೇಶದಲ್ಲಿ ಅರಬ್ಬೀಭಾಷೆ ಪ್ರಚುರವಾಗಿದೆ. ಸಹರದಲ್ಲಿ ಬರ್ಬರ್ ಭಾಷೆಗಳು ನೆಲೆಗೊಂಡಿವೆ: ದಕ್ಷಿಣದಲ್ಲಿ ಬಾಂಟು ಭಾಷೆಗಳಿರುವುವು.

ಆಫ್ರಿಕಾಖಂಡದ ಅನಾದಿವಾಸಿಗಳಲ್ಲಿ ನಾಗರಿಕತೆ ಇಲ್ಲ. ಜನರನ್ನು ಕೊಳ್ಳುವುದು ಮತ್ತು ಮಾರುವುದು ಈಗಲೂ ನಡೆಯುತ್ತಲಿದೆ.

17. ರಾಜ್ಯಭಾರ ಮುಂತಾದ ವಿಷಯಗಳು.—ನಿರಂಕುಶ ಪ್ರಭುತ್ವವು ಈ ಖಂಡದಲ್ಲಿ ಬಹು ಪ್ರಚುರವಾಗಿದೆ. ಸ್ವತಂತ್ರ ರಾಜ್ಯಗಳಿರುವುದು ಕಡಿಮೆ. ಅನೇಕ ಭಾಗಗಳು ಯೂರೋಪ್ ಖಂಡದವರಿಗೆ ಸೇರಿವೆ. ಯಾರುಯಾರಿಗೆ ಯಾವ ಯಾವ ಭಾಗಗಳು ಸೇರಿವೆಯೆಂದರೆ:—

(೧) ಇಂಗ್ಲಿಷರಿಗೆ.—ಗಾಂಬಿಯ, ಸಿರಾಲಿಯೋನ್, ಗಿನೀ ತೀರದಲ್ಲಿ ಅಸ್ಸೀನಿನದಿಯಿಂದ ಕಾಮರೂನ್ ವರೆಗೆ ಇರುವ ಪ್ರದೇಶ, ಕೇಪ್‌ಕಾಲೊನಿ, ನೆಟಾಲ್, ಆರೆಂಜ್ ರಿವರ್ ಕಾಲೊನಿ, ಟ್ರಾನ್ಸ್‌ವಾಲ್, ರೊಡೀಷಿಯ, ಪಶ್ಚಿಮ ಗ್ರೀಕ್ವಾನಾಡು (Griqua Land West), ಬ್ರಿಟಿಷ್ ಈಸ್ಟ್ ಆಫ್ರಿಕ, ಇವುಗಳಲ್ಲದೆ ನೈಜರ್ ನದಿಯ ಕೀಳುಭಾಗದ ಮತ್ತು ಬೆನ್ಯ್ವ ಎಂಬ ಉಪನದಿಯ ಪ್ರದೇಶಗಳು, ಬಸೂಟೋನಾಡು, ಕಾಫಿರ್‌ನಾಡು, ಪಾಂಡೋನಾಡು, ಬೆಕ್ವಾನಾನಾಡು, ಝೂಲುನಾಡು, ಮತ್ತು ಮಸೈನಾಡು, ಇವೆಲ್ಲವೂ ಇವರ ರಕ್ಷಣೆಯಲ್ಲಿವೆ.

(೨) ಫ್ರೆಂಚರಿಗೆ.—ಆಲ್ಜೀರಿಯ, ಟ್ಯೂನಿಸ್, ಸೆನಿಗಾಲ್‌ನದಿಯ ಬಯಲು, ಗೆಬೂನ್ ಮತ್ತು ಒಗೋವೆ ನದಿಗಳ ಬಯಲು, ಮತ್ತು ಬೇಬಲ್ಮ್ಯಾಂಡಬ್ ಜಲಸಂಧಿಯ ಮೇಲಿರುವ ಒಬಾಕ್. ಫ್ರೆಂಚ್‌ಕಾಂಗೊ, ಸಹರ ಮರುಭೂಮಿ, ಮತ್ತು ಮಡಗಾಸ್ಕರ್ ದ್ವೀಪವು ಇವರ ರಕ್ಷಣೆಯಲ್ಲಿವೆ.

(೩) ಪೋರ್ಚುಗೀಸರಿಗೆ.—ಪಶ್ಚಿಮ ತೀರದಲ್ಲಿ ಅಂಗೋಲ ಮತ್ತು ಬೆಂಗ್ವೇಲ, ಪೂರ್ವತೀರದಲ್ಲಿ ಮೊಸಾಂಬೀಕ್ ಮತ್ತು ಸೊಫಾಲ.

(೪) ಸ್ಪೇನ್ ದೇಶದವರಿಗೆ.—ಜಿಬ್ರಾಲ್ಟರ್ ಇದಿರಿಗೆ ಇರುವ ಸ್ಯೂಟ.

(೪) ಜರ್ಮನ್ ಜನರಿಗೆ.—ಆರೆಂಜ್ ನದಿಯಿಂದ ಫ್ರಿಯೋ ಭೂಶಿರದವರೆಗೆ ಇರುವ ತೀರಪ್ರದೇಶ, ಮತ್ತು ಜರ್ಮನ್ ಈಸ್ಟ್ ಆಫ್ರಿಕ.

(೫) ಬೆಲ್ಜಿಯನ್ ಜನರಿಗೆ.—ಕಾಂಗೋ ಫ್ರೀಸ್ಟೇಟ್.

(೬) ಇಟಲೀ ದೇಶದವರಿಗೆ.—ಮಸ್ಸೋವದಿಂದ ಅಸ್ಸಾಬ್ ವರೆಗೆ ಇರುವ ಕೆಂಪುಸಮುದ್ರದ ತೀರಪ್ರದೇಶ.

(೭) ತುರುಕರಿಗೆ.—ಈಜಿಪ್ಟ್, ಆಂಗ್ಲೋ ಇಜಿಪ್‌ಷನ್ ಸೂಡಾನ್: ಟ್ರಿಪಾಲಿಟೇನ ಮತ್ತು ಫೆಸ್ಸಾನ್.

ಈಜಿಪ್ಟ್.

1. ಮೇರೆ, ವಿಸ್ತೀರ್ಣ.—ಈಜಿಪ್ಟ್ ದೇಶವು ಆಫ್ರಿಕಾ ಖಂಡದ ಈಶಾನ್ಯದ ಮೂಲೆಯಲ್ಲಿದೆ. ಇದಕ್ಕೆ ದಕ್ಷಿಣದಲ್ಲಿ ನ್ಯೂಬಿಯಾ ದೇಶವೂ, ಪಶ್ಚಿಮದಲ್ಲಿ ದೊಡ್ಡ ಲಿಬಿಯನ್ ಮರುಭೂಮಿಯೂ ಇವೆ. ಇದರ ವಿಸ್ತೀರ್ಣವು ಸುಮಾರು ೪,೦೦,೦೦೦ ಚದರ ಮೈಲಿ. ಇದರಲ್ಲಿ ೧೩,೦೦೦ ಚದರ ಮೈಲಿಯಷ್ಟು ಮಾತ್ರ ವ್ಯವಸಾಯಕ್ಕೊಳಗಾಗಿದೆ. ಉಳಿದ ಭಾಗವೆಲ್ಲ ಮರುಭೂಮಿ.

2. ಭೂಸ್ವರೂಪಾದಿಗಳು.—ಈಜಿಪ್ಟ್ ದೇಶದಲ್ಲಿ ನೈಲ್ ನದಿಯ ಕಡೆಯ ಭಾಗವು ಹರಿಯುವ ತಗ್ಗು ನದೀಮುಖಜ ಭೂಮಿಯೂ ಸೇರಿಕೊಂಡಿವೆ. ನದೀ ಪಾತ್ರವು ಸುಮಾರು ಆರು ಮೈಲಿಗಳ ದೂರದಲ್ಲಿ ಎರಡು ಕಡೆಯೂ ಹಬ್ಬಿರುವ ಬೆಟ್ಟ ಸಾಲುಗಳ ಮಧ್ಯದಲ್ಲಿ ಇಕ್ಕಟ್ಟಾದ ಪ್ರದೇಶದಲ್ಲಿದೆ. ಈ ಬೆಟ್ಟಗಳು ಸಾಮಾನ್ಯವಾಗಿ ಎತ್ತರವಾಗಿಯೂ ಕೆಲವೆಡೆಗಳಲ್ಲಿ ೨,೦೦೦ ಅಡಿ ಎತ್ತರವಾಗಿಯೂ ಇವೆ. ನೈಲ್ ನದಿಗೆ ಪಶ್ಚಿಮದಲ್ಲಿರುವ ಲಿಬಿಯನ್ ಮರುಭೂಮಿಯು ಚಪ್ಪಟೆ ನೆಲವಾಗಿ ೬೦೦ ರಿಂದ ೧,೦೦೦ ಅಡಿ ಎತ್ತರವಾಗಿದೆ. ಅಲ್ಲಲ್ಲಿ ನೀರಿನಿಂದ ಕೂಡಿದ ರಮ್ಯಸ್ಥಾನಗಳಿವೆ. ಇನ್ನೂ ನೈರುತ್ಯದಲ್ಲಿ ಸಹರವೆಂಬ ಮರಳಕಾಡಿದೆ. ನದಿಗೆ ಪೂರ್ವದಲ್ಲಿ ಕೆಂಪು ಕಡಲಿನ ಕಡೆಗೂ ಮರಳಿನ ಮೈದಾನವಿದೆ. ಅದರ ಮೇಲೆ ಅಲ್ಲಲ್ಲಿ ಗುಡ್ಡಗಳಿವೆ. ನೈಲ್ ನದಿಯು ಈಜಿಪ್ಟಿಗೆ ಮಾತೃಪ್ರಾಯವಾಗಿದೆ. ಇದು ಅಬಿಸೀನಿಯಾ ಮುಂತಾದ ಭಾಗಗಳಿಂದ ಫಲವತ್ತಾದ ಕರಿಯ ಮಣ್ಣನ್ನೂ ಮೆಕ್ಕಲನ್ನೂ ತಂದು ಕೆಡವಿ ಈ ದೇಶವನ್ನು ಫಲವತ್ತಾಗಿ ಮಾಡಿದೆ. ವ್ಯವಸಾಯಕ್ಕಾಗಿ ನದಿಯ ನೀರು ವಿಶೇಷವಾಗಿ ವ್ಯಯವಾಗುವುದರಿಂದ ಸಮುದ್ರದ ಬಳಿಗೆ ಹೋಗಹೋಗುತ್ತಾ ಪ್ರವಾಹವು ಕಡಿಮೆಯಾಗುವುದು. ಈ ದೇಶದಲ್ಲಿ ಮಳೆ ಹೊಯ್ಯುವುದು ಬಹು ಅಪೂರ್ವವು. ಈಚಿಗೆ ವ್ಯವಸಾಯದಿಂದ ನದೀತೀರದಲ್ಲಿ ಸಸ್ಯ ಸಮೃದ್ಧಿ ಹೆಚ್ಚಾಗಿರುವುದರಿಂದ ಆ ಪ್ರದೇಶದಲ್ಲಿ ಮಾತ್ರ ಸ್ವಲ್ಪ ಮಳೆಯಾಗು

ತ್ತಿದೆ. ಈ ದೇಶದೊಳಗೆ ಬೇಸಗೆಯಲ್ಲಿ ಝಳವನ್ನು ತಡೆಯಲಾಗುವದಿಲ್ಲ. ಮಿಕ್ಕ ಕಾಲಗಳಲ್ಲಿ ಉಲ್ಲಾಸಕರವಾಗಿರುತ್ತದೆ. ರಾತ್ರಿಕಾಲದಲ್ಲಿ ಹೆಚ್ಚಾಗಿ ಇಬ್ಬನಿ ಸುರಿಯುತ್ತದೆ.

ಬೆಳೆ ಮತ್ತು ವ್ಯಾಪಾರ.—ಪೂರ್ವ ಕಾಲದಿಂದಲೂ ಕೃಷಿಯೇ ಜನರ ಮುಖ್ಯೋದ್ಯೋಗವಾಗಿದೆ. ನವಣೆ ಮೊದಲಾದ ಕಾಳುಗಳು, ಗೋದುವೆ, ಕಬ್ಬು, ಹತ್ತಿ, ನೀಲಿ, ಹೊಗೆಯಸೊಪ್ಪು, ಖರ್ಜೂರ, ಈರುಳ್ಳಿ, ಸೌತೆಕಾಯಿ, ಇವು ಮುಖ್ಯವಾದ ಬೆಳೆಗಳು. ಸುಮಾರು ವರ್ಷಕ್ಕೆ ೪೦ ಕೋಟಿ ರೂಪಾಯಿಯ ವ್ಯಾಪಾರವು ನಡೆಯುತ್ತದೆ. ಹತ್ತಿ, ಕಾಳು, ಗೋದುವೆ, ಸಕ್ಕರೆ ಹೊರಕ್ಕೆ ಸಾಗುತ್ತವೆ; ಹತ್ತಿಯ ಬಟ್ಟೆಗಳು, ಕಲ್ಲಿದ್ದಲು, ಲೋಹಗಳು ಹೊರಗಣಿಂದ ಬರುತ್ತವೆ.

ಏಷ್ಯದಿಂದ ಆಫ್ರಿಕಕ್ಕೆ ಬರುವ ದಾರಿಯೂ ಮೆಡಿಟರೇನಿಯನ್ ಸಮುದ್ರದಿಂದ ಹಿಂದೂ ಸಾಗರಕ್ಕೆ ಬರುವ ದಾರಿಯೂ ಸಂಧಿಸುವ ಸ್ಥಳದಲ್ಲಿ ಈಜಿಪ್ಟ್ ಇರುವುದರಿಂದ ಇಲ್ಲಿನ ವ್ಯಾಪಾರವು ಹೆಚ್ಚುವುದು ಸಹಜವಾಗಿದೆ. ಈ ಭಾಗದಲ್ಲಿ ೧,೪೦೦ ಮೈಲಿ ರೇಲ್ವೆಯೂ ೬೦೦ ಮೈಲಿಯಷ್ಟು ಕಾಲುವೆಯೂ ಇವೆ. (ಸುಯಸ್ ಕಾಲುವೆಯನ್ನು ಮಾಡಿದುದು ವ್ಯಾಪಾರಕ್ಕೆ ಅನುಕೂಲಿಸಿತು. ಇದನ್ನು ಒಬ್ಬ ಫ್ರಾನ್ಸ್ ದೇಶೀಯನು ೧೮೫೯ರಲ್ಲಿ ಪ್ರಾರಂಭಿಸಿ ೧೦ ವರ್ಷದಲ್ಲಿ ಮುಗಿಸಿದನು. ಇದು ಮೆಡಿಟರೇನಿಯನ್ ತೀರದಲ್ಲಿರುವ ಪೋರ್ಟ್‌ಸೆಡ್ ಎಂಬ ಊರಿನಿಂದ ಹಿಡಿದು ಮೆಂಜಲಿ, ತಿಂಸೆ, ಮತ್ತು ಬಿಟ್ಟರ್ ಸರೋವರಗಳ ಮಾರ್ಗವಾಗಿ ಬಂದು ಸುಯೆಸ್ ಎಂಬ ಸ್ಥಳದಲ್ಲಿ ಕೆಂಪು ಕಡಲನ್ನು ಸೇರುವುದು. ಈ ಕಾಲುವೆಯಲ್ಲಿ ಸಾವಿರಾರು ಹಡಗುಗಳು ತಿರುಗುತ್ತವೆ. ಇವುಗಳ ಮೇಲಣ ತೆರಿಗೆಯೇ ವರ್ಷಕ್ಕೆ ಮೂರು ಕೋಟಿ ರೂಪಾಯಿಗಿಂತ ಹೆಚ್ಚಾಗುತ್ತದೆ.)

ಜನರು.—ಕಾಪ್ಟರೂ, ಅರಬ್ಬಿಯರೂ, ತುರುಕರೂ ಇಲ್ಲಿ ವಾಸವಾಗಿದಾರೆ. ಯೂರೋಪಿಯನರೂ ಕೆಲವರುಂಟು. ಎಲ್ಲಿಯೂ ಮುಹಮ್ಮದೀಯ ಮತವೇ ಪ್ರಚುರವಾಗಿದೆ. ಕಾಪ್ಟರು ಕ್ರಿಸ್ತೀಯರು.

ರಾಜ್ಯಭಾರ.—ರಾಜ್ಯಭಾರವು ಹೆಸರಿಗೆ ಮಾತ್ರ ನಿರಂಕುಶವು. ಇಲ್ಲಿನ ರಾಜನಿಗೆ ಖಿಡೈವ್ ಎಂದು ಬಿರುದು. ಈತನು ತುರ್ಕಿ ಸುಲ್ತಾನನಿಗೆ ಅಧೀನನು. ಆದರೆ ಕಳೆದ ೩೫ ವರ್ಷಗಳಿಂದ ಇದು ಬ್ರಿಟಿಷರ ಪ್ರಾಬಲ್ಯಕ್ಕೊಳಗಾಗಿದೆ. ಬ್ರಿಟಿಷ್ ಅಧಿಕಾರಿಗಳೇ ರಾಜನಿಗೆ ಮಂತ್ರಾಲೋಚನೆಯನ್ನು ಹೇಳತಕ್ಕವರಾದುದರಿಂದ ದೇಶವು ಏಳಿಗೆಗೆ ಬರುತ್ತಿದೆ.

ದೊಡ್ಡ ಪಟ್ಟಣಗಳು.—(೧) ಕೈರೋ. ರಾಜಧಾನಿ, ನೈಲ್ ನದಿಯ ಬಲಗಡೆಯಲ್ಲಿದೆ. ಆಫ್ರಿಕಾ ಖಂಡದಲ್ಲೆಲ್ಲಾ ಇದೇ ದೊಡ್ಡಪಟ್ಟಣ. ಇದನ್ನು ಕ್ರಿ. ಶ. ೯೭೦ರಲ್ಲಿ ಅರಬ್ಬಿಯವರು ಕಟ್ಟಿದರು. ಇದಕ್ಕೆ ಕೆಲವು ಮೈಲಿ ದೂರದಲ್ಲಿ ಗೋಪುರಾಕಾರವಾಗಿ ಕಟ್ಟಿದ ಪಿರಮಿಡ್ಡುಗಳೆಂಬ ಆಶ್ಚರ್ಯಕರವಾದ ಹಳೆಯ ಕಟ್ಟಡ

ಗಳಿವೆ. ಇವುಗಳಲ್ಲಿ ದೊಡ್ಡದು ೧೬ ಎಕರೆ ಭೂಮಿಯನ್ನು ಮುಚ್ಚಿರುವುದಲ್ಲದೆ ೪೫೦ ಅಡಿ ಎತ್ತರವಾಗಿದೆ. ಇದನ್ನು ಕಟ್ಟಿ ೪,೦೦೦ ವರ್ಷಕ್ಕಿಂತ ಹೆಚ್ಚಾಗಿದೆ. ನೈಲ್ ತೀರದಲ್ಲಿ ಪುರಾತನ ಕಾಲದಲ್ಲಿದ್ದ ದೊಡ್ಡ ಪಟ್ಟಣಗಳ ಗುರುತುಗಳು ಅನೇಕವಾಗಿವೆ. ಗುಡಿಗಳು, ಪಿರಮಿಡ್ಡುಗಳು, ಅರಮನೆಗಳು, ಅದ್ಭುತಾಕಾರದ ವಿಗ್ರಹಗಳು ಲೆಕ್ಕವಿಲ್ಲದಷ್ಟಿವೆ. ಇವುಗಳಲ್ಲಿ ಅನೇಕಗಳ ಮೇಲೆ ಚಿತ್ರಾಕ್ಷರದ (Hieroglyphics) ಶಾಸನಗಳಿರುವುವು. ಕೈರೋವಿನಿಂದ ಅಲೆಗ್ಸಾಂಡ್ರಿಯ, ಪೋರ್ಟ್‌ಸೆಡ್, ಸೂಯೆಸ್ ಪಟ್ಟಣಗಳಿಗೆ ರೇಲ್ವೆ ಇದೆ. ಇದರಲ್ಲಿ ೫,೭೦,೦೦೦ ಜನರಿದಾರೆ. (೨) ಅಲೆಗ್ಸಾಂಡ್ರಿಯ. ಇದನ್ನು ಅಲೆಗ್ಸಾಂಡರನೆಂಬ ಗ್ರೀಕವೀರನು ಸಮುದ್ರತೀರದಲ್ಲಿ ಕಟ್ಟಿದನು. ಇಲ್ಲಿ ಹೆಚ್ಚಾಗಿ ವ್ಯಾಪಾರ ನಡೆಯುತ್ತದೆ. ಡಾಮಿಯಟ್ಟ ಮತ್ತು ರೊಸೆಟ್ಟ ಎಂಬುವು ನೈಲ್ ನದಿಯ ಉಭಯ ಶಾಖೆಗಳ ಮುಖಭಾಗದಲ್ಲಿವೆ. (೩) ಸೂಯೆಸ್. ಇದು ಕೆಂಪು ಕಡಲಿನ ಪಶ್ಚಿಮತೀರದ ಶಿರೋಭಾಗದಲ್ಲಿದೆ. ಇದಕ್ಕೂ ಪೋರ್ಟ್‌ಸೆಡ್ಡಿಗೂ ಮಧ್ಯದಲ್ಲಿ ೧೦೩ ಮೈಲಿ ಕಾಲುವೆ ಇದೆ. ಏಷ್ಯಾ ಯೂರೋಪುಗಳ ಮಧ್ಯದಲ್ಲಿ ಸಾಗುವ ಸರಕಿನ ಹಡಗುಗಳೆಲ್ಲ ಈ ಕಾಲುವೆಯಲ್ಲಿಯೇ ಸಾಗುತ್ತವೆ. (೪) ಸಿಯೌಟ್. ಇದು ನೈಲ್ ತೀರದಲ್ಲಿ ಮೇಲಣ ಈಜಿಪ್ಟಿಗೆ ಮುಖ್ಯ ಪಟ್ಟಣ. (೫) ಅಸ್ಸೌರ್. ಇದು ನೈಲ್ ನದಿಯ ಮೊದಲನೆಯ ಪಾತದ ಬಳಿ ಇದೆ. ಇಲ್ಲಿ ವಿಶೇಷವಾಗಿ ಬೆಣಚುಕಲ್ಲು ದೊರೆಯುವುದು. (೬) ವಾಡಿಹಾಫ. ಇದು ನೈಲ್ ನದಿಯ ಎರಡನೆಯ ಪಾತದ ಬಳಿ, ಕೈರೋವಿಗೆ ೮೦೦ ಮೈಲಿ ದೂರದಲ್ಲಿ, ಈಜಿಪ್ಟ ದೇಶದ ದಕ್ಷಿಣದ ಕೊನೆಯಲ್ಲಿದೆ. (೭) ಕಾಸ್ಸೇರ ಮತ್ತು ಸ್ವಾಕಿನ್ ಎಂಬುವು ಕೆಂಪು ಕಡಲಿನ ತಡಿಯಲ್ಲಿವೆ. ಸ್ವಾಕಿನ್ ಬಳಿ ಮಕ್ಕಕ್ಕೆ ಹೋಗುವ ಯಾತ್ರಾರ್ಥಿಗಳು ಹಡಗನ್ನು ಹತ್ತುತ್ತಾರೆ.

ಆಂಗ್ಲೋ ಈಜಿಪ್ಷನ್ ಸೌಡಾನ್.

ಪೂರ್ವದಲ್ಲಿ ಈಜಿಪ್ಟ ರಾಜನಾದ ಖೀಡೈವಿನ ಅಧಿಕಾರವು ದಕ್ಷಿಣದಲ್ಲಿ ಆಲ್ಬರ್ಟ್ ವಿಕ್ಟೋರಿಯಾ ನ್ಯಾಂಸಗಳೆಂಬ ಸರೋವರಗಳ ವರೆಗೂ ಪಶ್ಚಿಮದಲ್ಲಿ ಡಾರ್ಫರ್ ವರೆಗೂ ವ್ಯಾಪಿಸಿತ್ತು. ೧೮೮೩ರಲ್ಲಿ ಮಹದಿ ಎಂಬನು ದಂಗೆ ಎದ್ದು ಈಜಿಪ್ಟ ಹೊರತು ಉಳಿದ ಭಾಗಗಳನ್ನೆಲ್ಲ ಸ್ವಾಧೀನಮಾಡಿಕೊಂಡನು. ಮಹದಿಯ ಅನಂತರದಲ್ಲಿ ಆಳಿದ ಖಲೀಫನ ಬಲವನ್ನು ಲಾರ್ಡ್ ಕಿಚೆನರ್ ಎಂಬಾತನು ೧೮೯೮ರಲ್ಲಿ ಉಮ್ದುರ್ಮಾನ್ ಯುದ್ಧದಲ್ಲಿ ಮುರಿದನು. ೧೮೯೯ರಲ್ಲಿ ಇಂಗ್ಲೆಂಡಿಗೂ ಈಜಿಪ್ಟಿಗೂ ಕೌಲಾಗಿ ಈಜಿಪ್ಷನ್ ಸೌಡಾನ್ ಒಬ್ಬ ಬ್ರಿಟಿಷ್ ಗವರ್ನರ್ ಜನರಲ್‌ರವರ ವಿಚಾರ

ಕೈಗೊಳಗಾಯಿತು. ಈ ಆಂಗ್ಲೋ ಈಜಿಪ್ಷಿಯನ್ ಸೌಡಾನಿನಲ್ಲಿರುವ ಸಂಸ್ಥಾನಗಳು—ಈಜಿಪ್ಟಿಗೆ ದಕ್ಷಿಣದಲ್ಲಿರುವ ನ್ಯೂಬಿಯ, ಇನ್ನೂ ದಕ್ಷಿಣದಲ್ಲಿರುವ ಕಾರ್ಡೋಫಾನ್ ಮತ್ತು ಬಹರೆಲ್ ಘಸಲ್, ಪಶ್ಚಿಮದಲ್ಲಿ ಡಾರ್ಫರ್.

ನೈಲ್ ನದಿ ಹರಿಯುವ ಭಾಗವನ್ನುಳಿದು ಉಳಿದ ಪ್ರದೇಶವು ಕಲ್ಲುಮರಳಿನ ಮೈದಾನವಾಗಿದೆ. ಇಲ್ಲಿನ ವಾಯುಗುಣವು ಉಷ್ಣವು. ಇಲ್ಲಿನ ಭೂಮ್ಯುತ್ಪನ್ನಗಳು ನವಣೆ, ಸಾವೆ, ಬಾರ್ಲಿ, ಹತ್ತಿ, ಹೊಗೆಸೊಪ್ಪು, ನೀಲಿ. ಆನೆಯ ಕೊಂಬುಗಳನ್ನು ಕೂಡಹಾಕಿ ಹೊರಗಣ ದೇಶಗಳಿಗೆ ಕಳುಹಿಸುತ್ತಾರೆ. ನ್ಯೂಬಿಯನರು ಬಲಿಷ್ಠರು, ಶ್ರಮಪಡತಕ್ಕವರು. ಅವರ ಭಾಷೆಗೆ ಬರ್ಬರ್ ಎಂದು ಹೆಸರು.

ಪಟ್ಟಣಗಳು.—(೧) ಖಾರ್ಟೂಮ್. ಇದು ಬಿಳಿಯ ನೈಲ್ ಮತ್ತು ನೀಲ ನೈಲ್, ಇವೆರಡರ ಸಂಗಮಸ್ಥಾನದಲ್ಲಿ ಮುಖ್ಯ ಪಟ್ಟಣ, ಮತ್ತು ವ್ಯಾಪಾರ ಸ್ಥಾನ. (೨) ಉಮ್ದುರ್ಮಾನ್, ಇದು ಮಹದಿಯ ರಾಜಧಾನಿ, ಖಾರ್ಟೂಮ್ ಬಳಿಯಲ್ಲಿದೆ. (೩) ಸೆನ್ನಾರ್, ಪೂರ್ವದಲ್ಲಿ ಪ್ರಖ್ಯಾತವಾಗಿತ್ತು; ಈಗ ಹಾಳುಬಿದ್ದಿದೆ, (೪) ಫಷೋದಾ, ಬಿಳಿಯ ನೈಲಿಗೆ ದಕ್ಷಿಣದಲ್ಲಿದೆ.

ಅಬಿಸೀನಿಯ.

1. ಮೇರೆ, ವಿಸ್ತೀರ್ಣ ಮುಂತಾದುವು.—ಅಬಿಸೀನಿಯವು ನ್ಯೂಬಿಯ ಮತ್ತು ಸೆನ್ನಾರ್ ಸಂಸ್ಥಾನಗಳಿಗೆ ಆಗ್ನೇಯದಲ್ಲಿದೆ. ಪೂರ್ವದಲ್ಲಿ ಇದು ಇಥಿಯೋಪಿಯಾ ರಾಷ್ಟ್ರದ ಒಂದು ಭಾಗವಾಗಿತ್ತು. ಇದರ ವಿಸ್ತೀರ್ಣವು ೩,೦೦,೦೦೦ ಚದರ ಮೈಲಿ. ಎಲ್ಲಿ ನೋಡಿದರೂ ಎತ್ತರದ ಮೈದಾನಗಳೂ ಅವುಗಳ ಮೇಲೆ ಕಗ್ಗಲ್ಲಿನ ಬೆಟ್ಟಗಳೂ ಕಾಣುತ್ತವೆ. ಎಲ್ಲಕ್ಕಿಂತ ಎತ್ತರವಾದ ಮೈದಾನವು ಸಮುದ್ರದ ಮಟ್ಟಕ್ಕಿಂತ ೮,೦೦೦ ಅಡಿ ಎತ್ತರವಾಗಿದೆ; ಎಲ್ಲಕ್ಕಿಂತ ಎತ್ತರವಾದ ಬೆಟ್ಟದ ಕೋಡುಗಲ್ಲು ೧೫,೦೦೦ ಅಡಿ ಎತ್ತರವಾಗಿದೆ. ನೀಲನೈಲಿನ ಉತ್ಪತ್ತಿ ಸ್ಥಾನವು ಈ ದೇಶದಲ್ಲಿದೆ. ದೇಶವು ಎತ್ತರವಾಗಿರುವುದರಿಂದ ವಾಯುಗುಣವು ತಂಪುಳ್ಳದ್ದಾಗಿದೆ. ಹೆಚ್ಚಾಗಿ ಮಳೆಯಾಗುವುದರಿಂದ ಭೂಮಿಯು ಫಲವತ್ತಾಗಿದೆ. ನವಣೆ ಸಾವೆಗಳೂ ಗೋದುವೆಯೂ ಮುಖ್ಯ ಭೂಮ್ಯುತ್ಪನ್ನಗಳು. ದಂತ, ಚಿನ್ನ, ಕಾಫಿ, ಇವು ಹೊರಕ್ಕೆ ಸಾಗುತ್ತವೆ.

2. ಜನರೂ ರಾಜ್ಯಭಾರವೂ.—ಸುಮಾರು ೪೦,೦೦,೦೦೦ ಜನರಿರುತ್ತಾರೆ. ಇವರು ಸೆಮೈಟ್ ಕುಲದವರು, ನಾಗರಿಕರಲ್ಲ; ಇವರ ಭಾಷೆಗೆ ಇಥಿಯೋಪಿಕ್ ಎಂದು ಹೆಸರು. ಮತವು ವಿರೂಪವನ್ನು ಪಡೆದ ಕ್ರೈಸ್ತ ಮತವಾಗಿದೆ.

ಈ ದೇಶದ ಅಧಿಪತಿಯನ್ನು ನೀಗಸ್ (ರಾಜಾಧಿರಾಜ) ಎಂದು ಕರೆಯುತ್ತಾರೆ. ಈತನಿಗೆ ಇಥಿಯೋಪಿಯಾ ಚಕ್ರವರ್ತಿ ಎಂಬ ಬಿರುದುಂಟು. ಒಂದು ಕಾಲದಲ್ಲಿ ಇಟಲಿ ದೇಶದ ರಾಜನು ಅಬಿಸೀನಿಯವನ್ನು ತನ್ನ ಆಶ್ರಯಕ್ಕೆ ಸೇರಿಸಿಕೊಳ್ಳಬೇಕೆಂದು ಬಯಸಿದನು. ಇವರು ಒಪ್ಪದೆ ಹೋಗಲು ಇಬ್ಬರಿಗೂ ಯುದ್ಧವಾಯಿತು. ಮೆನೆಲಿಕ್ ಚಕ್ರವರ್ತಿಯು ಇಟಲಿಯವರನ್ನು ೧೮೯೬ರಲ್ಲಿ ಚೆನ್ನಾಗಿ ಸೋಲಿಸಿ ಓಡಿಸಿಬಿಟ್ಟನು.

3. ಪಟ್ಟಣಗಳು.—ಯಾವ ಪಟ್ಟಣದಲ್ಲಿಯೂ ೮,೦೦೦ ಕ್ಕಿಂತ ಹೆಚ್ಚು ಪ್ರಜೆ ಇಲ್ಲ. ಆಡಿಸ್ ಅಬೇಬ ಎಂಬುದು ಈಗಿನ ರಾಜಧಾನಿ. ಆಕ್ಸಂ ಎಂಬುದು ಪೂರ್ವದ ರಾಜಧಾನಿ. ಮಗ್ದಾಲವನ್ನು ಇಂಗ್ಲಿಷರು ೧೮೬೮ರಲ್ಲಿ ಮುತ್ತಿಗೆ ಹಾಕಿ ವಶಮಾಡಿಕೊಂಡರು. ಗೊಂಡಾರ್, ಅಡೋವಾ ವಿಶೇಷ ವ್ಯಾಪಾರ ಸ್ಥಳಗಳು. ಮಸ್ಸೋವ ಎಂಬುದು ಸಮುದ್ರ ತೀರದ ಪಟ್ಟಣ, ಇಟಲಿಗೆ ಸೇರಿದೆ.

ಬರ್ಬರರ ಸಂಸ್ಥಾನಗಳು.

1. ಸಾಮಾನ್ಯ ವಿಷಯ.—ಆಫ್ರಿಕಾಖಂಡದ ಉತ್ತರಭಾಗದಲ್ಲಿ ಮೆಡಿಟರೇನಿಯನ್ ಸಮುದ್ರ ತೀರದಲ್ಲಿರುವ ಮೊರಾಕೊ, ಆಲ್ಜೀರಿಯ, ಟ್ಯೂನಿಸ್ ಮತ್ತು ಟ್ರಿಪೋಲಿ ಎಂಬ ನಾಲ್ಕು ದೇಶಗಳಿಗೆ ಈ ಹೆಸರು ಇದೆ. ಮೊರಾಕೊವಿನಲ್ಲಿ ದೊಡ್ಡ ಅಟ್ಲಾಸ್ ಪರ್ವತವಿದೆ; ಸಣ್ಣ ಅಟ್ಲಾಸ್ ಪರ್ವತವು ಆಲ್ಜೀರಿಯ ಮತ್ತು ಟ್ಯೂನಿಸ್‌ಗಳಲ್ಲಿ ಹಬ್ಬಿದೆ. ಇಲ್ಲಿರುವ ನದಿಗಳೆಲ್ಲಾ ಮಳೆಗಾಲದ ಹೊಳೆಗಳು; ಜೀವನದಿಗಳಲ್ಲ. ಇವುಗಳಿಗೆ ವಾಡಿಗಳೆಂದು ಹೆಸರು; ಮಳೆಗಾಲದಲ್ಲಿ ಭೋರನೆ ಮೊರೆದು ಹರಿವುವು, ಬೇಸಗೆಯಲ್ಲಿ ದಾರದಂತೆ ಕೊಂಚ ಹರಿವುವು, ಇಲ್ಲದಿದ್ದರೆ ಒಣಗಿ ಹೋಗುವುವು.

ಮೊರಾಕೋ ದೇಶ.

2. ವಿಸ್ತೀರ್ಣ ಮುಂತಾದುವು.—ವಿಸ್ತೀರ್ಣವು ೨,೧೯,೦೦೦ ಚ. ಮೈ. ಜನ ಸಂಖ್ಯೆ ಸುಮಾರು ೮೦,೦೦,೬೦೦. ರಾಜಧಾನಿ ಮೊರಾಕೊ. ನಿರಂಕುಶ ಪ್ರಭುವಾದ ಸುಲ್ತಾನನೊಬ್ಬನು ಈ ದೇಶವನ್ನು ಆಳುತ್ತಾನೆ.

ಈ ದೇಶವನ್ನು ಮೂರು ಭಾಗವಾಗಿ ಭಾಗಿಸಬಹುದು;—(೧) ಸಮುದ್ರದ ಕಡೆಯಿಂದ ಅಟ್ಲಾಸ್ ಪರ್ವತದ ಕಡೆಗೆ ದಿಣ್ಣೆಯಾಗುತ್ತಾ ಬರುವ ಫಲವತ್ತಾದ "ಟೆಲ್" ಎಂಬ ಪ್ರದೇಶ, ಇಲ್ಲಿ ನಾನಾ ಬಗೆಯ ಧಾನ್ಯಗಳು ಬೆಳೆವುವು; (೨)

ಅಟ್ಲಾಸ್ ಪರ್ವತಕ್ಕೆ ಸಂಬಂಧಪಡುವ ಬೆಟ್ಟದ ಸೀಮೆ; (೩) ಅಟ್ಲಾಸ್ ಪರ್ವತದಿಂದ ಸಹರದ ಕಡೆಗೆ ಇಳಿಜಾರಾಗಿ ಬರುವ ಪ್ರದೇಶ. ಇಲ್ಲಿ ಖರ್ಜೂರದ ಗಿಡಗಳು ಪುಷ್ಕಳವಾಗಿವೆ. ತೀರ ಪ್ರದೇಶದಲ್ಲಿ ಮೂರ್ ಎಂಬ ಜನರೂ, ಬೆಟ್ಟಗಳಲ್ಲಿ ಬರ್ಬರರೂ ಇದ್ದಾರೆ.

3. ಪಟ್ಟಣಗಳು.—(೧) ಮೊರಾಕೊ. ರಾಜಧಾನಿ. ಸುಲ್ತಾನನು ಪಟ್ಟಣದಲ್ಲಿ ಸವಾರಿ ಹೊರಡುವುದಕ್ಕೆ ಮೊದಲು, ರಾಜಭಟರು ತಲೆಯ ಬುರುಡೆಗಳನ್ನು ಹಿಡಿದು, ಬೀದಿಯಲ್ಲಿ ತಿರುಗಿ, ಅರಮನೆಯ ಮುಂಭಾಗದಲ್ಲಿ ತಂದಿಡುವರು; ತಂಟೆ ಮಾಡಿದವರ ತಲೆಯ ಬುರುಡೆಗಳು ಈ ಗತಿಗೆ ಬರುವುವೆಂದು ಸೂಚಿಸುವುದಕ್ಕೆ ಹೀಗೆ ಮಾಡುತ್ತಾರೆ. (೨) ಫೆಸ್. ಈ ಸಂಸ್ಥಾನದಲ್ಲಿ ಇದು ಬಹು ದೊಡ್ಡ ಪಟ್ಟಣವಾಗಿರುವುದಲ್ಲದೆ, ಮಹಮ್ಮದೀಯರಿಗೆ ಯಾತ್ರಾ ಸ್ಥಳವಾಗಿಯೂ ಇದೆ. ಇಲ್ಲಿ ಹೆಚ್ಚು ವ್ಯಾಪಾರವು ನಡೆವುದು. ತೊಗಲಿಗೆ ಬಹು ಸೊಗಸಾಗಿ ಹದವನ್ನು ಕೊಟ್ಟು ಮೃದುವಾಗಿ ಮಾಡುವ ಕಾರ್ಖಾನೆಗಳು ಅನೇಕ ಇವೆ. (೩) ಮೆಕೀನೆಸ್. ಇದು ಧಾನ್ಯಾದಿಗಳನ್ನು ಬೆಳೆವ ಪ್ರದೇಶದ ಮಧ್ಯ ರಾಷ್ಟ್ರದಲ್ಲಿದೆ. (೪) ಮೊಗೆಡೋರ್ ಮತ್ತು ಟಾಂಜಿಯರ್ ಎಂಬುವು ರೇವೆ ಪಟ್ಟಣಗಳು. (೫) ಕ್ಯೂಟ. ಇದು ಜಿಬ್ರಾಲ್ಟರಿಗೆ ಇದಿರಾಗಿದೆ, ಸ್ಪೇನಿಗೆ ಸೇರಿದೆ.

ಆಲ್ಜೀರಿಯಾ ದೇಶ.

4. ವಿಸ್ತೀರ್ಣ ಮುಂತಾದ ವಿಷಯಗಳು.—ವಿಸ್ತೀರ್ಣವು ೧,೮೫,೦೦೦ ಚ. ಮೈ. ಜನಸಂಖ್ಯೆ ಸುಮಾರು ೫೦,೦೦,೦೦೦. ರಾಜಧಾನಿ ಆಲ್ಜಿಯರ್ಸ್. ಫ್ರೆಂಚರಿಗೆ ಸೇರಿದೆ.

ಮೊರಾಕೊವಿನಂತೆ ಇದನ್ನೂ ಮೂರು ಭಾಗವಾಗಿ ಭಾಗಿಸಬಹುದು—(೧) ಫಲವತ್ತಾದ ಟೆಲ್ ಎಂಬ ತೀರ ಪ್ರದೇಶ, (೨) ಉನ್ನತವಾದ ಬೆಟ್ಟದ ಸೀಮೆ, ಮತ್ತು (೩) ಸಹರ ಮರುಭೂಮಿಯ ಪಕ್ಕದ ಪ್ರದೇಶ. ಸಸ್ಯಾದಿಗಳಲ್ಲಿ ಮೊರಾಕೊವಿನಂತೆ ಇದೆ. ಅಟ್ಲಾಸ್ ಪರ್ವತದ ದಕ್ಷಿಣ ಭಾಗದಲ್ಲಿ ಕೊಳಚೆಯ ಪ್ರದೇಶಗಳುಂಟು. ಇಲ್ಲಿ ಆಲ್‌ಫ ಎಂಬ ಒಂದು ಬಗೆಯ ಹುಲ್ಲು ವಿಶೇಷವಾಗಿ ಬೆಳೆವುದು; ಇದರಿಂದ ಸೊಗಸಾದ ಕಾಗದವನ್ನು ಮಾಡುತ್ತಾರೆ; ಇದೇ ಈ ದೇಶದ ಮುಖ್ಯವಾದ ಆಸ್ತಿಯೆಂದು ಹೇಳಬಹುದು. ಇದು ಬಹಳವಾಗಿ ರಫ್ತಾಗುತ್ತದೆ. ಫ್ರೆಂಚರು ದೇಶವನ್ನು ಅಭಿವೃದ್ಧಿ ಸ್ಥಿತಿಗೆ ತರುತ್ತಲಿದ್ದಾರೆ. ಸಹರ ಪ್ರದೇಶದಲ್ಲಿ ಆರ್ಟೀಸಿಯರ್ನ್ ಬಾವಿಗಳನ್ನು ಮಾಡಿದ್ದಾರೆ; ಇವುಗಳ ನೀರಿನಿಂದ ವ್ಯವಸಾಯವು ನಡೆವುದು.

5. ದೊಡ್ಡ ಪಟ್ಟಣಗಳು.—(೧) ಆಲ್ಜಿಯರ್ಸ್. ರಾಜಧಾನಿ, ಸಮುದ್ರದ ಕಡೆಯಿಂದ ಬಹು ರಮಣೀಯವಾಗಿ ಕಾಣುವುದು; ಇದರ ಕಟ್ಟಡಗಳ ಗೋಡೆ

ಥಳಥಳಿಸುತ್ತ ಬೆಳ್ಳಗೆ ಕಾಣುವುದರಿಂದ ಇದನ್ನು ರಜತಪುರಿ (Silver city) ಎಂದು ಕರೆಯುತ್ತಾರೆ; ಫ್ರೆಂಚರ ನಾಗರಿಕತೆಯನ್ನು ಈ ಖಂಡದಲ್ಲಿ ವಿಸ್ತರಿಸುವ ಸ್ಥಳವಾಗಿದೆ. (೨) ಓರಾನ್. ವಿಶೇಷ ವ್ಯಾಪಾರದ ಸ್ಥಳ. ಆಲ್ಫ ಎಂಬ ಹುಲ್ಲು ಇಲ್ಲಿಂದ ಹೆಚ್ಚಾಗಿ ರಫ್ತಾಗುತ್ತದೆ. (೩) ಕಾನ್‌ಸ್ಟೆಂಟೈನ್. ತೊಗಲಿನ ವ್ಯಾಪಾರವು ವಿಶೇಷವಾಗಿ ನಡೆವುದು; ಅಲ್ಜೀರಿಯದ ನಾರ್ಥಾಂಪ್ಟನ್ ಎನಿಸಿಕೊಂಡಿದೆ.

ಟ್ಯೂನಿಸ್ ದೇಶ.

6. ವಿಸ್ತೀರ್ಣ ಮುಂತಾದುವು.—ವಿಸ್ತೀರ್ಣವು ಸುಮಾರು ೫೧,೦೦೦ ಚ. ಮೈ. ಜನ ಸಂಖ್ಯೆ ಸುಮಾರು ೨೧,೦೧,೦೦೦. ರಾಜಧಾನಿ ಟ್ಯೂನಿಸ್. ಈ ದೇಶವು ಕ್ರಿ. ಶ. ೧೮೮೧ ರಿಂದ ಈಚೆಗೆ ಫ್ರೆಂಚರ ರಕ್ಷಣೆಯಲ್ಲಿದೆ.

ಇದು ಚೆನ್ನಾಗಿ ವ್ಯವಸಾಯ ನಡೆವ ದೇಶ; ಆಲಿವ್ ಎಣ್ಣೆ, ಗೋಧಿ, ಮತ್ತು ಆಲ್ಫ ಎಂಬ ಹುಲ್ಲು ವಿಶೇಷವಾಗಿ ರಫ್ತಾಗುವುವು.

7. ದೊಡ್ಡ ಪಟ್ಟಣಗಳು.—(೧) ಟ್ಯೂನಿಸ್. ರಾಜಧಾನಿ; ರೇಷ್ಮೆಯ ಮತ್ತು ಉಣ್ಣೆಯ ಬಟ್ಟೆಗಳು ತಯಾರಾಗುವ ಸ್ಥಳ; ಮಹಮ್ಮದೀಯರ ನಾಗರಿಕತೆಗೆ ಮುಖ್ಯವಾದ ಪಟ್ಟಣ. ಇದಕ್ಕೆ ಆಗ್ನೇಯದಲ್ಲಿ ಸುಮಾರು ೧೦ ಮೈಲಿಯ ದೂರದಲ್ಲಿ ಕ್ರಿ. ಶ. ಕ್ಕೆ ಮುಂಚೆ ಮೂರನೆಯ ಶತಮಾನದಲ್ಲಿ ಲೋಕಪ್ರಸಿದ್ಧವಾಗಿದ್ದ ಕಾರ್ಥೇಜ್ ಪಟ್ಟಣದ ಪಾಳು ನೆಲವು ಇರುವುದು. (೨) ಕೈರ್ವಾನ್ ಪಟ್ಟಣವು ಮಹಮ್ಮದೀಯರ ಯಾತ್ರಾ ಸ್ಥಳ; ಈ ಪಟ್ಟಣದಲ್ಲಿ ೭ ದಿವಸವಿದ್ದರೆ ಮಕ್ಕದಲ್ಲಿ ಒಂದು ದಿವಸ ವಾಸಮಾಡಿದಷ್ಟು ಪುಣ್ಯ ಪ್ರಾಪ್ತಿಯಾಗುವುದೆಂದು ಹೇಳಿಕೆಯುಂಟು.

ಟ್ರಿಪೋಲಿ ದೇಶ.

8. ವಿಸ್ತೀರ್ಣ ಮುಂತಾದುವು.—ವಿಸ್ತೀರ್ಣದಲ್ಲಿ ೪,೦೦,೦೦೦ ಚ. ಮೈಲಿಯಷ್ಟು ಇದೆ. ಜನ ಸಂಖ್ಯೆ ಸುಮಾರು ೧೩,೦೧,೦೦೦. ರಾಜಧಾನಿ ಟ್ರಿಪೋಲಿ. ಈ ದೇಶವು ತುರ್ಕಿಯ ಚಕ್ರಾಧಿಪತ್ಯಕ್ಕೆ ಸೇರಿದೆ.

ಬಾರ್ಕ ಮತ್ತು ಫೆಜ್ಜಾನ್ ಎಂಬುವು ಈ ದೇಶಕ್ಕೆ ಸೇರಿವೆ. ಈ ದೇಶದ ನೆಲದಲ್ಲಿ ಕ್ವಚಿದ್ಭಾಗ ಮಾತ್ರ ವ್ಯವಸಾಯಕ್ಕೆ ಯೋಗ್ಯವಾಗಿದೆ; ಉಳಿದ ಭಾಗವು ಮರುಭೂಮಿ; ಮಳೆ ಹೊಯ್ಯುವುದು ಕಡಿಮೆ; ಇಬ್ಬನಿ ಬಹಳ ಹೆಚ್ಚಾಗಿ ಬೀಳುವುದರಿಂದ ಪೈರುಗಳಿಗೆ ಸ್ವಲ್ಪ ಅನುಕೂಲವುಂಟಾಗುವುದು. ಅಗ್ನಿಪಕ್ಷಿಯ ಗರಿಗಳು, ಆಲ್ಫ ಎಂಬ ಹುಲ್ಲು, ಮತ್ತು ಗೋಧಿ ಇವು ರಫ್ತಾಗುತ್ತವೆ.

9. ದೊಡ್ಡ ಪಟ್ಟಣಗಳು.—(೧) ಟ್ರಿಪೋಲಿ. ೮೦೦ ಮೈಲಿಯಷ್ಟು ಉದ್ದವಿರುವ ಈ ದೇಶದ ತೀರದಲ್ಲಿ ಒಂದೊಂದೇ ರೇವೆ ಪಟ್ಟಣವಿದೆ. ಈ ಪಟ್ಟಣದಿಂದ ವರುಷಕ್ಕೆ ೮ ಕಾರವಾನುಗಳು ಹೊರಡುವುವು; ಇವುಗಳಲ್ಲಿ ೧,೦೦೦ ದಿಂದ

೨,೦೦೦ದ ವರೆಗೂ ಒಂಟೆಗಳಿರುತ್ತವೆ; ಮತ್ತು ನೂರಾರು ಜನ ಅರಬ್ಬೀಯರು ಆಯುಧ ಪಾಣಿಗಳಾಗಿ ಇವುಗಳ ರಕ್ಷಣಾರ್ಥವಾಗಿ ಜತೆಯಲ್ಲಿ ಹೋಗುವರು. ಇವು ಮರ್ಜೂಕ್ ಮಾರ್ಗವಾಗಿ ಮಡ್ಡೈ, ಬೋರ್ನು, ಹೌಸ್ಸ ಎಂಬುವುಗಳನ್ನು ದಾಟಿ ಟಿಂಬಕ್ಟುವಿಗೆ ಹೋಗುತ್ತವೆ; ಈ ವರ್ತಕರು ದಾರಿಯಲ್ಲಿ ಯೂರೋಪ್ ಖಂಡದ ಕೈಗಾರಿಕೆಯ ಸಾಮಾನುಗಳನ್ನು ಮಾರಿ, ಅಗ್ನಿಪಕ್ಷಿ ಗರಿ, ದಂತ, ಚಿನ್ನದ ಧೂಳಿ, ಮತ್ತು ಗುಲಾಮರನ್ನು ಕೊಂಡುತರುವರು. (೨) ಮರ್ಜೂಕ್. ಇದು ಫೆಸಾನಿನಲ್ಲಿ ಮುಖ್ಯ ಪಟ್ಟಣ. ಅಲ್ಲಿಂದ ಕಾರವಾನುಗಳು ಕೈರೊ, ಬೋರ್ನು, ಮತ್ತು ಆಷಾಂಟಿಗಳ ಕಡೆಗೆ ಹೋಗುವುವು; ~~ವರುಷಕ್ಕೆ ಒಂದಾವೃತ್ತಿ ಗುಲಾಮರನ್ನು ಮಾರುವುದಕ್ಕೆ ಒಂದು ದೊಡ್ಡ ಸಂತೆಯಾಗುತ್ತದೆ~~; ಸುಮಾರು ನಾಲ್ಕು ಸಾಸಿರ ಗುಲಾಮರನ್ನು ಮಾರುತ್ತಾರೆ; ಕಾರ್ವಾನ್ ದಾರಿಗಳಲ್ಲಿ ಮೃತಪಟ್ಟ ಗುಲಾಮರ ಮೂಳೆಗಳು ದಾರಿಗೆ ಗುರುತಾಗಿ ಬಿದ್ದಿರುವುವು. (೩) ಬೆಂಘಾಸಿ ಸಮುದ್ರ ತೀರದಲ್ಲಿದೆ, ಬಾರ್ಕ್‌ದಲ್ಲಿ ಮುಖ್ಯ ಪಟ್ಟಣ.

ಸೌಡಾನ್ ಅಥವಾ ನೀಗ್ರೋದೇಶ.

1. ದೇಶದ ವರ್ಣನೆ.—ಸೌಡಾನ್ ದೇಶವು ಸಹರಕ್ಕೆ ದಕ್ಷಿಣದಲ್ಲಿ ಸೆನಿಗಾಂಬಿಯದಿಂದ ಅಬಿಸೀನಿಯಾ ದೇಶದವರೆಗೂ ಪ್ರಸರಿಸಿದೆ. ಪಶ್ಚಿಮಭಾಗವೂ ದಕ್ಷಿಣ ಭಾಗವೂ ಬೆಟ್ಟಗಳಿಂದ ಕೂಡಿವೆ. ಪಶ್ಚಿಮಾರ್ಧದಲ್ಲಿ ನೈಜರ್ ಮತ್ತು ಅದರ ಉಪ ನದಿಗಳಿರುವುವು. ಪೂರ್ವಭಾಗದಲ್ಲಿ ಚಾಡ್ ಸರೋವರಕ್ಕೆ ಬರುವ ಹೊಳೆಗಳಿರುವುವು. ನೆಲವು ಫಲವತ್ತಾಗಿದೆ; ವ್ಯವಸಾಯವು ಚೆನ್ನಾಗಿ ನಡೆಯುತ್ತಿದೆ. ಕೆಳಗಣ ಸೌಡಾನಿನಲ್ಲಿ ಅಗಾಧವಾದ ಕಾಡುಗಳಿರುವುವು. ನೀಗ್ರೋ ಜನರೂ ಫೆಲ್ಲಟರೂ ವಾಸವಾಗಿದ್ದಾರೆ; ಫೆಲ್ಲಟರು ಮೂರ್ ಜನರಿಂದ ಹುಟ್ಟಿದವರು, ನೀಗ್ರೋ ಜನಕ್ಕಿಂತ ಬಲಶಾಲಿಗಳಾಗಿಯೂ ಕಷ್ಟಪಟ್ಟು ಕೆಲಸ ಮಾಡುವವರಾಗಿಯೂ ಇದ್ದಾರೆ. ನೀಗ್ರೋಜನರು ಬಹು ಮಟ್ಟಿಗೆ ಇವರಿಗೆ ವಿಧೇಯರಾಗಿರುವರು. ಗುಲಾಮರನ್ನು ಹಿಡಿದು ತರುವುದಕ್ಕಾಗಿ ಯುದ್ಧಗಳು ಪದೇಪದೇ ನಡೆಯುತ್ತಿರುವುವು.

2. ರಾಜ್ಯಗಳು.—ಮುಖ್ಯವಾದ ರಾಜ್ಯಗಳು ನೈಜರ್ ನದಿಯ ಆದಿಭಾಗದಲ್ಲಿ ಬೊಂಬಾರಾ ಮತ್ತು ಟಿಂಬಕ್ಟು; ಮಧ್ಯಭಾಗದಲ್ಲಿ ಗಾಂಡೋರಾಜ್ಯ; ಗಾಂಡೋವಿಗೆ ಪೂರ್ವದಲ್ಲಿ ಸೊಕೋಟೋ, ಚಾಡ್‌ಸರೋವರಕ್ಕೆ ನೈರುತ್ಯದಲ್ಲಿ

ಬಾರ್ನು, ಆಗ್ನೇಯದಲ್ಲಿ ಬೇಗರ್ಮಿ, ಉತ್ತರದಲ್ಲಿ ಕಾನೆಮ್, ಪೂರ್ವದಲ್ಲಿ ವಾಡೈ. ಕೊನೆಯ ಮೂರು ರಾಜ್ಯಗಳು ಮಾತ್ರ ಒಬ್ಬ ನೀಗ್ರೋ ಸ್ವತಂತ್ರಸುಲ್ತಾನನ ಅಧಿಕಾರಕ್ಕೊಳಪಟ್ಟಿವೆ. ಸೂಡಾನಿನ ಮಿಕ್ಕ ಭಾಗಗಳೆಲ್ಲ ಫ್ರೆಂಚರ ಮತ್ತು ಬ್ರಿಟಿಷರ ರಾಜ್ಯಗಳಿಗೆ ಸೇರಿಹೋಗಿವೆ. ಫ್ರೆಂಚ್‌ರಾಜ್ಯವು ಆಲ್ಜೀರಿಯದಿಂದ ನೈಜರ್‌ನದಿಯವರೆಗೂ ವಿಸ್ತರಿಸಿದೆ. ನೈಜೀರಿಯವೂ ವಾಡೈಗೆ ಪಶ್ಚಿಮದಲ್ಲಿರುವ ಈಜಿಪ್ಷ್ಯ ಸೂಡಾನವೂ ಬ್ರಿಟಿಷರಿಗೆ ಸೇರಿವೆ.

3. ಪಟ್ಟಣಗಳು.—(೧) ಸೇಗೋ ಎಂಬುದು ಬೊಂಬಾರಕ್ಕೆ ರಾಜಧಾನಿ. (೨) ಟಿಂಬಕ್ಟು—ಇದು ನೈಜರ ಬಳಿಯಲ್ಲಿದೆ. ಇದು ಉತ್ತರದಿಂದ ಕಾರವಾನೆರು ಬಂದು ಸೇರುವ ಸ್ಥಳ. ಇಲ್ಲಿ ವ್ಯಾಪಾರವು ವಿಶೇಷವಾಗಿದೆ.

ಪಶ್ಚಿಮ ಆಫ್ರಿಕ.

1. ಭೂಸ್ವರೂಪ ಮುಂತಾದುವು.—ಸೂಡಾನ್ ದೇಶಕ್ಕೂ ಪಶ್ಚಿಮ ಆಫ್ರಿಕಕ್ಕೂ ಮಧ್ಯದಲ್ಲಿ ಕಾಂಗ್‌ಪರ್ವತಗಳಿವೆ. ಸಮುದ್ರತೀರದಲ್ಲಿ ಸಾಮಾನ್ಯವಾಗಿ ವಿಸ್ತಾರವಾದ ತಗ್ಗುಪ್ರದೇಶಗಳಿವೆ; ಸೀರಾಲಿಯೋನ್ (ಸಿಂಹಪರ್ವತ) ಮುಂತಾದ ಕೆಲವೆಡೆಗಳಲ್ಲಿ ಮಾತ್ರ ಪರ್ವತಪಙ್ಕ್ತಿಗಳು ಸಮುದ್ರದ ಪಕ್ಕದವರೆಗೂ ವಿಸ್ತರಿಸಿಕೊಂಡಿವೆ. ಬಿಯಾಫ್ರಾ ಕೊಲ್ಲಿಯಲ್ಲಿರುವ ಫರ್ನಾಂಡೋಪೊ ದ್ವೀಪಕ್ಕೆ ಇದಿರಿನಲ್ಲಿ ಕಾಮರೂನ್ ಎಂಬ ಉನ್ನತವಾದ ಪರ್ವತಶ್ರೇಣಿಯಿದೆ. ಹಿಂದೆಯೇ ಹೇಳಿರುವ ನದಿಗಳಲ್ಲದೆ ಸಿನಿಗಾಲ್, ಗಾಂಬಿಯ ಮುಂತಾದುವುಗಳು ದಟ್ಟವಾದ ಕಾಡುಗಳ ಮಧ್ಯದಲ್ಲಿ ಹರಿಯುತ್ತವೆ.

2. ವಾಯುಗುಣ ಮತ್ತು ಉತ್ಪತ್ತಿ.—ವಾಯುಗುಣವು ಬಹು ಉಷ್ಣ. ಗಿನಿ ಸಮುದ್ರಶಾಖೆಗೆ ಉತ್ತರದಲ್ಲಿ ಮಳೆ ವಿಶೇಷ, ಸಸ್ಯಸಮೃದ್ಧಿ ಅತಿಪ್ರಬಲ. ಇಲ್ಲಿನ ವಾಯು ಯೂರೋಪಿಯನರಿಗೆ ಬಹು ಅನಾರೋಗ್ಯಕರವಾದುದರಿಂದ ಪಶ್ಚಿಮ ಆಫ್ರಿಕಕ್ಕೆ “ಬಿಳಿಯಜನರ ಗೋರಿ” ಎಂಬ ಪ್ರತೀತಿಯುಂಟಾಗಿದೆ. ಜೂನ್ ತಿಂಗಳಿಂದ ಅಕ್ಟೋಬರ್‌ವರೆಗೆ ಮಳೆ ಹೊಯ್ಯುತ್ತದೆ. ಗೆಡ್ಡೆ ಗೆಣಸುಗಳು, ಬಾಳೆ, ಜೋಳ, ನವಣೆ, ಸಾವೆ ಮುಂತಾದುವು, ನೀಲಿ, ಮೆಣಸು ಮೊದಲಾದುವು ಬೆಳೆಯಾಗುತ್ತವೆ. ಪಾಮ್ ಆಯಿಲ್, ಎಣ್ಣೆ ಬೀಜಗಳು, ದಂತ, ಇವು ಇಲ್ಲಿಂದ ಹೊರಕ್ಕೆ ಸಾಗುತ್ತವೆ. ಹತ್ತಿ ಬಟ್ಟೆಗಳು ಹೊರಗಣಿಂದ ಬರುತ್ತವೆ.

3. ದೇಶವಿಭಾಗಗಳು.—ಮೊರಾಕೋವಿನಿಂದ ಹಿಡಿದು ಈ ಖಂಡದ ದಕ್ಷಿಣಾಂತದವರೆಗೂ ಇರುವ ತೀರಪ್ರದೇಶಗಳೆಲ್ಲ ಹಲವು ಯೂರೋಪ್ ದೇಶೀಯರಿಗೆ

ಸೇರಿವೆ. ಗಿನಿ ಸಮುದ್ರ ಶಾಖೆಗೆ ವಾಯವ್ಯದಲ್ಲಿ ಒಂದು ಸಣ್ಣರಾಜ್ಯ ಮಾತ್ರ ಸ್ವತಂತ್ರ ನೀಗ್ರೋ ರಾಜ್ಯವಾಗಿದೆ.

4. ಸ್ಪ್ಯಾನಿಷ್ ಆಶ್ರಿತ ಸಂಸ್ಥಾನ.—ಸಮುದ್ರತೀರದಲ್ಲಿ ಮೊರಾಕೋವಿನಿಂದ ಬ್ಲಾಂಕೋ ಭೂಶಿರದವರೆಗೆ ಇದೆ. ಒಳಗಡೆಗೆ ಸಹರದವರೆಗೆ ವಿಸ್ತರಿಸಿದೆ. ಮಧ್ಯಭಾಗವೆಲ್ಲ ಫಲವತ್ತಲ್ಲದ ಕಗ್ಗಲ್ಲಿನ ಮೈದಾನವಾಗಿದೆ. ರಯೋಡಿ ಓರೋ ಎಂಬುದು ಮುಖ್ಯಸ್ಥಾನವಾಗಿದೆ.

5. ಸೆನಿಗಾಂಬಿಯು.—ಇದು ಫ್ರೆಂಚರ ವಿಚಾರಣೆಯಲ್ಲಿದೆ. ಗೋಂದು ಹೆಚ್ಚಾಗಿ ರಫ್ತಾಗುವುದು. ಗೋರೆ ಮತ್ತು ಸೆಂಟಲೂಯಿ ಎಂಬುವು ಫ್ರೆಂಚರಿಗೆ, ಬೇಥರ್ಸ್ಟ ಎಂಬುದು ಇಂಗ್ಲಿಷರಿಗೆ ಸೇರಿವೆ.

6. ಮೇಲಣ ಗಿನಿ (Upper Guinea) ಇದರಲ್ಲಿ ಸಿರಾಲಿಯೋನ್, ಲೈಬೀರಿಯು, ಐವರಿಕೋಸ್ಟ್, (ದಂತದ ತೀರ), ಗೋಲ್ಡ್ ಕೋಸ್ಟ್ (ಚಿನ್ನದ ತೀರ), ಆಷಾಂಟಿ, ದಾಹೋಮಿ, ಯೊರಬರದೇಶ, ಲೇಗಾಸ್, ಮತ್ತು ಕಾಮರೂನ್ ತೀರ ಎಂಬುವು ಸೇರಿವೆ. ಮುಖ್ಯವಾಗಿ ರಫ್ತಾಗುವ ಪದಾರ್ಥ ಪಾಮಾಯಿಲ್.

(೧) ಸೀರಾಲಿಯೋನ್.—ಬ್ರಿಟಿಷರಿಗೆ ಸೇರಿದೆ; ಫ್ರೀಟೌನ್ ಎಂಬುದು ಮುಖ್ಯಪಟ್ಟಣ. (೨) ಲೈಬೀರಿಯಕ್ಕೆ ಮನ್ರೋವಿಯ ಎಂಬುದು ರಾಜಧಾನಿ. ಅಮೆರಿಕದ ಸಂಯುಕ್ತ ಸಂಸ್ಥಾನಗಳಲ್ಲಿದ್ದ ನೀಗ್ರೋ ಗುಲಾಮರು ಸ್ವಾತಂತ್ರ್ಯವನ್ನು ಹೊಂದಿದಾಗ ಇದು ಸ್ಥಾಪಿತವಾಯಿತು; ಪ್ರಜಾಪ್ರತಿನಿಧಿ ಪ್ರಭುತ್ವವು ನೆಲೆಗೊಂಡಿದೆ. (೩) ಐವರಿ ಕೋಸ್ಟ್ ಲೈಬೀರಿಯಕ್ಕೆ ಪೂರ್ವದಲ್ಲಿದೆ, ಫ್ರೆಂಚರಿಗೆ ಸೇರಿದೆ. ಗೋಲ್ಡ್ ಕೋಸ್ಟ್ ಬ್ರಿಟಿಷರಿಗೆ ಸೇರಿದೆ; ಕೇಪ್‌ಕೋಸ್ಟ್‌ಕ್ಯಾಸಲ್ ಮತ್ತು ಎಲ್ಮೀನ ಎಂಬುವು ಮುಖ್ಯಪಟ್ಟಣಗಳು. (೪) ಆಷಾಂಟಿ ಒಂದು ನೀಗ್ರೋ ಸಂಸ್ಥಾನವಾಗಿದ್ದಿತು; ಈಗ ಬ್ರಿಟಿಷರಿಗೆ ಸೇರಿದೆ; ಕುಮಾಸಿ ಎಂಬುದು ರಾಜಧಾನಿ. (೫) ಯೊರಬದೇಶ.—ಅಬ್ಬಿಯೊಕೂಟವೆಂಬುದು ಇದರ ಮುಖ್ಯಪಟ್ಟಣ. (೬) ದಾಹೋಮಿ.—ಇದು ನೀಗ್ರೋ ಸಂಸ್ಥಾನವಾಗಿದ್ದು ಈಚೆಗೆ ಫ್ರೆಂಚರಿಗೆ ಸೇರಿಹೋಗಿದೆ. (೭) ಲೇಗಾಸ್ ಪಟ್ಟಣವು ಬ್ರಿಟಿಷರಿಗೆ ಸೇರಿದೆ. ಲೇಗಾಸಿನಿಂದ ಕಾಮರೂನ್ ಪರ್ವತದ ವರೆಗೂ ಇರುವ ತೀರಪ್ರದೇಶವು ಬ್ರಿಟಿಷರ ಪೋಷಣೆಯಲ್ಲಿದೆ. (೮) ಟೋಗೋಲ್ಯಾಂಡ್ ಮತ್ತು ಕಾಮರೂನ್ ತೀರವು ಜರ್ಮನಿಗೆ ಸೇರಿರುವುವು.

7. ಕೆಳಗಣ ಗಿನಿ (Lower Guinea).—ಇದರಲ್ಲಿ ಫ್ರೆಂಚ್ ಕಾಂಗೋದೇಶ, ಕಾಂಗೋಪಟ್ಟಣ, ಅಂಗೋಲ, ಲೊವಾಂಡ, ಬೆಂಗ್ವೇಲ ಮುಂತಾದುವು ಸೇರಿವೆ.

(೧) ಫ್ರೆಂಚ್ ಕಾಂಗೋದೇಶ.—ಇದರಲ್ಲಿ ಗೆಬೂನ್ ಮತ್ತು ಬಗೋಮೈ ಸೀಮೆಗಳು ಸೇರಿವೆ. (೨) ಅಂಗೋಲ, ಲೊವಾಂಡ, ಬೆಂಗ್ವೇಲ ಮುಂತಾ

ದುವು—ಎಂದರೆ ಆಂಬ್ರಿಸ್ ಪಟ್ಟಣದಿಂದ ಫ್ರಿಯೋ ಭೂಶಿರದವರೆಗೆ ಇರುವ ಪ್ರದೇಶವೂ, ಕಾಂಗೋ ನದೀಮುಖದ ದಕ್ಷಿಣದಲ್ಲಿರುವ ಕಾಂಗೋ ಪಟ್ಟಣವೂ, ಪೋರ್ಚುಗೀಸರಿಗೆ ಸೇರಿರುವುವು.

8. ಕಾಂಗೊಫ್ರೀಸ್ಟೇಟ್.—ವಿಸ್ತೀರ್ಣದಲ್ಲಿ ಇದು ಇಂಡಿಯಾದೇಶದ ಅರ್ಧದಷ್ಟು ಇದೆ. ಕಾಂಗೋನದಿಯ ಜಲಾನಯನಭೂಮಿಯನ್ನು ಇದು ಒಳಕೊಂಡಿದೆಯೆಂದು ಹೇಳಬಹುದು. ಮಳೆ ಬೆಳೆಗಳು ಬಹು ಚೆನ್ನಾಗಿ ಆಗುತ್ತವೆ; ಅಗಾಧವಾದ ಕಾಡುಗಳಿರುವುವು. ಈಗ ಸುಮಾರು ೩,೦೦,೦೦,೦೦೦ ನಿವಾಸಿಗಳಿದ್ದಾರೆ.

ಈ ದೇಶವು ಹೊಸದಾಗಿ ಆಯಿತು. ಈ ದೇಶವನ್ನು ಉತ್ತಮಸ್ಥಿತಿಗೆ ತರುವುದಕ್ಕೆ "ಇಂಟರ್ನ್ಯಾಷನಲ್ ಆಫ್ರಿಕನ್ ಅಸೋಸಿಯೇಷನ್" ಎಂಬ ಒಂದು ಸಂಘವು ಏರ್ಪಾಡಾಗಿದೆ; ಈ ಸಂಘದ ಅಗ್ರಾಸನಾಧಿಪತಿ ಬೆಲ್ಜಿಯಂ ದೇಶದ ದೊರೆ; ಈತನ ವಿಚಾರಣೆಯಲ್ಲಿ ಇದು ಇರುವುದು. ಸಕಲ ಜನಾಂಗದವರೂ ಇಲ್ಲಿ ವ್ಯಾಪಾರ ಮಾಡಬಹುದೆಂದು ವ್ಯವಸ್ಥೆಯಾಗಿದೆ. ಪಾಮಾಯಿಲ್, ರಬ್ಬರ್, ದಂತ, ಗೋಂದು ಮುಂತಾದುವು ರಫ್ತಾಗುತ್ತವೆ; ಆಮದಾಗುವ ಪದಾರ್ಥಗಳು ಯಾವುವೆಂದರೆ:—ಹತ್ತಿಯಬಟ್ಟೆ, ತುಪಾಕಿ, ತುಪಾಕಿಯ ಮದ್ದು, ಮದ್ಯಗಳು ಮತ್ತು ಹೊಗೆಯುಸೊಪ್ಪು. ಬೋಮ ಮುಖ್ಯಸ್ಥಳ.

9. ಜರ್ಮನ್ ನೈರುತ್ಯ ಆಫ್ರಿಕ.—ಇದು ಅಂಗೋಲಕ್ಕೂ ಕೇಪ್‌ಕಾಲೊನಿಗೂ ಮಧ್ಯದಲ್ಲಿದೆ. ಇದರಲ್ಲಿ ಡಮಾರಾನಾಡೂ, ದೊಡ್ಡ ನಮಾಕ್ವಾನಾಡೂ ಸೇರಿಹೋಗಿವೆ. ದೇಶವೆಲ್ಲ ಬರಿಯ ಕಾಡು. ವಾಲ್‌ಫಿಷ್‌ಕೊಲ್ಲಿಯು ಬ್ರಿಟನ್ನಿಗೆ ಸೇರಿದೆ.

ಬ್ರಿಟಿಷ್ ದಕ್ಷಿಣ ಆಫ್ರಿಕ.

1. ಭೂಸ್ವರೂಪ.—ದಕ್ಷಿಣ ಆಫ್ರಿಕದಲ್ಲಿ ಮುಖ್ಯವಾಗಿ ಮೈದಾನಗಳೂ ಪ್ರಸ್ಥಭೂಮಿಗಳೇ ಹೆಚ್ಚಾಗಿವೆ. ದಕ್ಷಿಣದಲ್ಲಿಯೂ ಪೂರ್ವದಲ್ಲಿಯೂ ಪರ್ವತಪಙ್ಕ್ತಿಗಳಿವೆ. ಸಮುದ್ರತೀರದಿಂದ ಮೇಲಕ್ಕೆ ಹೊರಟರೆ ನೆಲವು ಮೂರು ಅಂತಸ್ತುಗಳಾಗಿ ಏರುತ್ತಾ ಬರುವಂತೆ ಕಾಣಬರುವುದು. ಈ ಅಂತಸ್ತುಗಳ ಕೊನೆಗಳೇ ಪರ್ವತಪಙ್ಕ್ತಿಗಳು. ಸಮುದ್ರತೀರದಲ್ಲಿ ದಕ್ಷಿಣದಲ್ಲಿಯೂ ಪೂರ್ವದಲ್ಲಿಯೂ ಅನೇಕ ಫಲವತ್ತಾದ ಪ್ರದೇಶಗಳಿರುವುವು. ಈ ಫಲಕಾರಿಯಾದ ಮೊದಲನೆಯ ಅಂತಸ್ತು ಉತ್ತರಕ್ಕೆ ಸ್ವಾರ್ಟ್‌ಬರ್ಗ್ ಪರ್ವತಶ್ರೇಣಿಯವರೆಗೆ ಇರುವುದು. ಅಲ್ಲಿಂದ ಎರಡ

ನೆಯ ಅಂತಸ್ತು ಮೊದಲಾಗಿ ಮೇಲಕ್ಕೆ ೪,೦೦೦ ಅಡಿ ಎತ್ತರವಾದ ನ್ಯೂವೆಲ್ಡ್ ಪರ್ವತದವರೆಗೆ ವಿಸ್ತರಿಸಿದೆ; ಈ ಮಧ್ಯಪ್ರದೇಶದಲ್ಲಿ ತುಪ್ಪಟವು ವಿಶೇಷವಾಗಿ ಉತ್ಪತ್ತಿಯಾಗುತ್ತದೆ. ನ್ಯೂವೆಲ್ಡ್ ಪರ್ವತವೇ ಈಶಾನ್ಯಕ್ಕೆ ಹಬ್ಬಿಕೊಂಡು ಅಲ್ಲಿ ೧೧,೦೦೦ ಅಡಿ ಎತ್ತರಕ್ಕೆದ್ದು ಡ್ರೇರ್ಕ್‌ಬರ್ಗ್ ಪರ್ವತವೆಂಬ ಹೆಸರನ್ನು ಪಡೆದಿದೆ. ಈ ಶ್ರೇಣಿಯಿಂದಾಚೆಗೆ ಮೂರನೆಯ ಅಂತಸ್ತು ಮೊದಲಾಗಿ ಆರೆಂಜ್‌ನದಿಯ ಬಳಿ ಇಳಿಜಾರಾಗಿದೆ. ಇದರಿಂದಾಚೆಯಲ್ಲಿ ಉತ್ತರದಕಡೆ ೧,೦೦೦ ಮೈಲುಗಳವರೆಗೆ ಕಲಹರಿ ಡೆಸರ್ಟ್ ಎಂಬ ಬೆಂಗಾಡಿರುತ್ತದೆ. ಮೇಲೆ ಹೇಳಿದ ಅಂತಸ್ತುಗಳಿಗೆ ಕಾರ್ರುಗಳೆಂದು ಹೆಸರು. ಇವೆಲ್ಲ ದೇಶದೊಳಗಡೆಗೆ ಇಳಿಜಾರಾಗಿವೆ. ಎರಡನೆಯ ಅಂತಸ್ತಿನಲ್ಲಿರುವ ಮಹಾಕಾರ್ರು ಎಂಬುದು ೬೦ ರಿಂದ ೭೦ ಮೈಲು ಅಗಲವಾಗಿದೆ

ನದಿಗಳು ಸಾಮಾನ್ಯವಾಗಿ ಆಯಾ ಅಂತಸ್ತುಗಳ ಅಂಚಿನಲ್ಲಿರುವ ಬೆಟ್ಟಗಳ ದೊಡ್ಡ ಕೊರಕಲುಗಳಲ್ಲಿ ಹಾಯ್ದು ಸಮುದ್ರಕ್ಕೆ ಹೋಗಿ ಸೇರುತ್ತವೆ. ಇಲ್ಲಿ ಹರಿಯುವ ದೊಡ್ಡ ನದಿಗಳು ಮೂರು. (೧) ಆರೆಂಜ್‌ನದಿಯು ಡ್ರೇರ್ಕ್‌ಬರ್ಗ್ ಪರ್ವತದಿಂದ ಪಶ್ಚಿಮಕ್ಕೆ 1,000 ಮೈಲಿಯ ವರೆಗೆ ಹರಿದು ಅಟ್ಲಾಂಟಿಕ್ ಸಾಗರಕ್ಕೆ ಬೀಳುತ್ತದೆ. ಇದರ ಉಪನದಿ ವಾಲ್ ಎಂಬುದು. (೨) ಲಿಂಪೋಪೋ ನದಿಯು ಟ್ರಾನ್ಸ್‌ವಾಲಿನಿಂದ ಹೊರಟು ವಕ್ರಾಕಾರವಾಗಿ ೧,೦೦೦ ಮೈಲಿ ಹರಿದು ಹಿಂದು ಸಾಗರಕ್ಕೆ ಬೀಳುತ್ತದೆ. (೩) ಝಾಂಬೆಸಿ ನದಿಯು ಡಿಲೋಲೋ ಸರೋವರದಲ್ಲಿ ಹುಟ್ಟಿ ಬ್ರಿಟಿಷ್ ದಕ್ಷಿಣ ಆಫ್ರಿಕವನ್ನೂ ಪೋರ್ಚುಗೀಸರ ಪೂರ್ವ ಆಫ್ರಿಕವನ್ನೂ ಬಳಸಿಕೊಂಡು ಹಿಂದೂಸಾಗರಕ್ಕೆ ಹೋಗಿ ಸೇರುತ್ತದೆ. ಇದರ ಉದ್ದ ೩,೦೦೦ ಮೈಲಿ.

2. ವಾಯುಗುಣ.—ಉತ್ತರದಲ್ಲಿಯೂ ಪಶ್ಚಿಮದಲ್ಲಿಯೂ ವಾಯುಗುಣವು ಉಷ್ಣವಾಗಿರುತ್ತದೆ. ದಕ್ಷಿಣದಲ್ಲಿ ಸಮಶೀತೋಷ್ಣವಾಗಿಯೂ ಆರೋಗ್ಯವಾಗಿಯೂ ಇದೆ. ಡಿಸೆಂಬರ್ ಜನವರಿ ತಿಂಗಳುಗಳಲ್ಲಿ ಸೆಕೆ ಹೆಚ್ಚು, ಜೂನ್ ಜುಲೈಗಳಲ್ಲಿ ಚಳಿ ಹೆಚ್ಚು.

3. ಉತ್ಪತ್ತಿ ಮತ್ತು ವ್ಯಾಪಾರ.—ಆರೆಂಜ್ ನದಿಯ ಹರಿವೆಡೆಗಳಲ್ಲಿ ವಜ್ರಗಳು ಸಿಕ್ಕುತ್ತವೆ. ಟ್ರಾನ್ಸ್‌ವಾಲಿನಲ್ಲಿ ಚಿನ್ನದ ಗಣಿಗಳು ವಿಸ್ತಾರವಾಗಿವೆ. ಹತ್ತು ವರ್ಷಗಳಿಂದ ಚಿನ್ನ ತೆಗೆಯುತ್ತಿದಾರೆ. ಗೋದುವೆ, ಬಾರ್ಲಿ, ಓಟ್ಸು, ದ್ರಾಕ್ಷೆ ಇವು ಬೆಳೆಯಾಗುತ್ತವೆ. ದನ, ಕುರಿ, ಕುದುರೆಗಳನ್ನೂ ಅಗ್ನಿಪಕ್ಷಿಗಳನ್ನೂ ಸಾಕುತ್ತಾರೆ, ಉಣೆ, ವಜ್ರಗಳು, ಚಿನ್ನ, ಚರ್ಮ, ಅಗ್ನಿಪಕ್ಷಿಯ ರಕ್ಕೆಗಳು, ತಾಮ್ರ, ಇವು ಹೊರಕ್ಕೆ ರಫ್ತಾಗುತ್ತವೆ. ಹೊರಗಣಿಂದ ಬರತಕ್ಕುವು ಬಟ್ಟೆಗಳು, ಲೋಹಗಳು.

4. ಜನರು.—ಇಲ್ಲಿನ ದೇಶೀಯ ನಿವಾಸಿಗಳೆಲ್ಲರೂ ಬಾಂಟು ವಂಶಕ್ಕೆ ಸೇರಿದವರು. ಇವರಲ್ಲಿ ಕಾಫಿರರೂ ಝೂಲೂಗಳೂ ಕಾಯಶಕ್ತಿಯುಳ್ಳವರು, ಯುದ್ಧಾ

ಸಕ್ತರು. ಬಸೂಟೋಗಳು, ಬೆಕ್ವಾನರು, ಇವರು ಬೇರೆ ಎರಡುಜಾತಿಯವರು. ಹಾಟೆಂಟಾಟರು ಪಶ್ಚಿಮದಲ್ಲಿ ವಿಶೇಷ. ಇವರು ಕಳ್ಳರಾಗಿಯೂ ವೈಗಳ್ಳರಾಗಿಯೂ, ಅಜ್ಞಾನಿಗಳಾಗಿಯೂ ರೋತೆಯ ಜನರಾಗಿಯೂ ಇದಾರೆ. ಇಲ್ಲಿ ಬಂದು ನಿಂತ ಯೂರೋಪಿಯನರಲ್ಲಿ ಡಚ್ಚರೂ ಇಂಗ್ಲಿಷರೂ ಮುಖ್ಯ.

5. ರಾಜಕೀಯ ವಿಷಯ.—ದಕ್ಷಿಣ ಆಫ್ರಿಕದಲ್ಲಿರುವ ಬ್ರಿಟಿಷ್ ವಸತಿಗಳನ್ನೆಲ್ಲ ಒಂದುಗೂಡಿಸಬೇಕೆಂಬ ಪ್ರಯತ್ನವು ನಡೆಯುತ್ತಿದೆ. ಹಾಗೆ ಒಟ್ಟುಕೂಡಿದಾಗ ರಾಜ್ಯಭಾರವು ಈ ರೀತಿಯಲ್ಲಿ ನಡೆಯತಕ್ಕುದೆಂದು ಈಗಾಗಲೇ ಗೊತ್ತುಮಾಡಿರುತ್ತಾರೆ. ಇದಕ್ಕೆ ಎಲ್ಲರೂ ಸಮ್ಮತಿಸಿರುತ್ತಾರೆ. ಹೀಗಾದಾಗ ದಕ್ಷಿಣ ಆಫ್ರಿಕಕ್ಕೆಲ್ಲ ಬ್ರಿಟಿಷ್ ಚಕ್ರಾಧಿಪತಿಯಿಂದ ನೇಮಿಸಲ್ಪಟ್ಟ ಒಬ್ಬ ಗವರ್ನರ್ ಜನರಲ್‌ರವರು ಅಧಿಪತಿಗಳಾಗುವರು. ಒಳನಾಡುಗಳಲ್ಲೆಲ್ಲ ಉಚಿತವಾದ ಏರ್ಪಾಡುಗಳು ಮಾಡಲ್ಪಡುವುವು.

6. ದೇಶವಿಭಾಗಗಳು.—ದಕ್ಷಿಣ ಆಫ್ರಿಕದಲ್ಲಿ ಕೇಪ್‌ಕಾಲೊನಿ, ನೆಟಾಲ್, ಆರೆಂಜ್ ರಿವರ್ ಕಾಲೊನಿ, ಟ್ರಾನ್ಸ್‌ವಾಲ್, ರೊಡೀಷಿಯ ಮುಂತಾದುವು ಸೇರಿರುತ್ತವೆ.

7. ಕೇಪ್‌ಕಾಲೊನಿ.—ಇದು ಆಫ್ರಿಕಾ ದಕ್ಷಿಣ ಸಮುದ್ರತೀರದಿಂದ ಹಿಡಿದು ಉತ್ತರಕ್ಕೆ ಆರೆಂಜ್ ನದಿಯವರೆಗೂ, ಅಟ್ಲಾಂಟಿಕ್ ಸಮುದ್ರದಿಂದ ಹಿಡಿದು ದೊಡ್ಡ ಕೀ ನದಿಯವರೆಗೂ ವಿಸ್ತರಿಸಿಕೊಂಡಿದೆ. ಇದರ ವಿಸ್ತೀರ್ಣವು ಸುಮಾರು ೨,೭೭,೦೦೦ ಚದರಮೈಲಿ. ಜನಸಂಖ್ಯೆ ೨೪,೦೦,೦೦೦.

8. ಉತ್ಪತ್ತಿ.—ಧಾನ್ಯ, ಹಣ್ಣು, ದ್ರಾಕ್ಷಾರಸ, ದನ, ಉಣ್ಣೆ, ಚಿನ್ನ, ವಜ್ರ, ಇವು ಮುಖ್ಯವಾದ ಉತ್ಪತ್ತಿಗಳು. ವಜ್ರಗಳು ಆರೆಂಜ್‌ನದಿಯ ಉಪನದಿಯಾದ ವಾಲ್‌ನದಿಯ ತೀರದಲ್ಲಿ ಈಚೀಚೆಗೆ ಸಿಕ್ಕಿದುವು.

9. ಕೇಪ್ ಕಾಲೊನಿಯ ಮುಖ್ಯ ಪಟ್ಟಣಗಳು.—(೧) ಕೇಪ್‌ಟೌನ್ ರಾಜಧಾನಿ. ಟೇಬಲ್‌ಪರ್ವತದ ಅಡಿಯಲ್ಲಿದೆ. (೨) ಕಿಂಬರ್ಲಿ. ವಜ್ರ ಸಿಕ್ಕುವ ಪಶ್ಚಿಮ ಗ್ರೀಕ್ವಾ ನಾಡಿನ ಮುಖ್ಯಪಟ್ಟಣ; ಸರ್ವೋತ್ಕೃಷ್ಟವಾದ ವಜ್ರಗಳು ಇಲ್ಲಿಂದ ರಫ್ತಾಗುವುವು. (೩) ಪೋರ್ಟ್ ಎಲಿಸಬೆತ್ ಹೆಚ್ಚು ವ್ಯಾಪಾರಸ್ಥಳ. ಕೇಪ್‌ಟೌನ್, ಪೋರ್ಟ್ ಎಲಿಸಬೆತ್ ಮತ್ತು ಈಸ್ಟ್ ಲಂಡನ್ ಎಂಬುವು ಮುಖ್ಯವಾದ ರೇವೆ ಪಟ್ಟಣಗಳು.

10. ಕೇಪ್ ಕಾಲೊನಿಗೆ ಸೇರಿದ ಆಶ್ರಿತ ಸಂಸ್ಥಾನಗಳು.—ಬ್ರಿಟಿಷರ ಪೋಷಣೆಯಲ್ಲಿ ಅನೇಕ ಸಂಸ್ಥಾನಗಳಿವೆ; ಇವುಗಳಲ್ಲಿ ಮುಖ್ಯವಾದುವು ಬೆಕ್ವಾನಾನಾಡು, ಪಾಂಡೋನಾಡು, ಬಸೂಟೋನಾಡು, ಜೂಲೂನಾಡಿನಲ್ಲಿ ಒಂದು ಭಾಗ.

(೧) ಬೆಕ್ವಾನಾನಾಡು.—ಬೆಕ್ವಾನರು ಪಶುಪಾಲಕರು ಮತ್ತು ವ್ಯವಸಾಯಗಾರರು, ಕಲಹರಿ ಮರುಭೂಮಿ ಇವರ ದೇಶಕ್ಕೆ ಪಶ್ಚಿಮದಲ್ಲಿದೆ. (೨)

ಪಾಂಡೋನಾಡು ಟ್ರಾನ್ಸ್ ಕೈಯಿನ ಪೂರ್ವಭಾಗ. (೪) ಬಸೂಟೋನಾಡು ನೆಟಾಲಿಗೆ ಪಶ್ಚಿಮದಲ್ಲಿದೆ ; ಧಾನ್ಯಗಳು ಬಹು ಚೆನ್ನಾಗಿ ಬೆಳೆವುವು.

11. ನೆಟಾಲ್.—ಜೂಲೂನಾಡಿಗೂ ಬಸೂಟೋನಾಡಿಗೂ ನಡುವೆ ಇದೆ. ಜೂಲೂನಾಡು 1897ರಲ್ಲಿ ಇದಕ್ಕೆ ಸೇರಿಸಲಾಯಿತು. ವಿಸ್ತೀರ್ಣ ಸುಮಾರು ೩೫,೦೦೦ ಚ. ಮೈ. ಜನ ಸಂಖ್ಯೆ ೧೧,೦೦,೦೦೦. ರಾಜಧಾನಿ ಪೀಟರ್ಮೆರಿಟ್ಸ್‌ಬರ್ಗ್, ರೇವೆ ಪಟ್ಟಣ ಡರ್ಬಾನ್. ಉತ್ತರದಲ್ಲಿ ಲೇಡಿಸ್ಮಿತ್, ಇದು ಕಳೆದ ಬೋವರ್ ಯುದ್ಧದಲ್ಲಿ ಮುತ್ತಿಗೆಗಾಗಿ ಪ್ರಸಿದ್ಧಿಗೆ ಬಂದಿತು.

ನೆಲವು ಫಲವತ್ತಾಗಿದೆ ; ಕಾಡುಗಳು ವಿಶೇಷವಾಗಿರುವುವು. ಕುರಿಯನ್ನು ಸಾಕಿ ಉಣ್ಣೆಯನ್ನು ಮಾರುವುದು ಜನರ ಮುಖ್ಯ ವೃತ್ತಿ ; ಸಕ್ಕರೆ ತಯಾರಾಗುವುದೂ ಉಂಟು. ಆರೆಂಜ್ ಫ್ರೀಸ್ಟೇಟ್ ಮತ್ತು ಸೌತ್ ಆಫ್ರಿಕ್ಕ ರಿಪಬ್ಲಿಕ್ಕಿನ ವ್ಯಾಪಾರವೂ ಈ ದೇಶದ ಮಾರ್ಗವಾಗಿಯೇ ನಡೆಯುತ್ತದೆ.

12. ಆರೆಂಜ್ ರಿವರ್ ಕಾಲೊನಿ.—ವಿಸ್ತೀರ್ಣ ೪೮,೩೦೦ ಚ. ಮೈ. ಜನ ಸಂಖ್ಯೆ ೫,೮೫,೦೦೦ ; ಇವರಲ್ಲಿ ಹಲವು ಮಂದಿ ಡಚ್ ವಂಶದವರಾಗಿದ್ದಾರೆ. ರಾಜಧಾನಿ ಬ್ಲೂಮ್‌ಫೊಂಟೀನ್ (ಕುಸುಮಪುರಿ.)

ನೆಟಾಲ್ ಬ್ರಿಟಿಷರಿಗೆ ಸೇರಿದಾಗ ೧೮೫೪ನೆಯ ಇಸವಿಯಲ್ಲಿ ಇದು ಸ್ಥಾಪಿತವಾಯಿತು. ಇದಕ್ಕೆ ಮೊದಲು ಆರೆಂಜ್ ಫ್ರೀಸ್ಟೇಟ್ ಎಂಬ ಹೆಸರಿತ್ತು. ಇದು 1899 ರಿಂದ 1902ರ ವರೆಗೆ ನಡೆದ ಬೋಅರ್ ಯುದ್ಧದಲ್ಲಿ ಟ್ರಾನ್ಸ್ವಾಲ್ ಸಂಸ್ಥಾನಕ್ಕೆ ಸಹಾಯ ಮಾಡಿದ ಪ್ರಯುಕ್ತ 1900ನೆಯ ಮೇ ತಿಂಗಳಲ್ಲಿ ಬ್ರಿಟಿಷ್ ರಾಜ್ಯಕ್ಕೆ ಸೇರಿಸಿಕೊಳ್ಳಲ್ಪಟ್ಟಿತು. ಉಣ್ಣೆ ವಿಶೇಷವಾಗಿ ರಫ್ತಾಗುತ್ತದೆ. ಆಸ್ಟ್ರಿಚ್ ಪಕ್ಷಿಯನ್ನು ಸಾಕುವುದೂ ಒಂದು ಕಸಬಾಗಿದೆ. ಈ ಪಕ್ಷಿಯ ಗರಿ ಒಂದು ಪೌಂಡು ತೂಕಕ್ಕೆ ೩೦೦ ರೂಪಾಯಿನಿಂದ ೬೦೦ ರೂಪಾಯಿಯ ವರೆಗೆ ಬೆಲೆಯಾಗುತ್ತದೆ. ಈ ದೇಶದಲ್ಲಿ ಕಲ್ಲಿದ್ದಲೂ ಚಿನ್ನವೂ ಸಿಕ್ಕುವುವು.

13. ಟ್ರಾನ್ಸ್ವಾಲ್.—ಇದಕ್ಕೆ ಸೌತ್ ಆಫ್ರಿಕ್ಕ ರಿಪಬ್ಲಿಕ್ ಎಂಬ ಹೆಸರಿತ್ತು. ಇದು ಇಟಲಿಗಿಂತ ಸ್ವಲ್ಪ ದೊಡ್ಡದಾಗಿದೆ. ಜನಸಂಖ್ಯೆ ಸುಮಾರು ೧೧,೦೦,೦೦೦. ರಾಜಧಾನಿ ಪ್ರಿಟೋರಿಯ. ಜೊಹಾನೆಸ್ ಬರ್ಗ್ ಎಂಬುದು ಎಲ್ಲಕ್ಕಿಂತ ದೊಡ್ಡ ಪಟ್ಟಣ.

ಈ ದೇಶವು 1899ರ ವರೆಗೆ ಇಂಗ್ಲಿಷರ ಪೋಷಣೆಯಲ್ಲಿದ್ದು ಬಳಿಕ 1899ರಿಂದ 1902ರ ವರೆಗೆ ನಡೆದ ಬೋಅರ್ ಯುದ್ಧದಲ್ಲಿ ಬ್ರಿಟಿಷ್ ರಾಜ್ಯಕ್ಕೆ ಸೇರಿಸಿಕೊಳ್ಳಲ್ಪಟ್ಟಿತು. ವ್ಯವಸಾಯಕ್ಕೂ ಪಶುಪಾಲನೆಗೂ ವಿಶೇಷವಾದ ಅನುಕೂಲ್ಯವುಂಟು. ಕಲ್ಲಿದ್ದಲೂ ಕಬ್ಬಿಣವೂ ವಿಶೇಷವಾಗಿ ಸಿಕ್ಕುವುವು. ಚಿನ್ನವೂ ಉಂಟು. ಬಾರ್ಬರ್ಟನ್ ಎಂಬುದು ಚಿನ್ನದ ಖನಿಗಳಿರುವ ರಾಷ್ಟ್ರದ ಮಧ್ಯಭಾಗದಲ್ಲಿದೆ.

14. ರೊಡೀಷಿಯ.—ಇದು ಬೆಕ್ವಾನಾನಾಡು ಮತ್ತು ಟ್ರಾನ್ಸ್ವಾಲ್ ಗಳಿಗೆ ಉತ್ತರದಲ್ಲಿದೆ. ಪೂರ್ವ ಪಶ್ಚಿಮ ತೀರಗಳಲ್ಲಿರುವ ಪೋರ್ಚುಗೀಸ ರಾಜ್ಯ ಗಳ ಮಧ್ಯದಲ್ಲಿ ಇದು ವಾಯುವ್ಯದಿಕ್ಕಿಗೆ ವಿಸ್ತರಿಸಿಕೊಂಡಿದೆ. ಝಾಂಬೆಸೀ ನದಿಯು ಈ ದೇಶವನ್ನು ಉತ್ತರ ದಕ್ಷಿಣ ರೊಡೀಷಿಯಗಳೆಂದು ಎರಡು ಭಾಗವಮಾಡಿದೆ. ಇದರ ವಿಸ್ತೀರ್ಣ ಸುಮಾರು ೪,೦೦,೦೦೦ ಚದರ ಮೈಲಿ. ಜನಸಂಖ್ಯೆ ಸುಮಾರು ೭,೫೦,೦೦೦. ಸಾಲಿಸ್‌ಬರಿ, ಬುಲವೆಯೊ, ಉಮ್ಟಾಲಿ ಎಂಬುವು ಮುಖ್ಯ ಪಟ್ಟಣ ಗಳು. ರೊಡೀಷಿಯವು ಬ್ರಿಟಿಷ್ ದಕ್ಷಿಣ ಆಫ್ರಿಕ ಕಂಪೆನಿಯವರ ವಿಚಾರಣೆಯಲ್ಲಿದೆ.

ಪೂರ್ವ ಆಫ್ರಿಕ.

1. ಸ್ವರೂಪ, ವ್ಯಾಪಾರ ಮುಂತಾದುವು.—ಪೂರ್ವ ಆಫ್ರಿಕವು ಸಮುದ್ರ ತೀರದಲ್ಲಿ ಜೂಲೂದೇಶದಿಂದ ಬೇಬಲ್‌ಮಾಂಡೆಬ್ ಭೂಶಿರದವರೆಗೆ ವಿಸ್ತರಿಸಿಕೊಂಡಿದೆ. ಝಾಂಜಿಬಾರ್ ಒಂದನ್ನುಳಿದರೆ, ಈ ಪ್ರದೇಶವನ್ನೆಲ್ಲ ಪೋರ್ಚುಗಲ್, ಜರ್ಮನ್, ಬ್ರಿಟಿಷ್, ಇಟಾಲಿಯನ್ ಜನಾಂಗಗಳು ಸ್ವಾಧೀನಪಡಿಸಿಕೊಂಡಿರುವರೆಂದು ಹೇಳಬೇಕಾಗಿದೆ. ಸಮುದ್ರತೀರಪ್ರದೇಶಗಳು ತಗ್ಗು, ಕೆಲವೆಡೆ ಮರಳು, ಕೆಲವೆಡೆ ಕೊಳಚೆನೆಲ. ಇವುಗಳ ಪಶ್ಚಿಮಕ್ಕೆ ಪರ್ವತಪಙ್ಕ್ತಿಗಳಿವೆ. ಇವುಗಳ ಪಶ್ಚಿಮದಲ್ಲಿ ನ್ಯಾಸ್ಸ ಮುಂತಾದ ಸರೋವರಗಳಿವೆ. ಝಾಂಬೀಸಿ ಎಂಬ ಮುಖ್ಯ ನದಿಯು ಪೂರ್ವದಿಕ್ಕಿಗೆ ಹರಿದು ಮೊಝಾಂಬಿಕ್ ಕಾಲುವೆಗೆ ಸೇರುತ್ತದೆ. ಈ ನದಿಗೆ ಉಪನದಿಯಾದ ಷೈರ್ ಎಂಬುದು ನ್ಯಾಸ್ಸ ಸರೋವರದಿಂದ ಹುಟ್ಟಿ ಬರುತ್ತದೆ.

ಇಲ್ಲಿಂದ ರಫ್ತಾಗತಕ್ಕುವು ದಂತ, ಸಂಬಾರಗಳು, ಗೋಂದುಗಳು, ಎಣ್ಣೆ. ಇಲ್ಲಿಗೆ ಆಮದಾಗತಕ್ಕುವು ಹತ್ತಿಯ ಬಟ್ಟೆಗಳು ಮತ್ತು ಮಣಿಗಳು. ಇಲ್ಲಿ ದನ ಗಳೂ ಕುದುರೆಗಳೂ ಇಲ್ಲಿರುವ ಒಂದು ವಿಧವಾದ ವಿಷದ ನೊಣಗಳಿಂದ ಕಡಿಸಿ ಕೊಂಡು ತಟ್ಟನೆ ಸಾಯುತ್ತವಾದುದರಿಂದ, ಸಾಮಾನುಗಳನ್ನು ಮನುಷ್ಯರೇ ಹೊರಬೇಕಾಗಿದೆ. ಒಳ್ಳೆ ರಸ್ತೆಗಳು ಕಡಿಮೆ.

2. ಪೋರ್ಚುಗೀಸರ ಆಫ್ರಿಕ.—ಇದು ಡೆಲ್ಗೋವಾ ಸಮುದ್ರಶಾಖೆಯಿಂದ ಡೆಲ್ಗಾಡೋ ಭೂಶಿರದವರೆಗಿದೆ. ಮೊಝಾಂಬೀಕ್ ಎಂಬುದು ಮುಖ್ಯ ಪಟ್ಟಣ, ಒಂದು ದ್ವೀಪದ ಮೇಲಿದೆ. ಕಿಲಿಮೇನ್ ಎಂಬುದು ಝಾಂಬೀಸೀ ನದಿಯ ಮುಖ ಭಾಗದಲ್ಲಿದೆ. ಸೇನ ಎಂಬುದು ಒಳಗಡೆ ಝಾಂಬೀಸಿಯ ಮೇಲಿದೆ.

3. ಜರ್ಮನ್ ಪೂರ್ವ ಆಫ್ರಿಕ.—ಇದು ಸಮುದ್ರ ತೀರದಲ್ಲಿ ರೊವೂಮಾ ನದಿಯಿಂದ ಪೆಂಬ ದ್ವೀಪದ ಸಮೀಪದವರೆಗಿದೆ. ವಾಯುವ್ಯದಿಕ್ಕಿನಲ್ಲಿ ತಾಂಗನೀಕ

ವಿಕ್ಟೋರಿಯಾ ನ್ಯಾಂಸ ಸರೋವರಗಳ ವರೆಗೆ ಹಬ್ಬಿದೆ. ಇಲ್ಲಿಯೇ ಕಿಲಿಮಾಂಜೇರೋ ಎಂಬ ಪರ್ವತವಿದೆ. ಡಾರ್ಸ್ ಸಲಾಮ್ ಎಂಬುದು ಮುಖ್ಯ ರೇವೆ ಪಟ್ಟಣ. ಯುಜಿಜಿ ಎಂಬುದು ತಾಂಗನೀಯುಕದ ಬಳಿ ಇದೆ.

4. ಸ಼ಾಂಸಿಬಾರ್.—ಇದಕ್ಕೆ ಸ಼ಾಂಸಿಬಾರ್ ಮತ್ತು ಪೆಂಬ ಎಂಬ ದ್ವೀಪಗಳು ಸೇರಿವೆ. ಮುಖ್ಯಪಟ್ಟಣ ಸ಼ಾಂಸಿಬಾರ್. ಇದು ಪೂರ್ವ ಆಫ್ರಿಕದಲ್ಲಿರುವ ಎಲ್ಲಾ ಪಟ್ಟಣಗಳಿಗಿಂತ ದೊಡ್ಡದು. ಇಲ್ಲಿಗೆ ಒಬ್ಬ ಸುಲ್ತಾನನು ಅಧಿಪತಿ. ಈಗ ಬ್ರಿಟಿಷರ ರಕ್ಷಣೆಯಲ್ಲಿರುತ್ತಾನೆ.

5. ಬ್ರಿಟಿಷ್ ಪೂರ್ವ ಆಫ್ರಿಕ.—ಇದು ತೀರದಲ್ಲಿ ಜರ್ಮನ್ ಪೂರ್ವ ಆಫ್ರಿಕದಿಂದ ಜೂಬಾನದಿಯವರೆಗೂ, ಒಳಗಡೆ ಆಲ್ಬರ್ಟ್ ನ್ಯಾಂಸ ಸರೋವರದಿಂದಾಚೆಗೂ ವಿಸ್ತರಿಸಿಕೊಂಡಿದೆ. ಉತ್ತರದಲ್ಲಿ ಅಬಿಸೀನಿಯ ಮತ್ತು ಈಜಿಪ್ಷ ಸೂಡಾನಿನವರೆಗಿದೆ. ಪೂರ್ವ ಆಫ್ರಿಕ ಮತ್ತು ಉಗಾಂಡವೆಂಬ ಬ್ರಿಟಿಷ್ ಆಶ್ರಿತ ರಾಜ್ಯಗಳೂ ಇದರಲ್ಲಿಯೇ ಸೇರಿಕೊಂಡಿವೆ. ಮುಖ್ಯಪಟ್ಟಣ ಮೊಂಬಾಸ, ಇದೊಂದು ದ್ವೀಪದಮೇಲಿದೆ. ಉಗಾಂಡದಿಂದ ಸಮುದ್ರದವರೆಗೆ ೬೦೦ ಮೈಲಿ ರೇಲ್ವೆ ಇದೆ.

6. ಇಟಲಿ ಪೂರ್ವ ಆಫ್ರಿಕ.—ಜೂಬಾನದಿಯಿಂದ ಹಿಡಿದು ಗಾರ್ಡಾಫ್ಯೂ ಭೂಶಿರದವರೆಗಿರುವ ಸೊಮಾಲಿ ಲ್ಯಾಂಡ್ ಎಂಬ ನಾಡೂ ಕೆಲವು ಸಮುದ್ರದ ನೈರುತ್ಯ ತೀರವೂ ತಮ್ಮ ಆಶ್ರಯಕ್ಕೆ ಸೇರಿವೆಯೆಂದು ಇಟಲಿಯವರು ಹೇಳುತ್ತಾರೆ. ಸೊಮಾಲಿಗಳು, ಗಲ್ಲರು ಇವರು ಅನಾಗರಿಕರಾದ ನಿವಾಸಿಗಳು, ಸ್ವತಂತ್ರರು. ಬೇಬಲ್ ಮ್ಯಾಂಡೆಬ್ ಜಲಸಂಧಿಯ ಬಳಿ ಇರುವ ಅಸ್ಸಬ್ ಮತ್ತು ಮಸ್ಸೋವಾ, ಇವೆರಡೂ ಕೆಂಪು ಸಮುದ್ರದ ತೀರದಲ್ಲಿ ಇಟಲಿಯವರಿಗೆ ಸೇರಿದ ರೇವೆಗಳು.

ಏಡೆನ್ ಖಾರಿಯ ದಕ್ಷಿಣದಲ್ಲಿರುವ ಉತ್ತರ ಸೊಮಾಲಿನಾಡು ಬ್ರಿಟಿಷರ ಅಧೀನದಲ್ಲಿದೆ. ಬೇಬಲ್‌ಮ್ಯಾಂಡೆಬ್ ಬಳಿ ಇರುವ ಸೇಲಾ ಮತ್ತು ಬರ್ಬೇರಾ ಎಂಬುವು ರೇವೆ ಪಟ್ಟಣಗಳು. ಇದಲ್ಲದೆ ಕೆಂಪು ಸಮುದ್ರಕ್ಕೆ ಪ್ರವೇಶಿಸುವ ಎಡೆಯಲ್ಲಿ ಟೆಜೂರಾಕೊಲ್ಲಿ ಆಶ್ರಿತಸಂಸ್ಥಾನವು ಫ್ರೆಂಚರ ಅಧೀನದಲ್ಲಿದೆ. ಒಬಕ್ ಎಂಬುದು ರೇವೆ ಪಟ್ಟಣ.

ಆಫ್ರಿಕಾಖಂಡಕ್ಕೆ ಸೇರಿದ ದ್ವೀಪಗಳು.

1. ಸ್ಪೇನಿಗೆ ಸೇರಿದುವುಗಳು.—ಕೆನೇರಿ ದ್ವೀಪಗಳು; ಗಿನೀಸಮುದ್ರ ಶಾಖೆಯಲ್ಲಿರುವ ಫರ್ನಾಂಡಿಪೊ ಮತ್ತು ಅನ್ನಬೊ. ಕೆನೇರಿ ದ್ವೀಪರಾಶಿಯಲ್ಲಿ ಟೆನೆರಿಫ್ ಎಂಬುದರಲ್ಲಿ ದೊಡ್ಡ ಅಗ್ನಿಪರ್ವತವಿದೆ.

[ಬಹು ಪಶ್ಚಿಮದಲ್ಲಿರುವ ಫೆರ್ರೊ ಎಂಬ ದ್ವೀಪದಿಂದ ಜರ್ಮನ್ ಜನರು ಮತ್ತು ಇನ್ನೂ ಕೆಲವರು ರೇಖಾಂಶದ ಲೆಕ್ಕವನ್ನು ಪ್ರಾರಂಭಮಾಡಿದ್ದಾರೆ.]

2. ಪೋರ್ಟುಗೀಸರಿಗೆ ಸೇರಿದುವುಗಳು.—ಅಸೋರ್ಸ್, ಮೆಡೀರ, ಕೇಪ್ ವರ್ಡ್ ದ್ವೀಪಗಳು, ಗಿನೀ ಸಮುದ್ರಶಾಖೆಯಲ್ಲಿರುವ ಪ್ರಿನ್ಸ್ ದ್ವೀಪ ಮತ್ತು ಸೆಂಟ್ ಥಾಮಸ್. ಮಡೀರದ ವಾಯುಗುಣವು ರಮಣೀಯವಾಗಿದೆ. ಇಲ್ಲಿ ಒಳ್ಳೆ ದ್ರಾಕ್ಷಾರಸವು ತಯಾರಾಗುತ್ತದೆ.

ಅಸೋರ್ಸ್ ದ್ವೀಪಗಳಲ್ಲಿ ಕಿತ್ತಿಳೆ ಹಣ್ಣುಗಳು ಬಹು ಚೆನ್ನಾಗಿ ಆಗುತ್ತವೆ. ಮೆಡೀರಾದ್ವೀಪದಲ್ಲಿ ಹಣ್ಣೂ ಕಬ್ಬೂ ಬೆಳೆವುವು; ವಾಯುಗುಣವು ಹಿತಕರವಾಗಿದೆ.

3. ಬ್ರಿಟಿಷರಿಗೆ ಸೇರಿದುವುಗಳು.—ಇವುಗಳಲ್ಲಿ ಮುಖ್ಯವಾದುವು ಅಸೆಂಷನ್, ಸೆಂಟ್‌ಹೆಲೀನ, ಮಾರಿಷಸ್, ಅಮರಾಂಟೇ ದ್ವೀಪಗಳು ಮತ್ತು ಸುಗೋತ್ರ.

ಮಾರಿಷಸ್ ದ್ವೀಪದಲ್ಲಿ ಸಕ್ಕರೆ ಹೆಚ್ಚಾಗಿ ತಯಾರಾಗುತ್ತದೆ: ಪೋರ್ಟ್‌ಲೂಯಿ ಎಂಬುದು ಮುಖ್ಯಪಟ್ಟಣ.

4. ಫ್ರೆಂಚರಿಗೆ ಸೇರಿದುವುಗಳು.—ಬೋರ್ಬನ್ ದ್ವೀಪ, ಕೊಮೊರೋ ದ್ವೀಪಗಳು, ಮತ್ತು ಮಡೆಗಾಸ್ಕರಿನ ತೀರದಲ್ಲಿ ಕೆಲವು ಸ್ಥಳಗಳು.

ಬೋರ್ಬನ್ ದ್ವೀಪದಿಂದ ಕಾಫಿ ಸಕ್ಕರೆ ಮತ್ತು ಸಂಬಾರದ ಪದಾರ್ಥಗಳು ರಫ್ತಾಗುತ್ತವೆ. ಕೊಮೊರೋ ದ್ವೀಪಗಳು ಮಡೆಗಾಸ್ಕರಿಗೆ ಪಶ್ಚಿಮದಲ್ಲಿವೆ.

5. ಮಡೆಗಾಸ್ಕರ್ ದ್ವೀಪ.—ವಿಸ್ತೀರ್ಣ ಸುಮಾರು ೨,೨೮,೦೦೦ ಚ. ಮೈ. ಜನಸಂಖ್ಯೆ ೨೫,೦೦,೦೦೦. ರಾಜಧಾನಿ ಅಂತನನಾರಿವೊ. ಟಮಟೇವ್ ಎಂಬುದು ಮುಖ್ಯ ಸಮುದ್ರತೀರ ಪಟ್ಟಣ. ಡೀಗೋ ಷ್ವಾರೆಸ್ ಎಂಬುದು ಉತ್ತರದಲ್ಲಿ ಬಲು ಒಳ್ಳೆ ಬಂದರು.

ಈ ದ್ವೀಪವು ಈಗ ಫ್ರೆಂಚರ ಪೋಷಣೆಯಲ್ಲಿದೆ. [ಮಲಯ ಕುಲಕ್ಕೆ ಸೇರಿದ ಹೋವರೆಂಬ ಜನರು ವಾಸವಾಗಿದ್ದಾರೆ. ಆಗ್ನೇಯದಿಂದ ಬೀಸುವ ವಾಣಿಜ್ಯ ಮಾರುತಗಳ ದೆಸೆಯಿಂದ] ಪೂರ್ವಭಾಗದಲ್ಲಿ ಮಳೆ ವಿಶೇಷವಾಗಿ ಆಗುತ್ತದೆ. ನೆಲವು ಫಲವತ್ತಾದುದು. ಪಶುಪಾಲನೆಯೂ ಕೃಷಿಯೂ ಜನರ ಮುಖ್ಯೋದ್ಯೋಗಗಳು. ದನ, ಇಂಡಿಯಾ ರಬ್ಬರು, ತೊಗಲು, ಕಾಫಿ, ಮತ್ತು ಸಕ್ಕರೆ ರಫ್ತಾಗುತ್ತವೆ. ಕ್ರೈಸ್ತಮತವು ಅಭಿವೃದ್ಧಿಗೆ ಬರುತ್ತಿದೆ.

ಅಮೇರಿಕಾಖಂಡ.

1. ಅಮೇರಿಕಕ್ಕೂ ಯೂರೇಷಿಯಕ್ಕೂ ಇರುವ ತಾರತಮ್ಯಗಳು.— ಅಮೇರಿಕಾ ಖಂಡದಲ್ಲಿ ಉತ್ತರ ಅಮೇರಿಕವೂ ದಕ್ಷಿಣ ಅಮೇರಿಕವೂ ಸೇರಿವೆ. ಯೂರೋಪ್ ಏಷ್ಯಾ ಖಂಡಗಳನ್ನು ಕೂಡಿಸಿ ಯೂರೇಷಿಯವೆಂದು ಕರೆವ ಪದ್ಧತಿಯುಂಟು. ಯೂರೇಷಿಯಕ್ಕೂ ಅಮೇರಿಕಕ್ಕೂ ವಿಶೇಷ ತಾರತಮ್ಯಗಳಿರುವುವು.

ಅಮೇರಿಕಾ	ಮತ್ತು ಯೂರೇಷಿಯ
(೧) ಹೆಚ್ಚಾದ ಉದ್ದವು ದಕ್ಷಿಣೋತ್ತರವಾಗಿದೆ.	(೧) ಹೆಚ್ಚಾದ ಉದ್ದವು ಪೂರ್ವಪಶ್ಚಿಮವಾಗಿದೆ.
(೨) ಮಹಾ ಪರ್ವತಶ್ರೇಣಿಗಳು ದಕ್ಷಿಣೋತ್ತರವಾಗಿ ಹಬ್ಬಿವೆ.	(೨) ಮುಖ್ಯವಾದ ಪರ್ವತಪಙ್ತಿಗಳು ಪೂರ್ವ ಪಶ್ಚಿಮವಾಗಿ ಹಬ್ಬಿವೆ.
(೩) ವಿಸ್ತಾರವಾದ ಮೈದಾನಗಳಿರುವ ಖಂಡ.	(೩) ವಿಸ್ತಾರವಾದ ಮತ್ತು ಉನ್ನತವಾದ ಪ್ರಸ್ಥಭೂಮಿಗಳಿರುವ ಖಂಡ.
(೪) ಈಖಂಡದ ಮೈದಾನಗಳೊಳಕ್ಕೆ ಸಮುದ್ರಮಾರುತಗಳು ಬೀಸುತ್ತವೆ.	(೪) ಯೂರೇಷಿಯದ ಪ್ರಸ್ಥಭೂಮಿಗಳು ಸಮುದ್ರಮಾರುತಗಳಿಗೊಳಪಟ್ಟಿಲ್ಲ.
(೫) ಮಹಾ ಮರುಭೂಮಿಗಳಿಲ್ಲ.	(೫) ಮಹಾ ಮರುಭೂಮಿಗಳುಂಟು.
(೬) ಅಗಲವು ದಕ್ಷಿಣಕ್ಕೆ ಹೋಗುತ್ತ ಹೋಗುತ್ತ ಕಡಿಮೆಯಾಗುವುದು.	(೬) ಯಾವ ಮಧ್ಯಾಹ್ನ ರೇಖೆಯನ್ನು ತೆಗೆದುಕೊಂಡರೂ ಅಗಲವು ಸ್ವಲ್ಪ ಹೆಚ್ಚು ಕಡಿಮೆಯಾಗಿ ಸಮನಾಗಿರುವುದು.
(೭) ಉತ್ತರಾರ್ಧ ದಕ್ಷಿಣಾರ್ಧ ಗೋಳಗಳೆರಡರಲ್ಲಿಯೂ ಪ್ರಸರಿಸಿದೆ.	(೭) ಬಹು ಮಟ್ಟಿಗೆ ಉತ್ತರಾರ್ಧಗೋಳದಲ್ಲಿಯೇ ಇದೆ.
(೮) ಇದು ನಾಲ್ಕು ವಲಯಗಳಲ್ಲಿಯೂ ಪ್ರಸರಿಸಿದೆ.	(೮) ಇದು ವಿಶೇಷವಾಗಿ ಉತ್ತರ ಸಮಶೀತೋಷ್ಣ ವಲಯದಲ್ಲಿದೆ.
(೯) ಈ ಖಂಡವು ಜನಸಂಖ್ಯೆಯಲ್ಲಿಯೂ ಕೃಷಿಯಲ್ಲಿಯೂ ಕೈಗಾರಿಕೆಗಳಲ್ಲಿಯೂ ಮುಂದಕ್ಕೆ ಬಹಳ ಹೆಚ್ಚಾಗಿ ಅಭಿವೃದ್ಧಿಯಾಗಬಹುದಾಗಿದೆ.	(೯) ಯೂರೇಷಿಯದ ಜನಸಂಖ್ಯೆಯೂ ಸಂಪತ್ತೂ ಈಗಿರುವುದಕ್ಕಿಂತ ವಿಶೇಷವಾಗಿ ಅಭಿವೃದ್ಧಿಯಾಗುವುದಕ್ಕೆ ಆಸ್ಪದವಿಲ್ಲ.

2. ಅಮೇರಿಕಾಖಂಡದ ವಿಸ್ತೀರ್ಣ ಮತ್ತು ಮುಖ್ಯ ಭಾಗಗಳು.— ಅಮೇರಿಕಾಖಂಡದ ವಿಸ್ತೀರ್ಣವು ೧,೬೦,೦೦,೦೦೦ ಚ. ಮೈಲಿ. ಈ ಖಂಡದ ಅಗ

ಲವು ಪನಾಮ ಎಂಬ ಭೂಕಂಠದಲ್ಲಿ ೨೮ ಮೈಲಿಯಷ್ಟು ಮಾತ್ರ ಇರುವುದರಿಂದಲೂ, ದಕ್ಷಿಣೋತ್ತರವಾದ ಉದ್ದವು ೯,೦೦೦ ಮೈಲಿಯಷ್ಟು ಇರುವುದರಿಂದಲೂ, ಈ ಖಂಡವನ್ನು ಎರಡು ಭಾಗವಾಗಿ ಭಾವಿಸುವುದು ಅನುಕೂಲವಾಗಿರುತ್ತದೆ:— ಪನಾಮಕ್ಕೆ ಉತ್ತರದಲ್ಲಿರುವ ಭಾಗವು ಉತ್ತರ ಅಮೇರಿಕಾಖಂಡ ಮತ್ತು ಇದಕ್ಕೆ ದಕ್ಷಿಣದಲ್ಲಿರುವ ಭಾಗವು ದಕ್ಷಿಣ ಅಮೇರಿಕಾಖಂಡ. ಈ ಖಂಡಗಳನ್ನು ಪನಾಮಾ ಭೂಕಂಠವು ಸಂಬಂಧಿಸುವುದು. ಆಕಾರದಲ್ಲಿಯೂ ಲಕ್ಷಣದಲ್ಲಿಯೂ ಉತ್ತರ ಅಮೇರಿಕಾಖಂಡ ದಕ್ಷಿಣ ಅಮೇರಿಕಾಖಂಡಗಳಿಗೆ ಹೋಲಿಕೆಗಳೂ, ತಾರತಮ್ಯಗಳೂ ಕೆಲವು ಇರುವುವು; ಅವುಗಳಲ್ಲಿ ಮುಖ್ಯವಾದುವು ಯಾವುವೆಂದರೆ:—

ಉತ್ತರ ಅಮೇರಿಕ	ಮತ್ತು ದಕ್ಷಿಣ ಅಮೇರಿಕ.
(೧) ಉತ್ತರ ಅಮೇರಿಕಾಖಂಡವು ಆಕಾರದಲ್ಲಿ ಡೊಂಕುಡೊಂಕಾಗಿರುವ ತ್ರಿಕೋಣದಂತಿದೆ.	(೧) ದಕ್ಷಿಣ ಅಮೇರಿಕಾಖಂಡವು ಆಕಾರದಲ್ಲಿ ಡೊಂಕಿಲ್ಲದೆ ತ್ರಿಕೋಣದಂತಿದೆ.
(೨) ಪಶ್ಚಿಮತೀರದಲ್ಲಿ ಉನ್ನತವಾದ ಪರ್ವತಶ್ರೇಣಿಯುಂಟು. ಇದರಲ್ಲಿ ಜ್ವಾಲಾಮುಖಿಗಳಿರುವುವು.	(೨) ಪಶ್ಚಿಮತೀರದಲ್ಲಿ ಉನ್ನತವಾದ ಪರ್ವತಶ್ರೇಣಿಯುಂಟು. ಇದರಲ್ಲಿ ಅನೇಕ ಜ್ವಾಲಾಮುಖಿಗಳಿರುವುವು.
(೩) ಪೂರ್ವತೀರಕ್ಕೆ ಇದಿರಾಗಿ ಬೆಟ್ಟದ ಸಾಲುಗಳಿವೆ.	(೩) ಪೂರ್ವತೀರಕ್ಕಿದಿರಾಗಿ ಬೆಟ್ಟದ ಸಾಲುಗಳಿವೆ.
(೪) ಈ ಖಂಡದ ಮಧ್ಯಭಾಗದಲ್ಲಿ ಉತ್ತರಸಾಗರದಿಂದ ಮೆಕ್ಸಿಕೋ ಸಮುದ್ರಶಾಖೆಯವರೆಗೆ ವಿಶಾಲವಾದ ಮೈದಾನವಿದೆ.	(೪) ಈ ಖಂಡದ ಮಧ್ಯಭಾಗದಲ್ಲಿ ಕಾರಿಬಿಯನ್ ಸಮುದ್ರದಿಂದ ಲಾಪ್ಲಾಟದವರೆಗೆ ವಿಶಾಲವಾದ ಮೈದಾನವಿದೆ.
(೫) ಸೆಂಟ್‌ಲಾರೆನ್ಸ್‌ನದಿ ಪಶ್ಚಿಮದಿಂದ ಪೂರ್ವಕ್ಕೆ ಹರಿಯುತ್ತದೆ; ಮಿಸಿಸಿಪ್ಪೀ ಉತ್ತರದಿಂದ ದಕ್ಷಿಣಕ್ಕೆ ಬರುತ್ತದೆ.	(೫) ಅಮಝಾನ್‌ನದಿ ಪಶ್ಚಿಮದಿಂದ ಪೂರ್ವಕ್ಕೆ ಹರಿಯುತ್ತದೆ; ಲಾಪ್ಲಾಟಾನದಿ ಉತ್ತರದಿಂದ ದಕ್ಷಿಣಕ್ಕೆ ಬರುತ್ತದೆ.

ಉತ್ತರ ಅಮೇರಿಕ.

ಸಾಮಾನ್ಯ ವರ್ಣನೆ.

ಉ. ಅ. ೭ರಿಂದ ೭೦ರ ವರೆಗೂ, ಪ. ರೇ. ೫೦ ರಿಂದ ೧೬೫ರ ವರೆಗೂ ಈ ಖಂಡವು ಪ್ರಸರಿಸಿದೆ.

1. ಮೇರೆ ಮತ್ತು ವಿಸ್ತೀರ್ಣ.—ಉತ್ತರಕ್ಕೆ ಉತ್ತರಸಾಗರ; ಪೂರ್ವಕ್ಕೆ ಅಟ್ಲಾಂಟಿಕ್ ಸಾಗರ; ಪಶ್ಚಿಮಕ್ಕೆ ಪೆಸಿಫಿಕ್‌ಸಾಗರ; ಇವು ಮೇರೆಗಳು. ವಿಸ್ತೀರ್ಣ ಸುಮಾರು ೮೦,೦೦,೦೦೦ ಚ. ಮೈ.

2. ಈ ಖಂಡದ ಲಕ್ಷಣ.—ಉನ್ನತವಾದ ಪ್ರಸ್ಥಭೂಮಿಯಿಂದ ಎದ್ದಿರುವ ಉನ್ನತವಾದ ಪರ್ವತಶ್ರೇಣಿಗಳು ಪಶ್ಚಿಮದಲ್ಲಿವೆ; ತೀರಕ್ಕೆ ಇದಿರಾಗಿ ಹಬ್ಬಿರುವ ಬೆಟ್ಟದ ಸಾಲು ಪೂರ್ವದಲ್ಲಿದೆ; ಇವುಗಳ ನಡುವೆ ವಿಶಾಲವಾದ ಮೈದಾನವಿರುವುದು. ಪೂರ್ವತೀರದಲ್ಲಿ ಕೊಲ್ಲಿಗಳೂ ಸಮುದ್ರಶಾಖೆಗಳೂ ವಿಶೇಷ; ಪಶ್ಚಿಮತೀರದಲ್ಲಿ ಇವು ಇರುವುದು ಕಡಿಮೆ.

3. ಈ ಖಂಡದ ಮುಖ್ಯ ವಿಭಾಗಗಳು.—ವಾಯುವ್ಯದಲ್ಲಿ ಅಲಾಸ್ಕ; ಉತ್ತರದಲ್ಲಿ ಬ್ರಿಟಿಷ್ ಅಮೇರಿಕ; ಮಧ್ಯದಲ್ಲಿ ಸಂಯುಕ್ತ ಸಂಸ್ಥಾನ; ದಕ್ಷಿಣದಲ್ಲಿ ಮೆಕ್ಸಿಕೊ ಮತ್ತು ಮಧ್ಯದ ಅಮೇರಿಕ.

4. ಮುಖ್ಯವಾದ ಕೊಲ್ಲಿಗಳು ಮತ್ತು ಸಮುದ್ರಶಾಖೆಗಳು.—ಪೂರ್ವತೀರದಲ್ಲಿ ಬಾಫಿನ್ ಕೊಲ್ಲಿ, ಹಡ್ಸನ್ ಕೊಲ್ಲಿ, ಸೆಂಟ್ ಲಾರೆನ್ಸ್ ಸಮುದ್ರಶಾಖೆ. ಫಂಡೀ ಕೊಲ್ಲಿ, ಮೆಕ್ಸಿಕೋ ಸಮುದ್ರಶಾಖೆ, ಮತ್ತು ಕಾರಿಬಿಯನ್ ಸಮುದ್ರ, ಪಶ್ಚಿಮತೀರದಲ್ಲಿ ಕಾಲಿಫೋರ್ನಿಯಾ ಸಮುದ್ರಶಾಖೆ; ಉತ್ತರದಲ್ಲಿ ಬೂತಿಯಾ ಸಮುದ್ರಶಾಖೆ.

(೧) ಹಡ್ಸನ್‌ಕೊಲ್ಲಿ ಹೆನ್ರಿಹಡ್ಸನ್ ಎಂಬಾತನಿಂದ, ಬಾಫಿನ್‌ಕೊಲ್ಲಿ ವಿಲಿಯಂ ಬಾಫಿನ್ ಎಂಬಾತನಿಂದ, ಕಂಡು ಹಿಡಿಯಲ್ಪಟ್ಟಿತು. ಬಾಫಿನ್‌ಕೊಲ್ಲಿಯಲ್ಲಿ ಗ್ರೀಷ್ಮರ್‍ತುವಿನ ನಾಲ್ಕು ತಿಂಗಳಲ್ಲಿ ಮಾತ್ರ ವ್ಹೇಲ್ ಮತ್ತು ಸೀಲ್ ಎಂಬ ಮೀನುಗಳ ಬೇಟೆ ವಿಶೇಷವಾಗಿ ನಡೆವುದು. (೨) ಸೆಂಟ್‌ಲಾರೆನ್ಸ್ ಸಮುದ್ರಶಾಖೆ ಎಂಬುದು ಸೆಂಟ್ ಲಾರೆನ್ಸೆಂಬ ನದಿಯ ಅಳಿವೆ; ಇಲ್ಲಿ ಗ್ರೀಷ್ಮರ್‍ತುವಿನಲ್ಲಿ ಮಂಜು (Fog) ಹೆಚ್ಚಾಗಿ ಸುರಿಯುತ್ತದೆ. ಹೇಮಂತರ್‍ತುವಿನಲ್ಲಿ ನೀರು ಗಡ್ಡೆ ಕಟ್ಟಿರುವುದು. (೩) ಫಂಡೀ ಕೊಲ್ಲಿ ನೋವಸ್ಕೋಟಿಯಕ್ಕೂ ನ್ಯೂಬ್ರನ್ ಸ್ವಿಕ್ಕಿಗೂ ನಡುವೆ ಇದೆ; ಇದರಲ್ಲಿ ಸಮುದ್ರದ ಉಬ್ಬರವಿಳಿತಗಳು ಬಹಳ ಹೆಚ್ಚಾಗಿ ಕಾಣಬರುವುವು,—ಉಬ್ಬ

ರದ ಕಾಲದಲ್ಲಿ ನೀರು ಕೆಲವು ವೇಳೆಗಳಲ್ಲಿ ೩೦ ಅಡಿಯಷ್ಟು ಎತ್ತರ ಹೆಚ್ಚುವುದು. ಇಳಿತದಲ್ಲಿ ೩೦ ಅಡಿಯಷ್ಟು ಇಳಿವುದು. (೪) ಮೆಕ್ಸಿಕೋ ಸಮುದ್ರಶಾಖೆ ಅಮೆರಿಕಾ ಖಂಡದ ಮೆಡಿಟರೇನಿಯನ್ ಸಮುದ್ರವಾಗಿದೆ; ಅದರಂತೆ ಸ್ವಲ್ಪ ಹೆಚ್ಚು ಕಡಿಮೆಯಾಗಿ ಭೂವ್ಯಾವೃತವಾಗಿರುವುದು. ಕಾರಿಬಿಯನ್ ಸಮುದ್ರದಿಂದ ಬಂದ ನೀರು ೮೦ ಡಿಗ್ರಿಗಿಂತ ಹೆಚ್ಚಾಗಿ ಕಾದು ಪ್ರವಾಹವಾಗಿ ತೀರಪ್ರದೇಶವನ್ನು ಹೊಡೆದು ಸುತ್ತಿಕೊಂಡು ಫ್ಲಾರಿಡಾ ಜಲಸಂಧಿಯ ಮಾರ್ಗವಾಗಿ ಹೊರಟು ಗಲ್ಫ್‍ಸ್ಟ್ರೀಮ್ ಎಂಬ ಹೆಸರಿನಿಂದ ಅಟ್ಲಾಂಟಿಕ್ ಸಾಗರದಲ್ಲಿ ಈಶಾನ್ಯವಾಹಿನಿಯಾಗಿ ಪ್ರವಹಿಸಿ ಯೂರೋಪ್ ಖಂಡದ ಪಶ್ಚಿಮ ಭಾಗದ ದೇಶಗಳ ಶೈತ್ಯವನ್ನು ಕಡಿಮೆ ಮಾಡುತ್ತದೆ. (೫) ಕಾಲಿಫೋರ್ನಿಯಾ ಸಮುದ್ರಶಾಖೆ ಪಶ್ಚಿಮತೀರದಲ್ಲಿದೆ. (೬) ಬೂತಿಯಾ ಸ. ಶಾ. ಉತ್ತರಭಾಗದಲ್ಲಿ ಬೂತಿಯಾ ಪರ್ಯಾಯ ದ್ವೀಪಕ್ಕೂ ಕಾಕ್ಬರ್ನ್ ದ್ವೀಪಕ್ಕೂ ನಡುವೆ ಇದೆ; ಚಳಿ ವಿಪರೀತವಾದುದರಿಂದ ಪ್ರತಿವರ್ಷವೂ ನೀರು ಬಹಳ ಕಾಲದವರೆಗೆ ಗಡ್ಡೆ ಕಟ್ಟಿಕೊಂಡಿರುವುದು.

5. ಮುಖ್ಯವಾದ ಜಲಸಂಧಿಗಳು.—(೧) ಅಟ್ಲಾಂಟಿಕ್ ಸಾಗರವನ್ನೂ ಹಡ್ಸನ್ ಕೊಲ್ಲಿಯನ್ನೂ ಕೂಡಿಸುವ ಹಡ್ಸನ್ ಜಲಸಂಧಿ; (೨) ಅಟ್ಲಾಂಟಿಕ್ಕನ್ನೂ ಬಾಫಿನ್ ಕೊಲ್ಲಿಯನ್ನೂ ಸಂಬಂಧಿಸುವ ಡೇವಿಸ್ ಜಲಸಂಧಿ. ಇಲ್ಲಿ ನೀರ್ಗಲ್ಲಿನ ಗುಡ್ಡಗಳು (Icebergs) ವಿಶೇಷ. (೩) ಉತ್ತರಸಾಗರವನ್ನು ಬಾಫಿನ್ ಕೊಲ್ಲಿಯ ಸಂಗಡ ಕೂಡಿಸುವ ಬಾರೊ ಜಲಸಂಧಿ; (೪) ಉತ್ತರಸಾಗರವನ್ನೂ ಪೆಸಿಫಿಕ್ ಸಾಗರವನ್ನೂ ಸಂಬಂಧಿಸುವ ಬೆಹರಿಂಗ್ ಜಲಸಂಧಿ.

6. ಪರ್ಯಾಯ ದ್ವೀಪಗಳು ಮತ್ತು ಭೂಶಿರಗಳು.—ಇವು ಈ ಖಂಡದಲ್ಲಿ ವಿಶೇಷವಾಗಿವೆ. ಪೂರ್ವಭಾಗದಲ್ಲಿ ನಾಲ್ಕು ದೊಡ್ಡ ಪರ್ಯಾಯ ದ್ವೀಪಗಳುಂಟು:—ಲಾಬ್ರಡಾರ್, ನೋವಸ್ಕೋಷಿಯ, ಫ್ಲಾರಿಡ, ಮತ್ತು ಯುಕಟಾನ್; ಪಶ್ಚಿಮ ಭಾಗದಲ್ಲಿ ಎರಡಿವೆ:—ಅಲಾಸ್ಕ ಮತ್ತು ಕೆಳಗಿನ ಕಾಲಿಫೋರ್ನಿಯ. ಬಹು ಮುಖ್ಯವಾದ ಭೂಶಿರಗಳು ಯಾವುವೆಂದರೆ:—ಪೂರ್ವತೀರದಲ್ಲಿ ರೇಸ್ ಭೂಶಿರ (ನ್ಯೂಫೌಂಡ್ಲೆಂಡಿನಲ್ಲಿ), ಸೇಬಲ್ (ನೋವಸ್ಕೋಷಿಯದಲ್ಲಿ), ಕಾಡ್ (ಸಂಯುಕ್ತ ಸಂಸ್ಥಾನದಲ್ಲಿ), ಹಾಟರಸ್ (ಉತ್ತರದ ಕಾರೊಲೀನದಲ್ಲಿ), ಮತ್ತು ಸೇಬಲ್ (ಫ್ಲಾರಿಡದಲ್ಲಿ); ಪಶ್ಚಿಮತೀರದಲ್ಲಿ ಅಲಾಸ್ಕದಲ್ಲಿರುವ ಪ್ರಿನ್ಸ್‍ಆಫ್ ವೇಲ್ಸ್ ಭೂಶಿರ, ಮತ್ತು ಕಾಲಿಫೋರ್ನಿಯದಲ್ಲಿರುವ ಸೇಂಟ್ ಲ್ಯೂಕಾಸ್ ಭೂಶಿರ.

ಲಾಬ್ರಡಾರ್ ಎಂಬ ಪರ್ಯಾಯದ್ವೀಪವು ಬ್ರಿಟಿಷ್ ದ್ವೀಪಗಳಿರುವ ಅಕ್ಷಾಂಶಗಳಲ್ಲಿಯೇ ಇದೆ—ಎಂದರೆ ೫೦ನೆಯ ಮತ್ತು ೬೦ನೆಯ ಉತ್ತರ ಅಕ್ಷಾಂಶಗಳ ನಡುವೆ ಪ್ರಸರಿಸಿದೆ; ಹೀಗಿದ್ದರೂ ಈ ಪರ್ಯಾಯದ್ವೀಪದಲ್ಲಿ ಪ್ರತಿ ವರ್ಷವೂ ೮ ತಿಂಗಳವರೆಗೂ ಚಳಿ ವಿಪರೀತವಾಗಿರುವುದು. ಹೀಗಿರುವುದಕ್ಕೆ ಮುಖ್ಯವಾದ ಎರಡು ಕಾರಣಗಳುಂಟು;—(*a*) ನೀರ್ಗಲ್ಲಿನ ಗುಡ್ಡಗಳಿಂದ ಕೂಡಿರುವ ಶೀತೋದಕ ಪ್ರವಾಹ

ವೊಂದು ಡೇವಿಸ್ ಜಲಸಂಧಿಯಿಂದ ಈ ಕಡೆಗೆ ಹರಿದು ಬರುತ್ತದೆ; (b) ಚಳಿಯನ್ನು ಕಡಿಮೆ ಮಾಡುವುದಕ್ಕೆ "ಗಲ್ಫ್ ಸ್ಟ್ರೀಮ್" ಎಂಬ ಉಷ್ಣೋದಕ ಪ್ರವಾಹವು ಈ ಕಡೆಗೆ ಹರಿದು ಬರುವುದಿಲ್ಲ.

7. ಭೂಕಂಠಗಳು.—ಇವು ಎರಡಿವೆ :— (೧) ಉತ್ತರ ಅಮೇರಿಕವನ್ನೂ ದಕ್ಷಿಣ ಅಮೇರಿಕವನ್ನೂ ಸಂಧಿಸುವ ಪನಾಮಾ ಭೂಕಂಠ; (೨) ದಕ್ಷಿಣ ಭಾಗದಲ್ಲಿ ಟೆಹ್ವಾಂಟೆಪೆಕ್ ಎಂಬ ಸಮುದ್ರಶಾಖೆಗೂ ಕಾಂಪೀಚೀ ಸಮುದ್ರಶಾಖೆಗೂ ನಡುವೆ ಇರುವ ಟೆಹ್ವಾಂಟೆಪೆಕ್ ಎಂಬ ಭೂಕಂಠ.

ಸುಯೆಜ್ ಕಾಲ್ವೆಯನ್ನು ಮಾಡಿದ ಲೆಸೆಪ್ ಎಂಬಾತನು ಪನಾಮಾ ಭೂಸಂಧಿಯಲ್ಲಿ ಒಂದು ದೊಡ್ಡ ಕಾಲ್ವೆಯನ್ನು ಮಾಡುವುದಕ್ಕೆ ಕೆಲವು ವರುಷಗಳಿಗೆ ಮುಂಚೆ ಪ್ರಾರಂಭಿಸಿ ನಿಂತು ಹೋಗಿದ್ದು ಈಗ ಪುನಃ ಕೆಲಸ ನಡೆಯುತ್ತಿದೆ. ಇದು ಪೂರಯಿಸಿದರೆ ವ್ಯಾಪಾರಕ್ಕೆ ವಿಶೇಷವಾದ ಅನುಕೂಲತೆ ಉಂಟಾಗುವುದು.

8. ದ್ವೀಪಗಳು.—ಉತ್ತರ ಅಮೇರಿಕಾ ಖಂಡದ ಹತ್ತಿರ ಅನೇಕ ದ್ವೀಪಗಳಿವೆ. ಪೂರ್ವತೀರದ ಸಮೀಪದಲ್ಲಿರುವುವು ಬಹು ಮುಖ್ಯವಾದುವು; ಯಾವುವೆಂದರೆ:—ಆಂಟಿಕಾಸ್ಟಿ, ಪ್ರಿನ್ಸ್ಎಡ್ವರ್ಡ್ ದ್ವೀಪ, ನ್ಯೂಫೌಂಡ್ಲೆಂಡ್, ಬರ್ಮ್ಯುಡಾಸ್, ಮತ್ತು ವೆಸ್ಟ್ ಇಂಡಿಯಾ ದ್ವೀಪಗಳು. ಅಗಾಧವಾದ ದ್ವೀಪಸ್ತೋಮ ಸಮುದಾಯ ಒಂದು ಉತ್ತರದಲ್ಲಿದೆ; ಇಲ್ಲಿರುವ ದ್ವೀಪಗಳಲ್ಲಿ ಗ್ರೀನ್ಲೆಂಡ್ ಎಂಬುದು ದೊಡ್ಡದು. ಪಶ್ಚಿಮ ತೀರದ ಸಮೀಪದಲ್ಲಿ ಕ್ವೀನ್ ಚಾರ್ಲಟ್ ದ್ವೀಪಗಳು, ಸಿಟ್ಕಾ ದ್ವೀಪಸ್ತೋಮ ಸಮುದಾಯ, ಪ್ರಿನ್ಸ್ ಆಫ್ ವೇಲ್ಸ್ ದ್ವೀಪ, ಮತ್ತು ವಾಂಕೂವರ್ ದ್ವೀಪ ಇವೆ; ಇವುಗಳಲ್ಲಿ ವಾಂಕೂವರ್ ಎಂಬುದು ಮುಖ್ಯವಾದುದು.

9. ಪ್ರಸ್ಥ ಭೂಮಿಗಳು.—ಈ ಖಂಡದ ಪಶ್ಚಿಮ ಭಾಗವು ವಿಸ್ತಾರವಾದ ಪ್ರಸ್ಥಭೂಮಿಯಾಗಿದೆ. ಮಧ್ಯದ ಅಮೇರಿಕದಲ್ಲಿ ಹಬ್ಬಿರುವ ಪರ್ವತಶ್ರೇಣಿ ಟೆಹ್ವಾಂಟೆಪೆಕ್ ಎಂಬ ಭೂಸಂಧಿಯಲ್ಲಿ ಎರಡು ಕವಲಾಗಿ ಅಲ್ಲಿಂದ ಉತ್ತರ ಸಾಗರದವರೆಗೂ ಹಬ್ಬಿದೆ; ಈ ಕವಲುಗಳ ನಡುವೆ ಉದ್ದಕ್ಕೂ ಇರುವ ಭೂಮಿ ಪ್ರಸ್ಥಭೂಮಿಯಾಗಿದೆ. ಇದರ ಒಂದು ಭಾಗವಾದ ಮೆಕ್ಸಿಕೋ ಎಂಬ ಪ್ರಸ್ಥಭೂಮಿ ಸಮುದ್ರದ ಮಟ್ಟಕ್ಕಿಂತ ೯,೦೦೦ ಅಡಿಯಷ್ಟು ಎತ್ತರವಾಗಿದೆ. ಯೂಟ ಎಂಬುದೂ ಒಂದು ಪ್ರಸ್ಥಭೂಮಿ.

10. ಪರ್ವತಗಳು.—ಉತ್ತರ ಅಮೇರಿಕಾ ಖಂಡದಲ್ಲಿ ಪರ್ವತಸ್ತೋಮ ಸಮುದಾಯಗಳೆರಡು ಇರುವುವು:—(೧) ಪೂರ್ವಭಾಗದಲ್ಲಿರುವ ಆಪಲೇಕಿಯನ್ ಪರ್ವತಸ್ತೋಮ ಸಮುದಾಯ, ಮತ್ತು (೨) ಪಶ್ಚಿಮ ಭಾಗದಲ್ಲಿರುವ ಕಾರ್ಡಿಲೆರಾ ಪರ್ವತಸ್ತೋಮ ಸಮುದಾಯ. ಆಪಲೇಕಿಯನ್ ಸ್ತೋಮ ಸಮುದಾಯದಲ್ಲಿ ಆಲೆಘೆನೀ ಪರ್ವತಶ್ರೇಣಿ ಬಹು ಮುಖ್ಯವಾದುದು; ಕಾರ್ಡಿಲೆರಾಸ್ತೋಮ ಸಮುದಾಯದಲ್ಲಿ ರಾಕೀ ಪರ್ವತಶ್ರೇಣಿ ಮುಖ್ಯವಾದುದು.

(೧) ಆಪಲೇಕಿಯನ್ ಪರ್ವತಶ್ರೇಣಿಗಳು ಅಲಬಾಮದಲ್ಲಿ ಪ್ರಾರಂಭವಾಗಿ ಈಶಾನ್ಯಾಭಿಮುಖವಾಗಿ ಸೆಂಟ್ ಲಾರೆನ್ಸ್ ನದಿಯವರೆಗೆ ಹೋಗಿ, ಲಾಬ್ರಡಾರಿನಲ್ಲಿ ಪುನಃ ಕಾಣಿಸಿಕೊಳ್ಳುವುವು. ಆಲಿಘೆನಿ ಮತ್ತು ಬ್ಲೂ ಎಂಬ ಪರ್ವತಶ್ರೇಣಿಗಳು ಇವುಗಳಲ್ಲಿ ಮುಖ್ಯ. (೨) ಕಾರ್ಡಿಲೆರಾ ಪರ್ವತಸ್ತೋಮ ಸಮುದಾಯದಲ್ಲಿ ಮೆಕ್ಸಿಕೋ ಪ್ರಸ್ಥಭೂಮಿ, ಪಶ್ಚಿಮದ ಪ್ರಸ್ಥಭೂಮಿ ಎಂಬ ಪ್ರಸ್ಥಭೂಮಿಗಳೂ, ಪರ್ವತ ಶ್ರೇಣಿಗಳನೇಕಗಳೂ ಸೇರಿವೆ. ಮಾಡ್ರೆ ಎಂಬ ಶ್ರೇಣಿ ಮೆಕ್ಸಿಕೋ ಪ್ರಸ್ಥಭೂಮಿಯ ಪಶ್ಚಿಮದ ಬತ್ತು ಗೋಡೆಯಾಗಿದೆ. ರಾಕೀ ಪರ್ವತಶ್ರೇಣಿ ಪಶ್ಚಿಮದ ಪ್ರಸ್ಥಭೂಮಿಯ ಪೂರ್ವದ ಬತ್ತು ಗೋಡೆಯಾಗಿದೆ, ನಿವಾಡ ಮತ್ತು ಕಾಸ್ಕೇಡ್ ಪರ್ವತ ಶ್ರೇಣಿಗಳು ಈ ಪ್ರಸ್ಥಭೂಮಿಯ ಪಶ್ಚಿಮದ ಅಂಚಿನಲ್ಲಿ ಹಬ್ಬಿವೆ. ನಿವಾಡಾಶ್ರೇಣಿಗೆ ಇದಿರಾಗಿ ಪಶ್ಚಿಮದಲ್ಲಿ ತೀರಪ್ರದೇಶದ ಪರ್ವತ ಪಙ್ತಿಯೊಂದು ಇದೆ. ಇವುಗಳ ನಡುವೆ ಬಂಧು ನದಿ ಹರುವುದು.

ಅಲಾಸ್ಕದಲ್ಲಿರುವ ಸೆಂಟ್ ಎಲಿಯಸ್ ಎಂಬ ಶಿಖರವು (೧೯,೫೦೦ ಅಡಿ) ಉತ್ತರ ಅಮೆರಿಕಾಖಂಡದ ಅತ್ಯುನ್ನತ ಶಿಖರವಾಗಿದೆ. ಬ್ರೌನ್, ಹೂಕರ್ ಎಂಬ ಶಿಖರಗಳು ರಾಕೀಪರ್ವತಶ್ರೇಣಿಯಲ್ಲಿವೆ. ಮಿಚೆಲ್ ಶಿಖರವು ಆಲಿಘೆನಿಯ ಅತ್ಯುನ್ನತ ಶಿಖರ. ಮೆಕ್ಸಿಕೋವಿನಲ್ಲಿ ೧೭,೮೮೭ ಅಡಿಯಷ್ಟು ಎತ್ತರವಿರುವ ಪೋಪೋಕಾಟಿಪೆಟಿಲ್ ಎಂಬ ಶಿಖರವಿದೆ.

ಉತ್ತರ ಅಮೆರಿಕದ ಜ್ವಾಲಾಮುಖಿಗಳು ಮಧ್ಯದ ಅಮೆರಿಕದಲ್ಲಿಯೂ ಅಲಾಸ್ಕದಲ್ಲಿಯೂ ಇವೆ.

11. ಮೈದಾನಗಳು.—ಈ ಖಂಡದ ಮಧ್ಯಭಾಗದಲ್ಲಿ ಒಂದು ದೊಡ್ಡ ಮೈದಾನವಿದೆಯೆಂದು ಹಿಂದೆಯೇ ಹೇಳಲ್ಪಟ್ಟಿತು. ಉತ್ತರಸಾಗರದಿಂದ ಮೆಕ್ಸಿಕೋ ಸಮುದ್ರಶಾಖೆಯವರೆಗೆ ಮತ್ತು ರಾಕೀಪರ್ವತಶ್ರೇಣಿಯಿಂದ ಆಪಲೇಕಿಯನ್ ಪರ್ವತಸ್ತೋಮ ಸಮುದಾಯದವರೆಗೆ ಈ ಮೈದಾನವು ಪ್ರಸರಿಸುವುದು. ಇದರಲ್ಲಿ ಅರ್ಧವು ಹಡ್ಸನ್ ಕೊಲ್ಲಿಯ ಮತ್ತು ಉತ್ತರ ಸಾಗರದ ಕಡೆಗೆ, ಉಳಿದರ್ಧವು ಮೆಕ್ಸಿಕೋ ಸಮುದ್ರಶಾಖೆಯ ಕಡೆಗೆ ಇಳಿಜಾರಾಗಿ ಬಂದಿರುತ್ತದೆ. ಇವೆರಡರ ನಡುವೆ ಇರುವ ಜಲವಿಭಾಗಸ್ಥಾನಕ್ಕೆ "ಹೈಟ್ ಆಫ್ ಲಾಂಡ್" ಎಂಬ ಹೆಸರಿದೆ.

ರಾಕೀಪರ್ವತ ಶ್ರೇಣಿಗೆ ಪೂರ್ವದಲ್ಲಿರುವ ಪ್ರಸ್ಥಭೂಮಿಯಕಡೆಗೆ ಈ ಮೈದಾನವು ಎತ್ತರವಾಗುತ್ತ ಬಂದಿದೆ. ಈ ಮೈದಾನದಲ್ಲಿರುವ ಅಗಾಧವಾದ ಹುಲ್ಲುಗಾವಲಿಗೆ "ಪ್ರೈರಿ" ಎಂದು ಹೆಸರು. ಅನೇಕ ಪ್ರೈರಿಗಳಲ್ಲಿ ಮರಗಳಿಲ್ಲ; ಕೆಲವುಗಳಲ್ಲಿ ಮರಗಳಿರುವುವು. ಈ ಮೈದಾನದ ನೆಲವು ಸಮನಾಗಿಯೇ ಇದೆಯೆಂದು ಹೇಳುವುದಕ್ಕಾಗುವುದಿಲ್ಲ; ತರಂಗಾಕೃತಿಯಲ್ಲಿ ಪ್ರಸರಿಸಿರುವುದು. ದಕ್ಷಿಣ ಭಾಗದಲ್ಲಿರುವ ಹುಲ್ಲುಗಾವಲುಗಳಿಗೆ "ಸವನ್ನ" ಎಂಬ ಹೆಸರಿದೆ.

12. ನದಿಗಳು.—ಉತ್ತರ ಅಮೆರಿಕಾ ಖಂಡದಲ್ಲಿ ದೊಡ್ಡ ನದಿಗಳು

ತಾ. 28-1-21

ಅನೇಕ ಇವೆ; ಈ ಖಂಡದ ಅತ್ಯುನ್ನತ ಪ್ರದೇಶಗಳು ಪೆಸಿಫಿಕ್ ಸಾಗರದ ಹತ್ತಿರವಿರುವುದರಿಂದ, ಬಹಳ ಉದ್ದವಾದ ನದಿಗಳು ಇರುವುದಕ್ಕೆ ಆಸ್ಪದವುಂಟು. ಈ ಖಂಡದ ಪರ್ವತಸ್ತೋಮ ಸಮುದಾಯಗಳು ಪಶ್ಚಿಮ ಪೂರ್ವ ಭಾಗಗಳಲ್ಲಿರುವುದರಿಂದಲೂ, ಇವುಗಳ ನಡುವೆ ದೊಡ್ಡ ಮೈದಾನವಿರುವುದರಿಂದಲೂ, ಈ ಉನ್ನತ ಪ್ರದೇಶಗಳ ನೀರು ತಗ್ಗಾದ ಮೈದಾನಕ್ಕೆ ಬರುತ್ತದೆ; ಮತ್ತು ಈ ಮೈದಾನದ ಜಲವಿಭಾಗಸ್ಥಾನವು ನಡುವೆ ಪೂರ್ವ ಪಶ್ಚಿಮವಾಗಿ ಪ್ರಸರಿಸಿರುವುದರಿಂದ ಕೆಲವು ನದಿಗಳು ಉತ್ತರದ ಇಳಿಜಾರು ನೆಲದಲ್ಲಿ, ಕೆಲವು ದಕ್ಷಿಣದ ಇಳಿಜಾರು ನೆಲದಲ್ಲಿ ಹರಿವುವು. ಬಹಳ ದೊಡ್ಡ ನದಿಗಳು ಈ ಖಂಡದಲ್ಲಿ ನಾಲ್ಕು ಇವೆ. ಮತ್ತು ಇವೆಲ್ಲವೂ ಮಧ್ಯದ ಮಹಾ ಮೈದಾನದಲ್ಲಿಯೇ ಹರಿವುವು: ಇವು ಯಾವುವೆಂದರೆ:—ದಕ್ಷಿಣಕ್ಕೆ ಹರಿದು ಬರುವ ಮಿಸಾರಿಮಿಸಿಸಿಪ್ಪಿ: ಉತ್ತರಕ್ಕೆ ಹೋಗುವ ಮೆಕೆನ್ಸಿ, ಪೂರ್ವಕ್ಕೆ ಬರುವ ಸೆಂಟ್‌ಲಾರೆನ್ಸ್, ಮತ್ತು ಹಡ್ಸನ್ ಕೊಲ್ಲಿಗೆ ಹೋಗುವ ಸಸ್ಕಚ್ಚಿವರ್.

ಕೊಲಂಬಿಯ, ಯೂಕನ್, ಮತ್ತು ಕೊಲರೇಡೊ ಎಂಬುವು ಪೆಸಿಫಿಕ್ ಸಾಗರಕ್ಕೆ ಹರಿವುವು. ಆಲಿಘೆನಿ ಪರ್ವತಕ್ಕೆ ಪೂರ್ವದಲ್ಲಿರುವ ಇಳಿಜಾರು ನೆಲದಲ್ಲಿ ಅನೇಕ ಸಣ್ಣ ನದಿಗಳಿರುವುವು. ಕಾಪರ್‌ಮೈನ್ ನದಿ ಮತ್ತು ಗ್ರೇಟ್‌ಫಿಷ್ ನದಿ ಎಂಬುವು ಉತ್ತರ ಸಾಗರಕ್ಕೆ ಹೋಗುತ್ತವೆ.

(೧) ಮಿಸಾರಿಮಿಸಿಸಿಪ್ಪಿ.—ಇಳಿಜಾರಾಗಿರುವ ನೆಲಗಳು ಮೂರರಿಂದ ಮಿಸಾರಿಮಿಸಿಸಿಪ್ಪೀ ನದಿಗೆ ನೀರು ಬರುತ್ತದೆ; ಅವು ಯಾವುವೆಂದರೆ,—ರಾಕೀಪರ್ವತಶ್ರೇಣಿಗೆ ಪೂರ್ವದಲ್ಲಿರುವ ಇಳಿಜಾರು ನೆಲವೊಂದು, ಅಪಲೇಕಿಯನ್ ಪರ್ವತಶ್ರೇಣಿಗಳ ಪಶ್ಚಿಮಕ್ಕಿರುವ ಇಳಿಜಾರು ನೆಲವೊಂದು, ಹೈಟ್ ಆಫ್' ಲಾಂಡ್ ಎಂಬ ಜಲವಿಭಾಗಸ್ಥಾನದಿಂದ ದಕ್ಷಿಣಕ್ಕಿರುವ ಇಳಿಜಾರು ನೆಲವೊಂದು. ದೊಡ್ಡದಾದ ಮೂರು ಉಪನದಿಗಳು ಈ ಇಳಿಜಾರು ನೆಲಗಳಿಂದ ಬರುತ್ತವೆ.—ಮಿಸಾರಿ, ಓಹಿಯೊ, ಮತ್ತು ಮಿಸಿಸಿಪ್ಪಿ. ಮಿಸಾರಿಮಿಸಿಸಿಪ್ಪೀ ನದಿಯು ಉದ್ದ ೪,೪೦೦ ಮೈಲಿ. ಇದಕ್ಕೆ ಆರ್ಕನ್ಸಾಸ್ ಮತ್ತು ಕೆಂಪುನದಿ ಎಂಬುವೂ ಬಂದು ಸೇರುವುವು. ಇದರ ಮುಖಭಾಗದಲ್ಲಿ ಹೊಸ ಭೂಮಿ ವಿಶೇಷವಾಗಿ ಆಗಿದೆ. ಈ ನದಿ ವ್ಯಾಪಾರಕ್ಕೆ ಬಹಳ ಅನುಕೂಲವಾಗಿರುವುದು. (೨) ಸುಪೀರಿಯರ್, ಮಿಚಿಗನ್, ಹ್ಯೂರನ್, ಈರಿ ಮತ್ತು ಆಂಟೇರಿಯೊ ಎಂಬ ಪಂಚಮಹಾಸರೋವರಗಳ ಹೆಚ್ಚು ನೀರಿನಿಂದ ಸೆಂಟ್ ಲಾರೆನ್ಸ್ ನದಿ ಆಗಿದೆ; ಇದರ ಉದ್ದ ೨,೦೦೦ ಮೈಲಿ. ಉದ್ದದಲ್ಲಿ ಇದು ಈ ಖಂಡದಲ್ಲಿ ಮೂರನೆಯದಾಗಿದ್ದರೂ, ಇದರಲ್ಲಿ ಹರಿವಷ್ಟು ನೀರು ಈ ಖಂಡದ ಇನ್ನು ಯಾವ ನದಿಯಲ್ಲಿಯೂ ಹರಿವುದಿಲ್ಲ; ಈ ನದಿಗೆ ಬೇರೆ ಬೇರೆ ಕಡೆಗಳಲ್ಲಿ ಬೇರೆ ಬೇರೆ ಹೆಸರುಗಳಿವೆ; ಯಾವುವೆಂದರೆ;—ಸುಪೀರಿಯರ್ ಸರೋವರಕ್ಕೆ ಮೇಲುಭಾಗದಲ್ಲಿ ಸೆಂಟ್ ಲೂಇಸ್, ಸುಪೀರಿಯರಿಗೂ ಹ್ಯೂರನ್ ಸರೋವರಕ್ಕೂ ನಡುವೆ ಸ್ಟ್ರೇಟ್ಸ್.

ಹ್ಯೂರ್ನ್ನಿಗೂ ಸೆಂಟ್‌ಕ್ಲೇರ್ ಸರೋವರಕ್ಕೂ ನಡುವೆ ಸೆಂಟ್‌ಕ್ಲೇರ್, ಸೆಂಟ್‌ಕ್ಲೇರ್ ಸರೋವರಕ್ಕೂ ಈರೀ ಸರೋವರಕ್ಕೂ ನಡುವೆ ಡೆಟ್ರಾಯಿಟ್, ಈರೀ ಸರೋವರಕ್ಕೂ ಆಂಟೇರಿಯೋ ಸರೋವರಕ್ಕೂ ನಡುವೆ ನಯಾಗರ, ಮತ್ತು ಆಂಟೇರಿಯೊ ಎಂಬ ಸರೋವರಕ್ಕೂ ಸಾಗರಕ್ಕೂ ನಡುವೆ ಸೆಂಟ್‌ಲಾರೆನ್ಸ್. ನಯಾಗರಾನದಿ ಎರಡು ಕಡೆಗಳಲ್ಲಿ ಎತ್ತರದಿಂದ ಧುಮಿಕುವುದು. ಇಲ್ಲಿ ಬೀಳುವಷ್ಟು ನೀರು ಪೃಥ್ವಿಯಲ್ಲಿರುವ ಇನ್ನು ಯಾವ ಜಲಪಾತದಲ್ಲಿಯೂ ಬೀಳುವುದಿಲ್ಲ. ಇದರ ಕೆನೇಡಿಯನ್ ಪಾತದ ಅಗಲ ೧,೯೦೦ ಅಡಿ, ಎತ್ತರ ೧೬೮ ಅಡಿ; ಇದರ ಅಮೆರಿಕನ್ ಪಾತದ ಅಗಲವು ಕೆನೆಡಿಯನ್ ಪಾತದ ಅಗಲದಲ್ಲಿ ೧/೩ ಆಗಿದೆ; ಆದರೆ ಎತ್ತರದಲ್ಲಿ ಸ್ವಲ್ಪ ಹೆಚ್ಚಾಗಿದೆ. (೩) ಮೆಕನ್‌ಸೀ ನದಿಗೆ ಅತಬಾಸ್ಕ ಮುಂತಾದ ದೊಡ್ಡ ಉಪ ನದಿಗಳು ಬಂದು ಸೇರುವುವು; ಉದ್ದದಲ್ಲಿ ೨,೫೦೦ ಮೈಲಿಯಷ್ಟು ಇದೆ. (೪) ಸಸ್ಕಚ್ಚಿವನ್ ಅಥವಾ ನೆಲ್ಸನ್ ಎಂಬ ನದಿ ೧,೯೦೦ ಮೈಲಿಯಷ್ಟು ಉದ್ದವಾಗಿದೆ.

13. ಸರೋವರಗಳು.—ಉತ್ತರ ಅಮೆರಿಕಾ ಖಂಡದಲ್ಲಿ ದೊಡ್ಡ ದೊಡ್ಡ ನದಿಗಳು ಇರುವುವಲ್ಲದೆ ವಿಶಾಲವಾದ ಸರೋವರಗಳೂ ಅನೇಕ ಇವೆ. ಅತಿ ವಿಶಾಲವಾದ ಸರೋವರಗಳಿರುವುದೊಂದೇ ಅಲ್ಲ; ಇಲ್ಲಿರುವ ಇಂತಹ ಸರೋವರಗಳ ಸಂಖ್ಯೆ ಇನ್ನು ಯಾವ ಖಂಡದಲ್ಲಿಯೂ ಇಲ್ಲ; ಈ ಖಂಡವನ್ನು ಸರೋವರಗಳ ಖಂಡವೆಂದು ಕರೆಯಬಹುದು. ಇಲ್ಲಿಯ ಸರೋವರಗಳು ಮುಖ್ಯವಾಗಿ ಹಡ್ಸನ್ ಕೊಲ್ಲಿಗೆ ಪಶ್ಚಿಮದಲ್ಲಿ ಅರ್ಧಚಂದ್ರಾಕೃತಿಯಲ್ಲಿ ನೆಲೆಗೊಂಡಿವೆ. ತಗ್ಗಾದ ಮೂರು ಪ್ರದೇಶಗಳಲ್ಲಿ ಇವು ಇರುವುವು; ಮೆಕನ್‌ಸಿ, ಸಸ್ಕಚ್ಚಿವನ್, ಮತ್ತು ಸೆಂಟ್‌ಲಾರೆನ್ಸ್ ಎಂಬ ಮೂರು ದೊಡ್ಡ ನದಿಗಳಿಗೆ ಸಂಬಂಧಪಟ್ಟಿರುವುವು. ಈ ಖಂಡದಲ್ಲಿರುವ ಬಹು ಮುಖ್ಯವಾದ ಸರೋವರಗಳು ಯಾವುವೆಂದರೆ:—ಗ್ರೇಟ್‌ಬೇರ್, ಗ್ರೇಟ್‌ಸ್ಲೇವ್, ಅತಬಾಸ್ಕ, ವಿನಿಪೆಗ್, ಮತ್ತು ಪಂಚಮಹಾಸರೋವರಗಳಾದ ಸುಪೀರಿಯರ್, ಮಿಚಿಗನ್, ಹ್ಯೂರನ್, ಈರಿ, ಆಂಟೇರಿಯೊ ಎಂಬುವು. ಪಶ್ಚಿಮ ಪ್ರಸ್ಥಭೂಮಿಯಲ್ಲಿ ಗ್ರೇಟ್‌ಸಾಲ್ಟ್ ಸರೋವರವು ಇದೆ.

(೧) ಸುಪೀರಿಯರ್ ಸರೋವರಕ್ಕಿಂತ ದೊಡ್ಡದಾದ ಸರೋವರವು ಪೃಥ್ವಿಯಲ್ಲಿಲ್ಲ, ಇದರ ವಿಸ್ತೀರ್ಣವು ೩೨,೦೦೦ ಚ. ಮೈ. ಆಳವು ಕೆಲವೆಡೆಗಳಲ್ಲಿ ೬೦೦ ಅಡಿಯಷ್ಟು ಇರುವುದು. ೨೦೦ ನದಿಗಳ ನೀರು ಇದಕ್ಕೆ ಸೇರುವುದು, ಮತ್ತು ಇದರ ನೀರು ಬಹಳ ತಿಳಿಯಾಗಿದೆ. (೨) ಪಂಚಮಹಾ ಸರೋವರಗಳ ಒಟ್ಟು ವಿಸ್ತೀರ್ಣವು ೯೦,೦೦೦ ಚದರ ಮೈಲಿಗಿಂತ ಹೆಚ್ಚಾಗಿದೆ. (5)

14. ವಾಯುಗುಣ.—ಈ ಖಂಡವು ಉ. ಅ. ಸುಮಾರು ೧೦ ರಿಂದ ಸುಮಾರು ೮೦ರ ವರೆಗೂ ಪ್ರಸರಿಸಿರುವುದರಿಂದ ಬೇರೆ ಬೇರೆ ಕಡೆಗಳಲ್ಲಿ ವಾಯುಗುಣವು ಬೇರೆ ಬೇರೆಯಾಗಿದೆ. ಉಷ್ಣವಲಯದಲ್ಲಿಯೂ ಖಂಡದ ಕೊಂಚ ಭಾಗ ಮಾತ್ರ ಇದೆ; ಉತ್ತರ ಸಮಶೀತೋಷ್ಣವಲಯದಲ್ಲಿ ಹೆಚ್ಚು ಭಾಗವು ಇರುವುದು.

ಈ ಖಂಡದ ಭಾಗಗಳ ವಾಯುಗುಣವನ್ನು ನಿರ್ಣಯಿಸುವುದಕ್ಕೆ ಮುಂದೆ ಹೇಳುವ ವಿಷಯಗಳು ಮುಖ್ಯಗಳಾಗಿವೆ.

(೧) ಪೆಸಿಫಿಕ್ ಸಾಗರದ ಮೇಲೆ ಬೀಸಿಕೊಂಡು ಬರುವ ಜಲಾಂಶಪೂರಿತವಾದ ನೈರುತ್ಯ ಮಾರುತವು ಈ ಖಂಡದೊಳಭಾಗಕ್ಕೆ ಬಾರದಿರುವಂತೆ ಪಶ್ಚಿಮದಲ್ಲಿರುವ ಉನ್ನತವಾದ ಪರ್ವತಶ್ರೇಣಿಗಳು ತಡೆವುವು; ಆದುದರಿಂದ ಈ ಖಂಡದ ಒಳಭಾಗದಲ್ಲಿ ಬೇಸಗೆಯಲ್ಲಿ ಸೆಕೆ ಮತ್ತು ಚಳಿಗಾಲದಲ್ಲಿ ಚಳಿ ಹೆಚ್ಚಾಗಿ ತೋರುವುವು. (೨) ಈ ಖಂಡದ ಮಧ್ಯಭಾಗದಲ್ಲಿ ವಿಶಾಲವಾದ ಮೈದಾನವು ದಕ್ಷಿಣೋತ್ತರವಾಗಿ ಮತ್ತು ಅಖಂಡವಾಗಿ ಪ್ರಸರಿಸಿರುವುದರಿಂದಲೂ, ಉತ್ತರ ಶೀತವಲಯದಿಂದ ಬೀಸುವ ಶೀತಮಾರುತಗಳನ್ನು ತಡೆವುದಕ್ಕೆ ಈ ಮೈದಾನದ ಉತ್ತರಭಾಗದಲ್ಲಿ ಪೂರ್ವಪಶ್ಚಿಮವಾಗಿ ಹಬ್ಬಿರುವ ಪರ್ವತಶ್ರೇಣಿಗಳಿಲ್ಲದಿರುವುದರಿಂದಲೂ, ಈ ಮೈದಾನದಲ್ಲಿ ವಾಯುಗುಣವು ಅನೇಕ ವೇಳೆಗಳಲ್ಲಿ ಥಟ್ಟನೆ ಬದಲಾಗುವುದುಂಟು. ಈಗ ಇದ್ದ ವಾಯುಗುಣವು ಇನ್ನೊಂದು ಗಂಟೆಯ ವರೆಗೆ ಇರುವುದೆಂದು ಹೇಳುವುದಕ್ಕಾಗುವುದಿಲ್ಲ; ಉತ್ತರ ಶೀತಮಾರುತಗಳು ಬೀಸುವಾಗ ೩೦ ನೆಯ ಅಕ್ಷಾಂಶದಲ್ಲಿರುವ ಮಿಸೂರಿ ಮಿಸಿಸಿಪ್ಪೀ ನದೀಮುಖ ಪ್ರದೇಶದಲ್ಲಿ ನೀರು ಶೈತ್ಯಾಧಿಕ್ಯದಿಂದ ಕಲ್ಲಾಗುವುದು. (೩) ಪೆಸಿಫಿಕ್ ಸಾಗರದಿಂದ ಬೀಸುವ ದಕ್ಷಿಣ ಪಶ್ಚಿಮ ಮಾರುತಗಳು ಬೆಚ್ಚಗಿರುವುವಲ್ಲದೆ ಮಳೆಯ ಮೋಡಗಳನ್ನು ಹೆಚ್ಚಾಗಿ ತರುವುವು; ಈ ಮಾರುತಗಳು ಪಶ್ಚಿಮದ ಉನ್ನತವಾದ ಪರ್ವತ ಶ್ರೇಣಿಗಳನ್ನು ದಾಟಿ ಪೂರ್ವಭಾಗಕ್ಕೆ ಬರುವಾಗ ಜಲಾಂಶರಹಿತಗಳಾಗುವುವು. ಪೂರ್ವಭಾಗದಿಂದ ಬೀಸುವ ಗಾಳಿಗಳು ಜಲಾಂಶಪೂರಿತಗಳಾದರೂ ಶೀತವಾಗಿರುವುವು. ಸಮಶೀತೋಷ್ಣವಲಯದಲ್ಲಿ ಪೂರ್ವತೀರಕ್ಕಿಂತ ಪಶ್ಚಿಮತೀರದಲ್ಲಿ ಮಳೆ ಹೆಚ್ಚಾಗಿ ಹೊಯ್ಯುತ್ತದೆ, ಮತ್ತು ಚಳಿ ಕಡಿಮೆಯಾಗಿರುತ್ತದೆ.

ದಕ್ಷಿಣಭಾಗದಲ್ಲಿ ಮಳೆ ಹೆಚ್ಚಾಗಿ ಹೊಯ್ಯುತ್ತದೆ; ಉತ್ತರಕ್ಕೆ ಹೋಗುತ್ತ ಹೋಗುತ್ತ ಕಡಿಮೆಯಾಗುವುದು. ಪಶ್ಚಿಮದಿಂದ ಪೂರ್ವಕ್ಕೆ ಬರುವಾಗಲೂ ಮಳೆ ಕಡಿಮೆಯಾಗುತ್ತದೆ. ಪಶ್ಚಿಮ ಪ್ರಸ್ಥಭೂಮಿಯಲ್ಲಿಯೂ ರಾಕೀ ಪರ್ವತಶ್ರೇಣಿಗೆ ಪೂರ್ವದಲ್ಲಿರುವ ಪ್ರಸ್ಥಭೂಮಿಗಳಲ್ಲಿಯೂ ಮಳೆ ಬಹಳ ಕಡಿಮೆ, ಮತ್ತು ನೀರು ದೊರೆವುದು ಕಷ್ಟ.

15. ಉದ್ಭಿಜ್ಜಗಳು.—ಉತ್ತರ ಅಮೆರಿಕಾ ಖಂಡದಲ್ಲಿ ನಾನಾ ಬಗೆಯ ಉದ್ಭಿಜ್ಜಗಳಿವೆ. ಉತ್ತರ ಶೀತವಲಯಭಾಗದಲ್ಲಿ ಪಾಚಿ ಮತ್ತು ಶಿಲಾವಲ್ಕಗಳು ಇವೆ; ಉಷ್ಣವಲಯದಲ್ಲಿರುವ ಮಧ್ಯದ ಅಮೆರಿಕದಲ್ಲಿ ತೆಂಗಿನ ಜಾತಿಯ ವೃಕ್ಷಗಳೂ ಬಿದಿರು ಮೆಳೆಗಳೂ ವಿಶೇಷ. ಸಮಶೀತೋಷ್ಣವಲಯಭಾಗದಲ್ಲಿ ನಾನಾ ಜಾತಿಯ ವೃಕ್ಷಗಳಿರುವುವು. ಉತ್ತರಭಾಗದಲ್ಲಿ ಗೋಧಿ, ಜವೆಗೋಧಿ, ಮತ್ತು ತೋಕೆಗೋಧಿ, ಆಗುವುವು. ಕೆನಡದ ಕೆಲವು ಭಾಗದಲ್ಲಿಯೂ, ಈ ಖಂಡದ ದಕ್ಷಿಣ ಪ್ರಾಂತ್ಯಗಳಲ್ಲಿಯೂ ಮೆಕ್ಕೆಜೋಳವು ಚೆನ್ನಾಗಿ ಬೆಳೆಯುತ್ತದೆ. ಸಂಯುಕ್ತ ಸಂಸ್ಥಾ

ನದ ದಕ್ಷಿಣ ಡಿಸ್ಟ್ರಿಕ್ಟುಗಳಲ್ಲಿ ಬತ್ತ, ಕಬ್ಬು, ಹೊಗೆಯಸೊಪ್ಪು, ಹತ್ತಿ, ಕಿತ್ತಿಳೆ, ಅಂಜೂರ ಮುಂತಾದುವು ಆಗುತ್ತವೆ.

ಜಲಸಮೃದ್ಧಿಯಿರುವ ಪೂರ್ವ ಪಶ್ಚಿಮ ತೀರಗಳಲ್ಲಿ ದೊಡ್ಡ ಕಾಡುಗಳಿವೆ; ಕೆನಡದಲ್ಲಿ ಬಾನವೃಕ್ಷ (Oak) ಪೀತದಾರು (Pine) ಮುಂತಾದ ವೃಕ್ಷಗಳು ವಿಶೇಷವಾಗಿವೆ.

16. ಪ್ರಾಣಿಗಳು.—ಉತ್ತರ ಅಮೇರಿಕಾ ಖಂಡದಲ್ಲಿ ನಾನಾ ಜಾತಿಯ ಚತುಷ್ಪಾದಿಗಳೂ ಪಕ್ಷಿಗಳೂ ಜಲಚರಗಳೂ ಇವೆ. ಆದರೆ ಈ ಖಂಡದಲ್ಲಿ ಯೂರೋಪೇಷ್ಯಾ ಖಂಡಗಳಲ್ಲಿರುವಷ್ಟು ಜಾತಿ ಸಸ್ತನಿಗಳಿಲ್ಲ. ತುಪ್ಪಟವುಳ್ಳ ಪ್ರಾಣಿಗಳು (fur-clothed animals) ಉತ್ತರದಲ್ಲಿ ವಿಶೇಷವಾಗಿವೆ; ಉಷ್ಣವಲಯದ ಭಾಗದಲ್ಲಿ ಹಲವು ಬಗೆಯ ಕಪಿಗಳಿರುವುವು. ವಿಜಾತೀಯವಾದ ಪಕ್ಷಿಗಳನೇಕ ಇರುವುವು; ಹಮ್ಮಿಂಗ್ ಪಕ್ಷಿ ಇನ್ನಾವ ಖಂಡದಲ್ಲಿಯೂ ಇಲ್ಲ. ಈ ಖಂಡದಲ್ಲಿ ಬುಡುಬುಡುಕೆಯ ಹಾವು (Rattlesnake) ಬಹಳ ವಿಶೇಷ.

ವ್ಹೇಲ್ ಮುಂತಾದ ಮೀನುಗಳು ವಿಶೇಷವಾಗಿವೆ. ಅಮೇರಿಕಾ ಖಂಡವು ಟರ್ಕೀ ಕೋಳಿಯ (ಸಾಬತ್ ಕೋಳಿಯ) ತವರ್ಮನೆ.

17. ಖನಿಜಗಳು.—ಪರಿಮಾಣದಲ್ಲಿಯೇ ಆಗಲಿ, ಬಗೆಗಳಲ್ಲಿಯೇ ಆಗಲಿ, ಖನಿಜಗಳ ವಿಷಯದಲ್ಲಿ ಉತ್ತರ ಅಮೇರಿಕಾ ಖಂಡವನ್ನು ಮೀರಿಸಿರುವ ಖಂಡವು ಯಾವುದೂ ಇಲ್ಲ. ಸಂಯುಕ್ತ ಸಂಸ್ಥಾನದಲ್ಲಿಯೂ ಕೆನಡದಲ್ಲಿಯೂ ಕಲ್ಲಿದ್ದಲಿನ ಪ್ರದೇಶಗಳು ವಿಪರೀತವಾಗಿವೆ. ಕಬ್ಬಿಣವು ಮಿತಿಯಿಲ್ಲದೆ ಸಿಕ್ಕುತ್ತದೆ. ಚಿನ್ನವೂ ಬೆಳ್ಳಿಯೂ ಬಹಳ ಹೆಚ್ಚಾಗಿ ಸಿಕ್ಕುತ್ತವೆ. ಸುಪೀರಿಯರ್ ಸರೋವರದ ಉತ್ತರ ಮತ್ತು ಪೂರ್ವತೀರಗಳಲ್ಲಿ ಅತಿ ಶುಭ್ರವಾದ ತಾಮ್ರವು ಪುಷ್ಕಳವಾಗಿ ದೊರೆವುದು.

ಈ ಖಂಡದ ಅನೇಕ ಭಾಗಗಳಲ್ಲಿ ಸೀಸವೂ ಪಾದರಸವೂ ಇರುವುವು; ಕೆನಡದಲ್ಲಿಯೂ ಮೆಕ್ಸಿಕೋ ದೇಶದಲ್ಲಿಯೂ ತವರವು ವಿಶೇಷವಾಗಿದೆ.

(೧) ಸಂಯುಕ್ತ ಸಂಸ್ಥಾನದಲ್ಲಿರುವ ಕಲ್ಲಿದ್ದಲಿನ ಪ್ರದೇಶಗಳ ವಿಸ್ತೀರ್ಣವು ಯೂರೋಪ್ ಖಂಡದ ಕಲ್ಲಿದ್ದಲಿನ ಪ್ರದೇಶಗಳ ವಿಸ್ತೀರ್ಣಕ್ಕಿಂತ ೨೦ ಪಾಲು ಹೆಚ್ಚಾಗಿದೆ. (೨) ಕೆನೇಡಿಯನ್ ಡುಮಿನಿಯನ್ನಿನಲ್ಲಿರುವ ಕಬ್ಬಿಣವನ್ನೂ ತಾಮ್ರವನ್ನೂ ಖನಿಗಳಿಂದ ತೆಗೆದು ಯಂತ್ರಾದಿಗಳನ್ನು ಮಾಡಿಸಿ ಮಾರಿದರೆ ಬ್ರಿಟಿಷರ ಐಶ್ವರ್ಯಕ್ಕಿಂತಲೂ ಅತಿಶಯವಾದ ಐಶ್ವರ್ಯವನ್ನು ಸಂಪಾದಿಸಬಹುದು. (೩) ರಾಕೀ ಪರ್ವತಶ್ರೇಣಿಗೆ ಪಶ್ಚಿಮದಲ್ಲಿರುವ ಕಾಲಿಫೋರ್ನಿಯ, ಮತ್ತು ಮಾಂಟೇನ ಎಂಬ ಪ್ರದೇಶಗಳಲ್ಲಿ ಚಿನ್ನವು ವಿಶೇಷವಾಗಿ ಸಿಕ್ಕುತ್ತಿದೆ. (೪) ಮೆಕ್ಸಿಕೋ ದೇಶದಲ್ಲಿ ಹುಟ್ಟುವಳಿ ಯಾಗುತ್ತಿರುವಷ್ಟು ಬೆಳ್ಳಿ ಇನ್ನು ಯಾವ ದೇಶದಲ್ಲಿಯೂ ಹುಟ್ಟುವಳಿ ಯಾಗುತ್ತಿಲ್ಲ.

18. ಜನರು.—ಈ ಖಂಡದಲ್ಲಿ ೮,೫೦,೦೦,೦೦೦ ನಿವಾಸಿಗಳಿದ್ದಾರೆ. ಇವರಲ್ಲಿ ಸುಮಾರು ೬,೦೦,೦೦,೦೦೦ ಜನರು ಬಿಳಿಯ ಜನರು ಅಥವಾ ಯೂರೋಪಿನ

ವರು ; ಉಳಿದವರು ನೀಗ್ರೋ ಕುಲದವರು, ತಾಮ್ರ ವರ್ಣದವರು, ಮತ್ತು ಸಂಕರ ಜಾತಿಯವರು.

(೧) ಬಿಳಿಯ ಜನರು ಸುಮಾರು ೬,೫೦,೦೦,೦೦೦ದ ವರೆಗಿದಾರೆ. ಇವರು ಸಾಮಾನ್ಯವಾಗಿ ಇಂಗ್ಲಿಷು ಭಾಷೆಯನ್ನಾಡುತ್ತಾರೆ; ಜರ್ಮನಿಯಿಂದ ಬಂದವರು ಜರ್ಮನ್ ಭಾಷೆಯನ್ನಾಡುತ್ತಾರೆ; ದಕ್ಷಿಣ ಭಾಗದ ದೇಶಗಳಲ್ಲಿ ಸ್ಪಾನಿಷ್ ಭಾಷೆ ಪ್ರಚುರವಾಗಿದೆ. (೨) ನೀಗ್ರೋ ಕುಲದವರು ಸುಮಾರು ೧,೪೦,೦೦,೦೦೦ದವರೆಗೆ ಇದ್ದಾರೆ; ಇವರ ಸಂಖ್ಯೆ ಹೆಚ್ಚುತ್ತಿದೆ. (೩) ತಾಮ್ರ ವರ್ಣದವರು ಸುಮಾರು ೫೦,೦೦,೦೦೦ದ ವರೆಗೆ ಇರುವರೆಂದು ಹೇಳುತ್ತಾರೆ; ಇವರ ಸಂಖ್ಯೆ ಕಡಿಮೆಯಾಗುತ್ತಿದೆ. (೪) ಸಂಕರ ಜಾತಿಯವರು ಕೆನಡದಲ್ಲಿಯೂ, ಮೆಕ್ಸಿಕೋ ದೇಶದಲ್ಲಿಯೂ, ಮಧ್ಯದ ಅಮೇರಿಕದಲ್ಲಿಯೂ ಇದ್ದಾರೆ. ಇವರು ಸುಮಾರು ೯೦,೦೦,೦೦೦ ವರೆಗಿದ್ದಾರೆ. (೫) ಗ್ರೀನ್ಲೆಂಡಿನಲ್ಲಿಯೂ ಉತ್ತರ ಭಾಗದಲ್ಲಿಯೂ ಇರುವ ಎಸ್ಕಿಮೋ ಜನರು ಯೂರೋಪಿನಲ್ಲಿರುವ ಲಾಪ್ ಜನರ ಕುಲಕ್ಕೆ ಸೇರಿದವರು. ಮೀನು ಹಿಡಿದು ಜೀವಿಸುವುದು ಇವರ ಕೆಲಸ.

19. ಚರಿತ್ರೆಯ ಕೆಲವು ಸಂಗತಿಗಳು.—ಕ್ರಿ. ಶ. ೧೪೯೨ಕ್ಕೆ ಮುಂಚೆ ಉತ್ತರ ಅಮೇರಿಕಾ ಖಂಡವಿರುವ ಸಂಗತಿ ಯೂರೋಪಿನವರಿಗೆ ತಿಳಿದಿರಲಿಲ್ಲ. ಈ ಇಸವಿಯಲ್ಲಿ ಕ್ರಿಸ್ಟೋಫರ್ ಕೊಲಂಬಸ್ ಎಂಬಾತನು ಈ ಖಂಡಕ್ಕೆ ಸೇರಿದ ವೆಸ್ಟ್ ಇಂಡಿಯಾ ದ್ವೀಪಗಳನ್ನೂ, ಮತ್ತು ೧೪೯೮ರಲ್ಲಿ ಈ ಖಂಡದ ಒಂದು ದೇಶವನ್ನೂ ಕಂಡು ಹಿಡಿದನು. ಈ ಖಂಡವನ್ನು ಜಯಿಸಿ ಸ್ವಾಧೀನ ಪಡಿಸಿಕೊಳ್ಳಬೇಕೆಂದು ಮೊದಲು ಯೋಚಿಸಿದವರು ಸ್ಪೇನ್ ದೇಶದವರು; ಇವರು ೧೫೨೧ರಲ್ಲಿ ಮೆಕ್ಸಿಕೋ ದೇಶವನ್ನು ಜಯಿಸಿ ತಮ್ಮ ಸ್ವಾಧೀನಕ್ಕೆ ತೆಗೆದುಕೊಂಡುದಲ್ಲದೆ ವೆಸ್ಟ್ ಇಂಡಿಯಾ ದ್ವೀಪಗಳಲ್ಲಿ ಕೆಲವನ್ನೂ ತಮ್ಮ ವಶಮಾಡಿಕೊಂಡರು. ೧೫೩೪ರಲ್ಲಿ ಫ್ರೆಂಚರು ಬಂದು ಕೆನಡದ ಪ್ರಾಂತದಲ್ಲಿ ಕೋಟೆಗಳನ್ನು ಕಟ್ಟಿ ಕಾಲೊನಿಗಳನ್ನು (ವಸತಿಗಳನ್ನು) ಸ್ಥಾಪಿಸಿದರು. ೧೬೦೭ರಲ್ಲಿ ಇಂಗ್ಲಿಷರು ಬಂದು ಆಲಿಘೆನಿ ಪರ್ವತಕ್ಕೆ ಪೂರ್ವಭಾಗದಲ್ಲಿರುವ ಪ್ರದೇಶದಲ್ಲಿ ಒಂದು ಕಾಲೊನಿಯನ್ನು ಸ್ಥಾಪಿಸಿದರು. ೧೭೫೬ನೆಯ ಇಸವಿಯ ಹೊತ್ತಿಗೆ ಇಂಗ್ಲಿಷರ ಕಾಲೊನಿಗಳು ೧೩ ಆಗಿದ್ದುವು. ಆಗ ಇಂಗ್ಲಿಷರಿಗೂ ಫ್ರೆಂಚರಿಗೂ ಯುದ್ಧವು ಪ್ರಾರಂಭವಾಗಿ, ಕೊನೆಗೆ ಫ್ರೆಂಚರು ಪರಾಜಿತರಾದರು; ಇವರ ವಶದಲ್ಲಿದ್ದ ದೇಶಗಳು ಇಂಗ್ಲಿಷರ ವಶಕ್ಕೆ ಬಂದುವು. ಆ ಮೇಲೆ, ಈ ಖಂಡದಲ್ಲಿ ನೆಲೆಗೊಂಡಿದ್ದ ಬ್ರಿಟಿಷರಿಗೂ ಯೂರೋಪಿನಲ್ಲಿದ್ದ ಬ್ರಿಟಿಷರಿಗೂ ಮನಸ್ತಾಪ ವುಂಟಾಗಿ, ೧೭೭೪ರಲ್ಲಿ ಯುದ್ಧವು ಪ್ರಾರಂಭವಾಯಿತು. ಕಾಲೊನಿಗಳಲ್ಲಿದ್ದ ಬ್ರಿಟಿಷರು, ಬ್ರಿಟಿಷ್ ರಾಜನ ಪ್ರಜೆಗಳಾಗಿರಲೊಡಂಬಡದೆ (೧೭೭೬ರಲ್ಲಿ) ಒಕ್ಕಟ್ಟಿನ ಮೇಲೆ ಬೇರೆಯಾಗಿ, ಸ್ವತಂತ್ರರಾದರು. ಮೆಕ್ಸಿಕೋ ದೇಶವು ೧೮೨೧ರಲ್ಲಿ ಸ್ಪೇನಿಗೆ ಅಧೀನವಾಗಿರುವುದಕ್ಕೆ ಒಡಂಬಡದೆ ಸ್ವತಂತ್ರ ದೇಶವಾಯಿತು.

ಗ್ರೀನ್‌ಲೆಂಡ್.

1. ದೇಶದ ಲಕ್ಷಣ.—ಗ್ರೀನ್ಲೆಂಡ್ ಉತ್ತರ ಅಕ್ಷಾಂಶ ೬೦ಕ್ಕೆ ಉತ್ತರದಲ್ಲಿದೆ; ಇದರ ಉತ್ತರ ಮೇರೆಯನ್ನು ಇನ್ನೂ ಯಾರೂ ಕಂಡು ಹಿಡಿದಿಲ್ಲ. ಅಗಾಧವಾದ ಹಿಮನದಿಗಳಲ್ಲಿ ಈ ದೇಶದ ನೆಲವು ಹೂತು ಹೋಗಿದೆ; ಈ ಹಿಮನದಿಗಳು ಮೆಲ್ಲನೆ ಸಮುದ್ರತೀರಕ್ಕೆ ಬರುವುವು. ಆಗ ಅವುಗಳ ಅಂಚುಗಳು ಮುರಿದು ಹೋಗಿ ನೀರ್ಗಲ್ಲಿನ ಗುಡ್ಡಗಳಾಗಿ ಸಾಗರದಲ್ಲಿ ತೇಲಿ ಹೋಗುವುವು.

2. ಜನ.—ಪಶ್ಚಿಮ ತೀರದಲ್ಲಿ ಕೆಲವು ಊರುಗಳಿವೆ. ಈ ದೇಶವು ಡೇನರಿಗೆ ಸೇರಿರುವುದು. ಇಲ್ಲಿನ ಮೂಲ ನಿವಾಸಿಗಳು ಒರಟರಾದ ಎಸ್ಕಿಮೋ ಜನರು. ಮೀನಿನ ಬೇಟೆಯೇ ಇವರ ಮುಖ್ಯೋದ್ಯೋಗ; ಕೊಂಚ ಜವೆಗೋದುವೆಯನ್ನೂ ಉರುಳೆಗಡ್ಡೆಯನ್ನೂ ಬೆಳೆಯುತ್ತಾರೆ. ಈ ದೇಶದ ಪಶ್ಚಿಮ ತೀರದಲ್ಲಿರುವ ಫ್ರೆಡರಿಕ್‌ಷಾಬ್ ಮತ್ತು ಅಪ್ಪರ್‌ನಾವಿಕ್ ಎಂಬುವು ಡೇನರಿಗೆ ಸೇರಿವೆ. ಅಪ್ಪರ್‌ನಾವಿಕ್ ಎಂಬ ಊರಿಗಿಂತ ಉತ್ತರದಲ್ಲಿರುವ ಊರು ಪೃಥ್ವಿಯಲ್ಲಿ ಎಲ್ಲಿಯೂ ಇಲ್ಲ.

ಸಂಯುಕ್ತ ಸಂಸ್ಥಾನದ ನಾವಿಕನಾದ ಲೆಫ್ಟಿನೆಂಟ್ ಗ್ರೀಲಿ ಎಂಬಾತನು ೧೮೮೨ನೆಯ ಇಸವಿಯಲ್ಲಿ ಉ. ಅ. ೮೩ ೨/೫ ವರೆಗೆ ಬಹು ಕಷ್ಟಪಟ್ಟು ಹೋದನು. ಬಳಿಕ ೧೮೯೪ನೆಯ ಇಸವಿಯಲ್ಲಿ ಜಾರ್ಕ್ಸ್‌, ಆಂಡ್ರಿ, ಪಿಯರಿ ಎಂಬ ಸಾಹಸಿಗಳು ಧ್ರುವಸ್ಥಾನವನ್ನು ಕಂಡು ಹಿಡಿಯುವ ಪ್ರಯತ್ನಗಳನ್ನು ಮಾಡಿದರು. ಇವರಲ್ಲಿ ಪಿಯರಿ ಎಂಬಾತನು ೧೯೦೬ರಲ್ಲಿ ಸುಮಾರು ೮೭ರ ವರೆಗೂ ಹೋಗಿದ್ದನು. ಕಡೆಗೆ ಈತನೇ ೧೯೦೯ನೆಯ ಏಪ್ರಿಲ್ ೬ರಲ್ಲಿ ಉತ್ತರಧ್ರುವಸ್ಥಾನವನ್ನು ಸೇರಿ ಅಲ್ಲಿ ತಾನು ಕಂಡದನ್ನೂ ತನ್ನ ಅನುಭವವನ್ನೂ ಗ್ರಂಥರೂಪವಾಗಿ ಬರೆದಿಟ್ಟಿರುವನು.

ಬ್ರಿಟಿಷ್ ಅಮೆರಿಕ.

1. ಮೇರೆ ಮತ್ತು ವಿಸ್ತೀರ್ಣ.—ಬ್ರಿಟಿಷ್ ಅಮೆರಿಕವು ಉ. ಅ. ೪೦ರಿಂದ ೮೦ರ ವರೆಗೂ ಪ್ರಸರಿಸಿದೆ; ಉತ್ತರಕ್ಕೆ ಉತ್ತರ ಸಾಗರ, ಪೂರ್ವಕ್ಕೆ ಅಟ್ಲಾಂಟಿಕ್ ಸಾಗರ, ದಕ್ಷಿಣಕ್ಕೆ ಸಂಯುಕ್ತ ಸಂಸ್ಥಾನ, ಪಶ್ಚಿಮಕ್ಕೆ ಅಲಾಸ್ಕ ಮತ್ತು ಪೆಸಿಫಿಕ್ ಸಾಗರ. ವಿಸ್ತೀರ್ಣ ಸುಮಾರು ೩೪,೫೦,೦೦೦ ಚದರ ಮೈಲಿ; ಬ್ರಿಟಿಷ್ ಅಮೆರಿಕವು ಯೂರೋಪ್ ಖಂಡಕ್ಕೆ ಸ್ವಲ್ಪ ಕಡಿಮೆಯಾಗಿ ಇದೆ.

2. ಇದರಲ್ಲಿರುವ ದೇಶಗಳು.—ಬ್ರಿಟಿಷ್ ಅಮೇರಿಕದಲ್ಲಿ ಕೆನಡಾ ಡುಮಿನಿಯನ್ ಎಂಬುದೂ ನ್ಯೂಫೌಂಡ್ಲೆಂಡ್ ಎಂಬುದೂ ಸೇರಿವೆ. ಕೆನಡಾ ಡುಮಿನಿಯನ್ನಿನಲ್ಲಿ ಮುಂದೆ ಹೇಳುವ ಪ್ರಾವಿನ್ಸು ಅಥವಾ ಡಿಸ್ಟ್ರಿಕ್ಟುಗಳು ಸೇರಿವೆ:—ಅಂಟೇರಿಯೊ, ಕ್ವಿಬೆಕ್, ನೋವಸ್ಕೋಷಿಯ, ನ್ಯೂಬ್ರನ್ಸ್ವಿಕ್, ಮಾನಿಟೋಬ, ಬ್ರಿಟಿಷ್ ಕೊಲಂಬಿಯ, ಪ್ರಿನ್ಸ್ ಎಡ್ವರ್ಡ್ ದ್ವೀಪ, ಮತ್ತು ವಾಯುವ್ಯದ ರಾಷ್ಟ್ರಗಳು.

ಬ್ರಿಟಿಷ್ ಅಮೇರಿಕವಿರುವ ರೀತಿ—ಕಾರ್ಡಿಲೆರಾ ಪರ್ವತ ಶ್ರೇಣಿಗಳಿಗೂ ರಾಕೀಪರ್ವತ ಶ್ರೇಣಿಗೂ ನಡುವೆ ಇರುವ ಉನ್ನತವಾದ ಪ್ರಸ್ಥಭೂಮಿ; ರಾಕೀ ಪರ್ವತ ಶ್ರೇಣಿಗೆ ಪೂರ್ವದಲ್ಲಿ ಇನ್ನೊಂದು ಪ್ರಸ್ಥಭೂಮಿ; ವಿಶೇಷವಾಗಿ ಸರೋವರಗಳಿರುವ ಮೆಕೆನ್ಸೀ ನದಿಯ ಕಣಿವೆ; ಹಡ್ಸನ್ ಕೊಲ್ಲಿಯ ಸುತ್ತ ಮುತ್ತಲೂ ಇರುವ ವಿಶಾಲವಾದ ತಗ್ಗು ನೆಲ; ಸೇಂಟ್‌ಲಾರೆನ್ಸ್ ನದಿಗೂ ಹಡ್ಸನ್ ಕೊಲ್ಲಿಗೂ ನಡುವೆ ಇರುವ ಲಾರೆಂಟಸ್ಟ್ ಜಲವಿಭಾಗಸ್ಥಾನ; ಸೇಂಟ್ ಲಾರೆನ್ಸ್ ನದಿಯ ಜಲಾನಯನ ಭೂಮಿಯಲ್ಲಿ ಅನೇಕ ಭಾಗಗಳು—ಇವೆಲ್ಲಾ ಸೇರಿ ಬ್ರಿಟಿಷ್ ಅಮೇರಿಕವಾಗಿರುವುದು.

4. ಮುಖ್ಯವಾದ ಪರ್ವತಗಳು, ನದಿಗಳು, ಮತ್ತು ಸರೋವರಗಳು.—ಇಲ್ಲಿರುವ ಪರ್ವತಗಳೊಳಗೆ ರಾಕೀಪರ್ವತಶ್ರೇಣಿ ಮುಖ್ಯ. ಸೇಂಟ್‌ಲಾರೆನ್ಸ್, ಮೆಕೆನ್ಸಿ, ಫ್ರೇಸರ್, ಕೆಂಪುಹೊಳೆ (Red River) ಮತ್ತು ಸಸ್ಕಾಚ್ಚಿವನ್ ಎಂಬುವು ಮುಖ್ಯನದಿಗಳು. ಸುಪೀರಿಯರ್, ಹ್ಯೂರನ್, ಈರಿ, ಅಂಟೇರಿಯೊ, ವಿನಿಪೆಗ್, ಮಾನಿಟೋಬ, ಎಂಬುವು ದೊಡ್ಡ ಸರೋವರಗಳು.

(೧) ಫ್ರೇಸರ್ ಎಂಬ ನದಿ ಬ್ರಿಟಿಷ್ ಕೊಲಂಬಿಯದಲ್ಲಿ ಹರಿಯುತ್ತದೆ, ಇಲ್ಲಿ ಮೀನುಗಳು ಹೆಚ್ಚಾಗಿವೆ. (೨) ಕೆಂಪುಹೊಳೆಯು ವಿನಿಪೆಗ್ ಸರೋವರಕ್ಕೆ ಹರಿದು ಬರುತ್ತದೆ. (೩) ಸಸ್ಕಚ್ಚಿವನ್‌ನದಿ (೧,೯೦೦ ಮೈ.) ವಿನಿಪೆಗ್ ಸರೋವರಕ್ಕೆ ಬೀಳುತ್ತದೆ. ಇದರ ಬಯಲಿನಲ್ಲಿ ಕೆಲವು ಭಾಗವು ಕೃಷ್ಣಭೂಮಿಯಾಗಿದೆ, ಮತ್ತು ಗೋಧಿಯು ಬೆಳೆಗೆ ಉತ್ತಮವಾಗಿರುವುದು. (೪) ಮಾನಿಟೋಬ ಸರೋವರದ ದಕ್ಷಿಣ ಭಾಗದ ನೆಲವು ಗೋಧಿಯ ಬೆಳೆಗೆ ಸರ್ವೋತ್ಕೃಷ್ಟವಾಗಿದೆ.

5. ವಾಯುಗುಣ.—ಈ ಕೆನಡಾ ಡುಮಿನಿಯನ್ನಿನಲ್ಲಿ ಯೂರೋಪ್ ಖಂಡದ ಮಧ್ಯಭಾಗ ಮತ್ತು ಉತ್ತರ ಭಾಗಗಳಲ್ಲಿರುವ ವಾಯುಗುಣಗಳೆಲ್ಲಾ ಕಾಣಬರುವುವು; ಆದರೆ ಒಂದು ತಾರತಮ್ಯವುಂಟು. ಯೂರೋಪ್ ಖಂಡಕ್ಕಿಂತ ಇಲ್ಲಿ ಹೇಮಂತರ್ತುವಿನಲ್ಲಿ ಚಳಿ ಹೆಚ್ಚಾಗಿರುವುದು. ಮಳೆ ಹೊಯ್ಯುವುದು ಯೂರೋಪ್ ಖಂಡದಲ್ಲಿರುವುದಕ್ಕಿಂತ ಕಡಿಮೆ. ದಕ್ಷಿಣ ಭಾಗದಲ್ಲಿ ಕೂಡ ಹೇಮಂತರ್ತು ನಾಲ್ಕು ತಿಂಗಳವರೆಗೆ ಇರುವುದು, ಮತ್ತು ನೀರೆಲ್ಲಾ ಗಡ್ಡೆಯಾಗಿರುತ್ತದೆ. ೬೦ನೆಯ ಅಕ್ಷಾಂಶದಿಂದ ಉತ್ತರಕ್ಕೆ ಚಳಿ ಬಹಳವಾದುದರಿಂದ ಪೈರುಗಳು ಆಗುವುದಿಲ್ಲ.

6. ಭೂಮ್ಯುತ್ಪನ್ನಗಳು ಮತ್ತು ಜನರ ಉದ್ಯೋಗ.—ಚೌಬೀನಿಯ

ಮರ ಮತ್ತು ಧಾನ್ಯಗಳು ಬಹಳ ಹೆಚ್ಚಾಗಿ ಉತ್ಪತ್ತಿಯಾಗುತ್ತವೆ. ಖನಿಜಗಳು ವಿಶೇಷವಾಗಿವೆ, ಆದರೆ ಇವುಗಳನ್ನು ಖನಿಗಳಿಂದ ವಿಶೇಷವಾಗಿ ತೆಗೆಯುತ್ತಿಲ್ಲ. ತೀರ ಪ್ರದೇಶದಲ್ಲಿ ಕಾಡ್ ಮತ್ತು ಸಾಲ್ಮನ್ ಎಂಬ ಮೀನುಗಳ ವ್ಯಾಪಾರವು ಬಹಳ ಆದಾಯಕರವಾಗಿದೆ. ವಾಯುವ್ಯ ರಾಷ್ಟ್ರದಲ್ಲಿ ತುಪ್ಪಳದ ಪ್ರಾಣಿಗಳು ವಿಶೇಷವಾಗಿವೆ, ಮತ್ತು ತುಪ್ಪಳದ ವ್ಯಾಪಾರವು ಹೆಚ್ಚಾಗಿ ನಡೆವುದು. ಕೈಗಾರಿಕೆಗಳು ಕೊಂಚವಟ್ಟಿಗೆ ಇರುವುವು ; ಆದರೆ ಮುಂದಕ್ಕೆ ಬಹಳವಾಗಿ ಹೆಚ್ಚ ಬಹುದಾಗಿವೆ.

(೧) ಅನೇಕ ಭಾಗಗಳಲ್ಲಿ ದೊಡ್ಡ ಕಾಡುಗಳಿವೆ ; ಬಾನವೃಕ್ಷವೂ (Oak) ಎಲ್ಮ್ ಎಂಬ ವೃಕ್ಷವೂ ಅದ್ಭುತಾಕಾರವಾಗಿ ಬೆಳೆವುವು ; ಈ ಮರಗಳ ಸುತ್ತಳತೆ ಬುಡದಲ್ಲಿ ೨೨ ಅಡಿಯುವರೆಗೂ ಇರುವುದು. (೨) ವಿನಿಪೆಗ್ ಸರೋವರದ ಹತ್ತಿರ ಧಾನ್ಯದ ಬೆಳೆಗೆ ಉತ್ಕೃಷ್ಟವಾದ ಭೂಮಿ ೫,೫೦,೦೦,೦೦೦ ಎಕರೆವರೆಗೆ ಇರುವುದು ; ಇಂತಿರುವ ಪ್ರದೇಶಗಳು ಅನೇಕ ಇವೆ. (೩) ಚಿನ್ನ, ಕಲ್ಲಿದ್ದಲು, ಕಬ್ಬಿಣ, ಸೀಸ, ತಾಮ್ರ ಮುಂತಾದುವು ಅನೇಕ ಕಡೆಗಳಲ್ಲಿವೆ ; ಬ್ರಿಟಿಷ್ ಕೊಲಂಬಿಯದಲ್ಲಿಯೂ ನೋವ ಸ್ಕೋಷಿಯದಲ್ಲಿಯೂ ಖನಿಜಗಳು ಬೇಕಾದಷ್ಟು ಇರುವುವು.

ಕೆನಡಾ ಡುಮಿನಿಯನ್ನಿನ ಜನಸಂಖ್ಯೆ ೫೦,೦೦,೦೦೦. ಇಂಗ್ಲಿಷರೂ ಫ್ರೆಂಚರೂ ಹೆಚ್ಚಾಗಿದ್ದಾರೆ. ಪಂಚ ಮಹಾ ಸರೋವರಗಳ ಹತ್ತಿರ ಜನ ಸಾಂದ್ರತೆ ಹೆಚ್ಚಾಗಿದೆ.

7. ಜನರು ಮತ್ತು ವ್ಯಾಪಾರ.—ವರ್ಷ ವರ್ಷಕ್ಕೆ ವ್ಯಾಪಾರವು ಹೆಚ್ಚುತ್ತಿದೆ. ರಫ್ತಾಗುವ ಪದಾರ್ಥಗಳು ಚೌಬೀನಿಯ ಮರ, ಗೋಧಿ, ಗೋಧಿ, ದನಕರು ಮತ್ತು ಮೀನು. ಆಮದಾಗುವ ಮುಖ್ಯಪದಾರ್ಥಗಳು :—ಉಣ್ಣೆ, ಕಬ್ಬಿಣದ ಮತ್ತು ಉಕ್ಕಿನ ಸಾಮಾನುಗಳು, ಹತ್ತಿ ಮತ್ತು ಹತ್ತಿಯ ಬಟ್ಟೆ, ಟೀ ಮತ್ತು ಕಾಫಿ.

ಬ್ರಿಟಿಷ್ ಅಮೇರಿಕದಲ್ಲಿ ಜಲಮಾರ್ಗವು ಬಹು ಚೆನ್ನಾಗಿದೆ. ಬೇಕಾದರೆ ಸೆಂಟ್ ಲಾರೆನ್ಸ್ ನದೀಮುಖದಿಂದ ಹೋಗುವ ಜಹಜುಗಳಲ್ಲಿ ಸುಪೀರಿಯರ್ ಸರೋವರದ ವರೆಗೂ—ಎಂದರೆ ೨,೩೮೪ ಮೈಲಿಯಷ್ಟು ದೂರದವರೆಗೂ—ಹೋಗಬಹುದು. ೧೨,೦೦೦ ಮೈಲಿಯಷ್ಟು ರೈಲ್ವೆ ಇದೆ. ಕೆನೇಡಿಯನ್ ಪೆಸಿಫಿಕ್ ರೈಲ್ವೆ ಅಟ್ಲಾಂಟಿಕ್ ಪೆಸಿಫಿಕ್ ಸಾಗರಗಳನ್ನು ಸಂಬಂಧಿಸಿರುವುದು. ಇದಲ್ಲದೆ ಇನ್ನೂ ಕೆಲವು ರೈಲ್ವೆಗಳನ್ನು ಹಾಕಿರುತ್ತಾರೆ.

8. ರಾಜ್ಯಭಾರ ಕ್ರಮ.—ಬ್ರಿಟಿಷ್ ಅಮೇರಿಕವೆಲ್ಲಾ ಬ್ರಿಟಿಷ್ ಮಹಾರಾಜರವರಿಗೆ ಸೇರಿದೆ. ಬ್ರಿಟಿಷ್ ಮಹಾರಾಜರವರು ಕೆನಡಾ ಡುಮಿನಿಯನ್ನಿಗೆ ಒಬ್ಬ ಗವರ್ನರ್ ಜನರಲ್ಲನ್ನು ತಮಗೆ ಪ್ರತಿನಿಧಿಯಾಗಿರುವಂತೆ ನೇಮಿಸಿ ಕಳುಹಿಸುತ್ತಾರೆ. ಕೆನಡಾ ಡುಮಿನಿಯನ್ನಿಗೆ ಒಂದು ಪಾರ್ಲಿಮೆಂಟು ಉಂಟು ; ಈ ಪಾರ್ಲಿಮೆಂಟು ಅಟ್ಟಾವದಲ್ಲಿದೆ. ಇದಲ್ಲದೆ ಕೆನಡಾ ಡುಮಿನಿಯನ್ನಿನ ಒಂದೊಂದು ಪ್ರಾವಿನ್ಸಿನಲ್ಲಿ

ಯೂ ಒಂದೊಂದು "ಲೋಕಲ್ ಪಾರ್ಲಿಮೆಂಟು" ಇದೆ. ಪಾರ್ಲಿಮೆಂಟಿನ ಅನುಮತಿಯಿಲ್ಲದೆ ಕಂದಾಯುಗಳನ್ನು ಹಾಕುವುದಕ್ಕೆ ಆಸ್ಪದವಿಲ್ಲ. ವಿದ್ಯಾಭ್ಯಾಸವು ಚೆನ್ನಾಗಿ ನಡೆಯುತ್ತಿದೆ. ಜನಸಂಖ್ಯೆ ೫೦,೦೦,೦೦೦ ವಾಗಿದ್ದರೂ ವಿದ್ಯಾಭಿವೃದ್ಧಿಗಾಗಿ ಪ್ರತಿ ವರ್ಷವೂ ೨ ಕೋಟಿ ರೂಪಾಯನ್ನು ಖರ್ಚು ಮಾಡುತ್ತಾರೆ.

9. ರಾಜಕೀಯ ವಿಭಾಗಗಳು.—ರಾಜಕೀಯ ವಿಭಾಗಗಳನ್ನೂ ಅವುಗಳ ಮುಖ್ಯ ಪಟ್ಟಣಗಳನ್ನೂ ಕೆಳಗೆ ಕೊಟ್ಟಿದ್ದೇವೆ.

(1) ಕ್ವಿಬೆಕ್—ಕ್ವಿಬೆಕ್, ಮಾಂಟ್ರಿಯಲ್.
(2) ಅಂಟೇರಿಯೊ—ಅಟ್ಟಾವ, ಟೊರಂಟೊ.
(3) ನ್ಯೂಬ್ರನ್ಸ್ವಿಕ್—ಫ್ರೆಡರಿಕ್ಟನ್, ಸೆಂಟ್‌ಜಾನ್.
(4) ನೋವಸ್ಕೋಷಿಯ—ಹಾಲಿಫಾಕ್ಸ್, ಸಿಡ್ನಿ.
(5) ಪ್ರಿನ್ಸ್ ಎಡ್ವರ್ಡ್ ದ್ವೀಪ—ಚಾರ್ಲಟೌನ್.
(6) ಬ್ರಿಟಿಷ್ ಕೊಲಂಬಿಯ—ವಿಕ್ಟೋರಿಯ.
(7) ಮಾನಿಟೋಬ—ವಿನಿಪೆಗ.
(8) ಕೀವಾಟಿನ್—ಚರ್ಚಿಲ್.
(9) ಅಸ್ಸಿನಿಬೋಯಿಯ—ರಜೀನ.
(10) ಸಸ್ಕಚ್ವಾನ್—ಕಾರಲ್ಟನ್.
(11) ಆಲ್ಬರ್ಟ್—ಕಾಲ್ಗರಿ.
(12) ಅತಬಾಸ್ಕ—ಡನ್ವೆಗನ್.

(೧) ಕ್ವಿಬೆಕ್ಕಿಗೆ ಪೂರ್ವ ಕಾಲದಲ್ಲಿ ಕೆಳಗಣ ಕೆನಡವೆಂಬ ಹೆಸರಿದ್ದಿತು; ಫಲವತ್ತಾದ ದೇಶ; ವ್ಯವಸಾಯ ಚೆನ್ನಾಗಿ ನಡೆಯುತ್ತದೆ. ಫ್ರೆಂಚರು ಹೆಚ್ಚಾಗಿದ್ದಾರೆ. (೨) ಅಂಟೇರಿಯೊ ಎಂಬುದು ಪೂರ್ವದಲ್ಲಿ ಮೇಲಣ ಕೆನಡವಾಗಿದ್ದಿತು; ಕೆನಡಾ ಡುಮಿನಿಯನ್ನಿನೊಳಗೆಲ್ಲಾ ಇದೇ ಬಹು ಮುಖ್ಯವಾದ ಪ್ರಾವಿನ್ಸು. ಜನಸಂಖ್ಯೆಯಲ್ಲಿಯೂ, ಖನಿಜದಲ್ಲಿಯೂ ಇತರ ಪ್ರಾವಿನ್ಸುಗಳನ್ನು ಮೀರಿಸಿದೆ. (೩) ನ್ಯೂಬ್ರನ್ಸ್ವಿಕ್ ಎಂಬುದರಲ್ಲಿ ಚೌಬೀನಿಯ ವ್ಯಾಪಾರವು ಹೆಚ್ಚಾಗಿ ನಡೆಯುತ್ತದೆ; ಹಡಗುಗಳನ್ನು ತಯಾರು ಮಾಡುವುದೂ, ಮೀನು ಹಿಡಿವುದೂ, ಜನರ ಮುಖ್ಯೋದ್ಯೋಗಗಳು. (೪) ನೋವಸ್ಕೋಷಿಯಕ್ಕೆ ಕೇಪ್ ಬ್ರಿಟನ್ ದ್ವೀಪವೂ ಸೇರಿದೆ. ಮರ ಕಡಿವುದು, ಖನಿಜಗಳನ್ನು ತೆಗೆವುದು, ಮೀನು ಹಿಡಿವುದು ಜನರ ಮುಖ್ಯವಾದ ಉದ್ಯೋಗಗಳು. (೫) ಪ್ರಿನ್ಸ್ ಎಡ್ವರ್ಡ್ ದ್ವೀಪದಲ್ಲಿ ಚಳಿ ಹೆಚ್ಚು; ಗೋಧಿಯು ಬೆಳೆಯಾಗುವುದಿಲ್ಲ. (೬) ಬ್ರಿಟಿಷ್ ಕೊಲಂಬಿಯಕ್ಕೆ ವಾಂಕೂವರ್ ಮುಂತಾದ ದ್ವೀಪಗಳು ಸೇರಿವೆ. ಫ್ರೇಸರ್ ನದಿಯಲ್ಲಿ ಮೀನುಗಳು ಬಹು ವಿಶೇಷವಾಗಿವೆ. ತೀರದ ಶ್ರೇಣಿಯಲ್ಲಿ ಅಗಾಧವಾದ ಕಾಡುಗಳು ಇರುವುವು. ಫ್ರೇಸರ್ ನದಿಯ ಬಡದಲ್ಲಿರುವ ನ್ಯೂವೆಸ್ಟ್ ಮಿನ್‌ಸ್ಟರ್ ಎಂಬ ಪಟ್ಟಣವು ಕೆನೇಡಿಯನ್ ಪೆಸಿಫಿಕ್ ರೈಲ್ವೆಗೆ ಕೊನೆಯ ಸ್ಟೇಷನ್. (೭) ಮಾನಿಟೋಬವು ವಿಸ್ತೀರ್ಣದಲ್ಲಿ ಬ್ರಿಟಿಷ್

ದ್ವೀಪಗಳಿಗಿಂತ ದೊಡ್ಡದಾಗಿದೆ; ಇಲ್ಲಿಯ ನೆಲವು ಗೋಧಿಯ ಬೆಳೆಗೆ ಸರ್ವೋತ್ಕೃಷ್ಟವಾಗಿರುವುದು; ಈ ಪ್ರಾವಿನ್ಸಿನ ಐಶ್ವರ್ಯವು ಬಹು ಜಾಗ್ರತೆಯಾಗಿ ಅಭಿವೃದ್ಧಿಯಾಗುತ್ತಿದೆ; ಜನಸಂಖ್ಯೆ ತಿಂಗಳು ತಿಂಗಳಿಗೆ ಹೆಚ್ಚುತ್ತಿದೆ. ಕೆನೇಡಿಯನ್ ಪೆಸಿಫಿಕ್ ರೈಲ್ವೆ ಈ ಮಾರ್ಗವಾಗಿ ಹೋಗುತ್ತದೆ; ಇಲ್ಲಿಂದ ಹೊಸ ರೈಲ್ವೆಗಳು ನಾನಾ ದಿಕ್ಕುಗಳಿಗೂ ಆಗುತ್ತಿವೆ.

10. ದೊಡ್ಡ ಪಟ್ಟಣಗಳು.—(೧) ಮಾಂಟ್ರೀಲ್. ಸುಂದರವಾದ ಪಟ್ಟಣ; ವ್ಯಾಪಾರಕ್ಕೆ ಮುಖ್ಯ ಸ್ಥಳ. (೨) ಟಾರಂಟೊ. ವ್ಯಾಪಾರ ಸ್ಥಳ. (೩) ಕ್ವಿಬೆಕ್. ಚರಿತ್ರೆಯಲ್ಲಿ ಬಹು ಪ್ರಖ್ಯಾತವಾಗಿದೆ, ಫ್ರೆಂಚರು ಕಟ್ಟಿದ ಪಟ್ಟಣ. (೪) ಹಾಮಿಲ್ಟನ್. ಅಭಿವೃದ್ಧಿಯಾಗುತ್ತಿರುವುದು. (೫) ಹಾಲಿಫಾಕ್ಸ್. ನೋವಸ್ಕೋಷಿಯದ ರಾಜಧಾನಿ, ಕೆನೇಡಿಯನ್ ಪೆಸಿಫಿಕ್ ರೈಲ್ವೆ ಇಲ್ಲಿಂದ ಪ್ರಾರಂಭವಾಗುತ್ತದೆ. ವ್ಯಾಪಾರಸ್ಥಳ. (೬) ಅಟ್ಟಾವ—ಕೆನೇಡಿಯನ್ ಡುಮಿನಿಯನ್ನಿನ ರಾಜಧಾನಿ.

11. ನ್ಯೂಫೌಂಡ್ಲೆಂಡ್.—ಸುಮಾರು ೪೦,೦೦೦ ಚ. ಮೈ. ಇದರ ವಿಸ್ತೀರ್ಣ. ಐರ್ಲೆಂಡಿನಲ್ಲಿರುವ ಕ್ಲಿಯರ್ ಭೂಶಿರದಿಂದ ಈ ದ್ವೀಪದಲ್ಲಿರುವ ರೇಸ್ ಭೂಶಿರಕ್ಕೆ ಇರುವ ದೂರ ೧,೬೪೦ ಮೈಲಿ. ಯೂರೋಪಿಗೆ ಇದಕ್ಕಿಂತ ಹತ್ತಿರವಿರುವ, ಉತ್ತರ ಅಮೆರಿಕಾ ಖಂಡದ ಭಾಗವು ಯಾವುದೂ ಇಲ್ಲ. ಈ ದ್ವೀಪದಲ್ಲಿ ಫಲವತ್ತಾದ ಪ್ರದೇಶಗಳು ಅನೇಕ ಇವೆ. ಚೌಬೀನಿಯ ಮರಗಳಿವೆ, ಕಲ್ಲಿದ್ದಲು, ತಾಮ್ರ ಮುಂತಾದ ಖನಿಜಗಳಿವೆ, ಆದರೂ ಕಾಡ್ ಮುಂತಾದ ಮೀನುಗಳನ್ನು ಹಿಡಿವುದೇ ಜನರ ಮುಖ್ಯೋದ್ಯೋಗವಾಗಿರುವುದು. ಪೂರ್ವ ತೀರದಲ್ಲಿರುವ ಸೇಂಟ್‌ಜಾನ್ಸ್ ಎಂಬುದು ಮುಖ್ಯ ಪಟ್ಟಣ. ಈ ದ್ವೀಪವು ಕೆನಡಾ ಡುಮಿನಿಯನ್ನಿಗೆ ಸೇರಿಲ್ಲ. ಬೇರೆ ಕಾಲೊನಿಯಾಗಿದೆ. ಲಾಬ್ರಡಾರಿನ ತೀರಪ್ರದೇಶವೂ ಆಂಟಿಕಾಸ್ಟಿ ದ್ವೀಪವೂ ನ್ಯೂಫೌಂಡ್ಲೆಂಡಿನ ರಾಜ್ಯಭಾರಕ್ಕೆ ಸೇರಿವೆ.

ಅಮೆರಿಕದ ಸಂಯುಕ್ತ ಸಂಸ್ಥಾನ.

1. ಪೀಠಿಕೆ—ಅಮೆರಿಕಾ ಖಂಡದ ಸಂಯುಕ್ತ ಸಂಸ್ಥಾನದ ಸಂಪತ್ತು ವೃದ್ಧಿಯಾದಷ್ಟು ಶೀಘ್ರವಾಗಿ ಪೃಥ್ವಿಯಲ್ಲಿ ಇನ್ನು ಯಾವ ದೇಶದ ಸಂಪತ್ತೂ ವೃದ್ಧಿಯಾಗಿಲ್ಲ. ಇದು ಸ್ವಾತಂತ್ರ್ಯದಶೆಗೆ ಬಂದ ಕ್ರಿ. ಶ. ೧೭೭೬ನೆಯ ವರುಷದಿಂದ ಈಚೆಗೆ, ಇಲ್ಲಿಯ ಕೃಷಿಯೂ ಕೈಗಾರಿಕೆಗಳೂ ಖನಿಜಗಳ ಕೆಲಸಗಳೂ ಅಭಿವೃದ್ಧಿಯಾದುದನ್ನು ನೋಡಿದರೆ ಅತ್ಯಾಶ್ಚರ್ಯವುಂಟಾಗುವುದು. ಜನಸಂಖ್ಯೆಯೂ ವಿಪರೀತವಾಗಿ ಹೆಚ್ಚುತ್ತ ಬಂದಿದೆ. ನೂರು ವರುಷಕ್ಕೆ ಮುಂಚೆ ಈ ದೇಶದಲ್ಲಿ ೩೦,೦೦,೦೦೦ ಜನರಿದ್ದರು, ಈಗ ೭,೬೦,೦೦,೦೦೦ ಜನರಿದ್ದಾರೆ.

76000000

2. ಮೇರೆಗಳು ಮತ್ತು ವಿಸ್ತೀರ್ಣ.—ಈ ಸಂಯುಕ್ತ ಸಂಸ್ಥಾನವು ಕೆನಡಾ ಡುಮಿನಿಯನ್ನಿಗೂ ಮೆಕ್ಸಿಕೋ ದೇಶಕ್ಕೂ ನಡುವೆ ಇದೆ. ಉತ್ತರಕ್ಕೆ ಕೆನಡಾ ಡುಮಿನಿಯನ್, ಪಂಚಮಹಾ ಸರೋವರಗಳಲ್ಲಿ ನಾಲ್ಕು, ಸೆಂಟ್‌ಲಾರೆನ್ಸ್ ನದಿಯ ಒಂದು ಭಾಗ, ಮತ್ತು ಕೆನಡಾ ಡುಮಿನಿಯನ್ನಿನ ಒಂದು ಭಾಗ; ಪೂರ್ವಕ್ಕೆ ಅಟ್ಲಾಂಟಿಕ್ ಸಾಗರ; ದಕ್ಷಿಣಕ್ಕೆ ಮೆಕ್ಸಿಕೋ ಸಮುದ್ರ ಶಾಖೆ ಮತ್ತು ಮೆಕ್ಸಿಕೋ ದೇಶ; ಪಶ್ಚಿಮಕ್ಕೆ ಪೆಸಿಫಿಕ್ ಸಾಗರ. ವಿಸ್ತೀರ್ಣ ಸುಮಾರು ೩೫,೬೭,೦೦೦ ಚ. ಮೈಲಿ; ಯೂರೋಪ್ ಖಂಡಕ್ಕಿಂತ ೩,೦೦,೦೦೦ ಚದರ ಮೈಲಿಯಷ್ಟು ಕಡಿಮೆಯಾಗಿದೆ.

3. ಕೊಲ್ಲಿ ಮುಂತಾದುವುಗಳು.—ದೇಶದೊಳಕ್ಕೆ ಸಾಗರವು ವಿಶೇಷವಾಗಿ ನುಗ್ಗಿ ಬಂದಿಲ್ಲ. ಮುಖ್ಯವಾದ ಕೊಲ್ಲಿ ಮುಂತಾದುವು ಯಾವುವೆಂದರೆ.—ಪೂರ್ವದಲ್ಲಿ ದಿಲಾವೇರ್ ಮತ್ತು ಚೆಸಪೀಕ್ ಕೊಲ್ಲಿಗಳು; ದಕ್ಷಿಣದಲ್ಲಿ ಮೆಕ್ಸಿಕೋ ಸಮುದ್ರಶಾಖೆ; ಪಶ್ಚಿಮದಲ್ಲಿ ಸಾನ್‌ಫ್ರಾನ್ಸಿಸ್ಕೋ ಕೊಲ್ಲಿ ಮತ್ತು ಕಾಲಿಫೋರ್ನಿಯಾ ಸಮುದ್ರಶಾಖೆ. ಮುಖ್ಯವಾದ ಭೂಶಿರಗಳು.—ಪೂರ್ವ ತೀರದಲ್ಲಿ ಕಾಡ್, ಹಾಟರಾಸ್, ಮತ್ತು ಸೇಬಲ್; ಪಶ್ಚಿಮದಲ್ಲಿ ಫ್ಲಾಟೆರಿ. ಮುಖ್ಯವಾದ ದ್ವೀಪಗಳು.—ಪೂರ್ವದಲ್ಲಿ ರೋಡ್‌ದ್ವೀಪ ಮತ್ತು ಲಾಂಗ್‌ದ್ವೀಪ; ಪಶ್ಚಿಮದಲ್ಲಿ ಸಾನ್‌ಜುವನ್.

4. ಸ್ವಭಾವಸಿದ್ಧವಾದ ವಿಭಾಗಗಳು.—ಸಂಯುಕ್ತ ಸಂಸ್ಥಾನದಲ್ಲಿ ೪ ದೊಡ್ಡಭಾಗಗಳಿವೆ. ಪೂರ್ವದಲ್ಲಿರುವ ಪ್ರಸ್ಥಭೂಮಿ ಮತ್ತು ಇಳಿಜಾರು ನೆಲ; ಮಧ್ಯಭಾಗದ ಮೈದಾನ; ಪಶ್ಚಿಮ ಪ್ರಸ್ಥಭೂಮಿ; ಪೆಸಿಫಿಕ್ ಸಾಗರವನ್ನು ಸೇರುವ ಇಳಿಜಾರು ನೆಲ.

(೧) ಪೂರ್ವದಲ್ಲಿರುವ ಪ್ರಸ್ಥಭೂಮಿ ಮತ್ತು ಇಳಿಜಾರು ನೆಲವೆಂಬ ಪ್ರದೇಶವನ್ನು ಕೈಗಾರಿಕೆಗಳ ಪ್ರದೇಶವೆಂದು ಕರೆಯಬಹುದು. ಈ ಪ್ರದೇಶದಲ್ಲಿ ಅಪಲೇಕಿಯನ್ ಪರ್ವತಸ್ತೋಮ ಸಮುದಾಯದ ಅನೇಕ ಶ್ರೇಣಿಗಳು ಇರುವುವು; ಇವುಗಳಲ್ಲಿ ಮುಖ್ಯವಾದುವು ಶ್ವೇತಪರ್ವತ (White Mountains) ಹರಿತಪರ್ವತ (Green Mountains) ನೀಲಪರ್ವತ (Blue Mountains) ಮತ್ತು ಅಲಿಘನಿ ಪರ್ವತ. (೨) ಮಧ್ಯಭಾಗದ ಮೈದಾನದಲ್ಲಿ ಮಿಸೌರಿ–ಮಿಸಿಸಿಪ್ಪೀನದಿಯೂ ಇದರ ಉಪನದಿಗಳೂ ಹರಿಯುತ್ತವೆ, ಇದರಲ್ಲಿ ಕೆಲವು ಭಾಗವು ಕೃಷಿಯ ಪ್ರದೇಶವಾಗಿದೆ: ಉಳಿದ ಭಾಗವು ಪ್ರೈರಿಗಳಾಗಿದೆ. (೩) ಪಶ್ಚಿಮ ಪ್ರಸ್ಥಭೂಮಿಯ ಸರಾಸರಿಯಾದ ಎತ್ತರ ೫,೦೦೦ ಅಡಿ; ಇದರಲ್ಲಿ ಮೂರು ಜಲಾನಯನ ಪ್ರದೇಶಗಳಿವೆ. ಉತ್ತರದಲ್ಲಿ ಕೊಲಂಬಿಯಾ ನದಿಯ ಜಲಾನಯನ ಪ್ರದೇಶ, ದಕ್ಷಿಣದಲ್ಲಿ ಕೊಲರೇಡೋ ನದಿಯ ಜಲಾನಯನ ಪ್ರದೇಶ; ಮಧ್ಯದಲ್ಲಿ ಯೂಟಾ ಎಂಬ ಜಲಾನಯನ ಭೂಮಿ; ಈ ಭೂಮಿಯ ನೀರು ಸಾಗರಕ್ಕೆ ಹೋಗುವುದಕ್ಕೆ ಮಾರ್ಗವಿಲ್ಲ; ಇಲ್ಲಿ ಗ್ರೇಟ್‌ಸಾಲ್ಟ್ ಸರೋವರವಿದೆ. ಈ ಪಶ್ಚಿಮ ಪ್ರಸ್ಥಭೂಮಿ

ಯನ್ನು ಲೋಹಮಯ ಪ್ರಾಂತವೆಂದು ಕರೆಯಬಹುದು; ನೀರಿಗೆ ಬಹಳ ಕಷ್ಟ.

(೪) ಸಿರ್ರಸಿವಾಡ ಮತ್ತು ಕಾಸ್ಕೇಡ್ ಪರ್ವತಶ್ರೇಣಿಗಳಿಂದ ಪಶ್ಚಿಮಕ್ಕೆ ನೆಲವು ಇಳಿಜಾರಾಗಿದೆ, ಇನ್ನೂ ಪಶ್ಚಿಮಕ್ಕೆ ತೀರಪ್ರದೇಶದ ಪರ್ವತಶ್ರೇಣಿ ಇರುವುದು. ಈ ಶ್ರೇಣಿಗೂ ಸಿವಾಡಪರ್ವತ ಶ್ರೇಣಿಗೂ ನಡುವೆ ಫಲವತ್ತಾದ ಸಾಕ್ರಮೆಂಟೋ ನದಿಯ ಕಣಿವೆ ಇದೆ.

5. ನದಿಗಳು.—ಮಿಸೌರಿ—ಮಿಸಿಸಿಪ್ಪೀ ನದಿಯೂ ಇತರ ಅನೇಕವಾದ ಉಪನದಿಗಳೂ ಹಡಗಿನ ಪ್ರಯಾಣಕ್ಕೂ ವ್ಯವಸಾಯಕ್ಕೂ ಬಹು ಅನುಕೂಲವಾಗಿವೆ. ಪಶ್ಚಿಮ ಭಾಗದಲ್ಲಿ ಕೊಲಂಬಿಯ ಮತ್ತು ಕೊಲರೇಡೋ ನದಿಗಳಿರುವುವು. ಅಟ್ಲಾಂಟಿಕ್ ಸಾಗರಕ್ಕೆ ಹೋಗಿ ಬೀಳುವ ನದಿಗಳು ಪೂರ್ವಭಾಗದಲ್ಲಿವೆ; ಇವುಗಳಲ್ಲಿ ಅನೇಕವು ಹಡಗಿನ ಯಾನಕ್ಕೆ ಅನುಕೂಲವಾಗಿವೆ; ಮತ್ತು ಇವುಗಳ ಜಲಪಾತಗಳಿಂದ ಅನೇಕ ಯಂತ್ರಗಳು ತಿರುಗಿ, ಕೈಗಾರಿಕೆಗಳು ವಿಶೇಷವಾಗಿ ನಡೆಯುತ್ತಿರುವುವು.

ಅಟ್ಲಾಂಟಿಕ್ ಸಾಗರಕ್ಕೆ ಬೀಳುವ ನದಿಗಳಲ್ಲಿ ಮುಖ್ಯವಾದುವು ಯಾವುವೆಂದರೆ:—ಹಡ್ಸನ್, ದಿಲಾವೇರ್, ಸಸ್ಕ್ವೆಹನ್ನ, ಪೋಟೋಮಾಕ್, ಜೇಮ್ಸ್ ಮತ್ತು ಸವನ್ನ.

6. ಸರೋವರಗಳು.—ಪಂಚಮಹಾ ಸರೋವರಗಳಲ್ಲಿ ಒಂದಾದ ಮಿಚಿಗನ್ ಎಂಬುದು ಈ ಸಂಯುಕ್ತ ಸಂಸ್ಥಾನದಲ್ಲಿದೆ. ಯೂಟಾ ಜಲಾನಯನ ಭೂಮಿಯಲ್ಲಿ ಗ್ರೇಟ್ ಸಾಲ್ಟ್ ಸರೋವರವಿದೆ.

ಗ್ರೇಟ್‌ಸಾಲ್ಟ್ ಸರೋವರದ ನೀರು ಹೊರಕ್ಕೆ ಹರಿದು ಹೋಗುವುದಕ್ಕೆ ಅಸ್ಪದವಿಲ್ಲದುದರಿಂದ ಬಹಳ ಉಪ್ಪಾಗಿದೆ; ಸಾಗರದ ನೀರಿನಲ್ಲಿ ಸೇಕಡ ಮೂರರ ಪ್ರಕಾರ ಉಪ್ಪು ಸಿಕ್ಕುವುದು, ಈ ಸರೋವರದ ನೀರಿನಲ್ಲಾದರೋ ಸೇಕಡಾ ೨೦ರ ಪ್ರಕಾರ ಉಪ್ಪು ಸಿಕ್ಕುತ್ತದೆ. ಮಾನುಷ ಶರೀರವು ಇದರಲ್ಲಿ ಮುಳುಗುವುದಿಲ್ಲ.

7. ವಾಯುಗುಣ.—ಸಂಯುಕ್ತ ಸಂಸ್ಥಾನವು ಉತ್ತರ ಸಮಶೀತೋಷ್ಣ ವಲಯದಲ್ಲಿದೆ. ಆದರೂ ಇಲ್ಲಿ ನಾನಾ ಬಗೆಯ ವಾಯುಗುಣಗಳು ಇರುವುವು. ಪಶ್ಚಿಮ ಪ್ರಸ್ಥಭೂಮಿಯಲ್ಲಿ ಸೆಕೆ ಹೆಚ್ಚು ಮತ್ತು ಮಳೆ ಇಲ್ಲ; ಪಶ್ಚಿಮ ತೀರದಲ್ಲಿ ಸಾಗರ ಮಾರುತಗಳ ದೆಸೆಯಿಂದ ವಾಯುಗುಣವು ಹಿತಕರವಾಗಿದೆ, ಮತ್ತು ಮಳೆ ಹೆಚ್ಚಾಗಿ ಹೊಯ್ಯುತ್ತದೆ. ಮೆಕ್ಸಿಕೋ ಸಮುದ್ರಶಾಖೆಯ ಹತ್ತಿರದಲ್ಲಿ ಮಳೆ ಬಹಳ ಹೆಚ್ಚಾಗಿ ಹೊಯ್ಯುತ್ತದೆ. ಪೂರ್ವತೀರದಲ್ಲಿ ಚಳಿ ಹೆಚ್ಚು, ಉತ್ತರ ಶೀತವಲಯದಿಂದ ಬೀಸುವ ಶೀತಮಾರುತಗಳನ್ನು ತಡೆವುದಕ್ಕೆ ಪೂರ್ವ ಪಶ್ಚಿಮವಾಗಿ ಹಬ್ಬಿರುವ ಪರ್ವತ ಶ್ರೇಣಿಗಳು ಉತ್ತರ ಭಾಗದಲ್ಲಿ ಇಲ್ಲದಿರುವುದರಿಂದ, ವಾಯುಗುಣವು ಥಟ್ಟನೆ ಬದಲಾಗುವುದುಂಟು. ಮನೆಯಿಂದ ಹೊರಡುವಾಗ ಸೆಕೆಯಾಗಿ

ರಬಹುದು, ಒಂದು ಗಂಟೆಯವರೆಗೆ ತಿರುಗುತ್ತಿದ್ದು ಮನೆಗೆ ಹಿಂತಿರುಗಿ ಬರುವುದರೊಳಗೆ ನೀರು ಗಡ್ಡೆ ಕಟ್ಟಿ ಹೋಗುವಂತೆ ಶೈತ್ಯವು ಹೆಚ್ಚಬಹುದಾಗಿದೆ. ಈ ಗಳಿಗೆಯಲ್ಲಿರುವ ವಾಯುಗುಣವು ಇನ್ನೊಂದು ಗಳಿಗೆಯವರೆಗೆ ಇರುವುದೆಂದು ನಂಬುವುದಕ್ಕಾಗುವುದಿಲ್ಲ.

8. ವೃಕ್ಷಗಳು ಮತ್ತು ಬೆಳೆಗಳು.—ಉತ್ತರ ಭಾಗದಲ್ಲಿ ಬಾನವೃಕ್ಷ (Oak) ಶ್ವೇತದಾರು (white pine), ಎಲ್ಮ ಮುಂತಾದ ವೃಕ್ಷಗಳು ಬೆಳೆವುವು; ದಕ್ಷಿಣ ಭಾಗದಲ್ಲಿ ಅಕೇಷಿಯ (acacia) ಮುಂತಾದ ವೃಕ್ಷಗಳು ಚೆನ್ನಾಗಿ ಬೆಳೆಯುತ್ತವೆ. ಉತ್ತರದಲ್ಲಿ ತೋಕೆಗೋಧಿ (Oats), ಚಿಕ್ಕಗೋಧಿ (Rye) ಮತ್ತು ಜವೆಗೋಧಿ; ಮಧ್ಯಭಾಗದಲ್ಲಿ ಮೆಕ್ಕೆಜೋಳ, ಹೊಗೆಯುಸೊಪ್ಪು, ಮತ್ತು ಗೋಧಿ; ದಕ್ಷಿಣ ಭಾಗದಲ್ಲಿ ಹತ್ತಿ, ಕಬ್ಬು, ಮತ್ತು ಬತ್ತ, ಚೆನ್ನಾಗಿ ಬೆಳೆಯುತ್ತವೆ. ತಗ್ಗಾಗಿರುವ ತೀರಪ್ರದೇಶಗಳಲ್ಲಿ ಕಿತ್ತಿಳೆ, ದಾಳಿಂಬ, ಅಂಜೂರ ಮುಂತಾದ ಹಣ್ಣುಗಳು ಚೆನ್ನಾಗಿ ಆಗುವುವು.

9. ಖನಿಜಗಳು.—ಸಂಯುಕ್ತ ಸಂಸ್ಥಾನದಲ್ಲಿ ಖನಿಜಗಳು ಮಿತಿಯಿಲ್ಲದೆ ಇವೆ. ಅಟ್ಲಾಂಟಿಕ್ ಸಾಗರದ ಹತ್ತಿರ ಇರುವ ಸಂಸ್ಥಾನಗಳಲ್ಲಿಯೂ ಮಧ್ಯ ಭಾಗದಲ್ಲಿರುವ ಸಂಸ್ಥಾನಗಳಲ್ಲಿಯೂ ಇಂಗ್ಲೆಂಡ್ ದೇಶಕ್ಕಿಂತ ವಿಸ್ತಾರವಾದ ಕಲ್ಲಿದ್ದಲಿನ ಪ್ರದೇಶಗಳಿರುವುವು. ಕಬ್ಬಿಣದಿಂದ ತುಂಬಿರುವ ಉನ್ನತವಾದ ಪರ್ವತಗಳಿವೆ. ರಾಕೀಪರ್ವತ ಶ್ರೇಣಿಯ ಹತ್ತಿರ ಇರುವ ಸಂಸ್ಥಾನಗಳಲ್ಲಿಯೂ ಪೆಸಿಫಿಕ್ ಸಾಗರದ ಸಮೀಪದಲ್ಲಿರುವ ಸಂಸ್ಥಾನಗಳಲ್ಲಿಯೂ ಚಿನ್ನ ಬೆಳ್ಳಿಗಳನ್ನು ಖನಿಜಗಳಿಂದ ಪ್ರತಿವರ್ಷವೂ ಅಪರಿಮಿತವಾಗಿ ತೆಗೆಯುತ್ತಿದ್ದಾರೆ.

(೧) ಪೂರ್ವ ಭಾಗದಲ್ಲಿರುವ ಕಲ್ಲಿದ್ದಲಿನ ಪ್ರದೇಶವು ೪೯,೦೦೦ ಚದರ ಮೈಲಿಯಷ್ಟು, ಪಶ್ಚಿಮದಲ್ಲಿರುವ ಕಲ್ಲಿದ್ದಲಿನ ಪ್ರದೇಶವು ೭೮,೦೦೦ ಚದರ ಮೈಲಿಯಷ್ಟು, ವಿಸ್ತಾರವಾಗಿದೆ. (೨) ಮಿಸೂರಿ ಸಂಸ್ಥಾನದಲ್ಲಿ ಪೈಲಟ್‌ನಾಬ್ ಮತ್ತು ಕಬ್ಬಿಣದ ಬೆಟ್ಟ ಎಂಬುವು ಇವೆ. ಕಬ್ಬಿಣವೇ ಬೆಟ್ಟವಾಗಿ ಕುಳಿತುಕೊಂಡಿರುವಂತೆ ಇವು ಇರುವುವು.

10. ಜನರ ಉದ್ಯೋಗಗಳು.—ಕೃಷಿ ಬಹು ಮುಖ್ಯವಾದ ಉದ್ಯೋಗವೆಂದು ಹೇಳಬಹುದು. ಪಶುಪಾಲನವೂ ಒಂದು ಮುಖ್ಯೋದ್ಯೋಗವಾಗಿದೆ. ಖನಿಜಗಳನ್ನು ತೆಗೆವ ಉದ್ಯೋಗವು ವರ್ಷ ವರ್ಷಕ್ಕೆ ಹೆಚ್ಚುತ್ತಿದೆ. ಒಹಿಯೊ ಮತ್ತು ಪೋಟೊಮಾಕ್ ನದಿಗಳಿಗೆ ಉತ್ತರದಲ್ಲಿರುವ ಸಂಸ್ಥಾನಗಳಲ್ಲಿ ಕೈಗಾರಿಕೆಗಳು ವಿಪರೀತವಾಗಿ ನಡೆಯುತ್ತಿವೆ. ಪೂರ್ವ ತೀರದ ಸಂಸ್ಥಾನಗಳಲ್ಲಿ ಮೀನಿನ ವ್ಯಾಪಾರವು ಹೆಚ್ಚು.

ಟೆಕ್ಸಾಸ್ ಸಂಸ್ಥಾನ ಮತ್ತು ಮೈದಾನದಲ್ಲಿರುವ ಸಂಸ್ಥಾನಗಳು.—ಇವುಗಳಲ್ಲಿ ಪಶುಪಾಲನವೃತ್ತಿ ವಿಶೇಷವಾಗಿದೆ. ಮುಖ್ಯ ಕೈಗಾರಿಕೆಗಳು ಯಾವುವೆಂದರೆ:—

ಹತ್ತಿಯ ಮತ್ತು ಉಣ್ಣೆಯ ಬಟ್ಟೆಗಳು, ಯಂತ್ರಾದಿಗಳು, ಮರದ ಸಾಮಾನುಗಳು ಮುಂತಾದುವು. ಹತ್ತಿಯನ್ನು ಬೆಳೆವ ಸಂಸ್ಥಾನಗಳು ಹತ್ತಿಯ ಕೈಗಾರಿಕೆಗಳನ್ನೂ ನಡೆಯಿಸುವ ಸಂಸ್ಥಾನಗಳಾಗುತ್ತಿವೆ.

11. ವ್ಯಾಪಾರ.—ಬೇರೆ ಬೇರೆ ಕಡೆಗಳಲ್ಲಿ ಬೇರೆ ಬೇರೆ ಬೆಳೆಗಳೂ ಬೇರೆ ಬೇರೆ ಉದ್ಯೋಗಗಳೂ ಇರುವುದರಿಂದ ಒಳದೇಶದ ವ್ಯಾಪಾರವು ವಿಶೇಷವಾಗಿ ನಡೆವುದು. ಹೊರದೇಶದ ವ್ಯಾಪಾರವೂ ಬಹಳ ಹೆಚ್ಚಾಗಿದೆ; ಮತ್ತು ರಫ್ತಾಗುವ ಪದಾರ್ಥಗಳೂ ಆಮದಾಗುವ ಪದಾರ್ಥಗಳೂ ವರ್ಷವರ್ಷಕ್ಕೆ ಹೆಚ್ಚುತ್ತಿರುವುವು.

(೧) ರಫ್ತಾಗುವ ಮುಖ್ಯ ಪದಾರ್ಥಗಳು ಯಾವುವೆಂದರೆ—ಹತ್ತಿ, ಧಾನ್ಯ ಮಟ್ಟೆಯ ತೈಲ, ಚಿನ್ನ, ಬೆಳ್ಳಿ, ಮತ್ತು ಹೊಗೆಯಸೊಪ್ಪು; ಹತ್ತಿಯೂ ಧಾನ್ಯಗಳೂ ಬ್ರಿಟಿಷ್ ದ್ವೀಪಕ್ಕೆ ಹೋಗುತ್ತವೆ. ಜರ್ಮನೀ ದೇಶವು ಮಟ್ಟೆಯ ತೈಲವನ್ನು ಹೆಚ್ಚಾಗಿ ಕೊಂಡುಕೊಳ್ಳುವುದು. ಧಾನ್ಯದ ಹಿಟ್ಟುಗಳೂ, ಚೌಬೀನಿಯ ಮರವೂ ವೆಸ್ಟ್ ಇಂಡಿಯಾ ದ್ವೀಪಗಳಿಗೂ ದಕ್ಷಿಣ ಅಮೇರಿಕಾ ಖಂಡಕ್ಕೂ ಹೋಗುತ್ತವೆ.

(೨) ಗ್ರೇಟ್ ಬ್ರಿಟನ್ನಿನಿಂದ ಉತ್ತಮವಾದ ಕಬ್ಬಿಣವು ಬರುವುದು. ವೈನನ್ನು ಮತ್ತು ರೇಷ್ಮೆಯ ಬಟ್ಟೆಗಳನ್ನು ಫ್ರಾನ್ಸ್ ದೇಶವೂ, ಟೀ, ರೇಷ್ಮೆ, ಮತ್ತು ಪಿಂಗಾಣಿ—ಇವುಗಳನ್ನು ಚೀಣಾ ದೇಶವೂ; ಕಾಫಿಯನ್ನು ಯವದ್ವೀಪ ಮತ್ತು ಬ್ರೆಸಿಲ್ ದೇಶವೂ; ಸಕ್ಕರೆ ಮತ್ತು ಹಣ್ಣುಗಳನ್ನು ವೆಸ್ಟ್ ಇಂಡಿಯಾ ದ್ವೀಪಗಳೂ, ಕಳುಹಿಸುತ್ತವೆ.

12. ಹೆದ್ದಾರಿಗಳು. (Highways). ರೈಲ್ವೆಯ ವಿಷಯದಲ್ಲಿಯೂ ಜಲಮಾರ್ಗದ ವಿಷಯದಲ್ಲಿಯೂ ಸಂಯುಕ್ತ ಸಂಸ್ಥಾನವು ಬಹಳ ಹೆಸರುವಾಸಿಗೆ ಬಂದಿದೆ. ಬಂಡಿಯ ರಸ್ತೆಗಳಿರುವುದು ಬಹಳ ಕಡಿಮೆ. ೧,೮೦,೦೦೦ ಮೈಲಿಯಷ್ಟು ರೈಲ್ವೆ ಇದೆ. ಟೆಲಿಗ್ರಾಫ್ ಮತ್ತು ಟೆಲಿಫೋನ್ ತಂತಿಗಳು ವಿಶೇಷವಾಗಿವೆ.

ಜಲ ಮಾರ್ಗಗಳು ಮೂರುಂಟು.—ಮಿಸಾರಿಮಿಸಿಸಿಪ್ಪೀ ಜಲಮಾರ್ಗ, ಈರೀಕಾಲ್ವೆ, ಮತ್ತು ಪಂಚ ಮಹಾಸರೋವರ ಜಲಮಾರ್ಗ. ಈರೀಕಾಲ್ವೆಯು ಈರೀ ಸರೋವರವನ್ನು ಹಡ್ಸನ್ ನದಿಯ ಸಂಗಡ ಕೂಡಿಸುತ್ತದೆ.

13. ಜನರು.—ಜನಸಂಖ್ಯೆ ೭,೬೦,೦೦,೦೦೦. ಬ್ರಿಟಿಷರೂ ಜರ್ಮನ್ ಜನರೂ ವಿಶೇಷವಾಗಿದ್ದಾರೆ; ಇಂಗ್ಲಿಷೇ ಈ ದೇಶದ ಭಾಷೆ. ನೀಗ್ರೋ ಕುಲದವರು ೯೦,೦೦,೦೦೦ದ ವರೆಗೆ ಇದ್ದಾರೆ. ತಾಮ್ರವರ್ಣದವರ ಸಂಖ್ಯೆ ಸುಮಾರು ೩,೦೦,೦೦೦. ಇವರು ಕ್ಷೀಣಗತಿಯನ್ನು ಹೊಂದುತ್ತಿರುವರು.

ಜರ್ಮನಿಯಿಂದಲೂ ಐರ್ಲೆಂಡಿನಿಂದಲೂ ಅನೇಕರು ಸ್ವದೇಶವನ್ನು ಬಿಟ್ಟು ಬಂದು ಇಲ್ಲಿ ನೆಲೆಗೊಳ್ಳುತ್ತಿರುವರು.

14. ಮತ ಮತ್ತು ವಿದ್ಯಾಭ್ಯಾಸ.—ಮತ ವಿಷಯಕ್ಕಾಗಿ ಇಲ್ಲಿ ಯಾರನ್ನೂ ಹಿಂಸೆ ಪಡಿಸುವುದಿಲ್ಲ; ಬೇಕಾದವರು ಬೇಕಾದ ಮತವನ್ನು ಅವಲಂಬಿಸಿ ಇರಬ

ಹುದು. ಪ್ರಾಟೆಸ್ಟೆಂಟರ ಸಂಖ್ಯೆ ರೋಮನ್ ಕ್ಯಾಥೊಲಿಕ್ ಜನರ ಸಂಖ್ಯೆಗಿಂತ ಹೆಚ್ಚಾಗಿದೆ. ಉತ್ತರಭಾಗದ ಸಂಸ್ಥಾನಗಳಲ್ಲಿಯೂ ನ್ಯೂ ಇಂಗ್ಲೆಂಡ್ ಸಂಸ್ಥಾನಗಳಲ್ಲಿಯೂ ವಿದ್ಯಾಭ್ಯಾಸವು ಬಹು ಚೆನ್ನಾಗಿ ನಡೆಯುತ್ತಿದೆ. ಸಕಲವಿದ್ಯಾನಿಲಯಗಳೂ, ಟೆಕ್ನಿಕಲ್ ಕಾಲೇಜುಗಳೂ, ಹೆಂಗಸರ ಕಾಲೇಜುಗಳೂ, ಹೈ ಸ್ಕೂಲು ಮುಂತಾದವೂ ಅತಿಶಯವಾದ ಸ್ಥಿತಿಯಲ್ಲಿವೆ. ಉತ್ತರ ಭಾಗದ ಸಂಸ್ಥಾನಗಳಲ್ಲಿ ಓದು ಬರೆಹ ಬಾರದಿರುವರು ಇರುವುದು ಬಹಳ ಕಡಿಮೆ.

15. ರಾಜ್ಯಭಾರ ಕ್ರಮ.—ಸಂಯುಕ್ತ ಸಂಸ್ಥಾನದಲ್ಲಿ ಪ್ರಜಾಪ್ರತಿನಿಧಿ ಪ್ರಭುತ್ವವು ನೆಲೆಗೊಂಡಿದೆ. ಸ್ಥಳಿಕ ಕಾರ್ಯನಿರ್ವಾಹದಲ್ಲಿ ಸ್ವತಂತ್ರವಾಗಿರುವ ೪೮ ಸಂಸ್ಥಾನಗಳು ಸೇರಿ ಈ ಸಂಯುಕ್ತ ಸಂಸ್ಥಾನವಾಗಿದೆ. ಕಾಂಗ್ರೆಸ್ ಎಂಬ ಸಭೆಯ ಅನುಮತಿಯಿಲ್ಲದೆ ಸಂಯುಕ್ತ ಸಂಸ್ಥಾನಕ್ಕೆ ಸಂಬಂಧ ಪಡುವ ಖಾನೂನುಗಳು ಆಗುವುದಕ್ಕೆ ಆಸ್ಪದವಿಲ್ಲ. ನಿಯಮಿತ ರಾಜ್ಯಭಾರ ಕ್ರಮಕ್ಕನುಸಾರವಾಗಿ ಪ್ರೆಸಿಡೆಂಟ್ ಎಂಬ ಹೆಸರುಳ್ಳ ಸಭಾಧ್ಯಕ್ಷನು ಸಂಯುಕ್ತ ಸಂಸ್ಥಾನದ ಆಡಳಿತಗಳನ್ನು ನಡೆಯಿಸುವನು; ಈ ಪ್ರೆಸಿಡೆಂಟು ಮುಖ್ಯ ಸೇನಾನಾಯಕನಾಗಿಯೂ ಇರುವನು.

ಸಂಯುಕ್ತ ಸಂಸ್ಥಾನದ ಕಾಂಗ್ರೆಸ್ ಎಂಬ ಸಭೆಯಲ್ಲಿ ಉಪಸಭೆಗಳೆರಡು ಇರುವುವು; ಸೆನೆಟ್ ಸಭೆ ಮತ್ತು ಪ್ರಜಾಪ್ರತಿನಿಧಿ ಸಭೆ. ಈ ಸೆನೆಟ್ ಸಭೆಗೆ ಒಂದೊಂದು ಸಂಸ್ಥಾನದಿಂದ ಇಬ್ಬರಿಬ್ಬರು ಪ್ರತಿನಿಧಿಗಳು ಬರುವರು. ೨೧ ವರ್ಷ ವಯಸ್ಸಿಗೆ ಕಡಿಮೆಯಿಲ್ಲದ ಸಿಟಿಜನ್‌ಗಳೆಲ್ಲರೂ ಪ್ರಜಾ ಪ್ರತಿನಿಧಿ ಸಭೆಗೆ ಪ್ರತಿನಿಧಿಗಳನ್ನು ಚುನಾಯಿಸುತ್ತಾರೆ. ನಾಲ್ಕು ವರ್ಷಕ್ಕೆ ಒಂದಾವೃತ್ತಿ ಪ್ರೆಸಿಡೆಂಟನ್ನೂ, ೬ ವರುಷಕ್ಕೊಮ್ಮೆ ಸೆನೆಟ್ ಸಭೆಯವರನ್ನೂ, ಎರಡು ವರುಷಕ್ಕೊಂದಾವೃತ್ತಿ ಪ್ರಜಾಪ್ರತಿನಿಧಿ ಸಭೆಯನ್ನೂ ಚುನಾಯಿಸುತ್ತಾರೆ.

ಸಂಯುಕ್ತ ಸಂಸ್ಥಾನಕ್ಕೆ ಸೇರಿದ ಒಂದೊಂದು ಸಂಸ್ಥಾನದಲ್ಲಿಯೂ ಆಯಾ ಸಂಸ್ಥಾನದ ಕಾರ್ಯನಿರ್ವಾಹಕ್ಕಾಗಿ ಗವರ್ನರೊಬ್ಬನು, ಸೆನೆಟ್ ಸಭೆಯೊಂದು, ಪ್ರಜಾಪ್ರತಿನಿಧಿ ಸಭೆಯೊಂದು ಇರುವುವು.

ಸಂಸ್ಥಾನಗಳಲ್ಲದೆ ಟೆರಿಟೊರಿಗಳೆಂಬುವು ಕೆಲವು ಇವೆ. ಈ ಟೆರಿಟೊರಿಗಳಿಗೆ ಗವರ್ನರುಗಳನ್ನು ಪ್ರೆಸಿಡೆಂಟರು ನಿಯಾಮಕ ಮಾಡುತ್ತಾರೆ, ಮತ್ತು ಇವು ಇವರ ವಿಚಾರಣೆಯಲ್ಲಿವೆ. ಪ್ರಜಾಸಂಖ್ಯೆ ಹೆಚ್ಚಿದ ಬಳಿಕ ಇವು ಸಂಸ್ಥಾನಗಳಾಗುವುವು.

ಸಂಯುಕ್ತ ಸಂಸ್ಥಾನವು ಸೈನ್ಯವನ್ನು ವಿಶೇಷವಾಗಿಟ್ಟಿಲ್ಲ; ೨೫,೦೦೦ ಸಿಪಾಯಿಗಳು ಮಾತ್ರ ಇದ್ದಾರೆ; ಸಮಯ ಬಿದ್ದರೆ ಲಕ್ಷಾಂತರ ಜನರು ಯುದ್ಧಕ್ಕೆ ಸನ್ನದ್ಧರಾಗುವರು. ಯುದ್ಧದ ಹಡಗುಗಳು ತಯಾರಾಗುವ ಸ್ಥಳಗಳು ೧೧ ಇವೆ;

ಇವುಗಳಲ್ಲಿ ಮುಖ್ಯವಾದುವು ಬ್ರುಕ್ಲಿನ್, ಬಾಸ್ಟನ್ ಹತ್ತಿರ ಇರುವ ಚಾರ್ಲ್ಸ್ಟನ್, ನ್ಯೂ ಹಾಂಪ್‌ಷೈರಿನಲ್ಲಿರುವ ಪೋರ್ಟ್ಸ್ಮತ್.

16. ದೊಡ್ಡ ಪಟ್ಟಣಗಳು.—(೧) ವಾಷಿಂಗ್ಟನ್.—ಇದು ಕೊಲಂಬಿಯ ಡಿಸ್ಟ್ರಿಕ್ಟಿನಲ್ಲಿ ಪೊಟೊಮ್ಯಾಕ್ ನದಿಯ ತೀರದಲ್ಲಿದೆ. ಕಾಂಗ್ರೆಸ್ ಎಂಬ ರಾಷ್ಟ್ರೀಯ ಸಭೆಯು ಇಲ್ಲಿಯೇ ಸೇರುವುದು. (೨) ನ್ಯೂಯಾರ್ಕ್. ಇದರ ಶಾಖಾನಗರಗಳಾದ ಬ್ರುಕ್ಲಿನ್ ಮತ್ತು ಜರ್ಸಿ ಪಟ್ಟಣಗಳನ್ನೂ ಸೇರಿಸಿದರೆ ಜನಸಂಖ್ಯೆ ೫೦ ಲಕ್ಷಕ್ಕಿಂತ ಹೆಚ್ಚಾಗುವುದು; ವ್ಯಾಪಾರವೂ ಕೈಗಾರಿಕೆಗಳೂ ಇಲ್ಲಿಗಿಂತ ಹೆಚ್ಚಾಗಿ ಉತ್ತರ ಅಮೇರಿಕಾ ಖಂಡದ ಇನ್ನು ಯಾವ ಪಟ್ಟಣದಲ್ಲಿಯೂ ನಡೆವುದಿಲ್ಲ; ಈ ಪಟ್ಟಣವು ಹಡ್ಸನ್ ನದೀ ಮುಖದಲ್ಲಿದೆ. ಪಾರಿಸ್ ಪಟ್ಟಣಕ್ಕಿಂತ ಈಗ ದೊಡ್ಡದಾಗಿದೆ. ಲಂಡನ್ ಪಟ್ಟಣಕ್ಕೆ ಮಾತ್ರ ಎರಡನೆಯದಾಗಿರುವುದು. (೩) ಫಿಲೆಡೆಲ್ಫಿಯ—ಕೈಗಾರಿಕೆಗಳಲ್ಲಿ ಈ ಸಂಯುಕ್ತ ಸಂಸ್ಥಾನದಲ್ಲಿ ಎರಡನೆಯ ಪಟ್ಟಣ; ವ್ಯಾಪಾರದಲ್ಲಿ ಮೂರನೆಯದು. ಕಲ್ಲಿದ್ದಲಿನ ವ್ಯಾಪಾರವು ಬಹಳ ಹೆಚ್ಚಾಗಿ ನಡೆವುದು. ವಾಸಕ್ಕೆ ಬಹಳ ಅನುಕೂಲವಾಗಿರುವ ಮನೆಗಳು ಹೆಚ್ಚಾಗಿರುವುದರಿಂದ ಇದಕ್ಕೆ "ಸುಖಾವಾಸಪುರಿ" ಎಂಬ ಹೆಸರು ಇದೆ. (೪) ಬ್ರುಕ್ಲಿನ್. ಇದು ನ್ಯೂಯಾರ್ಕಿನ ಶಾಖಾನಗರ; ಇದಕ್ಕೂ ನ್ಯೂಯಾರ್ಕಿಗೂ ನಡುವೆ ಪೃಥ್ವಿಯೊಳಗೆಲ್ಲಾ ಬಹಳ ದೊಡ್ಡದೆನಿಸಿಕೊಂಡಿರುವ ಸಸ್ಪೆನ್‌ಷನ್ ಬ್ರಿಡ್ಜ್ ಒಂದು ಇದೆ. (೫) ಚಿಕಾಗೊ (1100). ಜನಸಂಖ್ಯೆಯಲ್ಲಿ ಈ ಸಂಯುಕ್ತ ಸಂಸ್ಥಾನದಲ್ಲಿ ಎರಡನೆಯ ಪಟ್ಟಣ. ಈ ಪಟ್ಟಣ ಬೆಳೆದಷ್ಟು ಜಾಗ್ರತೆಯಾಗಿ ಪೃಥ್ವಿಯಲ್ಲಿ ಇನ್ನು ಯಾವ ಪಟ್ಟಣವೂ ಬೆಳೆದಿಲ್ಲ. ೧೮೩೦ನೆಯ ಇಸವಿಯಲ್ಲಿ ಒಂದು ಹಳ್ಳಿಯಾಗಿದ್ದಿತು. ಇದು ಮಿಚಿಗನ್ ಸರೋವರದ ನೈರುತ್ಯ ತೀರದಲ್ಲಿದೆ. ಲಂಡನ್ನನ್ನು ಬಿಟ್ಟರೆ ಇಲ್ಲಿ ನಡೆವಷ್ಟು ಧಾನ್ಯದ ವ್ಯಾಪಾರವು ಇನ್ನೆಲ್ಲಿಯೂ ನಡೆವುದಿಲ್ಲ; ಇಲ್ಲಿಂದ ರೈಲ್ವೆಗಳೂ ಜಲಮಾರ್ಗಗಳೂ ಈ ಸಂಯುಕ್ತ ಸಂಸ್ಥಾನದ ಸಕಲ ಭಾಗಗಳಿಗೂ ಇವೆ. ಒಂದು ಸಾವಿರ ರೈಲ್ವೆ ಟ್ರೇನುಗಳು ಪ್ರತಿ ದಿನದಲ್ಲಿಯೂ ಇಲ್ಲಿಗೆ ಬಂದು ಹೋಗುವುವು. (೬) ಬಾಸ್ಟನ್ ಮಸಾಚಿಸಟ್ಸ್ ಸಂಸ್ಥಾನದ ರಾಜಧಾನಿ. ಇಲ್ಲಿಯ ಜನರು ವಿದ್ಯಾವಂತರು ಮತ್ತು ಆಲೋಚನಾಪರರು. ವಿಶೇಷವಾಗಿ ವ್ಯಾಪಾರ ನಡೆವ ಸ್ಥಳ. ಇದನ್ನು "(ಅಮೇರಿಕದ) ಆಥೆನ್ಸ್" ಎಂದು ಹೇಳುವುದುಂಟು. (೭) ಸೆಂಟ್‌ಲೂಯಿಸ್, ಮಿಸೌರಿ ಮತ್ತು ಮಿಸಿಸಿಪ್ಪಿ ನದಿಗಳು ಸಂಗಮವಾಗುವ ಸ್ಥಳದಲ್ಲಿದೆ; ಧಾನ್ಯದ ಹಿಟ್ಟು, ಕಬ್ಬಿಣ, ಯಂತ್ರಾದಿಗಳು—ಇವುಗಳಲ್ಲಿ ವ್ಯಾಪಾರವು ನಡೆಯುತ್ತಿದೆ. ಇಲ್ಲಿ ಮಿಸಿಸಿಪ್ಪೀ ನದಿಗೆ ಕಟ್ಟಿರುವ ಸೇತುವೆ ಪೃಥ್ವಿಯೊಳಗೆಲ್ಲಾ ಅತ್ಯುನ್ನತವಾದುದೆನಿಸಿಕೊಂಡಿದೆ. (೮) ಬಾಲ್ಟಿಮೋರ್. ಚೆಸಪೀಕ್‌ಕೊಲ್ಲಿಯ ತೀರದಲ್ಲಿದೆ, ಕೈಗಾರಿಕೆಗಳೂ ವ್ಯಾಪಾರವೂ ಹೆಚ್ಚಾಗಿ ನಡೆಯುತ್ತಿರುವ ಸ್ಥಳ. (೯) ಸಿನ್ಸಿನಾಟಿ. ಓಹಿಯೋ ನದಿಯ ದಡದಲ್ಲಿದೆ; ವಿಶೇಷವಾಗಿ ಕೈಗಾರಿಕೆಗಳು ನಡೆವ ಸ್ಥಳ. (೧೦) ಸಾನ್‌ಫ್ರಾನ್ಸಿಸ್ಕೋ.

ಸ್ಯಾನ್‌ಫ್ರಾನ್ಸಿಸ್ಕೋ ಕೊಲ್ಲಿಯ ದಡದಲ್ಲಿದೆ. ಇಲ್ಲಿಂದ ಹೊಗೆಯ ಜಹಜುಗಳು ಚೀಣ, ಜಪಾನ್, ಆಸ್ಟ್ರೇಲಿಯ, ಮತ್ತು ಸ್ಯಾಂಡಿಚ್ ದ್ವೀಪಗಳ ಕಡೆಗೆ ಹೊರಡುವುವು ಮತ್ತು ಇಲ್ಲಿಂದ ರೈಲ್ವೆಗಳೆರಡು ಹೊರಟು ಅಟ್ಲಾಂಟಿಕ್ ಸಾಗರದ ತೀರಕ್ಕೆ ಹೋಗುವುವು. ಈಚೆಗೆ ಈ ಪಟ್ಟಣದ ಬಹುಭಾಗವು ಭೂಕಂಪದಿಂದ ನಷ್ಟವಾಯಿತು. (೧೧) ನ್ಯೂ ಆರ್ಲಿಯನ್ಸ್. ಮಿಸಿಸಿಪ್ಪೀ ನದೀ ಮುಖಕ್ಕೆ ೧೦೦ ಮೈಲಿಯಲ್ಲಿದೆ. ಇಲ್ಲಿ ನಡೆವಷ್ಟು ಹತ್ತಿಯ ವ್ಯಾಪಾರವು ಪೃಥ್ವಿಯಲ್ಲಿ ಇನ್ನೆಲ್ಲಿಯೂ ನಡೆವುದಿಲ್ಲ; ಸಕ್ಕರೆಯ ವ್ಯಾಪಾರವು ಹೆಚ್ಚಾಗಿ ನಡಿಯುತ್ತಿದೆ.

17. ರಾಜಕೀಯ ವಿಭಾಗಗಳು.—ಸಂಯುಕ್ತ ಸಂಸ್ಥಾನದಲ್ಲಿ ೪೮ ಸಂಸ್ಥಾನಗಳೂ ೧೦ ಟೆರಿಟೊರಿಗಳೂ ಇವೆ. ಇವುಗಳನ್ನು ೫ ಗುಂಪಾಗಿ ವಿಭಾಗಿಸಬಹುದು; ಯಾವುವೆಂದರೆ:—ಉತ್ತರದಲ್ಲಿ ನ್ಯೂ ಇಂಗ್ಲೆಂಡ್ ಸಂಸ್ಥಾನಗಳು, ಮಧ್ಯದ ಅಟ್ಲಾಂಟಿಕ್ ಸಂಸ್ಥಾನಗಳು, ದಕ್ಷಿಣ ಸಂಸ್ಥಾನಗಳು, ಉತ್ತರ ಮಧ್ಯ ಭಾಗದ ಸಂಸ್ಥಾನಗಳು, ಮತ್ತು ರಾಕೀ ಪರ್ವತ ಶ್ರೇಣಿ, ಪೆಸಿಫಿಕ್ ಸಾಗರಗಳ ಕಡೆಯ ಸಂಸ್ಥಾನಗಳು.

18. ಉತ್ತರದ ನ್ಯೂ ಇಂಗ್ಲೆಂಡ್ ಸಂಸ್ಥಾನಗಳು.—ಇವು ೬.—ಮೇನ್, ನ್ಯೂ ಹಾಂಪ್‌ಷೈರ್, ವರ್ಮಾಂಟ್, ಮಸಾಚುಸಟ್ಸ್, ರೋಡ್‌ದ್ವೀಪ, ಮತ್ತು ಕನೆಕ್ಟಿಕಟ್. ಇವೆಲ್ಲಾ ಸೇರಿ ಇಂಗ್ಲೆಂಡ್ ವೇಲ್ಸುಗಿಂತ ಸ್ವಲ್ಪ ಹೆಚ್ಚಾಗಿ ವಿಸ್ತಾರವಾಗಿವೆ.

(೧) ಮೇನ್ ಸಂಸ್ಥಾನದಲ್ಲಿ ಹಡಗು ಕಟ್ಟುವುದು ಮತ್ತು ಮೀನಿನ ವ್ಯಾಪಾರವು ಹೆಚ್ಚಾಗಿವೆ. (೨) ನ್ಯೂಹಾಂಪ್‌ಷೈರನ್ನು "ಅಮೆರಿಕದ ಸ್ವಿಟ್ಜರ್ಲೆಂಡ್" ಎಂದು ಕರೆಯುತ್ತಾರೆ; ಬಹು ರಮಣೀಯವಾದ ಸ್ಥಳಗಳನೇಕವಿರುವುವು. (೩) ಮಸಾಚುಸಟ್ಸನ್ನು "ಕೊಲ್ಲಿಗಳ ಸಂಸ್ಥಾನ" ಎನ್ನುತ್ತಾರೆ; ಜನಸಂಖ್ಯೆಯೂ ಐಶ್ವರ್ಯವೂ ಹೆಚ್ಚಾಗಿವೆ; ಇಲ್ಲಿರುವಷ್ಟು ಮೀನಿನ ವ್ಯಾಪಾರವು ಸಂಯುಕ್ತ ಸಂಸ್ಥಾನದಲ್ಲಿ ಇನ್ನೆಲ್ಲಿಯೂ ಇಲ್ಲ; ಬಾಸ್ಟನ್ ಎಂಬುದು ಇದರ ದೊಡ್ಡ ಪಟ್ಟಣ. (೪) ರೋಡ್ ದ್ವೀಪವು ಸಣ್ಣ ಸಂಸ್ಥಾನ, ಪ್ರಾವಿಡೆನ್ಸ್ ಎಂಬ ಇದರ ದೊಡ್ಡ ಪಟ್ಟಣದಲ್ಲಿ ಕೈಗಾರಿಕೆಗಳೂ ವ್ಯಾಪಾರವೂ ಹೆಚ್ಚಾಗಿವೆ. (೫) ಕನೆಕ್ಟಿಕಟ್ಟನಲ್ಲಿ ಲೋಹದ ಸಾಮಾನುಗಳೂ, ಗಡಿಯಾರಗಳೂ ವಿಶೇಷವಾಗಿ ತಯಾರಾಗುತ್ತವೆ.

19. ಮಧ್ಯದ ಅಟ್ಲಾಂಟಿಕ್ ಸಂಸ್ಥಾನಗಳು.—ಇವು ೭:—ನ್ಯೂಯಾರ್ಕ್, ನ್ಯೂಜರಸಿ, ಪೆನ್ಸಿಲ್ವೇನಿಯ, ಡಿಲಾವೇರ್, ಮೇರಿಲೆಂಡ್, ವರ್ಜೀನಿಯ, ಮತ್ತು ಪಶ್ಚಿಮ ವರ್ಜೀನಿಯ. ಇವುಗಳೊಡನೆ ವಾಷಿಂಗ್ಟನ್ ಎಂಬ ರಾಜಧಾನಿ ಇರುವ ಕೊಲಂಬಿಯಾ ಡಿಸ್ಟ್ರಿಕ್ಟನ್ನು ಸೇರಿಸಬೇಕು. ನ್ಯೂ ಇಂಗ್ಲೆಂಡ್ ಸಂಸ್ಥಾನಗಳಿಗಿಂತ ಇಲ್ಲಿ ಚಳಿ ಕಡಿಮೆ ಮತ್ತು ಮರದ ಜಾತಿಗಳು ಹೆಚ್ಚಾಗಿವೆ.

(೧) ನ್ಯೂಯಾರ್ಕ್. ಇಂಗ್ಲೆಂಡಿನಷ್ಟು ದೊಡ್ಡದಾಗಿದೆ; ಜನಸಂಖ್ಯೆಯಲ್ಲಿಯೂ, ಐಶ್ವರ್ಯದಲ್ಲಿಯೂ, ಕೈಗಾರಿಕೆಗಳಲ್ಲಿಯೂ, ವ್ಯಾಪಾರದಲ್ಲಿಯೂ

ಸಂಯುಕ್ತ ಸಂಸ್ಥಾನದಲ್ಲಿ ಇದೇ ಮೊದಲನೆಯದು ಎನಿಸಿಕೊಂಡಿದೆ. ಇಲ್ಲಿ ದೊಡ್ಡ ಪಟ್ಟಣಗಳು ಅನೇಕ ಇರುವವು. (೨)ನ್ಯೂಜರ್ಸಿಯಲ್ಲಿ ನಾನಾ ಜಾತಿಯ ಫಲಗಳು ಚೆನ್ನಾಗಿ ಆಗುವವು. (೩) ಪೆನ್ಸಿಲ್ವೇನಿಯಾ ಸಂಸ್ಥಾನದಲ್ಲಿ ತೆಗೆವಷ್ಟು ಖನಿಜಗಳನ್ನು ಸಂಯುಕ್ತ ಸಂಸ್ಥಾನದಲ್ಲಿ ಇನ್ನೆಲ್ಲಿಯೂ ತೆಗೆವುದಿಲ್ಲ. ಸಂಯುಕ್ತ ಸಂಸ್ಥಾನದಲ್ಲಿ ಖರ್ಚಾಗುವ ಕಬ್ಬಿಣದಲ್ಲಿ ಅರ್ಧವನ್ನೂ, ಕಲ್ಲಿದ್ದಲಿನಲ್ಲಿ ಅರ್ಧಕ್ಕಿಂತ ಹೆಚ್ಚಾದ ಭಾಗವನ್ನೂ, ಮಟ್ಟಿಯ ತೈಲವೆಲ್ಲವನ್ನೂ ಈ ಯೊಂದು ಸಂಸ್ಥಾನವು ಒದಗಿಸಿ ಕೊಡುವುದು. ಕೈಗಾರಿಕೆಗಳಿಗೂ ಪ್ರಸಿದ್ಧವಾಗಿದೆ. (೪) ಮೇರಿಲೆಂಡ್ ಸಂಸ್ಥಾನವು ಹೊಗೆಯ ಸೊಪ್ಪಿಗೂ ಧಾನ್ಯಕ್ಕೂ ಹೆಸರುಗೊಂಡಿರುವುದು. (೫) ಕೊಲಂಬಿಯವು ಕಾಂಗ್ರೆಸ್ ಸಭೆಯ ಸ್ವಂತ ವಿಚಾರಣೆಯಲ್ಲಿದೆ; ಸಂಯುಕ್ತ ಸಂಸ್ಥಾನಕ್ಕೆ ರಾಜಧಾನಿಯಾದ ವಾಷಿಂಗ್ಟನ್ ಪಟ್ಟಣವು ಇಲ್ಲಿ ಇರುವುದು.

20. ದಕ್ಷಿಣ ಸಂಸ್ಥಾನಗಳು.—ಇವು ೧೦;—ಉತ್ತರ ಕಾರೊಲೀನ, ದಕ್ಷಿಣ ಕಾರೊಲೀನ, ಜಾರ್ಜಿಯ, ಫ್ಲಾರಿಡ, ಅಲಬಾಮ, ಮಿಸಿಸಿಪ್ಪಿ, ಲ್ಯೂಸಿಯಾನ, ಟೆಕ್ಸಾಸ್, ಅರ್ಕನ್ಸಾಸ್, ಟೆನಿಸ್ಸಿ. ಅರ್ಕನ್ಸಾಸಿಗೆ ಪಶ್ಚಿಮದಲ್ಲಿ ತಾಮ್ರ ವರ್ಣದವರ ರಾಷ್ಟ್ರವು (Indian Territory) ಇದೆ. ಈ ಸಂಸ್ಥಾನಗಳಲ್ಲಿ ಸೆಕೆ ಸ್ವಲ್ಪ ಹೆಚ್ಚು, ಮತ್ತು ನೆಲವು ಸಾಮಾನ್ಯವಾಗಿ ಫಲವತ್ತಾಗಿದೆ.

(೧) ದಕ್ಷಿಣ ಕಾರೊಲೀನವು ಬತ್ತ ಬೆಳೆವ ದೇಶ; ಇದರ ತೀರದಲ್ಲಿರುವ ದ್ವೀಪಗಳಲ್ಲಿ ಆಗುವ "ದ್ವೀಪದ ಹತ್ತಿ" ಸರ್ವೋತ್ಕೃಷ್ಟವಾದುದು; ಈ ಹತ್ತಿ ರೇಷ್ಮೆಯಂತಿರುವುದು. ಈ ಸಂಸ್ಥಾನದ ದೊಡ್ಡ ಪಟ್ಟಣವಾದ ಚಾರ್ಲ್ಸ್ಟನ್ ಎಂಬುದರಲ್ಲಿ ಹತ್ತಿಯ ವ್ಯಾಪಾರ ಹೆಚ್ಚು. (೨) ಜಾರ್ಜಿಯದಲ್ಲಿ ಕೈಗಾರಿಕೆಗಳು ವಿಶೇಷವಾಗಿವೆ. ಇದರ ದೊಡ್ಡ ಪಟ್ಟಣವಾದ ಅಟ್ಲಾಂಟದಿಂದ ಅನೇಕ ರೈಲ್ವೆಗಳು ಹೊರಟಿವೆ. (೩) ಮಿಸಿಸಿಪ್ಪೀ ಸಂಸ್ಥಾನದಲ್ಲಿ ಹತ್ತಿಯೇ ಮುಖ್ಯವಾದ ಬೆಳೆ; ಚೌಬೀನಿಯ ಮರದ ಕಾಡುಗಳೂ ಇರುವವು. ೩೫೦ ಮೈಲಿಯಷ್ಟು ಉದ್ದದವರೆಗೆ ಮಿಸಿಸಿಪ್ಪೀ ನದಿಗೆ ದೊಡ್ಡ ಏರಿಗಳನ್ನು ಕಟ್ಟಿ ಅದರ ಪ್ರವಾಹದಿಂದ ಜಮೀನು ಹಾಳಾಗದಂತೆ ಮಾಡಿದ್ದಾರೆ. (೪) ಲೂಸಿಯಾನವು ಕಬ್ಬಿನ ಪೈರಿನ ದೇಶ; ಹತ್ತಿಯ ವ್ಯಾಪಾರಕ್ಕೆ ಲೋಕಪ್ರಸಿದ್ಧವಾಗಿರುವ ನ್ಯೂ ಆರ್ಲಿಯನ್ಸ್ ಪಟ್ಟಣವು ಇಲ್ಲಿದೆ. (೫) ಟೆಕ್ಸಾಸಿನಲ್ಲಿ ಪೈರಿಗಳು ವಿಶೇಷವಾಗಿವೆ; ಫಲವತ್ತಾದ ನೆಲವೂ ಉಂಟು. ಜನರಿಗೆ ಪಶುಪಾಲನ ವೃತ್ತಿಯೇ ಮುಖ್ಯವಾಗಿದೆ. (೬) ತಾಮ್ರ ವರ್ಣದವರ ರಾಷ್ಟ್ರದಲ್ಲಿ ತಾಮ್ರ ವರ್ಣದವರು ಇದ್ದಾರೆ; ಇವರಲ್ಲಿ ಈಗ ನಾಗರಿಕತೆ ವೃದ್ಧಿಯಾಗುತ್ತಿರುವುದು.

21. ಉತ್ತರ ಮಧ್ಯಭಾಗದ ಸಂಸ್ಥಾನಗಳು.—ಇವು ೧೧:—ಕೆಂಟಕಿ, ಓಹಿಯೊ, ಇಂಡಿಯಾನ, ಇಲಿನಾಯ್, ಮಿಚಿಗನ್, ವಿಸ್ಕಾನ್ಸಿನ್, ಮಿಸೌರಿ, ಅಯೋವ, ಮಿನಿಸೋಟ, ಕಾನ್ಸಾಸ್, ನಿಬ್ರಸ್ಕ. ನಿಬ್ರಸ್ಕದ ಉತ್ತರಕ್ಕೆ ದಕೋಟಾ ಅರ

ಟೊರಿ ಇದೆ. ಈ ಸಂಸ್ಥಾನಗಳ ಒಟ್ಟು ವಿಸ್ತೀರ್ಣವು ಬಹಳವಾಗಿರುವುದು, ಮತ್ತು ನೆಲವು ಬಹು ಫಲವತ್ತಾಗಿದೆ. ಈಗಿರುವ ಸುಮಾರು ೩ ಕೋಟಿ ಜನಕ್ಕೆ ಬದಲಾಗಿ ೩೦ ಕೋಟಿ ಜನರಿದ್ದರೂ ತಿಂಡಿಗೆ ತಂಟೆಯಾಗುವುದಿಲ್ಲ. ಇದು ಅಗಾಧವಾದ ಪೈರುಗಳ ಪ್ರದೇಶ.

(೧) ಕೆಂಟಕಿಯಲ್ಲಿ ಮಾಮತ್‌ಗವಿ ಎಂಬುದೊಂದು ಇದೆ; ಈ ಗವಿಯು ಉದ್ದ ೧೦೦ ಮೈಲಿಗಳಾಗಿರುವುದು. ಇದರೊಳಗೆ ಹಡಗಿನ ಪ್ರಯಾಣಕ್ಕೆ ಯೋಗ್ಯವಾದ ಸಿಹಿನೀರಿನ ಸರೋವರ ಒಂದು ಇದೆ. ಲೂಯಿಸ್‌ವಿಲ್. ಒಂದು ದೊಡ್ಡ ಪಟ್ಟಣ. (೨) ಒಹಿಯೊ ಎಂಬುದರಲ್ಲಿ ಖನಿಜಗಳನ್ನು ತೆಗೆವುದೂ ಕೈಗಾರಿಕೆಗಳೂ ಹೆಚ್ಚು. (೩) ಇಂಡಿಯಾನ ಎಂಬುದು ಗೋಧಿಯ ಬೆಳೆಗೆ ಪ್ರಸಿದ್ಧವಾಗಿದೆ. (೪) ಇಲಿನ್ವಾದಲ್ಲಿ ಗೋಧಿಯ ಬೆಳೆ ವಿಶೇಷವಾಗಿ ಆಗುತ್ತದೆ; ಅಗಾಧವಾದ ಕಲ್ಲಿದ್ದಲಿನ ಪ್ರದೇಶಗಳಿವೆ. ಚಿಕಾಗೋ ಎಂಬುದು ದೊಡ್ಡ ಪಟ್ಟಣ. (೫) ಮಿಚಿಗನ್ನಿನಲ್ಲಿ ತಾಮ್ರದ ಖನಿಗಳೂ ದೊಡ್ಡ ಕಾಡುಗಳೂ ವಿಶೇಷವಾಗಿವೆ. ಡೆಟ್ರಾಯಿಟ್ ಎಂಬುದು ಮುಖ್ಯ ಪಟ್ಟಣ. (೬) ವಿಸ್ಕಾನ್ಸಿನ್ ಎಂಬುದರಿಂದ ಧಾನ್ಯವೂ ಚೌಬೀನಿಯ ಮರವೂ ರಫ್ತಾಗುತ್ತವೆ; ಮಿಲ್‌ವಾಕಿ, ದೊಡ್ಡ ಪಟ್ಟಣ. (೭) ಮಿಸೂರಿಯಲ್ಲಿ ಖನಿಜಗಳು ವಿಶೇಷವಾಗಿವೆ; ಸೆಂಟ್‌ಲೂಯಿಸ್ ದೊಡ್ಡಪಟ್ಟಣ ಮತ್ತು ವ್ಯಾಪಾರಸ್ಥಳ. (೮) ಕಾನ್ಸಾಸ್ ಎಂಬುದು ದನಕರುಗಳು ವಿಶೇಷವಾಗಿರುವ ಸಂಸ್ಥಾನ.

22. ರಾಕೀಪರ್ವತ ಶ್ರೇಣಿಯ ಹತ್ತಿರ ಇರುವ ಸಂಸ್ಥಾನಗಳು.—ಕೊಲೊರೇಡೋ ಮತ್ತು ನಿವಾಡ ಎಂಬ ೨ ಸಂಸ್ಥಾನಗಳಿವೆ. ಈ ಸಂಸ್ಥಾನಗಳೊಡನೆ ೬ ಟೆರಿಟೋರಿಗಳಿರುವುವು; ನ್ಯೂ ಮೆಕ್ಸಿಕೊ, ವಿಯೋಮಿಂಗ್, ಮಾಂಟೇನ, ಅರಿಸೋನ, ಯೂಟ, ಮತ್ತು ಇಡೇಹೊ. ಈ ಪ್ರಾಂತದಲ್ಲಿ ಖನಿಜಗಳು ಅಪಾರವಾಗಿವೆ.

(೧) ಕೊಲೊರೇಡೊವಿನಲ್ಲಿ ಬೆಳ್ಳಿ ಹೆಚ್ಚಾಗಿ ಸಿಕ್ಕುತ್ತಿದೆ. (೨) ನಿವಾಡವನ್ನು ಬೆಳ್ಳಿಯ ಸೀಮೆ ಯೆಂದು ಕರೆಯಬಹುದು. (೩) ನ್ಯೂ ಮೆಕ್ಸಿಕೊವಿನಲ್ಲಿ ನೀರಿಗೆ ಕಷ್ಟ; ನೀರಿದ್ದ ಕಡೆ ಬೆಳೆ ಬಹಳ ಹುಲುಸಾಗಿದೆ. (೪) ವಿಯೋಮಿಂಗಿನಲ್ಲಿ "ಎಲ್ಲೋಸ್ಟೋನ್ ನ್ಯಾಷನಲ್‌ಪಾರ್ಕ್" ಎಂಬ ಪ್ರಸಿದ್ಧವಾದ ವಿಹಾರಸ್ಥಾನ ಒಂದಿದೆ; ಇದರಷ್ಟು ರಮಣೀಯವಾದ ಸ್ಥಳ ಪೃಥ್ವಿಯಲ್ಲಿ ಇನ್ನೆಲ್ಲಿಯೂ ಇಲ್ಲ. ಇದರ ಆಳವಾದ ಕಮರಿಗಳೂ, ಉನ್ನತವಾದ ಜಲಪಾತಗಳೂ, ಅಗಾಧವಾದ ಬಿಸಿನೀರಿನ ಊಟೆಗಳೂ, ತಿಳಿನೀರಿನ ಸರೋವರಗಳೂ, ಸುಂದರವಾದ ಬೆಟ್ಟಗಳೂ ಆತ್ಯಾಶ್ಚರ್ಯವನ್ನುಂಟುಮಾಡುತ್ತವೆ. "ಗ್ರೇಟ್‌ಗೇಸರ್" ಎಂಬ ಊಟೆಯಲ್ಲಿ ನೀರು ೩೦೦ ಅಡಿಯ ಎತ್ತರದವರೆಗೆ ಹಾರುತ್ತದೆ. (೫) ಮಾಂಟೇನದಲ್ಲಿ ಚಿನ್ನದ ಮತ್ತು ಬೆಳ್ಳಿಯ ಖನಿಗಳು ಬಹಳವಾಗಿವೆ. (೬) ಅರಿಸೋನದಲ್ಲಿ ವರ್ಷಕ್ಕೆ ಮೂರು

ಅಂಗುಲ ಮಳೆಯಾಗುತ್ತದೆ. ಕೊಲೊರೇಡೋ ನದಿ ೩೦೦ ಮೈಲಿಯಷ್ಟು ದೂರ ಪರ್ವತವನ್ನು ಕತ್ತರಿಸಿ ದಾರಿಮಾಡಿಕೊಂಡು ಹರಿವುದು; ಇದರಷ್ಟು ಉದ್ದವಾಗಿಯೂ ಆಳವಾಗಿಯೂ ಇರುವ ಕಮರಿ ಪೃಥ್ವಿಯಲ್ಲಿ ಇನ್ನಾವುದೂ ಇಲ್ಲ; ಕೆಲವು ಕಡೆಗಳಲ್ಲಿ ೩,೦೦೦ ಅಡಿಯಿಂದ ೬,೦೦೦ ಅಡಿಯಷ್ಟು ಆಳವಾಗಿರುವುದು. (೭) ಯೂಟದಲ್ಲಿ ಖನಿಜಗಳು ವಿಶೇಷವಾಗಿವೆ. (೮) ಇಡೇಹೊದಲ್ಲಿ ಚಿನ್ನದ ಮತ್ತು ಬೆಳ್ಳಿಯ ಖನಿಗಳು ಹೆಚ್ಚಾಗಿವೆ.

23. ಪೆಸಿಫಿಕ್ ತೀರದ ಸಂಸ್ಥಾನಗಳು.—ಕಾಲಿಫೋರ್ನಿಯ ಮತ್ತು ಆರಿಗಾನ್ ಎಂಬ ಎರಡು ಸಂಸ್ಥಾನಗಳೂ, ವಾಷಿಂಗ್ಟನ್ ಮತ್ತು ಅಲಾಸ್ಕವೆಂಬ ಎರಡು ಟೆರಿಟೋರಿಗಳೂ ಇರುವುವು.

(೧) ಚಿನ್ನದ ಮತ್ತು ಪಾದರಸದ ಉತ್ಪತ್ತಿಯಲ್ಲಿ ಕಾಲಿಫೋರ್ನಿಯವು ಮೊದಲನೆಯದಾಗಿದೆ; ಇಲ್ಲಿಯ ಗೋಧಿಯ ಬೆಳೆ ಇವಕ್ಕಿಂತಲೂ ಆದಾಯಕರವಾಗಿರುವುದು. ಸಿಯಾರಾ ಪರ್ವತ ಶ್ರೇಣಿಯ ಸಾನುಪ್ರದೇಶದಲ್ಲಿ ಅದ್ಭುತಾಕಾರವಾದ ಮರಗಳು ಇವೆ; ಬುಡದಲ್ಲಿ ೧೦೫ ಅಡಿಯಷ್ಟು ಸುತ್ತಳತೆಯುಳ್ಳವುಗಳಾಗಿಯೂ ೩೦೦ ಅಡಿಯಷ್ಟು ಎತ್ತರವಾಗಿಯೂ ಇರುವುವು. ಸಾನ್‌ಫ್ರಾನ್ಸಿಸ್ಕೊ ಎಂಬುದು ಈ ಸಂಸ್ಥಾನದ ದೊಡ್ಡ ಪಟ್ಟಣ. (೨) ಆರಿಗಾನ್ ಸಂಸ್ಥಾನವು ಫಲವತ್ತಾಗಿದೆ, ಮತ್ತು ಖನಿಜಯುಕ್ತವಾಗಿರುವುದು. (೩) ವಾಷಿಂಗ್ಟನ್ ಎಂಬುದು ಗೋಧಿಯ ಸೀಮೆ; ದೊಡ್ಡ ಕಾಡುಗಳಿವೆ. (೪) ಅಲಾಸ್ಕವು ಬೆಟ್ಟಸೀಮೆ. ಜಪಾನ್ ದ್ವೀಪದ ಕಡೆಯಿಂದ ಸಾಗರದಲ್ಲಿ ಬರುವ ಉಷ್ಣೋದಕಪ್ರವಾಹವು ಇಲ್ಲಿಯ ಚಳಿಯನ್ನು ಕಡಿಮೆ ಮಾಡುತ್ತದೆ. ಸೀಲ್ ಎಂಬ ಮೀನನ್ನು ಹಿಡಿವುದೇ ಜನರ ಮುಖ್ಯೋದ್ಯೋಗ. ತಾಮ್ರವರ್ಣದವರೂ ಎಸ್ಕಿಮೋ ಜನಗಳೂ ಇಲ್ಲಿಯ ಮುಖ್ಯನಿವಾಸಿಗಳು.

ಮೆಕ್ಸಿಕೋದೇಶ.

1. ಮೇರೆ ಮತ್ತು ವಿಸ್ತೀರ್ಣ.—ಉತ್ತರಕ್ಕೆ ಸಂಯುಕ್ತ ಸಂಸ್ಥಾನ; ಪೂರ್ವಕ್ಕೆ ಮೆಕ್ಸಿಕೋ ಸಮುದ್ರ ಶಾಖೆ; ದಕ್ಷಿಣಕ್ಕೆ ಮಧ್ಯದ ಅಮೇರಿಕ; ಪಶ್ಚಿಮಕ್ಕೆ ಪೆಸಿಫಿಕ್ ಸಾಗರ—ಇವು ಮೇರೆಗಳು. ವಿಸ್ತೀರ್ಣ ಸುಮಾರು ೭,೬೭,೦೦೦ ಚ. ಮೈ. ಜನ ಸಂಖ್ಯೆ ಸುಮಾರು ೧,೪೦,೦೦,೦೦೦.

2. ದೇಶದ ಲಕ್ಷಣ.—ಈ ದೇಶದ ಒಳಭಾಗದಲ್ಲಿ ವಿಶಾಲವಾದ ಮತ್ತು ಉನ್ನತವಾದ ಪ್ರಸ್ಥಭೂಮಿ ಯಿದೆ; ಇದರ ಅಂಚಿನಲ್ಲಿ ಪರ್ವತಶ್ರೇಣಿಗಳಿರುವುವು; ತೀರಪ್ರದೇಶವು ತಗ್ಗಾದ ಮೈದಾನ; ಪ್ರಸ್ಥಭೂಮಿಯು ತೀರದ ತಗ್ಗು ನೆಲದ ಕಡೆಗೆ

ಮೆಟ್ಟಲು ಮೆಟ್ಟಲಾಗಿ ಇಳಿದಿರುವುದು. ದಕ್ಷಿಣದಲ್ಲಿ ಉನ್ನತವಾದ ಜ್ವಾಲಾಮುಖಿಗಳು ೧೩ ಉಂಟು. "ರಯೊ ಗ್ರಾಂಡಿ ಡೆಲ್‌ನಾರ್ಟೆ" (ಉತ್ತರದ ದೊಡ್ಡನದಿ) ಎಂಬುದು ಈಶಾನ್ಯದ ಸರಹದ್ದಾಗಿದೆ. ಹಡಗಿನ ಪ್ರಯಾಣಕ್ಕೆ ಅನುಕೂಲವಾದ ನದಿ ಈ ದೇಶದಲ್ಲಿಲ್ಲ.

3. ವಾಯುಗುಣ.—ತಗ್ಗಾಗಿರುವ ತೀರಪ್ರದೇಶದಲ್ಲಿ ಸೆಕೆಯೂ ಹೆಚ್ಚು, ಮಳೆಯೂ ಹೆಚ್ಚು. ಪ್ರಸ್ಥಭೂಮಿಗಳಲ್ಲಿ ವಾಯುಗುಣ ಹಿತಕರವಾಗಿದೆ. ಉನ್ನತವಾದ ಪರ್ವತಗಳಲ್ಲಿ ಚಳಿ ಹೆಚ್ಚಾಗಿರುವುದು. ಬೇಸಗೆಯಕಾಲ ಮಳೆಗಾಲವೆಂದು ಎರಡು ಋತುಗಳು ಕಾಣಬರುವುವು. ತಗ್ಗಾದ ಮೈದಾನಗಳು ಅನಾರೋಗ್ಯಕರವಾಗಿವೆ.

4. ವೃಕ್ಷಗಳು ಮತ್ತು ಬೆಳೆಗಳು.—ಚೌಬೀನಿಯ ಮರಗಳು ತಗ್ಗಾದ ಮೈದಾನಗಳಲ್ಲಿ ವಿಶೇಷವಾಗಿವೆ. ಕಿರುಮಂಜಿಯ ಹುಳುಗಳು ಇಲ್ಲಿ ವಿಶೇಷ. ಪ್ರಸ್ಥಭೂಮಿಗಳಲ್ಲಿ ಹತ್ತಿ, ಕಾಫಿ, ಹೊಗೆಯಸೊಪ್ಪು ಮತ್ತು ಧಾನ್ಯಗಳು ಆಗುತ್ತವೆ. ಬಾಳೆಯ ಗಿಡಗಳು ವಿಶೇಷವಾಗಿವೆ. ಮತ್ತು ಅನೇಕರು ಮುಖ್ಯವಾಗಿ ಬಾಳೆಯ ಹಣ್ಣನ್ನು ತಿಂದು ಜೀವಿಸುವರು.

5. ಖನಿಜಗಳು.—ಮೆಕ್ಸಿಕೋ ದೇಶದಲ್ಲಿರುವಷ್ಟು ಬೆಳ್ಳಿ ಪೃಥ್ವಿಯಲ್ಲಿ ಇನ್ನೆಲ್ಲಿಯೂ ಇಲ್ಲವೆಂದು ಹೇಳಬಹುದು. ಚಿನ್ನವೂ, ಕೊಂಚ ತಾಮ್ರವೂ ಇರುವುವು.

6. ಜನರು ಮತ್ತು ಅವರ ಉದ್ಯೋಗ ಮುಂತಾದ ವಿಷಯಗಳು.—ಸ್ಪೇನಿನವರೂ, ಮೆಕ್ಸಿಕನ್ ಇಂಡಿಯನ್ ಜನರೂ, ಸಂಕರ ಜಾತಿಯವರೂ ವಾಸವಾಗಿದ್ದಾರೆ. ಸ್ಪಾನಿಷ್ ಭಾಷೆ ಪ್ರಚುರವಾಗಿದೆ. ಕೃಷಿ ಮತ್ತು ಖನಿಜಗಳನ್ನು ತೆಗೆವುದು—ಇವೇ ಜನರ ಮುಖ್ಯೋದ್ಯೋಗಗಳು. ಹೆಸರುವಾಸಿಗೆ ಬಂದ ಕೈಗಾರಿಕೆ ಯಾವುದೂ ಇಲ್ಲ. ವ್ಯಾಪಾರವು ವಿಶೇಷವಾಗಿಲ್ಲ.

7. ರಾಜ್ಯಭಾರ ಮುಂತಾದ ವಿಷಯಗಳು.—ಈಗ ಇದು ಪ್ರಜಾಪ್ರತಿನಿಧಿ ಪ್ರಭುತ್ವದ ಸಂಯುಕ್ತ ದೇಶವಾಗಿದೆ. ಈ ಸಂಯುಕ್ತ ದೇಶದಲ್ಲಿ ೨೮ ಸಂಸ್ಥಾನಗಳೂ ಕೆಳಗಣ ಕಾಲಿಫೋರ್ನಿಯಾ ಎಂಬ ಒಂದು ಟೆರಿಟೊರಿಯೂ ಸೇರಿವೆ. ಜನರು ರೋಮನ್ ಕ್ಯಾಥೊಲಿಕ್ ಗುಂಪಿಗೆ ಸೇರಿದವರು. ವಿದ್ಯಾಭ್ಯಾಸವು ಸರಿಯಾಗಿ ನಡೆಯುತ್ತ ಇಲ್ಲ.

ಟೆಕ್ಸಾಸ್, ಕಾಲಿಫೋರ್ನಿಯ, ನ್ಯೂ ಮೆಕ್ಸಿಕೊ, ಯೂಟ ಎಂಬುವು ಪೂರ್ವದಲ್ಲಿ ಈ ದೇಶಕ್ಕೆ ಸೇರಿದ್ದುವು, ಈಗ ಸಂಯುಕ್ತ ಸಂಸ್ಥಾನಕ್ಕೆ ಸೇರಿವೆ.

ಮೆಕ್ಸಿಕೋ ದೇಶದ ಪೂರ್ವಕಾಲದ ನಿವಾಸಿಗಳಾದ ಆಸ್ಟೆಕ್ ಜನರು ಕೂಡಿದ ಮಟ್ಟಿಗೆ ನಾಗರಿಕತೆಯುಳ್ಳವರಾಗಿ ೧೫-೧೬ನೆಯ ಇಸವಿಯ ವರೆಗೂ ಬಾಳುತ್ತಿದ್ದರು. ಈ ಇಸವಿಯಲ್ಲಿ ಸ್ಪೇನಿನವರು ಇವರನ್ನು ಜಯಿಸಿ ದೇಶವನ್ನು ತಮ್ಮ

ಸ್ವಾಧೀನಮಾಡಿಕೊಂಡರು. ಅಸ್ಟೆಕ್ ಜನರು ಕಟ್ಟಿದ ಅರಮನೆಗಳೂ ದೇವಾಲಯಗಳೂ ಹಾಳು ಬಿದ್ದುವು, ಆದರೆ ಕೆಲವು ಜೀರ್ಣಸ್ಥಿತಿಯಲ್ಲಿ ಇನ್ನೂ ಉಳಿದಿವೆ. ೧೮೨೧ರಲ್ಲಿ ಮೆಕ್ಸಿಕೋ ದೇಶವು ಸ್ವತಂತ್ರ ದೇಶವಾಯಿತು.

8. ದೊಡ್ಡಪಟ್ಟಣಗಳು.—(೧) ಮೆಕ್ಸಿಕೊ. ರಾಜಧಾನಿ, ಸುಂದರವಾದ ಪಟ್ಟಣ; ಚಿನ್ನ, ಬೆಳ್ಳಿ, ಮತ್ತು ರತ್ನಗಳಿಂದ ಅಲಂಕೃತವಾದ ಕ್ರಿಸ್ತರ ದೇವಸ್ಥಾನವೊಂದು ಪಟ್ಟಣದ ಮಧ್ಯದಲ್ಲಿದೆ. (೨) ಲಿಯಾನ್. ದೊಡ್ಡ ಪಟ್ಟಣ. (೩) ಪ್ಯೂಬ್ಲ. ಕೈಗಾರಿಕೆಯ ಸ್ಥಳ. (೪) ಗ್ವಾನಜ್ವೇಟೋ. ಖನಿಜಗಳನ್ನು ವಿಶೇಷವಾಗಿ ತೆಗೆವ ಸ್ಥಳ. (೫) ವೀರಕ್ರೂಸ್. ರೇವೆಪಟ್ಟಣ. (೬) ಗ್ವಾಡಲಹರ. ಇಲ್ಲಿ ಮಣ್ಣಿನ ಭಾಂಡಗಳು ವಿಶೇಷವಾಗಿ ಆಗುತ್ತವೆ.

9. ಯುಕಟಾನ್.—ಇದು ಮೆಕ್ಸಿಕೋ ದೇಶಕ್ಕೆ ಸೇರಿದೆ; ಆದರೆ ಆಗಾಗ ಬೇರೆಯಾಗುತ್ತಿರುವುದೂ ಉಂಟು. ಇದರ ವಾಯುಗುಣವು ಚೆನ್ನಾಗಿದೆ; ಮತ್ತು ನೆಲವು ನೀರಿದ್ದ ಕಡೆಗಳಲ್ಲಿ ಫಲವತ್ತಾಗಿರುವುದು. ಮೇರಿಡ ಇದರ ರಾಜಧಾನಿ. ಕಾಂಪೀಚಿ ಎಂಬುದು ಮುಖ್ಯವಾದ ರೇವೆಪಟ್ಟಣ.

ಮಧ್ಯದ ಅಮೇರಿಕ.

1. ದೇಶದ ಲಕ್ಷಣ ಮುಂತಾದ ವಿಷಯಗಳು.—ಮೆಕ್ಸಿಕೋ ಎಂಬ ದೇಶಕ್ಕೂ ಪನಾಮ ಭೂಕಂಠಕ್ಕೂ ನಡುವೆ ಇರುವ ಮಧ್ಯದ ಅಮೇರಿಕವು ಫಲವತ್ತಾದ ಪ್ರಸ್ಥಭೂಮಿಯಾಗಿದೆ. ಈ ಪ್ರಸ್ಥಭೂಮಿ ಸಾಗರಗಳ ಕಡೆಗೆ ಮೆಟ್ಟಲು ಮೆಟ್ಟಲಾಗಿ ಇಳಿದು ಬಂದಿದೆ. ಉಷ್ಣವಲಯದ ಮರಗಿಡಗಳೆಲ್ಲಾ ಇಲ್ಲಿರುವುವು. ಜ್ವಾಲಾಮುಖಿಗಳಿವೆ; ಮಹತ್ತರವಾದ ಭೂಕಂಪವು ಪದೇ ಪದೇ ಆಗುತ್ತಿರುವುದು. ವಿಸ್ತೀರ್ಣವು ೧,೮೦,೦೦೦ ಚ. ಮೈ. ಜನಸಂಖ್ಯೆ ೩೨,೫೦,೦೦೦.

ವಾಯುಗುಣವು ಮೆಕ್ಸಿಕೋ ದೇಶದಲ್ಲಿರುವಂತೆ ಇಲ್ಲಿಯೂ ಇದೆ. ಇಲ್ಲಿ ಆಗುವ ಮುಖ್ಯ ಪದಾರ್ಥಗಳು ಯಾವುವೆಂದರೆ.—ಕಾಫಿ, ತೆಂಗು, ಕಬ್ಬು, ನೀಲಿ, ಹೊಗೆಯಸೊಪ್ಪು, ಮತ್ತು ವೆನಿಲ್ಲ (ಒಂದು ಬಗೆಯ ಸಂಬಾರ). ಕಾಡುಗಳಲ್ಲಿ ಮಹಾಗನಿ ಮುಂತಾದ ಮರಗಳು ಬೆಳೆಯುತ್ತವೆ. ಕೊಂಚ ಮಟ್ಟಿಗೆ ವ್ಯಾಪಾರವುಂಟು.

2. ರಾಜಕೀಯವಿಭಾಗಗಳು.—ಇಲ್ಲಿ ಪ್ರಜಾಪ್ರತಿನಿಧಿ ಪ್ರಭುತ್ವದ ದೇಶಗಳು ೫, ಬ್ರಿಟಿಷ್ ಕಾಲೊನಿಯೊಂದು, ಮತ್ತು ಸಣ್ಣ ರಾಜ್ಯವೊಂದು ಇವೆ. ಅವುಗಳ ಹೆಸರುಗಳು ಯಾವುವೆಂದರೆ.—ಗ್ವಾಟೆಮಾಲ, ಸಾನ್ ಸಾಲ್ವಡಾರ್, ಬ್ರಿಟಿಷ್ ಹಾಂಡುರಾಸ್, ಹಾಂಡುರಾಸ್, ನಿಕರಾಗ್ವ, ಮಸ್ಕಿಟಿಯ, ಮತ್ತು ಕೋಸ್ಟರೀಕ.

ಬ್ರಿಟಿಷ್ ಹಾಂಡುರಾಸ್ ಎಂಬುದು ಬ್ರಿಟಿಷ್ ಕಾಲೊನಿ. ಮಸ್ಕ್ವಿಟೋ ಎಂಬುದು ರಾಜ್ಯ.

(೧) ಗ್ವಾಟಿಮಾಲದ ಪೆಸಿಫಿಕ್ ತೀರಪ್ರದೇಶವು ಕಾಫಿಯ ಸೀಮೆ. ಹೊಸ ಗ್ವಾಟಿಮಾಲವು ಇದರ ರಾಜಧಾನಿ; ಭೂಕಂಪದ ಅಪಾಂತರಕ್ಕಾಗಿ ಹಳೆಯಗ್ವಾಟಿಮಾಲವನ್ನು ಬಿಡಬೇಕಾಯಿತು. (೨) ಸಾನ್‌ಸಾಲ್ವೆಡಾರಿನ ರಾಜಧಾನಿ ಸಾನ್‌ಸಾಲ್ವೆಡಾರ್. ಇಲ್ಲಿಂದ ಸರ್ವೋತ್ಕೃಷ್ಟವಾದ ನೀಲಿ ರಫ್ತಾಗುತ್ತದೆ. ಭೂಕಂಪದ ಅಪಾಂತರ ಹೆಚ್ಚು. (೩) ಬ್ರಿಟಿಷ್ ಹಾಂಡುರಾಸಿನಿಂದ ಮಹಾಗನಿಯ ತೊಲೆಗಳು ರಫ್ತಾಗುತ್ತವೆ. ಬೆಲಿಸಿ ಎಂಬುದು ರಾಜಧಾನಿ. (೪) ಹಾಂಡುರಾಸ್ ಎಂಬುದರಲ್ಲಿ ಟ್ರುಕ್ಸಿಲ್ಲೊ ಎಂಬುದು ಮುಖ್ಯವಾದ ರೇವೆಪಟ್ಟಣ. (5) ನಿಕರಾಗ್ವವೆಂಬುದು ಸಂಪದ್ಯುಕ್ತವಾದ ಸಂಸ್ಥಾನ. ಮಾನಗ್ವವೆಂಬುದು ಈಗಿನ ರಾಜಧಾನಿ. ಈ ದೇಶದ ಒಂದು ಭಾಗದಲ್ಲಿ ೬೦ ಮೈಲಿಯ ದೂರದೊಳಗೆ ೬ ಜ್ವಾಲಾಮುಖಿಗಳಿವೆ. (೬) ಮಸ್ಕ್ವಿಟೋ ವೆಂಬುದರಲ್ಲಿ ಕಾಲಿಡುವುದಕ್ಕಾಗದ ಕಾಡುಗಳಿವೆ. (೭) ಕೋಸ್ಟರೀಕದಲ್ಲಿ ಜ್ವಾಲಾಮುಖಿಗಳು ವಿಶೇಷವಾಗಿವೆ; ಕಾಫಿ ಹೆಚ್ಚಾಗಿ ರಫ್ತಾಗುತ್ತದೆ.

(೩) ಜನರು.—ಸ್ಪಾನಿಷ್ ವಂಶದವರು ಮುಖಂಡರಾಗಿದ್ದಾರೆ, ಮತ್ತು ಸ್ಪಾನಿಷ್‌ಭಾಷೆ ಪ್ರಚುರವಾಗಿದೆ. ಸಂಕರ ಜಾತಿಯವರು ಅನೇಕರುಂಟು. ರೋಮನ್ ಕ್ಯಾಥೊಲಿಕ್ ಮತವು ಪ್ರಚುರವಾಗಿದೆ.

ವೆಸ್ಟಿಂಡಿಯಾ ದ್ವೀಪಗಳು.

1. ಪೀಠಿಕೆ.—ಉತ್ತರ ದಕ್ಷಿಣ ಅಮೆರಿಕಗಳ ನಡುವೆ ವೆಸ್ಟ್ ಇಂಡಿಯ ದ್ವೀಪಸ್ತೋಮ ಸಮುದಾಯವಿದೆ. ಈಸ್ಟ್ ಇಂಡಿಯಾ ಅಥವಾ ಮಲಯ ದ್ವೀಪಸ್ತೋಮ ಸಮುದಾಯವು ಯೂರೇಷಿಯಾ ಖಂಡಕ್ಕೆ ಹೇಗೆ ಮುಖ್ಯವೋ ಹಾಗೆಯೇ ಅಮೆರಿಕಾ ಖಂಡಗಳಿಗೆ ಈ ದ್ವೀಪಸ್ತೋಮ ಸಮುದಾಯವು ಮುಖ್ಯ. ಇವೆರಡೂ ಉಷ್ಣವಲಯದ ಸಮುದ್ರಗಳಲ್ಲಿವೆ; ಎರಡರಲ್ಲಿಯೂ ಸೊಗಸಾದ ಬಂದರುಗಳೂ, ಜಲಸಂಧಿಗಳನೇಕಗಳೂ ಉಂಟು; ಎರಡರಲ್ಲಿಯೂ ನೆಲವು ಬಹು ಫಲವತ್ತಾಗಿದೆ. ಈ ದ್ವೀಪಸ್ತೋಮ ಸಮುದಾಯವು ವಿಸ್ತೀರ್ಣದಲ್ಲಿ ಮಾತ್ರ ಬಹಳ ಕಡಿಮೆಯಾಗಿದೆ.

2. ವಿಸ್ತೀರ್ಣ ಮುಂತಾದ ವಿಷಯಗಳು.—ಈ ದ್ವೀಪಸ್ತೋಮ ಸಮುದಾಯದ ವಿಸ್ತೀರ್ಣವು ೯೫,೦೦೦ ಚ. ಮೈ. ಇದನ್ನು ಮೂರು ಸ್ತೋಮಗಳಾಗಿ ವಿಂಗಡಿಸಬಹುದು; ದೊಡ್ಡ ಆಂಟೀಲ್, ಚಿಕ್ಕ ಆಂಟೀಲ್, ಮತ್ತು ಬಹಾಮ.

(೧) ದೊಡ್ಡ ಆಂಟೀಲ್ ಸ್ತೋಮದಲ್ಲಿ ಕ್ಯೂಬ, ಹೇಟ್ಟೈ, ಜಮೈಕ ಮತ್ತು ಪೋರ್ಟೋರೀಕೊ ಎಂಬ ದ್ವೀಪಗಳು ಮುಖ್ಯವಾದುವು. (೨) ಚಿಕ್ಕ ಆಂಟೀಲ್ ಸ್ತೋಮದಲ್ಲಿ ಲೀವರ್ಡ್, ವಿಂಡ್ವರ್ಡ್ ಮತ್ತು ವೆನಿಜ್ಯೂಲ ದ್ವೀಪ ಪಙ್ತಿಗಳು ಮುಖ್ಯ. (೩) ಬಹಾಮಾ ದ್ವೀಪಸ್ತೋಮವು ದೊಡ್ಡ ಆಂಟೀಲಿಗೆ ಉತ್ತರದಲ್ಲಿದೆ.

ದೊಡ್ಡ ಆಂಟೀಲ್ ದ್ವೀಪಸ್ತೋಮದಲ್ಲಿ ಬೆಟ್ಟಗಳು ಹೆಚ್ಚಾಗಿವೆ; ಆದರೆ ಸಾನು ಪ್ರದೇಶಗಳಲ್ಲಿ ಕಾಡುಗಳಿರುವುವು. ಚಿಕ್ಕ ಆಂಟೀಲ್ ಸ್ತೋಮದಲ್ಲಿ ಜ್ವಾಲಾಮುಖಿಗಳುಂಟು.

3. ವಾಯುಗುಣ ಮುಂತಾದ ವಿಷಯಗಳು.—ಈ ದ್ವೀಪಸ್ತೋಮ ಸಮುದಾಯವು ಉಷ್ಣವಲಯದಲ್ಲಿದೆ; ಆದರೆ ಸಾಗರ ಮಾರುತಗಳಿಂದ ಸೆಕೆ ಕಡಿಮೆಯಾಗಿರುವುದು. ಉಷ್ಣವಲಯದ ಮರಗಿಡಗಳೆಲ್ಲವೂ ಇವೆ. ಅನೇಕ ದ್ವೀಪಗಳಲ್ಲಿ ಕಬ್ಬು, ಕಾಫಿ, ಹತ್ತಿ, ಕೋಕೊ ಮತ್ತು ಚಾಕೊಲೇಟುಗಳು ಆಗುವ ಕೋಕೊ ಗಿಡ, ಮತ್ತು ಹೊಗೆಯಸೊಪ್ಪು ಬಹು ಚೆನ್ನಾಗಿ ಬೆಳೆಯಾಗುವುವು. ನಾನಾ ಬಗೆಯ ಹಣ್ಣುಗಳಾಗುವುವು. ಶುಂಠಿ, ಮೆಣಸು ಮುಂತಾದುವು ಆಗುತ್ತವೆ. ಬಹಾಮಾಸ್ತೋಮದಲ್ಲಿ ಮಹಾಗನಿ ಮುಂತಾದ ಚೌಬೀನಿಯ ಮರಗಳು ವಿಶೇಷ. ದುಷ್ಟ ಪ್ರಾಣಿಗಳಿರುವುದು ಕಡಿಮೆ.

ಸೈಕ್ಲೋನೆಂಬ ಚಂಡಮಾರುತಗಳಿಲ್ಲದಿದ್ದರೆ ವಾಯುಗುಣವು ಸೊಗಸಾದುದೆಂದು ಹೇಳಬಹುದಾಗಿದ್ದಿತು. ಈ ಚಂಡಮಾರುತಗಳು ಮನೆಗಳನ್ನು ಎತ್ತಿ ಉರುಳಿಸಿವೆ; ಫಿರಂಗಿಗಳನ್ನು ಸಮುದ್ರಕ್ಕೆ ಬಿಸುಟಿವೆ; ಮತ್ತು ಬಲವಾದ ಕೋಟೆಗಳನ್ನು ನಾಶಪಡಿಸಿವೆ.

4. ಜನ ಮತ್ತು ವ್ಯಾಪಾರ.—ಜನಸಂಖ್ಯೆ ೬೦,೦೦,೦೦೦. ನೀಗ್ರೋಜನರೂ ಸ್ಪಾನಿಷ್ ಜನರೂ ಮುಖ್ಯನಿವಾಸಿಗಳು. ಸ್ಪೇನಿನ ಭಾಷೆ ಪ್ರಚುರವಾಗಿದೆ. ಸಕ್ಕರೆ, ಹೊಗೆಯಸೊಪ್ಪು, ಕಾಫಿ, ಕೋಕೊ, ಹತ್ತಿ, ಸಂಬಾರದ ಪದಾರ್ಥಗಳು ರಫ್ತಾಗುತ್ತವೆ.

5. ರಾಜಕೀಯ ವಿಭಾಗಗಳು.—ಸ್ಪೇನ್, ಗ್ರೇಟ್‌ಬ್ರಿಟನ್, ಹಾಲೆಂಡ್ ಮತ್ತು ಡೆನ್ಮಾರ್ಕ್ ದೇಶಗಳಿಗೆ ಇಲ್ಲಿಯ ದ್ವೀಪಗಳು ಸೇರಿವೆ. ಹೇಟ್ಟೈ ಎಂಬ ದ್ವೀಪ ಮಾತ್ರ ಪ್ರಜಾಪ್ರತಿನಿಧಿ ಪ್ರಭುತ್ವದ ಎರಡು ರಾಷ್ಟ್ರಗಳಾಗಿದೆ.

(೧) ಸ್ಪೇನಿಗೆ ಕ್ಯೂಬ ಮತ್ತು ಪೋರ್ಟೋರೀಕೊ ಎಂಬುವು ಸೇರಿವೆ.

ಕ್ಯೂಬಾ ದ್ವೀಪವು ಬೆಟ್ಟದ ಸೀಮೆ; ಮಹಾಗನಿ, ಎಬೊನಿ ಮುಂತಾದ ಮರಗಳ ಕಾಡುಗಳುಂಟು; ಸುಮಾರು ೧೫,೦೦,೦೦೦ ಜನರಿರುವರು. ವಿಶೇಷವಾಗಿ ರಫ್ತಾಗುವ ಪದಾರ್ಥ ಸಕ್ಕರೆ. ಹವನ್ನ ರಾಜಧಾನಿ.

(೨) ಬ್ರಿಟಿಷರಿಗೆ ಸೇರಿದ ದ್ವೀಪಗಳು.—ಜಮೈಕ, ಬಹಾಮಾಸ್ತೋಮ, ಮತ್ತು ಸಣ್ಣ ಅಂಟೀಲಿನಲ್ಲಿ ಅನೇಕ ದ್ವೀಪಗಳು.

ಜಮೈಕವನ್ನು ಊಟೆಬುಗ್ಗೆಗಳ ದ್ವೀಪವೆನ್ನಬಹುದು; ಮಿಾನು ಮೊಸಳೆಗಳಿಂದ ತುಂಬಿರುವ ಸಣ್ಣ ನದಿಗಳು ಇಲ್ಲಿ ೨೦೦ ಇವೆ; ಸಕ್ಕರೆ, ಕಾಫಿ, ಮತ್ತು ಸಂಬಾರದ ಪದಾರ್ಥಗಳು ರಫ್ತಾಗುತ್ತವೆ. ಜನಸಂಖ್ಯೆ ೬,೦೦,೦೦೦. ಸ್ಪಾನಿಷ್ ಟೌನ್ ರಾಜಧಾನಿ. ಕಿಂಗ್‌ಸ್ಟನ್ ವ್ಯಾಪಾರಸ್ಥಳ. ಬಹಾಮಾ ದ್ವೀಪಗಳಲ್ಲಿ ೨೦ರಲ್ಲಿ ಜನರಿದ್ದಾರೆ; ವಾಸಾರ್ಹವಲ್ಲದ ನಡುಗಡ್ಡೆಗಳು ಸಹಸ್ರಾನೇಕಗಳಾಗಿವೆ. ಸ್ಪಂಜಿನ ವ್ಯಾಪಾರವು ಮುಖ್ಯ. ನಾಸ್ಸಾ ಎಂಬುದು ರಾಜಧಾನಿ.

ವಿಂಡ್ವರ್ಡ್ ದ್ವೀಪಗಳಲ್ಲಿ ಟ್ರಿನಿಡಾಡ್ ಎಂಬುದು ದೊಡ್ಡದು; ಇಲ್ಲಿರುವ ರಾಳದ (Pitch) ಸರೋವರ ಒಂದು ಲೋಕಪ್ರಸಿದ್ಧವಾದುದಾಗಿದೆ; ಈ ಸರೋವರದಿಂದ ರಾಳವನ್ನು ಪ್ರತಿವರ್ಷದಲ್ಲಿಯೂ ವಿಪರೀತವಾಗಿ ತೆಗೆಯುತ್ತಿದ್ದಾರೆ. ಆದರೂ ಕಡಿಮೆ ಬೀಳದಂತೆ ಇದೆ; ಕೆಳಗಿನಿಂದ ಹೊಸರಾಳವು ಉಕ್ಕಿ ಬರುತ್ತಲೇ ಇರುವುದು. ಈ ದ್ವೀಪದ ಜನರ ಸಂಭಾಷಣೆಯಲ್ಲಿ "ರಾಳ, ರಾಳದ ಖರೀದಿ" ಎಂಬುದೇ ಪಲ್ಲವಿಯಾಗಿದೆ. ಬಾರ್ಬಡೋಸ್ ದ್ವೀಪಗಳು ಜನಭರಿತವಾಗಿವೆ. ಲೀವರ್ಡ್ ದ್ವೀಪಗಳಲ್ಲಿ ಆಂಟಿಗ್ವ ಎಂಬುದು ಬಹು ಫಲವತ್ತಾದುದು.

ಉತ್ತರ ಅಕ್ಷಾಂಶ ೩೨ರಲ್ಲಿರುವ ಬರ್ಮ್ಯುಡಾ ದ್ವೀಪಗಳು ಬ್ರಿಟಿಷರಿಗೆ ಸೇರಿವೆ.

(೩) ಮಾರ್ಟಿನೀಕ್ ಗ್ವಾಡಲೂಪ್ ಮುಂತಾದ ಕೆಲವು ದ್ವೀಪಗಳು ಫ್ರಾನ್ಸ್ ದೇಶಕ್ಕೆ; ಕ್ಯುರಕಾವೊ ಮುಂತಾದ ಕೆಲವು ದ್ವೀಪಗಳು ಹಾಲೆಂಡಿಗೆ; ಸಂಟಾ ಕ್ರೂಸ್, ಸೆಂಟ್‌ಥಾಮಸ್ ಮತ್ತು ಸೆಂಟ್‌ಜಾನ್ ಎಂಬುವು ಡೆನ್ಮಾರ್ಕಿಗೆ ಸೇರಿವೆ.

(೪) ಹೇಟ್ಟೈದ್ವೀಪದಲ್ಲಿ ಹೇಟ್ಟೈರಿಪಬ್ಲಿಕ್ ಮತ್ತು ಡೊಮಿನಿಕನ್ ರಿಪಬ್ಲಿಕ್ ಎಂಬ ಎರಡು ಭಾಗಗಳಿವೆ. ನಾಗರಿಕತೆ ಕೊಂಚವೂ ಇಲ್ಲ. "ಈ ದ್ವೀಪವನ್ನೆಲ್ಲಾ ತಡಕಿದರೂ ಒಂದು ನೇಗಿಲೂ ಸಿಕ್ಕದು."

ದಕ್ಷಿಣ ಅಮೆರಿಕ.

ಸಾಮಾನ್ಯ ವರ್ಣನೆ.

ದಕ್ಷಿಣ ಅಮೆರಿಕವು ಉ. ಅ. ೧೨ರಿಂದ ದಕ್ಷಿಣ ಅಕ್ಷಾಂಶ ಸುಮಾರು ೫೬ರ ವರೆಗೆ ಪ್ರಸರಿಸಿದೆ. ಆಫ್ರಿಕಾ ಖಂಡವು ಉ. ಅ. ಸುಮಾರು ೩೫ರಿಂದ ದ. ಅ. ೩೫ರ ವರೆಗೆ ಪ್ರಸರಿಸಿದೆ.

1. ಮೇರೆಗಳು ಮತ್ತು ವಿಸ್ತೀರ್ಣ.—೪೮ ಮೈಲಿ ಅಗಲವಿರುವ ಪನಾಮಾ ಭೂಕಂಠವನ್ನು ಕತ್ತರಿಸಿ ಬಿಟ್ಟರೆ ದಕ್ಷಿಣ ಅಮೆರಿಕವು ಬಹು ವಿಶಾಲವಾದ ಒಂದು ದ್ವೀಪವಾಗುವುದು. ಉತ್ತರಕ್ಕೂ ಪೂರ್ವಕ್ಕೂ, ದಕ್ಷಿಣಕ್ಕೂ ಅಟ್ಲಾಂಟಿಕ್

ಸಾಗರದ ಭಾಗಗಳಿವೆ. ಪಶ್ಚಿಮಕ್ಕೆ ಪೆಸಿಫಿಕ್ ಸಾಗರವಿದೆ. ದಕ್ಷಿಣ ಸಮಶೀತೋಷ್ಣವಲಯದಲ್ಲಿರುವ ಭಾಗವು ದಕ್ಷಿಣಕ್ಕೆ ಹೋಗುತ್ತ ಹೋಗುತ್ತ ಅಗಲದಲ್ಲಿ ಕಡಿಮೆಯಾಗುತ್ತ ಬಂದಿದೆ. ಈ ಖಂಡದ ಒಟ್ಟು ವಿಸ್ತೀರ್ಣ ೭೦,೦೦,೦೦೦ ಚ. ಮೈಲಿ. ಈ ವಿಸ್ತೀರ್ಣದಲ್ಲಿ ¾ ಭಾಗವು ಉಷ್ಣವಲಯದಲ್ಲಿದೆ.

2. ದಕ್ಷಿಣ ಅಮೆರಿಕ ಮತ್ತು ಆಫ್ರಿಕ.—ದಕ್ಷಿಣ ಅಮೆರಿಕಕ್ಕೂ ಆಫ್ರಿಕಕ್ಕೂ ಇರುವ ತಾರತಮ್ಯಗಳನ್ನು ಜ್ಞಾಪಕದಲ್ಲಿ ಇಟ್ಟಿರಬೇಕು.

ದಕ್ಷಿಣ ಅಮೆರಿಕ	ಮತ್ತು ಆಫ್ರಿಕ.
(1) ದಕ್ಷಿಣ ಅಮೆರಿಕವು ಯಾವ ಅಕ್ಷಾಂಶಗಳಲ್ಲಿ ಬಹಳ ಅಗಲವಾಗಿರುವುದೋ.	(1) ಆ ಅಕ್ಷಾಂಶಗಳಲ್ಲಿ ಆಫ್ರಿಕವು ಅಗಲದಲ್ಲಿ ಕಡಮೆಯಾಗಿದೆ.
(2) ಮಳೆಯ ಮೋಡಗಳನ್ನು ವಿಶೇಷವಾಗಿ ತರುವ ಸಾಗರಮಾರುತಗಳು ಖಂಡದೊಳಕ್ಕೆ ಬಹುದೂರ ಬೀಸಿಕೊಂಡು ಹೋಗುವುವು.	(2) ಆಫ್ರಿಕಾ ಖಂಡದಲ್ಲಿ ಹೀಗಿಲ್ಲ. ತೀರಕ್ಕೆದಿರಾಗಿರುವ ಪರ್ವತಶ್ರೇಣಿಗಳು ಸಾಗರ ಮಾರುತಗಳನ್ನು ತಡೆವುವು. ಎಲ್ಲಿ ಹೀಗಿಲ್ಲವೊ ಆಕಡೆಗೆ ಬೀಸುವ ಮಾರುತಗಳಲ್ಲಿ ಮಳೆಯ ಮೋಡಗಳಿಲ್ಲ.
(3) ಅಲ್ಪವಾದ ಮರುಭೂಮಿಗಳಿವೆ.	(3) ಅತಿ ವಿಶಾಲವಾದ ಮರುಭೂಮಿಗಳಿವೆ.
(4) ನಿರಂತರೇಶಾನ್ಯ ಮಾರುತಗಳು ಮಳೆಯ ಮೋಡಗಳನ್ನು ಅಪರಿಮಿತವಾಗಿ ತರುವುವು.	(4) ನಿರಂತರೇಶಾನ್ಯ ಮಾರುತಗಳು ಮಳೆಯ ಮೋಡಗಳನ್ನು ತರುವುದಿಲ್ಲ.
(5) ಸಮಭೂಮಿಯ ಖಂಡ.	(5) ಪ್ರಸ್ಥಭೂಮಿಯ ಖಂಡ.
(6) ದಕ್ಷಿಣ ಅಮೆರಿಕದಲ್ಲಿ ಸೆಕೆಯೂ ಹೆಚ್ಚು, ಮಳೆಯೂ ಹೆಚ್ಚು.	(6) ಆಫ್ರಿಕದಲ್ಲಿ ಸೆಕೆ ಹೆಚ್ಚು, ಮಳೆ ಕಡಿಮೆ.
(7) ಮರಗಿಡಗಳ ಬೆಳವಳಿಕೆ ಅತಿ ವಿಶೇಷವಾಗಿದೆ.	(7) ದೊಡ್ಡ ಪ್ರಾಣಿಗಳ ಬೆಳವಳಿಕೆ ಹೆಚ್ಚಾಗಿದೆ.

3. ಕೊಲ್ಲಿಗಳು ಮತ್ತು ಜಲಸಂಧಿಗಳು.—ಆಫ್ರಿಕಾ ಖಂಡದಂತೆ ಇಲ್ಲಿಯೂ ಕೊಲ್ಲಿಗಳು ಮತ್ತು ಜಲಸಂಧಿಗಳು ಕಡಿಮೆಯಾಗಿವೆ. ವಿಶಾಲವಾದ ಅಳಿವೆಗಳು ದಕ್ಷಿಣ ಅಮೆರಿಕಾ ಖಂಡದಲ್ಲಿರುವಂತೆ ಇನ್ನು ಯಾವ ಖಂಡದಲ್ಲಿಯೂ ಇಲ್ಲ.

(೧) ಉತ್ತರ ತೀರದಲ್ಲಿರುವ ಸಮುದ್ರಶಾಖೆಗಳು.—ಡೇರಿಯನ್ ಮತ್ತು ಪಾರಿಯ ; ಪೂರ್ವತೀರದಲ್ಲಿರುವ ಕೊಲ್ಲಿಗಳು.—ಬಾಹಿಯ ಮತ್ತು ರಯೋ ಜನೀರೋ ; ಪಶ್ಚಿಮತೀರದಲ್ಲಿರುವ ಸಮುದ್ರಶಾಖೆಗಳು.—ಪನಾಮ ಮತ್ತು

ಗಾಯಕ್ವಿಲ್. ದಕ್ಷಿಣದಲ್ಲಿ ಮಾಜೆರ್ಲ ಜಲಸಂಧಿ ಇದೆ; ಇದು ಇಕ್ಕಟ್ಟಾದ ಜಲಮಾರ್ಗ, ೪೦೦ ಮೈಲಿಯಷ್ಟು ಉದ್ದವಿದೆ. (೨) ಅಮೆಸ್ಸಾನ್ ನದಿಯ ಅಳಿವೆ ೨೦೦ ಮೈಲಿಯಷ್ಟು ಅಗಲವಿದೆ; ಲಾಪ್ಲಾಟಾ ನದಿಯ ಅಳಿವೆ ೧೫೦ ಮೈಲಿಯಷ್ಟು ಅಗಲವಿರುವುದು.

4. ಭೂಶಿರಗಳು ಮತ್ತು ದ್ವೀಪಗಳು.—ಆಫ್ರಿಕಾ ಖಂಡದಲ್ಲಿರುವಂತೆ ಇಲ್ಲಿಯೂ ಭೂಶಿರಗಳೂ ದ್ವೀಪಗಳೂ ಕಡಿಮೆಯಾಗಿವೆ. ಟೆರಾಡೆಲ್ ಫ್ಯೂಗೋ ದ್ವೀಪಸ್ತೋಮವು ಮುಖ್ಯವಾದುದು; ಆದರೆ ವ್ಯಾಪಾರಕ್ಕೆ ಅನುಕೂಲವಾಗಿಲ್ಲ. ನೈರುತ್ಯತೀರದ ಸಮೀಪದಲ್ಲಿ ಕೆಲವು ದ್ವೀಪಗಳುಂಟು; ಪೂರ್ವದ ಕಡೆ ಅಮೆಸ್ಸಾನ್ ನದೀ ಮುಖದಲ್ಲಿ ಮರಾಜೊ ಎಂಬ ದ್ವೀಪವಿದೆ; ಇದೇ ಈ ಖಂಡದಲ್ಲಿ ಬಹು ದೊಡ್ಡ ದ್ವೀಪ.

(೧) ಮುಖ್ಯ ಭೂಶಿರಗಳು.—ಉತ್ತರದಲ್ಲಿ ಗ್ಯಲ್ಲಿನಾಸ್, ಪೂರ್ವದಲ್ಲಿ ಸೆಂಟ್‌ರೋಕ್, ದಕ್ಷಿಣದಲ್ಲಿ ಹಾರ್ನ್, ಪಶ್ಚಿಮದಲ್ಲಿ ಪಾರಿನ.

(೨) ಇತರ ದ್ವೀಪಗಳು.—ವಿಷುವದ್ರೇಖೆಯ ಪ್ರದೇಶದಲ್ಲಿರುವ ಗಾಲಪೇಗಾಸ್ ದ್ವೀಪದಲ್ಲಿ (ಕೂರ್ಮದ್ವೀಪ) ದೊಡ್ಡ ಆಮೆಗಳು ವಿಶೇಷವಾಗಿವೆ; ಪೃಥ್ವಿಯಲ್ಲಿಇನ್ನೆಲ್ಲಿಯೂ ಸಿಕ್ಕದ ಕೆಲವು ಪಕ್ಷಿಗಳೂ ಉರಗಜಂತುಗಳೂ ಇಲ್ಲಿರುವುವು. ಫಾಕ್ಲೆಂಡ್ ದ್ವೀಪಗಳು ಗ್ರೇಟ್ ಬ್ರಿಟನ್ನಿಗೆ ಸೇರಿವೆ.

5. ಈ ಖಂಡದ ಲಕ್ಷಣ.—ಉನ್ನತವಾದ ಪರ್ವತಶ್ರೇಣಿಗಳು ಪಶ್ಚಿಮದಲ್ಲಿ ದಕ್ಷಿಣಾಗ್ರದಿಂದ ಉತ್ತರಾಗ್ರದವರೆಗೂ ಅವಿಚ್ಛಿನ್ನವಾಗಿ ಹಬ್ಬಿವೆ. ಪೂರ್ವತೀರಪ್ರದೇಶದಲ್ಲಿ ಪರ್ವತಶ್ರೇಣಿಗಳಿವೆ. ಇವೆರಡರ ನಡುವೆ ಅಗಾಧವಾದ ಮೈದಾನಗಳಿವೆ; ಪಶ್ಚಿಮದಲ್ಲಿ ದಕ್ಷಿಣೋತ್ತರವಾಗಿ ಬಳ್ಳಿಯಂತೆ ಹಬ್ಬಿರುವ ಇಕ್ಕಟ್ಟಾದ ಮೈದಾನವೊಂದಿರುವುದು.

(೧) ಪಶ್ಚಿಮದಲ್ಲಿರುವ ಪರ್ವತ ಪಙ್ಕ್ತಿಗೆ ಆಂಡೀಸ್ ಎಂದು ಹೆಸರು. ಇದನ್ನು ಮೂರು ಭಾಗವಾಗಿ ವಿಂಗಡಿಸಿಕೊಳ್ಳಬಹುದು: ದಕ್ಷಿಣಭಾಗ, ಮಧ್ಯಭಾಗ, ಮತ್ತು ಉತ್ತರಭಾಗ. ದಕ್ಷಿಣಭಾಗದಲ್ಲಿ ಇದು ಒಂದೇ ಶ್ರೇಣಿಯಾಗಿ ಮಕರಸಂಕ್ರಾಂತಿ ವೃತ್ತದವರೆಗೂ ಹೋಗಿದೆ; ಈ ಭಾಗದಲ್ಲಿ ಇದರ ಅತ್ಯುನ್ನತ ಶಿಖರವಾದ ಅಕಾಂಕಾಗುವ (೨೨,೪-೨೧) ಎಂಬುದಿದೆ. ಮಧ್ಯಭಾಗದಲ್ಲಿ ಇದು ಎರಡು ಶ್ರೇಣಿಯಾಗಿ ದ. ಅ. ೧೦ರ ವರೆಗೂ ಹಬ್ಬಿ, ಪಾಸ್ಕೊ ಎಂಬ ಗ್ರಂಥಿಯಾಗಿ, ಸ್ವಲ್ಪ ಉತ್ತರಕ್ಕೆ ಹೋಗಿ ಮರಳಿ ಕಸ್ಕೊ ಎಂಬ ಗ್ರಂಥಿಯಾಗಿದೆ; ಈ ಎರಡು ಶ್ರೇಣಿಗಳ ನಡುವೆ ಪ್ರಸ್ಥಭೂಮಿಗಳಿರುವುವು. ಉತ್ತರಭಾಗವು ಪಾಸ್ಕೋಗ್ರಂಥಿಯಿಂದ ಮೂರು ಶ್ರೇಣಿಗಳಾಗಿ ಹಬ್ಬಿ, ಉನ್ನತವಾದ ಶಿಖರಗಳನೇಕವನ್ನು ಒಳಕೊಂಡಿದೆ; ಇವುಗಳಲ್ಲಿ ಅಂಟಿಸೇನ, ಕೊಟೊಪಾಕ್ಸಿ, ಚಿಂಬೊರೇಸೊ (೨೦,೬೧೦ ಅಡಿ) ಎಂಬುವು ಮುಖ್ಯ.

ಅಗ್ನಿವೃಷ್ಟಿಯನ್ನು ಕರೆವ ಜ್ವಾಲಾಮುಖಿಗಳು ಆಂಡೀಸ್ ಪರ್ವತದಲ್ಲಿ ೧೩೦ ಇವೆಯೆಂದು ಹೇಳುತ್ತಾರೆ. ಈ ಪರ್ವತದ ಹತ್ತಿರ ಭಯಂಕರವಾದ ಭೂಕಂಪವು ಪದೇ ಪದೇ ಆಗುತ್ತಿರುವುದು.

(೨) ಪೂರ್ವಭಾಗದಲ್ಲಿರುವ ಪರ್ವತಗಳು ಬಹಳ ಉನ್ನತಗಳಾಗಿಲ್ಲ; ಇವುಗಳಲ್ಲಿ ಮುಖ್ಯವಾದುವು ಯಾವುವೆಂದರೆ : ಪರಿಮೆ ಪರ್ವತ, ಗಯೇನದ ಪರ್ವತಗಳು, ಮತ್ತು ಬ್ರೆಸಿಲ್ ದೇಶದ ಪರ್ವತಗಳು. ಬ್ರೆಸಿಲ್ ದೇಶದ ಪರ್ವತಗಳು ನಾಲ್ಕೈದು ಶ್ರೇಣಿಗಳಾಗಿ ಉತ್ತರ ದಕ್ಷಿಣವಾಗಿ ಹಬ್ಬಿವೆ.

6. ವಾಣಿಜ್ಯ ಮಾರುತಗಳು.—ವಾಣಿಜ್ಯ ಮಾರುತಗಳಿಂದ ಆಗುವ ಕೆಲವು ಕೆಲಸಗಳು ದಕ್ಷಿಣ ಅಮೆರಿಕಾ ಖಂಡದಲ್ಲಿ ಸ್ಪಷ್ಟವಾಗಿ ತಿಳಿಯ ಬರುವಂತೆ ಇನ್ನಾವ ಖಂಡದಲ್ಲಿಯೂ ತಿಳಿಯಬರುವುದಿಲ್ಲ. ವಾಣಿಜ್ಯ ಮಾರುತಗಳು ನಿರಂತರ ಮಾರುತಗಳೆಂದು ಪೀಠಿಕಾ ಪ್ರಕರಣದಲ್ಲಿ ಹೇಳಿದೆಯಷ್ಟೆ; ಇವು ವರ್ಷವೆಲ್ಲವೂ ವಿಚ್ಛಿತ್ತಿ ಯಿಲ್ಲದೆ ಬೀಸುತ್ತಿರುವುವು. ಇವುಗಳಲ್ಲಿ ಎರಡು ಬಗೆಯುವು ಇವೆ: ನಿರಂತರೇಶಾನ್ಯ ಮಾರುತಗಳು ಮತ್ತು ನಿರಂತರಾಗ್ನೇಯ ಮಾರುತಗಳು. ನಿರಂತರೇಶಾನ್ಯ ಮಾರುತಗಳು ಸಮಭಾಜಕ ವೃತ್ತಕ್ಕೂ ಉತ್ತರ ಅಕ್ಷಾಂಶ ೩೦ಕ್ಕೂ ನಡುವೆ ಇರುವ ಪ್ರದೇಶದಲ್ಲಿ ಬೀಸುವುವು; ನಿರಂತರಾಗ್ನೇಯ ಮಾರುತಗಳು ಸಮಭಾಜಕ ವೃತ್ತಕ್ಕೂ ದಕ್ಷಿಣ ಅಕ್ಷಾಂಶ ೩೦ಕ್ಕೂ ನಡುವೆ ಇರುವ ಪ್ರದೇಶದಲ್ಲಿ ಬೀಸುವುವು. ಸ್ವಲ್ಪ ಕಡಿಮೆಯಾಗಿ ದಕ್ಷಿಣ ಅಮೆರಿಕಾ ಖಂಡವೆಲ್ಲವೂ ವಾಣಿಜ್ಯ ಮಾರುತ ಪ್ರದೇಶದಲ್ಲಿಯೇ ಇದೆ. ಈ ಖಂಡದೊಳಕ್ಕೆ ಬೀಸಿಕೊಂಡು ಬರುವ ವಾಣಿಜ್ಯ ಮಾರುತಗಳು ಉಷ್ಣವಲಯದಲ್ಲಿರುವ ವಿಶಾಲವಾದ ಉತ್ತರದಕ್ಷಿಣ ಅಟ್ಲಾಂಟಿಕ್ ಸಾಗರಗಳಿಂದ ಬರುತ್ತವೆಯಾದುದರಿಂದ ಮಿತಿಯಿಲ್ಲದೆ ಮಳೆಯ ಮೋಡಗಳನ್ನು ತರುತ್ತಿರುವುವು. ಈ ಮಾರುತಗಳು ಈ ಖಂಡದೊಳಕ್ಕೆ ಬರುವಾಗ, ಸ್ವಲ್ಪಮಟ್ಟಿಗೆ ಎತ್ತರವಾಗಿರುವ ಪೂರ್ವಭಾಗದ ಪರ್ವತ ಶ್ರೇಣಿಗಳು ಇವುಗಳನ್ನು ತಡೆದು, ಮೇಲಕ್ಕೋಡಿಸಿ, ಅಲ್ಲಿಯ ಶೈತ್ಯದ ದೆಸೆಯಿಂದ ಅವುಗಳಲ್ಲಿರುವ ಜಲಾಂಶವನ್ನು ಕೂಡಿದ ಮಟ್ಟಿಗೆ ಮಳೆಯ ರೂಪದಲ್ಲಿ ಕಿತ್ತುಕೊಳ್ಳುವುವು; ಈ ಮಳೆಗಳಿಂದ ಅಲ್ಲಲ್ಲಿ ದೊಡ್ಡ ನದಿಗಳಾಗಿರುವುವು.—ನಿರಂತರೇಶಾನ್ಯ ಮಾರುತವೂ ನಿರಂತರಾಗ್ನೇಯ ಮಾರುತವೂ ಸಮಭಾಜಕ ವೃತ್ತದ ಪ್ರದೇಶದಲ್ಲಿ ಸಂಧಿಸಲೇ ಬೇಕಷ್ಟೆ. ಹೀಗೆ ಇವು ಸಂಧಿಸಿದಾಗ ಇವೆರಡೂ ಮೇಲಕ್ಕೆ ಒಯ್ಯಲ್ಪಟ್ಟು ಅಲ್ಲಿಯ ಶೈತ್ಯದ ದೆಸೆಯಿಂದ ತಮ್ಮಲ್ಲಿರುವ ಜಲಾಂಶವನ್ನು ಬಹು ಮಟ್ಟಿಗೆ ಮಳೆಯ ರೂಪದಲ್ಲಿ ಕೆಳಕ್ಕೆ ತಳ್ಳಲೇ ಬೇಕಾಗಿದೆ; ಆದುದರಿಂದ ಸಮಭಾಜಕದ ಪ್ರದೇಶದಲ್ಲಿ ನಿತ್ಯವೂ ಮಳೆಯಾಗುವುದು; ಈ ಪ್ರದೇಶವು ನಿತ್ಯವರ್ಷವಲಯವೆಂದು ಕರೆಯಲ್ಪಟ್ಟಿದೆ.—ಇನ್ನೂ ಪಶ್ಚಿಮಕ್ಕೆ ಬೀಸಿಕೊಂಡು ಹೋಗುವ ಈ ವಾಣಿಜ್ಯ ಮಾರುತಗಳ ದಾರಿಯಲ್ಲಿ ೨೦,೦೦೦ ಅಡಿಯಷ್ಟು ಎತ್ತರ ವಿರುವ ಆಂಡೀಸ್ ಪರ್ವತ

ಶ್ರೇಣಿ ಅಡ್ಡವಾಗಿದೆ ; ಈ ಉನ್ನತ ಪರ್ವತವನ್ನು ಮೋಡಗಳು ದಾಟಿ ಹೋಗಲಾರವು. ಆದುದರಿಂದ ಈ ವಾಣಿಜ್ಯ ಮಾರುತಗಳಲ್ಲಿ ಉಳಿದಿರುವ ಜಲಾಂಶವೆಲ್ಲಾ ಆಂಡೀಸ್ ಪರ್ವತ ಶ್ರೇಣಿಯಲ್ಲಿ ಜಲ ಹಿಮ ರೂಪಗಳಲ್ಲಿ ಬಿದ್ದು ಹೋಗುವುದು ; ಮತ್ತು ಈ ಪರ್ವತಶ್ರೇಣಿಯನ್ನು ದಾಟಿಕೊಂಡು ಹೋದ ಗಾಳಿಯಲ್ಲಿ ಜಲಾಂಶವೇ ಇರುವುದಿಲ್ಲ.

ಆಂಡೀಸ್ ಪರ್ವತಕ್ಕೆ ಪೂರ್ವಭಾಗದಲ್ಲಿ ಉಷ್ಣ ವಲಯದಲ್ಲಿ ವಿಸ್ತಾರವಾದ ಮೈದಾನವಿದೆ ; ಮತ್ತು ಈ ಮೈದಾನವು ದಕ್ಷಿಣೋತ್ತರಭಾಗಗಳಿಂದ ಇಳಿಜಾರಾಗಿ ಬಂದು ಸಮಭಾಜಕ ರೇಖೆಯ ಕೆಳಗೆ ತಗ್ಗಾಗಿ ಪೂರ್ವದ ಕಡೆಗೆ ಇನ್ನೂ ತಗ್ಗಾಗುತ್ತ ಹೋಗಿದೆ ; ಆದುದರಿಂದ ಆಂಡೀಸ್ ಪರ್ವತದ ಪೂರ್ವಭಾಗದಲ್ಲಿ ಬೀಳುವ ಅಪರಿಮಿತವಾದ ನೀರೂ, ನಿತ್ಯವರ್ಷ ವಲಯದಲ್ಲಿ ನಿತ್ಯವೂ ಹೊಯ್ಯುವ ಮಳೆಯ ನೀರೂ, ಈ ಖಂಡದ ಪೂರ್ವಭಾಗದಲ್ಲಿ ಹುಟ್ಟುವ ದೊಡ್ಡ ನದಿಗಳಲ್ಲಿ ಕೆಲವುಗಳ ನೀರೂ ತಗ್ಗಾಗಿರುವ ಈ ಪ್ರದೇಶಕ್ಕೇ ಬರಬೇಕು. ಹೀಗೆ ಬರುವ ನೀರು ಅಗಾಧ ಪ್ರವಾಹವಾಗುವುದರಿಂದ, ಬ್ರೆಸಿಲ್ ದೇಶದ ಮಧ್ಯಭಾಗದಲ್ಲಿ ಅತ್ಯದ್ಭುತಾಕಾರವಾದ ಒಂದು ನದಿ ಇರಬೇಕಷ್ಟೆ ; ಅಂತಹ ನದಿ ಇದ್ದೇ ಇದೆ, ಅದರ ಹೆಸರು ಅಮೆಸಾನ್.

ಮಣ್ಣಿನ ನೆಲವೂ, ಜಲವೂ, ಬಿಸಿಲೂ ಎಲ್ಲಿ ಹೆಚ್ಚಾಗಿರುತ್ತವೆಯೋ ಅಲ್ಲಿ ಮರಗಳ ಬೆಳವಳಿಕೆ ಅತಿಶಯವಾಗಿರುವುದು ; ಈ ಸೌಕರ್ಯಗಳೆಲ್ಲ ಅಮೆಸಾನ್ ನದಿಯ ಜಲಾನಯನ ಪ್ರದೇಶದಲ್ಲಿ ಇರುವುದರಿಂದ ಕಾಲಿಡಲಿಕ್ಕಾಗದ ಮತ್ತು "ಕರಂಗಿ ಕಳ್ತಲಿಸುವ" ಕಾನನಗಳು ಇಲ್ಲಿ ವಿಶೇಷವಾಗಿವೆ—ಮರಗಿಡಗಳು ಎಲ್ಲಿ ಹೆಚ್ಚಾಗಿರುವುವೋ ಅಲ್ಲಿ ಕ್ರಿಮಿಕೀಟಗಳೂ ಹೇರಳವಾಗಿರುವುವು ; ಬ್ರೆಸಿಲ್ ದೇಶದಲ್ಲಿಯೂ ಹೇರಳವಾಗಿರುವುವು.

7. ಮೈದಾನಗಳು ಮತ್ತು ಮರುಭೂಮಿಗಳು.—ದಕ್ಷಿಣ ಅಮೆರಿಕವನ್ನು ಸಮಭೂಮಿಯ ಖಂಡವೆಂದು ಕರೆಯಬಹುದು. ಒರಿನೋಕೋನದೀ ಮುಖದಿಂದ ಲಾಪ್ಲಾಟಾ ನದಿಯಮುಖದವರೆಗೂ ಒಂದು ದೊಡ್ಡ ಮೈದಾನವಿದೆ. ಇದರಲ್ಲಿ ಮೂರು ಭಾಗಗಳುಂಟು :—ಒರಿನೋಕೋ ಮೈದಾನ, ಅಮೆಸಾನ್ ಮೈದಾನ, ಮತ್ತು ಲಾಪ್ಲಾಟಾ ಮೈದಾನ. ಪೆಸಿಫಿಕ್ ತೀರದಲ್ಲಿ ಅಟಕಾಮ ವೆಂಬುದೊಂದು ಮರುಭೂಮಿ ಇದೆ.

(೧) ಒರಿನೋಕೋ ಮೈದಾನವನ್ನು ಅಮೆಸಾನ್ ಮೈದಾನದಿಂದ ಪ್ರತ್ಯೇಕಿಸುವ ಸರಿಯಾದ ಜಲವಿಭಾಗ ಸ್ಥಾನವಿಲ್ಲ ; ರೈನ್ ನದಿಯಷ್ಟು ಇರುವ ಕಾಸಿಕ್ವಿಯೇರ್ ಎಂಬ ನದಿಯ ನೀರು ಒರಿನೋಕೋ ನದಿಗೂ ಅಮೆಸಾನ್ ನದಿಗೆ ಉಪನದಿಯಾದ ರಯೋನೀಗ್ರೋ ಎಂಬ ನದಿಗೂ ಹರಿದು ಹೋಗುತ್ತದೆ. ಅಮೆಸಾನ್ ಮೈದಾನವನ್ನು ಲಾಪ್ಲಾಟಾ ಮೈದಾನದಿಂದ ಪ್ರತ್ಯೇಕಿಸುವುದಕ್ಕೆ ೪ ಮೈಲಿಯಷ್ಟು ಅಗಲವಿರುವ ಮತ್ತು ತಗ್ಗಾದ ಜಲ ವಿಭಾಗಸ್ಥಾನ ವೊಂದಿದೆ.

(೨) ಓರಿನೋಕೋ ಮೈದಾನಕ್ಕೆ ಲ್ಯಾನೋಸ್ ಎಂಬ ಹೆಸರು ವಾಡಿಕೆಯಾಗಿದೆ. ಈ ಮೈದಾನದ ಅನೇಕ ಪ್ರದೇಶಗಳಲ್ಲಿ ಹಳ್ಳ ದಿಣ್ಣೆಗಳೇ ಇಲ್ಲ. ಬೇಸಗೆಯಲ್ಲಿ ಇವು ಬೆಂಗಾಡಾಗಿದ್ದು ಮಳೆಗಾಲದಲ್ಲಿ ಅತಿ ರಮಣೀಯವಾದ ಹುಲ್ಲುಗಾವಲುಗಳಾಗುವುವು. ಇಲ್ಲಿ ದನಗಳೂ ಕುದುರೆಗಳೂ ಅಸಂಖ್ಯಾತವಾಗಿವೆ.

(೩) ಅಮೆಸ್ಸಾನ್ ಮೈದಾನಕ್ಕೆ ಸಿಲ್ವಾಸ್ ಎಂಬ ಹೆಸರೂ ಉಂಟು. ಇದೆಲ್ಲಾ ಒಂದು ದೊಡ್ಡ ಕಾಡು; ಇದರಷ್ಟು ವಿಶಾಲವಾಗಿಯಾಗಲಿ, ದುರ್ಗಮವಾಗಿಯಾಗಲಿ ಇರುವ ಕಾಡು ಪೃಥ್ವಿಯಲ್ಲಿ ಇನ್ನೆಲ್ಲಿಯೂ ಇಲ್ಲ. ಪೂರ್ವಪಶ್ಚಿಮ ೧,೭೦೦ ಮೈಲಿಯಷ್ಟು, ದಕ್ಷಿಣೋತ್ತರ ೮೦೦ ಮೈಲಿಯಷ್ಟು, ವಿಶಾಲವಾಗಿದೆ. ಈ ಕಾಡಿನಲ್ಲಿ ಲತೆಗಳು ಬಹು ವಿಶೇಷವಾಗಿವೆ; ಇವು ಕೊಂಬೆಗಳಿಂದ ಕೊಂಬೆಗಳಿಗೆ ವಿಚಿತ್ರತರವಾಗಿ ಹಬ್ಬಿರುವುವು. ಕೆಲವು ಹಗ್ಗಗಳಂತೆ, ಕೆಲವು ಏಣಿಗಳಂತೆ ನಾನಾ ತೆರವಾಗಿ ಹೆಣೆದುಕೊಂಡಿರುವುವು. ಜಲಮಾರ್ಗಗಳಿರುವ ಕಡೆಗಳಿಂದ ಈ ಕಾಡನ್ನು ನೋಡಿದ್ದಾರೆಯೇ ಹೊರತು ಒಳಕ್ಕೆ ಚೆನ್ನಾಗಿ ಪ್ರವೇಶಿಸಿ ನೋಡಿಲ್ಲ; ದುರ್ಗಮವಾಗಿದೆ; ಕೋಟ್ಯನುಕೋಟಿ ಪಕ್ಷಿಗಳೂ ಕೀಟಗಳೂ ಇತರ ಪ್ರಾಣಿಗಳೂ ಈ ವೃಕ್ಷ ಪ್ರಪಂಚದಲ್ಲಿಯೇ ಹುಟ್ಟಿ, ಇಲ್ಲಿಯೇ ವಾಸಮಾಡಿ, ನೆಲವಿರುವ ತೆರವನ್ನರಿಯದೆ ಸಾಯುತ್ತವೆ.

(೪) ಲಾಪ್ಲಾಟ ಮೈದಾನಕ್ಕೆ ಪಾಂಪಾಸ್ ಎಂಬ ಹೆಸರಿದೆ; ಇಲ್ಲಿ ಮರಗೆಳಿಲ್ಲ, ಹುಲ್ಲುಗಾವಲುಗಳು ವಿಪರೀತವಾಗಿವೆ. ಕಾಡು ದನಗಳೂ ಕುದುರೆಗಳೂ ಎಣಿಸಲಿಕ್ಕಾಗದಷ್ಟು ಇರುವುವು.

(೫) ಅಟಕಾಮ ಎಂಬ ಮರುಭೂಮಿಯಲ್ಲಿ ಮಳೆಯೆಂಬ ಸೊಲ್ಲೇ ಇಲ್ಲ.

8. ನದಿಗಳು.—ದಕ್ಷಿಣ ಅಮೇರಿಕಾಖಂಡದಲ್ಲಿರುವ ನದಿಗಳ ಮಹಾತ್ಮ್ಯವು ಉಳಿದ ಖಂಡಗಳ ನದಿಗಳಿಗೆ ಬರಲಾರದು. ಉಪನದಿಗಳನೇಕಗಳಿಂದ ಕೂಡಿರುವ ಅಮೆಸ್ಸಾನ್ ನದಿಯೊಂದರಲ್ಲಿಯೇ ೫೦,೦೦೦ ಮೈಲಿಯಷ್ಟು ಜಲಮಾರ್ಗವಿದೆ. ಈ ಖಂಡದ ಮುಖ್ಯ ನದಿಗಳು ಮೂರು.—ಓರಿನೋಕೋ, ಅಮೆಸ್ಸಾನ್ ಮತ್ತು ಲಾಪ್ಲಾಟ. ಇವುಗಳಿಗಿಂತ ಸಣ್ಣದಾಗಿರುವ ನದಿಗಳು ಅನೇಕ ಇವೆ. ದೇಶದೊಳಕ್ಕೆ ವಿಶೇಷವಾಗಿ ನುಗ್ಗಿ ಬಂದಿರುವ ಸಮುದ್ರಶಾಖೆಗಳು ವಿಶೇಷವಾಗಿಲ್ಲದ ಕೊರತೆ ನದಿಗಳ ಮೂಲಕ ಇರುವ ಅತಿಶಯವಾದ ಜಲಮಾರ್ಗಗಳ ದೆಸೆಯಿಂದ ಪರಿಹಾರವಾಗಿದೆ.

(೧) ಓರಿನೋಕೋ ನದಿ (೧,೪೦೦ ಮೈಲಿ) ಪರಿಮೇ ಪರ್ವತದಲ್ಲಿ ಹುಟ್ಟಿ ಅರ್ಧಚಂದ್ರಾಕಾರವಾಗಿ ಹರಿದು ಸಮುದ್ರಕ್ಕೆ ಸೇರುತ್ತದೆ. ನಿರಂತರೀಶಾನ್ಯ ಮಾರುತಗಳು ನೆಟ್ಟನೆ ಈ ನದಿಯ ಮಾರ್ಗವಾಗಿ ನೂರಾರು ಮೈಲಿಗಳವರೆಗೆ ಬೀಸುವುದರಿಂದ ದೋಣಿಗಳು ಪ್ರವಾಹಕ್ಕೆ ದಿರಾಗಿ ಹೋಗಬಹುದಾಗಿದೆ. ಸಮಭಾಜಕವೃತ್ತಕ್ಕೆ ಉತ್ತರದಲ್ಲಿ ಈ ನದಿ ಇರುವುದರಿಂದ ನಮ್ಮ ಬೇಸಗೆಯಲ್ಲಿ ಇದರ ಪ್ರವಾಹವು ಹೆಚ್ಚುವುದು.

(೨) ಅಮೆಜಾನ್ ನದಿಯಷ್ಟು ದೊಡ್ಡನದಿ ಪೃಥ್ವಿಯಲ್ಲಿ ಯಾವುದೂ ಇಲ್ಲ. ಆಂಡೀಸ್ ಪರ್ವತದ ಪಶ್ಚಿಮ ಶ್ರೇಣಿಯಲ್ಲಿ ಹುಟ್ಟಿ ೪,೦೦೦ ಮೈಲಿಗಿಂತ ಹೆಚ್ಚಾಗಿ ಹರಿದು, ಪೂರ್ವಭಾಗದಲ್ಲಿರುವ ಪರ್ವತ ಶ್ರೇಣಿಯನ್ನು ಭೇದಿಸಿಕೊಂಡು ಅಟ್ಲಾಂಟಿಕ್ ಸಾಗರಕ್ಕೆ ಹೋಗುತ್ತದೆ. ಇದರ ಜಲಾನಯನಭೂಮಿ ಯೂರೋಪ್ ಖಂಡದಷ್ಟು ವಿಸ್ತಾರವಾಗಿದೆ. ಇದರಲ್ಲಿ ನೀರು ಇಳಿವ ಮಾತೇ ಇಲ್ಲ. ಏಕೆಂದರೆ, ಸಮಭಾಜಕ ವೃತ್ತಕ್ಕೆ ಉತ್ತರದಲ್ಲಿರುವ ಇದರ ಉಪನದಿಗಳು ಮೇ ತಿಂಗಳಿಂದ ಅಕ್ಟೋಬರ್ ತಿಂಗಳವರೆಗೆ ತಮ್ಮ ಪ್ರವಾಹಕಾಲದ ನೀರನ್ನು ತಂದು ಕೊಡುತ್ತಿರುವುವು: ಸಮಭಾಜಕ ವೃತ್ತಕ್ಕೆ ದಕ್ಷಿಣದಲ್ಲಿರುವ ಇದರ ಉಪನದಿಗಳು ತಮ್ಮ ಮಳೆಗಾಲವಾದ ಉಳಿದ ಆರು ತಿಂಗಳುಗಳಲ್ಲಿ (ನವಂಬರಿನಿಂದ ಏಪ್ರಿಲ್ ವರೆಗೆ) ತಮ್ಮ ಪ್ರವಾಹಕಾಲದ ನೀರನ್ನು ತಂದು ಒಪ್ಪಿಸುವುವು. ಇದಕ್ಕೆ ದೊಡ್ಡವಾದ ಎರಡು ಉಪನದಿಗಳುಂಟು; ದಕ್ಷಿಣದಿಂದ ಬರುವ ಮೆಡೀರ (೨,೦೦೦ ಮೈಲಿ) ಮತ್ತು ಉತ್ತರದಿಂದ ಬರುವ ರಯೋನೀಗ್ರೋ (೧,೪೦೦ ಮೈಲಿ). ಈ ನದಿಯ ಮುಖವು ೧೮೦ ಮೈಲಿಯಷ್ಟು ಅಗಲವಾಗಿದೆ. ಸಾಗರದ ನೀರು ಉಬ್ಬರದ ಕಾಲದಲ್ಲಿ ಮುಖಭಾಗದಿಂದ ೫೦೦ ಮೈಲಿಯಷ್ಟು ದೂರದ ವರೆಗೆ ಹತ್ತಿಹೋಗುತ್ತದೆ; ಆದ್ದರಿಂದ ಈ ನದಿ ಹಡಗಿನ ಪ್ರಯಾಣಕ್ಕೆ ಬಹು ಅನುಕೂಲವಾಗಿದೆ. ಹೊಗೆಯ ಜಹಜುಗಳು ಈ ನದಿಯ ಮಾರ್ಗವಾಗಿ ಆಂಡೀಸ್ ಪರ್ವತದ ಪಾದಕ್ಕೆ ಹೋಗಬಹುದು. ಈ ನದಿಗೆ ಸಮನಾದುದು ಪೃಥ್ವಿಯಲ್ಲಿ ಯಾವುದೂ ಇಲ್ಲ. ಏಕರೀತಿಯಲ್ಲಿರುವುದರಿಂದ ಇದು ಸಮುದ್ರವನ್ನು ಹೋಲುತ್ತದೆ; ಇದಕ್ಕೆ ಅಮೆಜಾನ್ (=ಪೌರುಷವುಳ್ಳ ಸ್ತ್ರೀ ಅಥವಾ ಗಂಡುಬೀರಿ) ಎಂಬ ಹೆಸರು ತಕ್ಕದನ್ನಬಹುದು.

(೩) ಪಾರಗ್ವೆ, ಪಾರನ, ಮತ್ತು ಉರುಗ್ವೆ ಎಂಬ ಮೂರು ದೊಡ್ಡನದಿಗಳು ಸೇರಿ ಲಾಪ್ಲಾಟಾ ನದಿಯಾಗಿದೆ. ಇದರ ಅಳಿವೆ ದೊಡ್ಡದಾದ ಸಮುದ್ರಶಾಖೆಯಂತೆ ಇರುವುದು. ಇದರಷ್ಟು ಅಗಲವುಳ್ಳ ನದಿ ಪೃಥ್ವಿಯಲ್ಲಿ ಇನ್ನಾವುದೂ ಇಲ್ಲ; ಮಾಂಟೆವಿಡಿಯೊ ಎಂಬುದರ ಹತ್ತಿರ ೬೦ ಮೈಲಿಯಷ್ಟು ಅಗಲವಾಗಿರುವುದು; ದೊಡ್ಡ ಹಡಗುಗಳು ಪಾರನಾ ನದಿಯಲ್ಲಿ ೧,೨೦೦ ಮೈಲಿಯಷ್ಟು ದೂರ ಹೋಗಬಹುದು.

9. ಸರೋವರಗಳು.—ದಕ್ಷಿಣ ಅಮೇರಿಕದಲ್ಲಿ ಸರೋವರಗಳಿರುವುದು ಬಹಳ ಕಡಿಮೆ. ಟಿಟಿಕಾಕ ಎಂಬ ಪ್ರಸ್ಥಭೂಮಿಯಲ್ಲಿ ಅದೇ ಹೆಸರಿನ ಸರೋವರವೊಂದಿದೆ; ಇದು ೧೨,೫೫೦ ಅಡಿಯ ಎತ್ತರದ ಮೇಲಿರುವುದು.

10. ವಾಯುಗುಣ.—ವಿಷುವದ್ರೇಖೆಯ ಪ್ರದೇಶದಲ್ಲಿ (ಉ. ಅ. ಸುಮಾರು ೩ ರಿಂದ ದ. ಅ. ಸುಮಾರು ೩ರ ವರೆಗೆ), ವರ್ಷವೆಲ್ಲಾ ಮಳೆಗಾಲವಾಗಿಯೇ ಇದೆ; ಇದು ನಿತ್ಯವರ್ಷವಲಯ. ದ. ಅ. ೩೦ರಿಂದ ಸಮಭಾಜಕ ರೇಖೆಯ

ವರೆಗೆ ನಿರಂತರಾಗ್ನೇಯ ಮಾರುತಗಳು ಬೀಸುವುವು; ಇದರಿಂದ ದಕ್ಷಿಣಕ್ಕೆ ಎತ್ತರಕ್ಕೆ ತಕ್ಕಂತೆ ಶೀತವಾಗಿದೆ; ಪಶ್ಚಿಮಭಾಗದ ಇಕ್ಕಟ್ಟಾದ ಮೈದಾನದಲ್ಲಿ ದಕ್ಷಿಣ ಅಕ್ಷಾಂಶ ೩೦ ರಿಂದ ಉತ್ತರಕ್ಕೆ ಮರುಭೂಮಿ ಇದೆ, ಮಳೆ ಇಲ್ಲ. ಇದರಿಂದ ದಕ್ಷಿಣಕ್ಕೆ ಫಲವತ್ತಾದ ಪ್ರದೇಶವಿದೆ; ವಾಯುವ್ಯಭಾಗದಿಂದ ಮಳೆಯ ಮೋಡಗಳು ಹೆಚ್ಚಾಗಿ ಬರುವುವು.

ದಕ್ಷಿಣ ಅಮೆರಿಕದ ವಾಯುಗುಣವು ದಕ್ಷಿಣ ಆಫ್ರಿಕಕ್ಕಿಂತ ತಂಪಾಗಿದೆ; ಇದಕ್ಕೆ ನಾಲ್ಕು ಕಾರಣಗಳುಂಟು.—(೧) ವಾಣಿಜ್ಯ ಮಾರುತಗಳು—ಇವು ತಂಪನ್ನುಂಟುಮಾಡುತ್ತವೆ; (೨) ಬ್ರೆಝಿಲ್ ದೇಶದ ಅತಿ ವಿಸ್ತಾರವಾದ ಕಾಡು—ಇದಿರುವುದರಿಂದ ನೆಲವು ಸೂರ್ಯನ ಕಿರಣಗಳಿಂದ ಕಾದು ಹೋಗುವುದಿಲ್ಲ; (೩) ಪರ್ವತ ಪ್ರದೇಶಗಳು ಹೆಚ್ಚು; (೪) ಪೆಸಿಫಿಕ್ ತೀರದಲ್ಲಿ ದಕ್ಷಿಣದಿಂದ ಬರುವ ಶೀತೋದಕ ಪ್ರವಾಹವೊಂದು ಇದೆ.

11. ಉದ್ಭಿಜ್ಜಗಳು.—ದಕ್ಷಿಣ ಅಮೆರಿಕದಲ್ಲಿ ವೃಕ್ಷಾದಿಗಳು ವಿಶೇಷವಾಗಿರುವಂತೆ ಇನ್ನು ಯಾವ ಖಂಡದಲ್ಲಿಯೂ ಇಲ್ಲ. ಈ ಖಂಡವನ್ನು ಸಸ್ಯಾತಿಶಯದ ಖಂಡವೆನ್ನಬಹುದು. ಉಷ್ಣವಲಯದ ಮರಗಳೆಲ್ಲವೂ ಇರುವುವು. ಚೌಬೀನಿಯ ಮರಗಳು ಹೇರಳವಾಗಿವೆ; ನಾನಾ ವಿಧದ ಲತೆಗಳಿರುವುವು. ಸಿಂಕೋನದ ಮರವು ಆಂಡೀಸ್ ಪರ್ವತದ ಸಾನು ಪ್ರದೇಶಗಳಲ್ಲಿ ಬಹು ಚೆನ್ನಾಗಿ ಬೆಳೆಯುತ್ತದೆ. ಕಬ್ಬು, ಕಾಫಿ, ಕೋಕೋಮರ, ಹೊಗೆಯಸೊಪ್ಪು, ತೆರತೆರದ ಬಾಳೆಗಳು, ಫಲವೃಕ್ಷಗಳು, ಅನೇಕ ಜಾತಿಯ ಹೂವಿನ ಮರಗಳು ಇವೆ.

12. ಪ್ರಾಣಿಗಳು.—ಉದ್ದವಾಗಿಯೂ ದಪ್ಪವಾಗಿಯೂ ಇರುವ ಉರೋಗಮನಿಗಳೂ, ಬಗೆ ಬಗೆಯ ಬಣ್ಣದ ಪಕ್ಷಿಗಳೂ, ಕೋಟ್ಯನುಕೋಟಿ ತರದ ಕ್ರಿಮಿಕೀಟಗಳೂ ಈ ಖಂಡದಲ್ಲಿ ಬಹು ವಿಶೇಷವಾಗಿವೆ. ಸಸ್ತನಿಯ ಜಾತಿಗಳು ವಿಶೇಷವಾಗಿಲ್ಲ; ಗಜ ಗಂಡಮೃಗ ಮುಂತಾದ ದಪ್ಪ ತೊಗಲಿನ ಪ್ರಾಣಿಗಳು ಇಲ್ಲವೇ ಇಲ್ಲ. ಹಂದಿಯಂತಿರುವ ಟಪೀರ್ ಮೃಗವು ಆನೆಗೆ ಪ್ರತಿಯಾಗಿಯೂ, ಆಡುಗಳಂತಿರುವ ಲ್ಯಾಮ ಆಲ್ಪಾಕ ಎಂಬುವು ಒಂಟೆಗೆ ಪ್ರತಿಯಾಗಿಯೂ, ಹೇಡಿಯಾದ ಪ್ಯೂಮವು ಮೃಗರಾಜನಾದ ಸಿಂಹಕ್ಕೆ ಪ್ರತಿಯಾಗಿಯೂ, ಜಾಗುವರ್ ಮೃಗವು ಭಯಂಕರವಾದ ಹುಲಿಗೆ ಪ್ರತಿಯಾಗಿಯೂ ಇವೆ. ಕಾಲಿಡಲಿಕ್ಕಾಗದ ಈ ಖಂಡದ ಕಾಡುಗಳಲ್ಲಿ ನಾನಾ ಜಾತಿಯ ಮಂಗಗಳು ಇವೆ; ಕೆಲವು ಜಾತಿಯವು ವೃಕ್ಷವಾಸಿಗಳಾಗಿವೆ; ಇವು ಮರದ ಮೇಲೆಯೇ ಹುಟ್ಟಿ ಮರದ ಮೇಲೆಯೇ ಬೆಳೆದು, ಒಂದು ಸಾರಿಯೂ ನೆಲವನ್ನು ನೋಡದೆ ಮರದ ಮೇಲೆಯೇ ಪ್ರಾಣವನ್ನು ಬಿಡುವುವು. ಕೆಲವು ಜಾತಿಯವುಗಳಿಗೆ ಬಹಳ ಉದ್ದವಾದ ಬಾಲಗಳಿರುವುವು; ಕೈಗಿರುವಂತೆ ಹಿಡಿಯನ್ನು ಹಿಡಿವ ಶಕ್ತಿ ಈ ಬಾಲಕ್ಕಿದೆ; ಇವುಗಳ ಬಾಲವು ಇವುಗಳಿಗೆ ಐದನೆಯ ಕೈಯಾಗಿದೆ ಎಂದು ಹೇಳಬಹುದು. ಸ್ಲೋತ್ ಮುಂತಾದ ಬೋಡುವಾಯಿನ ಪ್ರಾಣಿಗಳು ವಿಶೇಷವಾಗಿವೆ. ಇಲ್ಲಿರುವಷ್ಟು ಸರ್ಪಭೇದಗಳು ಇನ್ನೆಲ್ಲಿಯೂ ಇಲ್ಲ.

13. ಖನಿಜಗಳು.—ದಕ್ಷಿಣ ಅಮೆರಿಕದಲ್ಲಿ ಖನಿಜಗಳ ಸಂಪತ್ತು ವಿಶೇಷವಾಗಿರುವುದು. ಆಂಡೀಸ್ ಪರ್ವತ ಶ್ರೇಣಿಯು ಉದ್ದಕ್ಕೂ ಬೆಳ್ಳಿ, ಚಿನ್ನ, ತಾಮ್ರ, ತವರ ಮುಂತಾದ ಲೋಹಗಳು ಹೇರಳವಾಗಿವೆ. ಬ್ರೆಸಿಲ್ಲಿನಲ್ಲಿ ವಜ್ರಗಳೂ, ನ್ಯೂಗ್ರೆನಡದಲ್ಲಿ ಪಚ್ಚೆಗಳೂ ವಿಶೇಷವಾಗಿವೆ.

14. ಜನರು.—ಅಮೆಸ್ಸಾನ್ ಕಣಿವೆಯಲ್ಲಿರುವ ತಾಮ್ರವರ್ಣದವರಲ್ಲಿ ನಾಗರಿಕತೆ ಸ್ವಲ್ಪವೂ ಇಲ್ಲ; ಇದಕ್ಕಿಂತ ಹೆಚ್ಚಾಗಿ ಎಣಿಸುವುದಕ್ಕೆ ಕೂಡ ಬರುವುದಿಲ್ಲ. ಪೆರೂದೇಶದ ಪೂರ್ವನಿವಾಸಿಗಳಲ್ಲಿ ನಾಗರಿಕತೆ ಹೆಚ್ಚಿದ್ದಿತು. ಏತತ್ಕಾಲದಲ್ಲಿ ಈ ಖಂಡದಲ್ಲಿ ಯೂರೋಪಿಯನ್ನರೂ, ತಾಮ್ರವರ್ಣದವರೂ, ನೀಗ್ರೋ ಜನರೂ, ಸಂಕರ ಜಾತಿಯವರೂ ವಾಸವಾಗಿದ್ದಾರೆ.

ಈ ಖಂಡದ ಜನಸಂಖ್ಯೆ ೩,೦೦,೦೦,೦೦೦. ತೀರ ಪ್ರದೇಶದಲ್ಲಿ ಮಾತ್ರ ಜನರಿದ್ದಾರೆ; ಒಳದೇಶದ ಸ್ಥಿತಿ ಚೆನ್ನಾಗಿ ತಿಳಿದಿಲ್ಲ. ಈ ಖಂಡದ ದೇಶಗಳಲ್ಲೆಲ್ಲಾ ಪ್ರಜಾ ಪ್ರತಿನಿಧಿ ಪ್ರಭುತ್ವವು ನೆಲೆಗೊಂಡಿದೆ.

ಉತ್ತರ ಭಾಗದ ದೇಶಗಳು.

ಕೊಲಂಬಿಯ.

1. ವಿಸ್ತೀರ್ಣ ಮುಂತಾದ ವಿಷಯಗಳು.—ವಿಸ್ತೀರ್ಣದಲ್ಲಿ ೪,೩೦,೦೦೦ ಚ. ಮೈಲಿಗಿಂತ ಹೆಚ್ಚಾಗಿದೆ; ಜನಸಂಖ್ಯೆ ೪೦,೦೦,೦೦೦; ಪ್ರಜಾಪ್ರತಿನಿಧಿ ಪ್ರಭುತ್ವದ ಸಂಯುಕ್ತದೇಶ. ಪಶ್ಚಿಮಭಾಗವು ಬೆಟ್ಟ ಸೀಮೆ; ಪೂರ್ವಭಾಗದಲ್ಲಿ ಲ್ಯಾನೋಸ್‌ಗಳು ಇವೆ; ಒರಿನೋಕೋ ನದಿಯು ಉಪನದಿಗಳಿರುವುವು.

ಹಲವುಬಗೆಯ ಪದಾರ್ಥಗಳಾಗುವುವು; ಕಾಡುಗಳಿವೆ. ಸಿಂಕೋನದ ಚೆಕ್ಕೆ, ಕಾಫಿ, ಕೋಕೊ, ಹತ್ತಿ, ಬಣ್ಣದ ಚೆಕ್ಕೆಗಳು, ಬೆಳ್ಳಿಯ ಅದುರು—ಇವು ರಫ್ತಾಗುತ್ತವೆ.

2. ಪಟ್ಟಣಗಳು.—(೧) ಬಗೋಟ—ರಾಜಧಾನಿ; ೮,೩೦೦ ಅಡಿಯ ಎತ್ತರದಲ್ಲಿದೆ. (೨) ಬರ‍್ರಂಕಿಲ.—ಇಲ್ಲಿಗೂ ಸಮುದ್ರಕ್ಕೂ ರೈಲ್ವೆ ಇದೆ. (೩) ಮೆಡೆಲಿನ್.—ಇಲ್ಲಿ ಗಣಿಗಳಿಂದ ಲೋಹಗಳನ್ನು ತೆಗೆಯುತ್ತಾರೆ.

ಪನಾಮ.

ಇದು ಮೊದಲು ಕೊಲಂಬಿಯದಲ್ಲಿ ಒಂದು ಭಾಗವಾಗಿದ್ದು ೧೯೦೩ರಲ್ಲಿ ಸ್ವತಂತ್ರವಾಯಿತು. ಪನಾಮ ಭೂಸಂಧಿಯಲ್ಲಿ ೪೮೦ ಮೈಲಿ ಉದ್ದವೂ ೩೦ರಿಂದ

೧೦೦ ಮೈಲಿವರೆಗೆ ಅಗಲವೂ ಆದ ಪ್ರದೇಶವೇ ಈ ರಾಜ್ಯವಾಗಿದೆ. ಭೂಮಿ ಬಹು ಫಲಕಾರಿ. ಇಂಡಿಯ ರಬ್ಬರು, ಕಾಫಿ, ಕೋಕೋ, ಬಾಳೆಹಣ್ಣು ಹೊರಕ್ಕೆ ರಫ್ತಾಗುತ್ತವೆ. ಪೆಸಿಫಿಕ್ ತೀರದಲ್ಲಿ ಪನಾಮ, ಕಾರಿಬೀ ಸಮುದ್ರತೀರದಲ್ಲಿ ಕೋಲೆ ಅಥವಾ ಆಸ್ಪಿನ್‌ವಾಲ್ ಇವೆರಡು ತೀರ ಪಟ್ಟಣಗಳ ಮೂಲಕ ವ್ಯಾಪಾರವು ಹೆಚ್ಚಾಗಿ ನಡೆಯುತ್ತದೆ.

ವೆನಿಸ್ವೇಲ.

3. ವಿಸ್ತೀರ್ಣ ಮುಂತಾದ ವಿಷಯಗಳು.—ಈ ದೇಶವು ಕಾರಿಬಿಯನ್ ಸಮುದ್ರದಿಂದ ಪರಿಮೇಪರ್ವತದ ದಕ್ಷಿಣದವರೆಗೆ ಪ್ರಸರಿಸಿದೆ; ಅನೇಕ ಭಾಗಗಳು ಲ್ಯಾನೋಸ್‌ಗಳಾಗಿವೆ; ಈ ದೇಶದಲ್ಲಿ ಓರಿನೋಕೋ ನದಿ ಹರಿಯುತ್ತದೆ. ವಿಸ್ತೀರ್ಣವು ಸುಮಾರು ೫,೯೪,೦೦೦ ಚ. ಮೈ. ಜನಸಂಖ್ಯೆ ೨೫,೦೦,೦೦೦. ಸ್ಪಾನಿಷ್ ವಂಶೀಯರೂ, ನೀಗ್ರೋ ಕುಲದವರೂ, ತಾಮ್ರವರ್ಣದವರೂ ಇದ್ದಾರೆ.

ಕಾಫಿ, ಮತ್ತು ಕಬ್ಬು ಮುಖ್ಯವಾದ ಬೆಳೆಗಳು. ಚಿನ್ನವೂ ತಾಮ್ರವೂ ರಫ್ತಾಗುತ್ತವೆ. ಕಾಡುಗಳಿವೆ; ಹುಲ್ಲುಗಾವಲುಗಳು ವಿಶೇಷವಾಗಿರುವುದರಿಂದ ದನಕರುಗಳೂ ಕುದುರೆಗಳೂ ವಿಶೇಷವಾಗಿರುವುವು.

4. ಪಟ್ಟಣಗಳು.—(೧) ಕಾರಾಕಾಸ್. ರಾಜಧಾನಿ. (೨) ವಲೆಷಿಯ. ಇದೇ ಹೆಸರಿನ ಸರೋವರದ ದಡದಲ್ಲಿದೆ. (೩) ಮರಕೇಬೊ. ಇದರ ವ್ಯಾಪಾರವು ಹೆಚ್ಚುತ್ತಿದೆ.

ಗಯೇನ.

5. ಮುಖ್ಯ ವಿಷಯಗಳು.—ಗಯೇನದಲ್ಲಿ ಪರ್ವತಗಳೂ ಕಾಡುಗಳೂ ಇರುವುವು. ಕಾಡುಗಳಲ್ಲಿ ಚೌಬೀನಿಯ ಮರಗಳಿವೆ. ನದಿಗಳಲ್ಲಿ ಮೀನುಗಳು ಹೆಚ್ಚಾಗಿವೆ. ಕಾಡು ಮೃಗಗಳೂ ಉಂಟು. ಈ ದೇಶವು ಬ್ರಿಟನ್, ಫ್ರಾನ್ಸ್, ಮತ್ತು ಹಾಲೆಂಡ್ ದೇಶಗಳಿಗೆ ಸೇರಿದೆ.

6. ಬ್ರಿಟಿಷ್ ಗಯೇನ.—ಇಲ್ಲಿ ಡಮರಾರ, ಎಸಿಕೀಬೊ, ಬರ್ಬಿಸ್ ಎಂಬ ಮೂರು ನದಿಗಳೂ, ಅದೇ ಹೆಸರಿನ ಮೂರು ಸೆಟ್ಲ್‌ಮೆಂಟುಗಳೂ ಇರುವುವು. ವಿಸ್ತೀರ್ಣವು ೧,೦೯,೦೦೦ ಚ. ಮೈ. ಜನಸಂಖ್ಯೆ ಸುಮಾರು ೩,೦೦,೦೦೦. ಸಕ್ಕರೆಯೂ, ಸಾರಾಯಿಯೂ ರಫ್ತಾಗುವುವು. ಜಾರ್ಜ್‌ಟೌನ್ ಎಂಬುದು ರಾಜಧಾನಿ.

7. ಡಚ್‌ಗಯೇನ.—ವಿಸ್ತೀರ್ಣ ಸುಮಾರು ೫೦,೦೦೦ ಚ. ಮೈ. ಕಬ್ಬಿನ ಬೆಳೆ ವಿಶೇಷವಾಗಿದೆ. ಪರಮಾರಿಬೊ ಎಂಬುದು ರಾಜಧಾನಿ.

8. ಫ್ರೆಂಚ್ ಗಯೇನ.—ವಿಸ್ತೀರ್ಣ ಸುಮಾರು ೩೦,೦೦೦ ಚ. ಮೈ. ಸಕ್ಕರೆಯೂ ಸಂಬಾರದ ಪದಾರ್ಥಗಳೂ ರಫ್ತಾಗುವುವು. ಕೆಯೆನ್ ಎಂಬುದು ರಾಜಧಾನಿ. ಗಡೀಪಾರ್ ಆದವರನ್ನು ಫ್ರೆಂಚರು ಇಲ್ಲಿ ಇಟ್ಟಿರುತ್ತಾರೆ.

ಬ್ರೆಸಿಲ್ ಮತ್ತು ಉರುಗ್ವೆ.

1. ವಿಸ್ತೀರ್ಣ ಮುಂತಾದ ವಿಷಯಗಳು.—ವಿಸ್ತೀರ್ಣ ೩೨,೦೦,೦೦೦ ಚ. ಮೈ. ಜನಸಂಖ್ಯೆ ೧,೪೦,೦೦,೦೦೦. ಈ ದೇಶದಲ್ಲಿ ಹುಲ್ಲಿನ ಮೈದಾನಗಳೂ, ಅತಿ ವಿಸ್ತಾರವಾದ ಕಾಡುಗಳೂ, ಪರ್ವತಶ್ರೇಣಿಗಳೂ ಇರುವುವು. ಅಮೆಸ್ಸಾನ್ ಸಾನ್‌ಫ್ರಾನ್ಸಿಸ್ಕೊ ಮುಂತಾದ ನದಿಗಳು ಹರಿವುವು. ಪಾರನ, ಪಾರಗ್ವೆ, ಉರುಗ್ವೆ ಎಂಬ ನದಿಗಳ ಬಯಲುಗಳಲ್ಲಿ ಅನೇಕ ಭಾಗಗಳು ಈ ದೇಶಕ್ಕೆ ಸೇರಿವೆ. ಜನರು ಮುಖ್ಯವಾಗಿ ತೀರ ಪ್ರದೇಶದಲ್ಲಿಯೂ, ದೊಡ್ಡ ನದಿಗಳ ದಡದಲ್ಲಿಯೂ ಇದ್ದಾರೆ. ಪೋರ್ಟುಗೀಸ್ ಜನರೂ, ನೀಗ್ರೋ ಜನರೂ, ತಾಮ್ರವರ್ಣದವರೂ ಇಲ್ಲಿಯ ನಿವಾಸಿಗಳು. ಪ್ರಜಾಪ್ರತಿನಿಧಿ ಪ್ರಭುತ್ವವು ಈಗ ನೆಲೆಗೊಂಡಿದೆ.

2. ಭೂಮ್ಯುತ್ಪನ್ನಗಳು.—ಈ ದೇಶವು ವಿಸ್ತೀರ್ಣದಲ್ಲಿ ಯೂರೋಪ್ ಖಂಡಕ್ಕಿಂತ ಸ್ವಲ್ಪ ಕಡಿಮೆಯಾಗಿದೆ. ನೆಲವು ಫಲವತ್ತಾಗಿದೆ. ಜಲಸಮೃದ್ಧಿ ಚೆನ್ನಾಗಿರುವುದು. ಜನ ಹೆಚ್ಚಿ ವ್ಯವಸಾಯ ಮಾತ್ರ ಸರಿಯಾಗಿ ನಡೆದರೆ ಪೃಥ್ವಿಯ ಜನರ ಜೀವನಕ್ಕೆ ಇಲ್ಲಿಯ ಬೆಳೆಗಳೇ ಸಾಕಾಗಿರುವುವು. ಉಷ್ಣವಲಯದ ಸಸ್ಯಾದಿಗಳೆಲ್ಲವೂ ಇಲ್ಲಿರುವುವು. ಉತ್ಕೃಷ್ಟವಾದ ಚೌಬೀನಿಯ ಮರಗಳು ಕಾಡಿನಲ್ಲಿ ಬೇಕಾದಷ್ಟು ಇವೆ. ಕಾಫಿ, ಹತ್ತಿ, ಇಂಡಿಯಾ ರಬ್ಬರ್, ಗೋಂದು, ಹೊಗೆಯ ಸೊಪ್ಪು—ಇವು ವಿಶೇಷವಾಗಿ ಉತ್ಪತ್ತಿಯಾಗುತ್ತವೆ. ಖನಿಜಗಳು ವಿಶೇಷವಾಗಿವೆ. ವಜ್ರವೂ ಇತರ ರತ್ನಗಳೂ ಚಿನ್ನವೂ ಬೇಕಾದಷ್ಟು ಇವೆ. ಪಾದರಸವೂ ತಾಮ್ರವೂ ಹೆಚ್ಚಾಗಿ ಸಿಕ್ಕುವುವು.

(೧) ಪೃಥ್ವಿಯಲ್ಲಿ ಉಪಯೋಗಿಸುತ್ತಿರುವ ಕಾಫಿಯಲ್ಲಿ ಅರ್ಧಭಾಗವನ್ನು ಬ್ರೆಸಿಲ್ ದೇಶವು ಒದಗಿಸಿ ಕೊಡುತ್ತಿದೆ. ಕಾಫಿಯಲ್ಲದೆ ಕೋಕೋ, ನೆಲಮಾಗಳಿ ಬೇರು, ಲವಂಗ, ದಾಲಚಿನ್ನಿ, ಹುಣಿಸೆಹಣ್ಣು ಮುಂತಾದುವು ರಫ್ತಾಗುವುವು. ಇಂಡಿಯಾ ದೇಶದಲ್ಲಿ ತೆಂಗು ಜನಕ್ಕೆ ಎಷ್ಟು ಪ್ರಯೋಜನಕಾರಿಯಾಗಿದೆಯೋ "ಕಾರ್ನಾಬ" ಎಂಬ ಮರವು ಇಲ್ಲಿ ಅಷ್ಟು ಪ್ರಯೋಜನಕಾರಿಯಾಗಿದೆ. (೨) ೧೫೦ ವರುಷಗಳಲ್ಲಿ ಬ್ರೆಸಿಲ್ ದೇಶವು ೩೦ ಕೋಟಿ ರೂಪಾಯಿ ಬೆಲೆಯಾಗುವಷ್ಟು ವಜ್ರಗಳನ್ನು ಖನಿಗಳಿಂದ ತೆಗೆದಿದೆ. (೩) ಬ್ರೆಸಿಲ್ ದೇಶದ ಹೊರ ವ್ಯಾಪಾರವು ಹೆಚ್ಚುತ್ತಿದೆ; ವಿಶೇಷವಾಗಿ ರಫ್ತಾಗುವ ಪದಾರ್ಥವು ಕಾಫಿ.

3. ಪಟ್ಟಣಗಳು.—(೧) ರಯೋಡಿ ಜನೇರೊ ರಾಜಧಾನಿ, ಪೂರ್ವತೀರದಲ್ಲಿ ಬಹು ರಮಣೀಯವಾದ ಸ್ಥಳದಲ್ಲಿದೆ; ದಕ್ಷಿಣ ಅಮೆರಿಕದಲ್ಲಿರುವ ಪಟ್ಟಣಗಳ

ಲ್ಲೆಲ್ಲಾ ದೊಡ್ಡದು. (೨) ಬಾಹಿಯ. ಪೂರ್ವದ ರಾಜಧಾನಿ ; ಮುಖ್ಯವಾದ ರೇವೆ ಪಟ್ಟಣ ಮತ್ತು ಈ ದೇಶದ ಪಟ್ಟಣಗಳಲ್ಲಿ ಅತ್ಯಂತ ಪುರಾತನವಾದುದು ; ಪೂರ್ವತೀರದಲ್ಲಿದೆ. (೩) ಪರ್ನಾಂಬುಕೋ ; ಮರ್ರಹೋ ಪೂರ್ವತೀರದಲ್ಲಿವೆ. ರೇವೆ ಪಟ್ಟಣಗಳು.

ಉರುಗ್ವೆ.

4. ಮುಖ್ಯ ವಿಷಯಗಳು.—ಇದು ಸಣ್ಣದೇಶ : ವಿಸ್ತೀರ್ಣ ೭೦,೦೦೦ ಚ. ಮೈ. ಜನಸಂಖ್ಯೆ ಸುಮಾರು ೯,೩೦,೦೦೦ ; ಸಂಕರಜಾತಿಯವರು ವಿಶೇಷವಾಗಿದ್ದಾರೆ.

ಹುಲ್ಲುಗಾವಲುಗಳು ವಿಶೇಷವಾಗಿವೆ ; ಜನರ ಮುಖ್ಯವೃತ್ತಿ ಪಶುಪಾಲನೆ; ತೊಗಲು, ಉಣ್ಣೆ, ಕೊಳೆಯದಂತೆ ಮಾಡಿದ ಮಾಂಸ, ದನದ ಮಾಂಸದ ಸಾರ, ಕೊಬ್ಬು ಮುಂತಾದುವು ರಫ್ತಾಗುತ್ತವೆ.

5. ಪಟ್ಟಣಗಳು.—ರಾಜಧಾನಿ ವಿನಾ ಉಳಿದ ಪಟ್ಟಣಗಳೆಲ್ಲಾ ಬಹು ಸಣ್ಣವು. ಮಾಂಟವಿಡಿಯೋ ಎಂಬುದು ರಾಜಧಾನಿ. ಇದೇ ಮುಖ್ಯ ರೇವೆಪಟ್ಟಣ.

ಮಧ್ಯಭಾಗದ ದೇಶಗಳು.

ಪಾರಗ್ವೆ.

1. ಮುಖ್ಯ ವಿಷಯಗಳು.—ವಿಸ್ತೀರ್ಣ ಸುಮಾರು ೧,೪೫,೦೦೦ ಚ. ಮೈ. ಜನಸಂಖ್ಯೆ ೬,೩೦,೦೦೦. ಪಾರಗ್ವೇ ಟೀ ಮತ್ತು ಹೊಗೆಯಸೊಪ್ಪು ರಫ್ತಾಗುವ ಪದಾರ್ಥಗಳು. ಭತ್ತ ಗೋಧಿ ಮುಂತಾದುವನ್ನು ಸ್ವಂತ ಉಪಯೋಗಕ್ಕೆ ಬೆಳೆದುಕೊಳ್ಳುತ್ತಾರೆ. ಈ ದೇಶಕ್ಕೆ ತೀರಪ್ರದೇಶವಿಲ್ಲ; ಆದುದರಿಂದ ನದೀ ಜಲಮಾರ್ಗವು ಬಹು ಮುಖ್ಯವಾಗಿದೆ. ಈ ದೇಶದಲ್ಲಿ ಸಂಕರಜಾತಿಯವರು ವಿಶೇಷವಾಗಿದ್ದಾರೆ.

2. ಪಟ್ಟಣಗಳು.—ಅಸೆನ್ಷಿಯನ್ ಎಂಬುದು ರಾಜಧಾನಿ.

೧೮೬೫ನೆಯ ಇಸವಿಯಿಂದ ೧೮೭೦ರ ವರೆಗೆ ಈ ಸಣ್ಣದೇಶವು ಬ್ರೆಸಿಲ್ ಮತ್ತು ಆರ್ಜಂಟೈನ ದೇಶಗಳ ಸಂಗಡ ಯುದ್ಧವನ್ನು ನಡೆಯಿಸಿತು ; ಈ ಕಾರಣದ ದೆಸೆಯಿಂದ ಜನಸಂಖ್ಯೆ ೧೩,೦೦,೦೦೦ ರಿಂದ ೨,೫೦,೦೦೦ಕ್ಕೆ ಇಳಿಯಿತು, ಮತ್ತು ೨೮,೦೦೦ ಮಂದಿ ಗಂಡಸರು ಮಾತ್ರ ಉಳಿದರು ; ಈಗಲೂ ಸ್ತ್ರೀ ಪ್ರಜೆ ಬಹಳ ಹೆಚ್ಚಾಗಿದೆ.

ಆರ್ಜಂಟೈನ.

3. ಮುಖ್ಯ ವಿಷಯಗಳು.—ಇದು ಮೈದಾನದ ದೇಶ; ವಿಸ್ತೀರ್ಣವು ಸುಮಾರು ೧೧,೩೬,೦೦೦ ಚ. ಮೈಲಿ; ಪಾಟಗೋನಿಯಾ ದೇಶದ ಬಹು ಭಾಗವು ಈ ದೇಶಕ್ಕೆ ಸೇರಿದೆ. ಜನಸಂಖ್ಯೆ ೪೮,೧೦,೦೦೦. ಇಟಲೀ ದೇಶದವರು ಅನೇಕರು ಇಲ್ಲಿ ಬಂದು ಸೇರಿರುವರು. ಈ ದೇಶವು ಪ್ರಜಾಪ್ರತಿನಿಧಿ ಪ್ರಭುತ್ವದ ಸಂಯುಕ್ತ ದೇಶ.

ಪಾಂಪಾಸ್ ಪ್ರದೇಶವು ದ. ಅ. ೩೦ರಿಂದ ಕೊಲೊರೇಡೋ ನದಿಯ ವರೆಗೆ ಪ್ರಸರಿಸಿದೆ. ಇತರ ಪ್ರದೇಶಗಳಲ್ಲಿಯೂ ವಿಶಾಲವಾದ ಹುಲ್ಲುಗಾವಲುಗಳಿರುವುವು. ದನಕರುಗಳು, ಕುರಿಗಳು, ಕುದುರೆಗಳು ಕೋಟ್ಯನುಕೋಟಿಗಳಾಗಿರುವುವು. ಉಣ್ಣೆ, ತೊಗಲು, ಉಪ್ಪುಸೇರಿಸಿದ ದನದ ಮಾಂಸ, ಕೊಬ್ಬು, ಮುಂತಾದುವು ರಫ್ತಾಗುತ್ತವೆ. ಗೋಧಿಯ ಬೆಳೆ ಹೆಚ್ಚಾಗಿದೆ. ಈ ದೇಶದ ಜನಸಂಖ್ಯೆಯೂ ಸಂಪತ್ತೂ ವರ್ಷವರ್ಷಕ್ಕೆ ಹೆಚ್ಚುತ್ತಿರುವುವು.

4. ಪಟ್ಟಣಗಳು.—(೧) ಬ್ಯೂನಾಸ್ ಏರಿಸ್ ರಾಜಧಾನಿ; ಇದರ ಹತ್ತಿರ ಇರುವ ಅಳಿವೆಯ ಭಾಗವು ಮಣ್ಣಿನಿಂದ ಮುಚ್ಚಿ ಹೋಗುತ್ತ ಬಂದುದರಿಂದ ಎನ್ಸಿನಡ ಎಂಬ ಹೊಸರೇವೆಪಟ್ಟಣವನ್ನು ಅಳಿವೆಯ ಮುಖ್ಯಪ್ರದೇಶದಲ್ಲಿ ಕಟ್ಟಿದ್ದಾರೆ. (೨) ಕಾರ್ಡೋವ ಈ ದೇಶದ ಎರಡನೆಯ ಪಟ್ಟಣ. (೩) ರೊಸೇರಿಯೊ. ಅಭಿವೃದ್ಧಿಯಾಗುತ್ತಿರುವ ರೇವೆ ಪಟ್ಟಣ.

5. ಪಾಟಗೋನಿಯ.—ಇದು ಮರಗಿಡಗಳಿಲ್ಲದ ಬಂಡೆಗಳುಳ್ಳ ಮರುಭೂಮಿ; ಹುಲ್ಲು ಕೂಡಾ ಚೆನ್ನಾಗಿ ಆಗುವುದಿಲ್ಲ. ತಾಮ್ರವರ್ಣದವರ ಕುಲಕ್ಕೆ ಸೇರಿದ ಪಾಟಗೋನಿಯರ್ ಜನರು ಬೇಟೆಯಿಂದ ಜೀವಿಸುತ್ತಿದ್ದಾರೆ. ಇವರಿಗಿಂತ ಎತ್ತರವಾದವರು ಎಲ್ಲಿಯೂ ಇಲ್ಲ. ಪಾಟಗೋನಿಯವು ಆರ್ಜಂಟೈನಿನಲ್ಲಿ ಒಂದು ಭಾಗವಾಗಿದೆ.

ಬೊಲಿವಿಯ.

6. ಮುಖ್ಯವಿಷಯಗಳು.—ಬೊಲಿವಿಯಾ ದೇಶವು ಪ್ರಸ್ಥಭೂಮಿ. ಅಮೆಝಾನ್ ನದಿಯ ಉಪನದಿಯಾದ ಮೆಡೀರಾನದಿಯ ಮೇಲುಭಾಗವು ಈ ದೇಶದಲ್ಲಿದೆ. ವಿಸ್ತೀರ್ಣ ಸುಮಾರು ೭,೦೩,೦೦೦ ಚ. ಮೈ. ಜನಸಂಖ್ಯೆ ೧೮,೧೬,೦೦೦. ತಾಮ್ರವರ್ಣದವರೂ, ಸಂಕರಜಾತಿಯವರೂ, ಯೂರೋಪಿಯರ್ಜನರೂ ವಾಸವಾಗಿದ್ದಾರೆ. ಈ ದೇಶದಲ್ಲಿರುವ ಟಿಟಿಕಾಕಾ ಎಂಬ ಪ್ರಸ್ಥಭೂಮಿ ೧೨,೫೦೦ ಅಡಿಯಷ್ಟು ಎತ್ತರವಾಗಿದೆ. ಪೂರ್ವಭಾಗದ ಶ್ರೇಣಿಯಲ್ಲಿ ೨೧,೦೦೦ ಅಡಿ ಎತ್ತರವಿರುವ ಶಿಖರಗಳು ಇರುವುವು.

ಕೃಷಿಯೂ ಖನಿಜಗಳನ್ನು ತೆಗೆವುದೂ ಜನರ ಮುಖ್ಯೋದ್ಯೋಗಗಳಾಗಿವೆ. ಧಾನ್ಯಗಳು ಚೆನ್ನಾಗಿ ಬೆಳೆವುವು. ಬೆಳ್ಳಿ ವಿಶೇಷವಾಗಿ ಸಿಕ್ಕುತ್ತಿದೆ. ಬೆಳ್ಳಿ ತಾಮ್ರ ಮೊದಲಾದ ಲೋಹಗಳು, ಇಂಡಿಯ ರಬ್ಬರು, ಕೋಕೋ, ಕಾಫಿ, ಇವು ಇಲ್ಲಿಂದ ರಫ್ತಾಗುತ್ತವೆ.

ಕೋಕೋ ಎಂಬ ಹೆಸರುಳ್ಳ ಒಂದು ಮೂಲಿಕೆ ಈ ದೇಶದಲ್ಲಿದೆ; ಇದರ ಎಲೆಯನ್ನು ಒಣಗಿಸಿ ಪುಡಿಮಾಡಿ ಛಾಕಿನ (ಸೀಮೆಯ ಸುಣ್ಣದ) ಪುಡಿಯ ಸಂಗಡ ಬೆರಸಿ ತಿಂದರೆ, ದೂರಪ್ರಯಾಣಗಳನ್ನು ಆಹಾರವಿಲ್ಲದೆ ನಿರಾಯಾಸವಾಗಿ ಮುಗಿಸಬಹುದು, ಮತ್ತು ಉನ್ನತವಾದ ಪರ್ವತಗಳನ್ನು ನಿಟ್ಟುಸಿರಾಡದೆ ಹತ್ತಬಹುದು.

7. ಪಟ್ಟಣಗಳು.—(೧) ಲಾಪಾಸ್. ಇದೇ ಇಲ್ಲಿಯ ದೊಡ್ಡಪಟ್ಟಣ. (೨) ಸೂಕರ್. ರಾಜಧಾನಿ. (೩) ಪೊಟೋಸಿ. ಪೂರ್ವಕಾಲದಲ್ಲಿ ಬೆಳ್ಳಿ ಬಹಳ ಹೆಚ್ಚಾಗಿ ಸಿಕ್ಕುತ್ತಿದ್ದಿತು.

ಪಶ್ಚಿಮಭಾಗದ ದೇಶಗಳು.

ಚಿಲಿ.

1. ಮುಖ್ಯವಿಷಯಗಳು.—ಚಿಲೀದೇಶವು ೨೮ ಅಕ್ಷಾಂಶಗಳ ಉದ್ದಕ್ಕೆ ಆಟಕಾಮಾ ಮರುಭೂಮಿಯಿಂದ ಮಾಜೆಲ್ಲಾ ಜಲಸಂಧಿಯವರೆಗೆ ಹಬ್ಬಿದೆ; ಇದರ ಉದ್ದ ೨,೨೦೦ ಮೈಲಿ. ಅಗಲ ೧೦೦ ಮೈಲಿ. ಅಟ್ಲಾಂಟಿಕ್ ಸಾಗರದಿಂದ ಬರುವ "ಹಂಬೋಲ್ಟ್ ಕರೆಂಟ್" ಎಂಬ ಶೀತೋದಕ ಪ್ರವಾಹದ ದೆಸೆಯಿಂದ ಈ ದೇಶವು ತಂಪಾಗಿದೆ. ಜನರು ಕಷ್ಟಪಟ್ಟು ಕೆಲಸಮಾಡುವರಾಗಿದ್ದಾರೆ. ಈ ದೇಶದ ವಿಸ್ತೀರ್ಣ ಸುಮಾರು ೨,೯೩,೦೦೦ ಚ. ಮೈ. ಜನಸಂಖ್ಯೆ ೨೯,೮೦,೦೦೦. ಪ್ರಜಾಪ್ರತಿನಿಧಿ ಪ್ರಭುತ್ವವು ನೆಲೆಗೊಂಡಿದೆ.

ಖನಿಜಗಳನ್ನು ತೆಗೆವುದು ಮತ್ತು ಕೃಷಿ—ಇವೇ ಜನರ ಮುಖ್ಯೋದ್ಯೋಗ. ಯವಕ್ಷಾರವು (Nitre) ವಿಶೇಷವಾಗಿ ರಫ್ತಾಗುತ್ತದೆ; ಬ್ರಿಟಿಷರು ತಾಮ್ರವನ್ನು ಇಲ್ಲಿಂದ ಕೊಂಡುಕೊಂಡು ಹೋಗಿ ವೇಲ್ಸಿನಲ್ಲಿರುವ ಸ್ವಾನ್ಸಿ ಎಂಬ ಸ್ಥಳದಲ್ಲಿ ಕರಗಿಸಿ ಸಾಮಾನುಗಳನ್ನು ಮಾಡುತ್ತಾರೆ; ಗೋಧಿಯೂ ರಫ್ತಾಗುತ್ತಿದೆ.

2. ಪಟ್ಟಣಗಳು.—ಚಿಲೀದೇಶದ ಪಟ್ಟಣಗಳು ಅಭಿವೃದ್ಧಿ ಸ್ಥಿತಿಯಲ್ಲಿವೆ. (೧) ಸಾಂಟಿಯಾಗೊ. ರಾಜಧಾನಿ; ಭೂಕಂಪದ ಭೀತಿಯಿಂದ ಮನೆಗಳಿಗೆ ಮಹಡಿಗಳನ್ನು ಕಟ್ಟಿಲ್ಲ. (೨) ವಲ್ಪರೈಸೊ. ಮುಖ್ಯವಾದ ರೇವುಪಟ್ಟಣ. (೩) ಕೋಕಿಂಬೊ ಉತ್ತರದಲ್ಲಿ ರೇವು ಪಟ್ಟಣ. ಇಲ್ಲಿಂದ ತಾಮ್ರವು ರಫ್ತಾಗುತ್ತದೆ.

ಪೆರು.

3. ಮುಖ್ಯವಿಷಯಗಳು.—ಪೆರೂ ದೇಶವನ್ನು ಮೂರು ಪ್ರದೇಶಗಳಾಗಿ ವಿಂಗಡಿಸಬಹುದು ; ಮಳೆಯಿಲ್ಲದ ಪೆಸಿಫಿಕ್ ತೀರ, ಆಂಡೀಸ್ ಪರ್ವತದ ಪ್ರಸ್ಥಭೂಮಿ, ಮತ್ತು ಅಮೆಸ್ಸೋನದಿಗೆ ಸೇರುವ ಹೊಳೆಗಳ ಪ್ರದೇಶ. ವಿಸ್ತೀರ್ಣ ಸುಮಾರು ೩,೦೦,೦೦೦ ಚ. ಮೈ. ಜನಸಂಖ್ಯೆ ಸುಮಾರು ೪೬,೦೦,೦೦೦. ಈ ದೇಶದಲ್ಲಿ ಪಂಚವಲಯದ ವಾಯುಗುಣಗಳೂ ಇವೆ.

ಈ ದೇಶದ ಕಾಡುಗಳು ಸಿಂಕೋನಾಗಿಡದ ತವರ್ಮನೆ ; ಫಲವತ್ತಾಗಿರುವ ಪ್ರದೇಶಗಳಲ್ಲಿ ಕಬ್ಬು ಚೆನ್ನಾಗಿ ಬೆಳೆಯುತ್ತದೆ. ಉಣ್ಣೆಯ ಉತ್ಪತ್ತಿಯೂ ಹೆಚ್ಚು. ಗ್ವೇನೊ ಎಂಬ ಗೊಬ್ಬರ, ಯವಕ್ಷಾರ, ಸಕ್ಕರೆ, ಮತ್ತು ಉಣ್ಣೆ—ಇವು ಗ್ರೇಟ್ ಬ್ರಿಟನ್ನಿಗೆ ವಿಶೇಷವಾಗಿ ರಫ್ತಾಗುತ್ತವೆ. ಬೆಳ್ಳಿಯ ಅದುರು ವಿಶೇಷವಾಗಿರುವ ಪಾಸ್ಕೋ ಪಟ್ಟಣ ೧೪,೦೦೦ ಅಡಿಯ ಎತ್ತರದಲ್ಲಿದೆ.

4. ಪಟ್ಟಣಗಳು.—(೧) ಲೈಮ. ತೀರಕ್ಕೆ ೮ ಮೈಲಿಯಷ್ಟು ದೂರದಲ್ಲಿದೆ ; ವ್ಯಾಪಾರಸ್ಥಳ. (೨) ಕಲ್ಲೆವೊ. ಲೈಮದ ರೇವುಪಟ್ಟಣ, ಸೊಗಸಾದ ಬಂದರು ಇದೆ. (೩) ಪ್ಯಾಸ್ಕೊ.—ಇದು ಸಮುದ್ರಮಟ್ಟಕ್ಕಿಂತ ೧೪,೩೦೦ ಅಡಿ ಎತ್ತರದಲ್ಲಿ ಬೆಳ್ಳಿಯ ಗಣಿಗಳ ಪಟ್ಟಣವಾಗಿದೆ. ಪ್ರಪಂಚದಲ್ಲಿ ಸದ್ಯಕ್ಕೆ ಇದಕ್ಕಿಂತ ಎತ್ತರವಾದ ಪಟ್ಟಣವಿಲ್ಲ. (೪) ಅರಿಕ್ವಿಪ. ೧೮೬೮ರಲ್ಲಿ ಭೂಕಂಪದಿಂದ ಹಾಳಾಗಿದ್ದಿತು. (೫) ಕಸ್ಕೊ, ಪೂರ್ವಕಾಲದಲ್ಲಿ ಇಂಕಾ ಜನರ ರಾಜಧಾನಿಯಾಗಿದ್ದಿತು ; ಇವರು ಕಟ್ಟಿಸಿದ ಅಣೆಗಳೂ ಅಗೆಯಿಸಿದ ಕಾಲುವೆಗಳೂ ಈಗಲೂ ಉಪಯೋಗದಲ್ಲಿವೆ. ಲೋಹದ ಕೆಲಸದಲ್ಲಿಯೂ, ಕೃಷಿಯಲ್ಲಿಯೂ, ಶಿಲ್ಪದಲ್ಲಿಯೂ ಈ ಜನರು ತಮ್ಮನ್ನು ಗೆದ್ದವರನ್ನು ಗೆದ್ದಿದ್ದರು. ಇಲ್ಲೊಂದು ಜೀರ್ಣವಾದ ದೊಡ್ಡ ಸೂರ್ಯದೇವಾಲಯವಿದೆ.

ಇಕ್ವೇಡರ್.

5. ಮುಖ್ಯವಿಷಯಗಳು.—ಈ ದೇಶವು ಸಮಭಾಜಕ ವೃತ್ತದ ಮಾರ್ಗದಲ್ಲಿ ಇದೆ. ವಿಸ್ತೀರ್ಣ ಸುಮಾರು ೧,೧೬,೦೦೦ ಚ. ಮೈ. ಜನಸಂಖ್ಯೆ ಸುಮಾರು ೧೨,೦೦,೦೦೦. ಪ್ರಸ್ಥಭೂಮಿಗಳಲ್ಲಿ ಜನರು ವಾಸವಾಗಿದ್ದಾರೆ. ಅನೇಕ ಹೊಳೆಗಳು ಇಲ್ಲಿಂದ ಅಮೆಸ್ಸೋ ನದಿಗೆ ಹೋಗಿ ಬೀಳುವುವು. ಚಿಂಬರೇಸೊ, ಕೊಟೊಪಾಕ್ಸಿ, ಅಂಟಿಸೇನ ಮುಂತಾದುವು ಬಹಳ ಉನ್ನತವಾದ ಜ್ವಾಲಾಮುಖಿಗಳು.

ಸಾಂಗೈ ಎಂಬ ಜ್ವಾಲಾಮುಖಿಯಂತೆ ವಿರಾಮವಿಲ್ಲದೆ ಆಡುತ್ತಿರುವ ಜ್ವಾಲಾಮುಖಿ ಬಹುಶಃ ಪೃಥ್ವಿಯಲ್ಲಿ ಇನ್ನೆಲ್ಲಿಯೂ ಇಲ್ಲ ; ೩೦೦ ವರುಷದಿಂದ ಎಡೆಬಿಡದೆ ಆಡುತ್ತಿರುವುದು. ೧೫ ಮಿನಿಟ್ಟಿಗೆ ಒಂದಾವೃತ್ತಿ ಇದರ ಅರ್ಭಟವು ಹೆಚ್ಚುವುದು.

ಮಳೆಗಾಲದಲ್ಲಿ ಕೆಲವು ವೇಳೆಗಳಲ್ಲಿ ಇದರ ಉಲ್ಬಣ ವಿಪರೀತವಾಗುವುದು. ಕರಗಿ ಕುದಿಯುತ್ತಿರುವ ಶಿಲಾವೃಷ್ಟಿ ಸಿಡಿಲಿನ ಶಬ್ದವನ್ನು ಅಣಕಿಸುತ್ತ ೨,೦೦೦ ಅಡಿಯಷ್ಟು ಮೇಲಕ್ಕೆ ಹಾರಿ ಕೆಳಗೆ ಸುರಿವುದು; ಇದರ ಶಬ್ದದ ಮುಂದೆ ದೊಡ್ಡ ಫಿರಂಗಿಗಳ ಶಬ್ದವು ಪಟಾಕಿಯ ಶಬ್ದಕ್ಕಿಂತ ಕಡಿಮೆಯಾಗಿ ತೋರುತ್ತದೆ.

ಇಲ್ಲಿಯ ಜನರ ಮುಖ್ಯೋದ್ಯೋಗವು ಕೃಷಿ; ಕೋಕೊ, ಮತ್ತು ಸಿಂಕೋನದ ಚಕ್ಕೆ ಗ್ರೇಟ್ ಬ್ರಿಟನ್ನಿಗೆ ರಫ್ತಾಗುತ್ತವೆ.

6. ಪಟ್ಟಣಗಳು.—(೧) ಕ್ವಿಟೊ. ರಾಜಧಾನಿ; ಭೂಕಂಪದ ಭೀತಿಯಿಂದ ಮನೆಗಳನ್ನು ತಡಿಕೆಗೋಡೆಗಳಿಂದ ಕಟ್ಟಿ ಮೇಲೆ ಮಣ್ಣುಗಾರೆ ಮಾಡಿರುತ್ತಾರೆ. ೧೮೭೫ನೆಯ ಇಸವಿಯಲ್ಲಿ ಬಂದು ಭೂಕಂಪದಿಂದ ೪೦,೦೦೦ ಜನರು ಸತ್ತರು. (೨) ಗುಯಾಕ್ವಿಲ್. ಮುಖ್ಯವಾದ ರೇವುಪಟ್ಟಣ.

7. ಗಾಲಪೇಗಾಸ್. ದ್ವೀಪಗಳು ಇಕ್ವೇಡರ್ರಿಗೆ ಸೇರಿವೆ.

ಓಷಿಯೇನಿಯ.

ಮುಖ್ಯ ವಿಭಾಗಗಳು.—ಆಸ್ಟ್ರೇಲಿಯವೆಂಬ ಮಹಾದ್ವೀಪವನ್ನೂ ಪೆಸಿಫಿಕ್ ಸಾಗರದಲ್ಲಿರುವ ದ್ವೀಪಾನೇಕಗಳನ್ನೂ ಒಟ್ಟಾಗಿ ಸೇರಿಸಿ, ಆ ಗುಂಪಿಗೆ ಓಷಿಯೇನಿಯವೆಂಬ ಹೆಸರನ್ನು ಕೊಟ್ಟಿದ್ದಾರೆ. ಇದರಲ್ಲಿ ಐದು ಭಾಗಗಳು ಇವೆ:—

(೧) ಮಲೇಷಿಯ ಅಥವಾ ಮಲಯದ್ವೀಪಸ್ತೋಮ ಸಮುದಾಯ; (೨) ಆಸ್ಟ್ರೇಲೇಷ್ಯ; (೩) ಮಿಲನೀಷಿಯ; (೪) ಮೈಕ್ರೊನೀಷಿಯ; ಮತ್ತು (೫) ಪಾಲಿನೀಷಿಯ. ಆಸ್ಟ್ರೇಲೇಷ್ಯವನ್ನು ಬಿಟ್ಟು ಉಳಿದ ಭಾಗಗಳಿಗೆಲ್ಲಾ ಒಟ್ಟಿಗೆ ಪಾಲಿನೀಷಿಯವೆಂದು ಹೇಳುವುದೂ ಉಂಟು.

ಆಸ್ಟ್ರೇಲೇಷ್ಯ.

1. ಪೀಠಿಕೆ.—ಆಸ್ಟ್ರೇಲೇಷ್ಯದಲ್ಲಿ ಆಸ್ಟ್ರೇಲಿಯಾ ಖಂಡವೂ ನ್ಯೂಜಿಲೆಂಡ್ ಮುಂತಾದ ದ್ವೀಪಗಳೂ ಸೇರಿವೆ.

ಆಸ್ಟ್ರೇಲಿಯ.

2. ಆಸ್ಟ್ರೇಲಿಯವು ವಿಚಿತ್ರತರವಾದ ಖಂಡವಾಗಿದೆ. ಯೂರೋಪ್ ಖಂಡಕ್ಕಿದು ಅಧೋಮುಖಿಯಾಗಿರುವುದು. ವಿಸ್ತೀರ್ಣದಲ್ಲಿ ಸ್ವಲ್ಪ ಕಡಿಮೆ ಯೂರೋಪ್ ಖಂಡದಷ್ಟು ದೊಡ್ಡದಾಗಿದ್ದರೂ, ದೊಡ್ಡದೆನಿಸಿಕೊಳ್ಳುವ ನದಿ ಒಂದು

ಮಾತ್ರವಿದೆ ; ಈ ನದಿ ದೊಡ್ಡದೆನಿಸಿಕೊಂಡಿದ್ದರೂ ಸಮುದ್ರದ ವರೆಗೆ ಹೋಗುವುದಿಲ್ಲ. ಕೆಲವು ವೇಳೆಗಳಲ್ಲಿ ಹರಿವುದು ಕೂಡ ಇಲ್ಲ. ಚಿತ್ರತರವಾದ ವಿಶೇಷಗಳು ಇನ್ನೂ ಉಂಟು. ಸಸ್ತನಿಗಳು ಮೊಟ್ಟೆಗಳನ್ನು ಇಟ್ಟು ಮರಿಮಾಡುತ್ತವೆ. ಚೆರೀ ಹಣ್ಣಿನ ಬೀಜವು ಒಳಗಿಲ್ಲದೆ ಹೊರಗಿರುವುದು, ಮರಗಳಿಂದ ಎಲೆ ಉದಿರುವುದಕ್ಕೆ ಬದಲಾಗಿ ತೊಗಟು ಉದಿರುವುದು, ಚತುಷ್ಪಾದಿಗಳು ಎರಡು ಕಾಲಲ್ಲಿ ಓಡುತ್ತವೆ, ಹೂಗಳಿಗೆ ವಾಸನೆ ಇಲ್ಲ, ಮತ್ತು ಪಕ್ಷಿಗಳಲ್ಲಿ ಮಧುರಗಾನವಿಲ್ಲ. ಯೂರೊಪಿಯನ್ ಜನರು ಮೊದಲು ಹೋದಾಗ, ಈ ಖಂಡದಲ್ಲಿ ಆಹಾರಕ್ಕೆ ಯೋಗ್ಯವಾದ ಧಾನ್ಯಗಳಿರಲಿಲ್ಲ. ಹಾಲಿಗಾಗಲಿ ಬಂಡಿಯೆಳೆವುದಕ್ಕಾಗಲಿ ಸಾಧುಪ್ರಾಣಿಗಳೊಂದೂ ಇರಲಿಲ್ಲ.

ಆಸ್ಟ್ರೇಲಿಯ ಮತ್ತು ಆಫ್ರಿಕ.—ಈ ಎರಡು ಖಂಡಗಳಿಗೂ ಅನೇಕ ಹೋಲಿಕೆಗಳಿರುವುವು. (a) ಇವೆರಡರಲ್ಲಿಯೂ ಸಮುದ್ರಶಾಖೆಗಳೂ ಪರ್ಯಾಯ ದ್ವೀಪಗಳೂ ಕಡಿಮೆ; (b) ಎರಡರಲ್ಲಿಯೂ ಅತ್ಯುನ್ನತವಾದ ಪರ್ವತ ಶ್ರೇಣಿಗಳು ಪೂರ್ವತೀರದಲ್ಲಿವೆ, ಮತ್ತು ಅತ್ಯುನ್ನತ ಶಿಖರಗಳು ಆಗ್ನೇಯದಲ್ಲಿವೆ; (c) ಎರಡರಲ್ಲಿಯೂ ಒಳಭಾಗದಲ್ಲಿ ವಿಶಾಲವಾದ ಮರುಭೂಮಿಗಳಿವೆ; (d) ಅತಿ ದೀರ್ಘವಾದ ಇವುಗಳ ನದಿಗಳಲ್ಲಿ ಸಮುದ್ರದ ಕಡೆಗೆ ಹೋಗುತ್ತಹೋಗುತ್ತ ನೀರು ಕಡಿಮೆಯಾಗುವುದು (ಈ ನದಿಗಳು ಯಾವುವೆಂದರೆ.—ನೈಲ್ ಮತ್ತು ಮರ್ರೆ); (e) ಇವುಗಳ ಪೂರ್ವತೀರಗಳ ಹತ್ತಿರ ದಕ್ಷಿಣವಾಹಿನಿಗಳಾಗಿ ಹರಿವ ಸಾಗರ ಪ್ರವಾಹಗಳು ಇವೆ.

3. ಮೇರೆ ಮತ್ತು ವಿಸ್ತೀರ್ಣ.—ಆಸ್ಟ್ರೇಲಿಯ ಖಂಡವು ದ. ಅ. ೧೦ರಿಂದ ೩೯ರ ವರೆಗೆ ಪ್ರಸರಿಸಿದೆ. ಉತ್ತರಕ್ಕೆ ಟಾರಿಸ್ ಜಲಸಂಧಿ ಮತ್ತು ಆರಫೂರಾ ಸಮುದ್ರ, ಪೂರ್ವಕ್ಕೆ ಪೆಸಫಿಕ್ ಸಾಗರ, ದಕ್ಷಿಣಕ್ಕೆ ದಕ್ಷಿಣಸಾಗರ, ಪಶ್ಚಿಮಕ್ಕೆ ಹಿಂದೂಸಾಗರ—ಇವು ಮೇರೆಗಳು. ವಿಸ್ತೀರ್ಣ ಸುಮಾರು ೩೦,೦೦,೦೦೦ ಚದರ ಮೈಲಿ.

4. ಸಮುದ್ರಶಾಖೆ ಮುಂತಾದುವು.—ಉದ್ದವಾಗಿರುವ ಒಂದು ಪರ್ಯಾಯ ದ್ವೀಪ, ದೇಶದೊಳಕ್ಕೆ ಅಗಲವಾಗಿ ಮತ್ತು ವಿಶೇಷವಾಗಿ ನುಗ್ಗಿ ಬಂದಿರುವ ಒಂದು ಸಮುದ್ರಶಾಖೆ—ಇವೆರಡೂ ಈ ಖಂಡದ ರೂಪದಲ್ಲಿ ಬಹು ಮುಖ್ಯಗಳಾಗಿವೆ. ಉತ್ತರದಲ್ಲಿರುವ ಕಾರ್ಪೆಂಟೇರಿಯಾ ಸಮುದ್ರಶಾಖೆಗೆ ಪ್ರತಿಯಾಗಿ ದಕ್ಷಿಣದಲ್ಲಿ ಸ್ಪೆನ್ಸರ್ ಸಮುದ್ರಶಾಖೆ ಇದೆ; ಮತ್ತು ಯಾರ್ಕ್ ಪರ್ಯಾಯದ್ವೀಪಕ್ಕೆ ಪ್ರತಿಯಾಗಿ ತಾಸ್ಮೇನಿಯಾ ದ್ವೀಪವಿದೆ. ದಕ್ಷಿಣದಲ್ಲಿರುವ ಆಸ್ಟ್ರೇಲಿಯನ್ ಕೊಲ್ಲಿ ವ್ಯಾಪಾರಕ್ಕೆ ವಿಶೇಷ ಪ್ರಯೋಜನಕಾರಿಯಾಗಿ ಇಲ್ಲ,

(೧) ಮುಖ್ಯ ಭೂಶಿರಗಳು —ಯಾರ್ಕ್ ಭೂಶಿರವು ಉತ್ತರದ ಕೊನೆ; ಬೈರನ್ ಭೂಶಿರವು ಪೂರ್ವದ ಕೊನೆ; ವಿಲ್ಸನ್ ಭೂಶಿರವು ದಕ್ಷಿಣದ ಕೊನೆ; ಸ್ಟೀಪ್ ಭೂಶಿರವು ಪಶ್ಚಿಮದ ಕೊನೆ.

(೨) ಇತರ ಕೊಲ್ಲಿ ಮುಂತಾದುವುಗಳು.—ಪಶ್ಚಿಮದಲ್ಲಿ ಶರ್ಕ್ ಕೊಲ್ಲಿ; ಪೂರ್ವದಲ್ಲಿ ಹಾಲಿಫಾಕ್ಸ್, ಹರ್ವೆ, ಮತ್ತು ಮೋರಿಟನ್ ಕೊಲ್ಲಿಗಳು.

(೩) ಜಲಸಂಧಿಗಳು.—ಆಸ್ಟ್ರೇಲಿಯಕ್ಕೂ ನ್ಯೂಗಿನಿಗೂ ನಡುವೆ ಟಾರಿಸ್ ಜಲಸಂಧಿ; ಮತ್ತು ಆಸ್ಟ್ರೇಲಿಯಕ್ಕೂ ಟಾಸ್ಮೇನಿಯಕ್ಕೂ ನಡುವೆ ಬಾಸ್ ಜಲಸಂಧಿ.

(೪) ಮುಖ್ಯವಾದ ದ್ವೀಪಗಳು.—ದಕ್ಷಿಣದಲ್ಲಿ ಟಾಸ್ಮೇನಿಯ, ಪೂರ್ವದಲ್ಲಿ ಗ್ರೇಟ್ ಸಾಂಡೀದ್ವೀಪ.

(೫) ಗ್ರೇಟ್ ಬಾರಿಯರ್ ರೀಫ್ ಎಂಬ ಬಂಡು ದಿಣ್ಣೆ ಪೂರ್ವತೀರಕ್ಕಿದಿರಾಗಿ ಪೆಸಿಫಿಕ್ ಸಾಗರದೊಳಗೆ ಹರ್ವೇ ಕೊಲ್ಲಿಯಿಂದ ಉತ್ತರಕ್ಕೆ ಅಲ್ಲಲ್ಲಿ ಸ್ವಲ್ಪ ಬಿಟ್ಟು, ೧,೨೦೦ ಮೈಲಿಯವರೆಗೆ ಹಬ್ಬಿದೆ. ಇದಕ್ಕೂ ಖಂಡಕ್ಕೂ ನಡುವೆ ೨೦ ಮೈಲಿಯಿಂದ ೩೦ಮೈಲಿಯವರೆಗೆ ಅಗಲವಾಗಿರುವ ಬಂದು ಆಳವಾದ ಕಡಲ್ಗಾಲುವೆ ಇದೆ; ಇಲ್ಲಿ ಅಲೆಗಳ ಹೊಡೆತವಿಲ್ಲ.

5. ಈ ಖಂಡದ ಲಕ್ಷಣ.—ಈ ಖಂಡದ ಒಳಭಾಗದಲ್ಲಿ ೧೫,೦೦,೦೦೦ ಚ. ಮೈಲಿಯಷ್ಟು ವಿಸ್ತೀರ್ಣವುಳ್ಳ ಮತ್ತು ವಿಶೇಷವಾದ ಎತ್ತರವಿಲ್ಲದ ಬಂದು ಪ್ರಸ್ಥಭೂಮಿ ಇದೆ. ಇದು ಬಟ್ಟಲಿನಂತೆ ಮಧ್ಯಪ್ರದೇಶದ ಕಡೆಗೆ ತಗ್ಗಾಗಿ ಬಂದಿರುತ್ತದೆ. ಈ ಮಧ್ಯಪ್ರದೇಶದಲ್ಲಿ ಅಮೆಡಿಯಸ್ ಸರೋವರವಿರುವುದು. ಈ ಪ್ರಸ್ಥಭೂಮಿಯ ಅಂಚಿನಲ್ಲಿ ಪರ್ವತಶ್ರೇಣಿಗಳಿವೆ. ಇವುಗಳಿಗೂ ಸಾಗರಕ್ಕೂ ನಡುವೆ ಖಂಡದ ಸುತ್ತಲೂ ಇಕ್ಕಟ್ಟಾದ ಮೈದಾನವಿರುವುದು. ಮರ್ರೇ ನದಿಯ ಜಲಾನಯನ ಭೂಮಿ ಈ ಖಂಡದ ಪೂರ್ವಭಾಗದಲ್ಲಿ ಪರ್ವತಶ್ರೇಣಿಗೆ ಪಶ್ಚಿಮದಲ್ಲಿ ಇದೆ.

6. ಪರ್ವತಗಳು.—ಈ ಖಂಡದ ಮುಖ್ಯಪರ್ವತಶ್ರೇಣಿ ವಿಲ್ಸನ್ ಭೂಶಿರದಿಂದ ಉತ್ತರಕ್ಕೆ ಅಲ್ಲಲ್ಲಿ ಸ್ವಲ್ಪಸ್ವಲ್ಪ ಸ್ಥಳ ಬಿಟ್ಟು ಯಾರ್ಕ್ ಭೂಶಿರದ ವರೆಗೆ ಹಬ್ಬಿದೆ. ಇದರ ಎತ್ತರ ಉತ್ತರಕ್ಕೆ ಹೋಗುತ್ತ ಹೋಗುತ್ತ ಕಡಿಮೆಯಾಗುವುದು. ಈ ಶ್ರೇಣಿಯ ಬೇರೆಬೇರೆ ಭಾಗಗಳಿಗೆ ಬೇರೆಬೇರೆ ಹೆಸರುಗಳಿರುವುವು, ಈ ಭಾಗಗಳಲ್ಲಿ ಮುಖ್ಯವಾದುವು ಆಸ್ಟ್ರೇಲಿಯನ್ ಆಲ್ಪ್ಸ್ ಮತ್ತು ಬ್ಲೂಪರ್ವತ.

ಆಸ್ಟ್ರೇಲಿಯನ್ ಆಲ್ಪ್ಸಿನಲ್ಲಿ ಟೌನ್ಸೆಂಡ್ ಶಿಖರವು ೭,೩೫೦ ಅಡಿಯಷ್ಟು ಎತ್ತರವಾಗಿದೆ; ಇದೇ ಈ ಖಂಡದ ಅತ್ಯುನ್ನತ ಶಿಖರ. ಈ ಖಂಡದಲ್ಲಿ ಜ್ವಾಲಾಮುಖಿಗಳಿಲ್ಲ.

7. ಮೈದಾನಗಳು ಮತ್ತು ಮರುಭೂಮಿಗಳು.—ಮರ್ರೇನದಿಯ ಜಲಾನಯನ ಪ್ರದೇಶವು ಮೈದಾನವಾಗಿಯೂ, ಕರಿಯಮಣ್ಣು ವಿಶೇಷವಾಗಿರುವುದರಿಂದ ಬಹು ಫಲವತ್ತಾಗಿಯೂ ಇದೆ. ಈ ಖಂಡದ ಪ್ರಸ್ಥಭೂಮಿಗಳೆಲ್ಲಾ ಮರುಭೂಮಿಯೆಂದು ಹೇಳಬಹುದು, ಆದರೆ ಅಲ್ಲಲ್ಲಿ ಹುಲ್ಲುಗಾವಲಿನ ಪ್ರದೇಶಗಳಿರುವುವು.

ಪಶ್ಚಿಮದಲ್ಲಿ ದ. ಅ. ೨೦ಕ್ಕೂ ಮಕರ ಸಂಕ್ರಾಂತಿ ವೃತ್ತಕ್ಕೂ ನಡುವೆ "ಗ್ರೇಟ್ ಸಾಂಡಿ ಡೆಸರ್ಟ್" ಎಂಬ ಮರುಭೂಮಿ ಇದೆ, ಮತ್ತು ದ. ಅ. ೩೦ಕ್ಕೆ ಉತ್ತರದಲ್ಲಿ ವಿಕ್ಟೋರಿಯಾ ಮರುಭೂಮಿ ಇದೆ.

8. ನದಿಗಳು.—ಈ ಖಂಡದ ವಿಸ್ತೀರ್ಣಕ್ಕೆ ತಕ್ಕಂತೆ ನದಿಗಳಿಲ್ಲ; ಇರುವ ನದಿಗಳಲ್ಲಿಯೂ ಕೂಡ ಎರಡು ದುರ್ಗುಣಗಳಿವೆ, ಪ್ರವಾಹಕಾಲದಲ್ಲಿ ಹುಚ್ಚುಹುಚ್ಚಾಗಿ ನೀರು ಬರುವುದು; ಬೇಸಗೆಯಲ್ಲಿ ಬಹಳ ಹೆಚ್ಚಾಗಿ ಬತ್ತಿ ಹೋಗುವುದು. ಮರ್ರೇನದಿ ಮಾತ್ರ ವ್ಯಾಪಾರಕ್ಕೆ ಸುಮಾರಾಗಿ ಅನುಕೂಲವಾಗಿದೆ, ಇದರ ಉದ್ದ ೨,೩೦೦ ಮೈಲಿ.

ಮರ್ರೇ ನದಿಗೆ ಡಾರ್ಲಿಂಗ್ ಎಂಬುದು ಮುಖ್ಯೋಪನದಿ. ಮಳೆಗಾಲದಲ್ಲಿ ಮರ್ರೇನದಿ ಭೋರೆಂದು ಮೊರೆವುದು. ಬೇಸಗೆಯಲ್ಲಿ ನೀರು ಹರಿವುದು ನಿಂತು ಹೋಗುತ್ತದೆ. ಗುಂಡಿಗಳಾಗಿರುವ ಕಡೆಗಳಲ್ಲಿ ಮಾತ್ರ ನೀರು ಸಿಕ್ಕುವುದು.

ಪೂರ್ವಕ್ಕೆ ಹರಿವ ನದಿಗಳಲ್ಲಿ ಫಿಟ್ಸ್‌ರ್ರಾಯ್ ಮತ್ತು ಬರ್ಡಿಕಿನ್ ಎಂಬುವು ಮುಖ್ಯ.

9. ಸರೋವರಗಳು.—ಸ್ಪೆನ್ಸರ್ ಸಮುದ್ರಶಾಖೆಗೆ ಉತ್ತರದಲ್ಲಿ ಈ ಖಂಡದ ಸರೋವರ ಪ್ರದೇಶವು ಇದೆ. ಅಲ್ಲಿ ಐರ್, ಟಾರೆನ್ಸ್ ಮತ್ತು ಗ್ಯೈರ್ಡ್‌ನರ್ ಎಂಬ ಸರೋವರಗಳುಂಟು. ಈ ಪ್ರದೇಶಕ್ಕೆ ವಾಯುವ್ಯದಲ್ಲಿ ಅಮೆಡಿಯಸ್ ಎಂಬ ಸರೋವರವಿದೆ, ಇದು ಕೆಲವು ವೇಳೆಗಳಲ್ಲಿ ಒಣಗಿ ಹೋಗುವುದು. ಅಲೆಗ್ಸಾಂಡ್ರಿನ ಎಂಬ ಸರೋವರಕ್ಕೆ ಮರ್ರೇನದಿ ಹರಿದು ಬರುತ್ತದೆ.

10. ವಾಯುಗುಣ.—ಈ ಖಂಡದಲ್ಲಿ ಸೆಕೆ ಹೆಚ್ಚು. ಮಳೆ ಕಡಿಮೆ. ಉಷ್ಣವಲಯದ ಪ್ರದೇಶದಲ್ಲಿ ಬೇಸಗೆಯೇ (ನವಂಬರಿಂದ ಏಪ್ರೆಲ್‌ವರೆಗೆ) ಮಳೆಗಾಲ. ಸಮಶೀತೋಷ್ಣವಲಯದ ಪ್ರದೇಶದಲ್ಲಿ ಹೇಮಂತಋತುವಿನಲ್ಲಿ (ಮೇ ತಿಂಗಳಿಂದ ಆಕ್ಟೋಬರ್ ವರೆಗೆ) ಮಳೆಗಾಲ. ಈ ಖಂಡದಲ್ಲಿ ವಾಯುಗುಣವು ಥಟ್ಟನೆ ಅನೇಕ ವೇಳೆಗಳಲ್ಲಿ ಬದಲಾಯಿಸುತ್ತದೆ. ಕೆಲವು ಗಂಟೆಗಳೊಳಗೆ ಉಷ್ಣಮಾಪಕಯಂತ್ರದಲ್ಲಿ ಅರುವತ್ತೆಪ್ಪತ್ತು ಡಿಗ್ರಿಗಳಷ್ಟು ಭೇದವು ತೋರಬಹುದು. ಕೆಲವು ವೇಳೆಗಳಲ್ಲಿ ಒಳಭಾಗದಿಂದ ಉಗ್ರೋಷ್ಣಮಾರುತಗಳು ಬೀಸುವುವು. ಆಗ ಸಹಿಸಲಶಕ್ಯವೆನಿಸುವಷ್ಟು ಸೆಕೆಯಾಗುತ್ತದೆ.

(೧) ತೀರಕ್ಕೆ ಅನತಿದೂರದಲ್ಲಿಯೇ ಪರ್ವತಶ್ರೇಣಿ ಇರುವುದು ಈ ಖಂಡದ ದುರದೃಷ್ಟವಾಗಿದೆ. ಈ ಪರ್ವತ ಶ್ರೇಣಿಗಳು ಮಳೆಯ ಮೋಡಗಳನ್ನು ತಡೆದು ಪೂರ್ವತೀರದಲ್ಲಿರುವ ಇಕ್ಕಟ್ಟಾದ ಮೈದಾನಕ್ಕೆ ಬೇಡಬೇಡವೆನ್ನುವಷ್ಟು ಮಳೆಯನ್ನು ಕೊಡುವುವು. ಈ ಪರ್ವತಶ್ರೇಣಿಗಳನ್ನು ದಾಟಿ ಮೋಡಗಳು ಒಳಭಾಗಕ್ಕೆ ಬಂದಾಗ, ಅಲ್ಲಿಯ ಉಗ್ರೋಷ್ಣವು ಆ ಮೋಡಗಳನ್ನು ನಾಶಮಾಡುವುದು. (೨) ಕೆಲವು ವೇಳೆಗಳಲ್ಲಿ ಜಲಪ್ರಳಯವಾಗುವಂತೆ ಮಳೆ ಸುರಿಯುತ್ತದೆ.

11. ಉದ್ಭಿಜ್ಜಗಳು.—ಈ ಖಂಡದಲ್ಲಿ ಸುಮಾರು ೧೦,೦೦೦ ಜಾತಿಯ ಉದ್ಭಿಜ್ಜಗಳು ಇವೆ. ಇವುಗಳಲ್ಲಿ ಕೆಲವು ಜಾತಿಯುವು ಬಹು ವಿಜಾತೀಯವಾಗಿವೆ. ಯೂಕಲಿಪ್ಟಸ್ ಮತ್ತು ಅಕೇಷಿಯದ ಜಾತಿಯ ಮರಗಳು ಈ ಖಂಡಕ್ಕೆ ಸಹಜವಾದುವುಗಳು. ಕುರುಚು ಗಿಡದ ಕಾಡುಗಳು ವಿಶೇಷವಾಗಿವೆ. ಮನುಷ್ಯನ ಆಹಾರಕ್ಕೆ ಉಪಯುಕ್ತಗಳಾದ ಧಾನ್ಯಗಳು, ಮತ್ತು ಹಣ್ಣುಗಳು ಈ ಖಂಡದಲ್ಲಿ ಮೊದಲು ಇರಲಿಲ್ಲ. ಇವುಗಳನ್ನು ಇತರ ಖಂಡಗಳಿಂದ ತಂದುಹಾಕಿದರು. ಇವು ಈಗ ಬಹು ಚೆನ್ನಾಗಿ ಬೆಳೆಯುತ್ತವೆ.

ಯೂಕಲಿಪ್ಟಸ್ ಮರದಲ್ಲಿ ಒಂದು ಬಗೆಯ ಗೋಂದು ಸಿಕ್ಕುತ್ತದೆ. ಕೆಲವು ೩೫೦ ಅಡಿಯಷ್ಟು ಎತ್ತರವಾಗಿ ಬೆಳೆದಿವೆ. ಒಂದು ಮರವು ೪೭೦ ಅಡಿಯಷ್ಟು ಎತ್ತರವಾಗಿ ಬೆಳೆದಿದ್ದಿತು. ಈ ಮರದಲ್ಲಿ ಎಲೆ ಉದಿರುವುದಿಲ್ಲ, ತೊಗಟು ಉದಿರುತ್ತದೆ.

12. ಪ್ರಾಣಿಗಳು.—ಆಸ್ಟ್ರೇಲಿಯಾ ಖಂಡವು ವಿಜಾತೀಯ ವೃಕ್ಷದ ಖಂಡವಾಗಿರುವುದಲ್ಲದೆ ವಿಜಾತೀಯಪ್ರಾಣಿಗಳ ಖಂಡವಾಗಿಯೂ ಇದೆ. ಹುಲಿ, ಆನೆ ಗೆಂಡಮೃಗ ಮುಂತಾದ ಇತರ ಖಂಡಗಳ ಸಸ್ತನಿಗಳು ಇಲ್ಲಿಲ್ಲ. ಈ ಖಂಡಕ್ಕೆ ಸಹಜವಾದುವು ಚೀಲವುಳ್ಳ ಪ್ರಾಣಿಗಳು, ಇವುಗಳಲ್ಲಿ ದೊಡ್ಡದೆನಿಸಿಕೊಂಡಿರುವುದು ಕಾಂಗರು ಎಂಬ ಚತುಷ್ಪಾದಿ. ಮಾಂಸಾಹಾರಿಗಳಾದ ದುಷ್ಟಮೃಗಗಳಲ್ಲಿ ಕಾಡುನಾಯಿ ಮುಖ್ಯವಾಗಿದೆ. ಈ ಖಂಡದೊಳಗೆ ಮಾತ್ರ ಸಿಕ್ಕುವ ಪ್ಲಾಟಿಪಸ್ ಅಥವಾ ಆರ್ನಿಥಾರಿಂಕಸ್ ಎಂಬ ಪ್ರಾಣಿ ಬಹು ವಿಜಾತೀಯವಾಗಿದೆ. ದನ ಕುರಿ ಕುದುರೆಗಳು ಈ ಖಂಡದಲ್ಲಿ ಮೊದಲು ಇರಲಿಲ್ಲ. ಈಗ ವಿಪರೀತವಾಗಿ ಹೆಚ್ಚುತ್ತಿವೆ. ನಾನಾ ಬಗೆಯ ಪಕ್ಷಿಗಳೂ ಕ್ರಿಮಿ ಕೀಟಗಳೂ ಇರುವುವು. ವಿಷವುಳ್ಳ ಹಾವುಗಳು ವಿಶೇಷವಾಗಿವೆ.

ಕಾಂಗರು ಎಂಬ ಮೃಗಕ್ಕೆ ಹಿಂದಿನ ಕಾಲುಗಳು ಬಹಳ ಎತ್ತರವಾಗಿ ಮುಂದಿನ ಕಾಲುಗಳು ಬಹಳ ಗಿಡ್ಡಾಗಿ ಇವೆ. ಇದು ಹಿಂದಿನ ಎರಡು ಕಾಲುಗಳಿಂದ, ಹಾರಿಹಾರಿ ಓಡುತ್ತದೆ. ಪ್ಲಾಟಿಪಸ್ ಎಂಬುದು ಸಸ್ತನಿಯಾಗಿದೆ, ೨೦ ಅಂಗುಲದಷ್ಟು ಉದ್ದವಿರುವುದು, ಕಪ್ಪೆಗಿರುವಂತೆ ಹೆಜ್ಜೆಗಳೂ, ಬಾತುವಿಗೆ ಇರುವಂತೆ ಕೊಕ್ಕೂ ಇದೆ; ನೆಲಜಲಗಳಲ್ಲಿ ಜೀವಿಸಬಲ್ಲುದು. ಈ ವಿಜಾತೀಯ ಚತುಷ್ಪಾದಿ ಮೊಟ್ಟೆಗಳನ್ನು ಇಡುತ್ತದೆ.

13. ಖನಿಜಗಳು.—ಆಸ್ಟ್ರೇಲಿಯಾ ಖಂಡದಲ್ಲಿ ಖನಿಜಗಳು ಬಹು ವಿಶೇಷವಾಗಿವೆ. ಎಲ್ಲಾ ಕಾಲೊನಿಗಳಲ್ಲಿಯೂ ಚಿನ್ನ, ತಾಮ್ರ, ತವರ, ಕಬ್ಬಿಣ ಮತ್ತು ಕಲ್ಲಿದ್ದಲು ಹೆಚ್ಚಾಗಿ ಸಿಕ್ಕುತ್ತಿವೆ. ನ್ಯೂಸೌತ್‌ವೇಲ್ಸಿನಲ್ಲಿ ಬೆಳ್ಳಿಯೂ ಸಿಕ್ಕುತ್ತದೆ.

14. ಜನರು.—ಈ ಖಂಡದ ಪೂರ್ವ ನಿವಾಸಿಗಳು ಕಾಡು ಜನರು; ಇವ

ರಲ್ಲಿ ನಾಗರಿಕತೆ ಸ್ವಲ್ಪವೂ ಇಲ್ಲ. ಇವರ ಸಂಖ್ಯೆ ಬಹು ಬೇಗನೆ ಕಡಿಮೆಯಾಗುತ್ತಿದೆ. ಅನ್ಯದೇಶದಿಂದ ಬಂದು ನೆಲೆಗೊಂಡಿರುವವರ ಸಂಖ್ಯೆ ೩೧,೦೦,೦೦೦. ಸ್ವಲ್ಪ ಜನರನ್ನು ಬಿಟ್ಟರೆ, ಉಳಿದವರೆಲ್ಲರೂ ಬ್ರಿಟಿಷ್ ವಂಶಕ್ಕೆ ಸೇರಿದವರಾಗಿದ್ದಾರೆ. ಈ ಖಂಡದ ಭಾಷೆ ಇಂಗ್ಲಿಷು.

15. ರಸ್ತೆಗಳು ಮತ್ತು ರೈಲ್ವೆಗಳು.—ಭೂಮಿಯ ರಸ್ತೆಗಳಿಗಿಂತ ರೈಲ್ವೆಗಳೇ ಹೆಚ್ಚಾಗಿವೆ; ದೊಡ್ಡ ದೊಡ್ಡ ಪಟ್ಟಣಗಳಿಗೆಲ್ಲಾ ರೈಲ್ವೆಯಾಗಿದೆ. ದೂರ ಪ್ರಯಾಣಕ್ಕಿಂತ ಹತ್ತಿರದ ಪ್ರಯಾಣವು ಈ ಖಂಡದಲ್ಲಿ (ಭೂಮಿಯ ರಸ್ತೆಗಳಿಲ್ಲದಿರುವುದರಿಂದ) ಕಷ್ಟವಾಗಿರುವುದು. ಸಾಧಾರಣವಾದ ಕೂಲಿಗೆ ಜನರು ಸಿಕ್ಕದಿರುವುದರಿಂದ ರಸ್ತೆಗಳನ್ನು ಮಾಡುವುದು ಬಹುಕಷ್ಟ.

16. ರಾಜಕೀಯ ವಿಭಾಗಗಳು.—ಆಸ್ಟ್ರೇಲಿಯದ ಕಾಲೊನಿಗಳನ್ನು ಬೇರೆ ಬೇರೆ ಕಾಲಗಳಲ್ಲಿ ಸ್ಥಾಪಿಸಿದರು. ಒಂದೊಂದು ಕಾಲೊನಿಯಲ್ಲಿಯೂ ಒಂದೊಂದು ಪಾರ್ಲಿಮೆಂಟು ಇದೆ; ಮತ್ತು ಬ್ರಿಟಿಷ್ ರಾಜರವರು ಈ ಕಾಲೊನಿಗಳಿಗೆ ಬೇರೆ ಬೇರೆಯಾಗಿ ಗವರ್ನರುಗಳನ್ನು ನೇಮಿಸುತ್ತಾರೆ. ಎಲ್ಲ ಕಾಲೊನಿಗಳನ್ನೂ ಸೇರಿಸಿದ ಒಟ್ಟು ರಾಜ್ಯಕ್ಕೆ ಆಸ್ಟ್ರೇಲಿಯಾ ಕಾಮನ್‌ವೆಲ್ತ್ ಎಂದು ಹೆಸರು. ಇದಲ್ಲದೆ ಪ್ರತಿ ಕಾಲೊನಿಯಿಂದ ಬರುವ ಪ್ರತಿನಿಧಿಗಳೆಲ್ಲ ಸೇರಿ ಒಟ್ಟು ಮಂತ್ರಾಲೋಚನೆ ಮಾಡುವುದಕ್ಕೆ ಸಂಯುಕ್ತ ಸಭೆಯೊಂದನ್ನು ಏರ್ಪಾಡು ಮಾಡಿರುತ್ತಾರೆ. ಎಲ್ಲಕ್ಕೂ ಅಧ್ಯಕ್ಷನಾಗಿ ಒಬ್ಬ ಗವರ್ನರ್ ಜನರಲ್ ಅಥವಾ ವೈಸರಾಯಿ ಇರುತ್ತಾನೆ. ಈತನನ್ನೂ ಬ್ರಿಟಿಷ್ ರಾಜರೇ ನೇಮಿಸುತ್ತಾರೆ. ವಿಕ್ಟೋರಿಯ, ನ್ಯೂಸೌತ್‌ವೇಲ್ಸ್, ಕ್ವೀನ್ಸ್‌ಲೆಂಡ್, ದಕ್ಷಿಣ ಆಸ್ಟ್ರೇಲಿಯ, ಪಶ್ಚಿಮ ಆಸ್ಟ್ರೇಲಿಯ, ತಾಸ್ಮೇನಿಯ ಇವು ಈಗ ಇರುವ ಕಾಲೊನಿಗಳು.

(೧) ಪಶ್ಚಿಮ ಆಸ್ಟ್ರೇಲಿಯವು ಕಲೊನಿಯಲ್ ಆಫೀಸಿನ ವಿಚಾರಣೆಯಲ್ಲಿದೆ. (೨) ವಿಕ್ಟೋರಿಯ, ಕ್ವೀನ್ಸ್‌ಲೆಂಡ್, ತಾಸ್ಮೇನಿಯ, ಪಶ್ಚಿಮ ಆಸ್ಟ್ರೇಲಿಯ ಮತ್ತು ಫೀಜೀ ದ್ವೀಪಗಳು—ಇವೆಲ್ಲವೂ ಸೇರಿ ಈಗ ಸಂಯುಕ್ತದೇಶ ಪಾ, ಯುವಾಗಿದೆ.

ಕಾಲೊನಿಗಳ ವರ್ಣನೆ.

17. ವಿಕ್ಟೋರಿಯ.—ವಿಸ್ತೀರ್ಣದಲ್ಲಿ ಗ್ರೇಟ್ ಬ್ರಿಟನ್ನಿಗೆ ಸ್ವಲ್ಪ ಹೆಚ್ಚಾಗಿದೆ. ೮೭,೮೮೪ ಚದರ ಮೈಲಿ ಇದೆ. ಇದೇ ಆಸ್ಟ್ರೇಲಿಯದ ಕಾಲೊನಿಗಳೊಳಗೆಲ್ಲಾ ಚಿಕ್ಕದು. ಮೂರ್ತಿ ಚಿಕ್ಕದಾದರೂ ಕೀರ್ತಿ ದೊಡ್ಡದೆನ್ನುವ ಗಾಧೆಗೆ ಸರಿಯಾಗಿ, ಇದು ವಿಸ್ತೀರ್ಣದಲ್ಲಿ ಚಿಕ್ಕದಾದರೂ ಐಶ್ವರ್ಯದಲ್ಲಿಯೂ ಕೈಗಾರಿಕೆಗಳಲ್ಲಿಯೂ ಜನ ಸಂಖ್ಯೆಯಲ್ಲಿಯೂ ಈ ಖಂಡದ ಇತರ ಕಾಲೊನಿಗಳನ್ನು ಮೀರಿಸಿರುವುದು. ಜನಸಂಖ್ಯೆ ಸುಮಾರು ೧೨,೦೧,೦೦೦.

(*a*) ಮುಖ್ಯೋದ್ಯೋಗಗಳು ಮತ್ತು ವ್ಯಾಪಾರ. ಪಶುಪಾಲನೆ, ಕೃಷಿ ಮತ್ತು ಖನಿಜಗಳನ್ನು ತೆಗೆವುದು—ಇವೇ ಜನರ ಮುಖ್ಯೋದ್ಯೋಗಗಳು. ಪ್ರತಿ ವರ್ಷದಲ್ಲಿಯೂ ೫ ಕೋಟಿ ರೂಪಾಯಿನಷ್ಟು ಉಣ್ಣೆ ರಫ್ತಾಗುತ್ತದೆ.

(*b*) ಪಟ್ಟಣಗಳು.—(೧) ಮೆಲ್ಬೋರ್ನ್. ರಾಜಧಾನಿ; ಸುಂದರವಾದ ಪಟ್ಟಣ; ಇಲ್ಲಿ ಒಂದು ಸಕಲ ವಿದ್ಯಾನಿಲಯವೂ ಧರ್ಮಾರ್ಥವಾಗಿಟ್ಟಿರುವ ಪುಸ್ತಕ ಭಂಡಾರವೊಂದೂ ಇವೆ. (೨) ಬಲ್ಲರಾಟ್ ಮತ್ತು ಸಾಂಡ್‌ಹರ್ಸ್ಟ—ಇವುಗಳಲ್ಲಿ ಪ್ರಸಿದ್ಧವಾದ ಚಿನ್ನದ ಗಣಿಗಳಿವೆ. (೩) ಗೀಲಾಂಗಿನಲ್ಲಿ ಟ್ವೀಡ್ ಬಟ್ಟೆ ತಯಾರಾಗುತ್ತದೆ.

18. ನ್ಯೂಸಾತ್‌ವೇಲ್ಸ್.—ಇದು ವಿಸ್ತೀರ್ಣದಲ್ಲಿ, ವಿಕ್ಟೋರಿಯಕ್ಕಿಂತ ನಾಲ್ಕು ಪಾಲಷ್ಟು ದೊಡ್ಡದಾಗಿದ್ದರೂ ಜನ ಸಂಖ್ಯೆಯಲ್ಲಿ ಅದಕ್ಕಿಂತ ಕಡಿಮೆ ಯಾಗಿದೆ. ತೀರಕ್ಕೆ ೧೪೦ ಮೈಲಿಯಷ್ಟು ದೂರದಲ್ಲಿ ಮಳೆ ಹೊಯ್ಯುವುದು ಬಹು ಕೊಂಚ.

(*a*) ವ್ಯಾಪಾರ.—ಜನರ ಮುಖ್ಯೋದ್ಯೋಗಗಳು ಪಶುಪಾಲನೆ ಮತ್ತು ಕೃಷಿ. ೩ ಕೋಟ ರೂಪಾಯಿನಷ್ಟು ಉಣ್ಣೆ ಪ್ರತಿ ವರ್ಷದಲ್ಲಿಯೂ ರಫ್ತಾಗುತ್ತದೆ; ಧಾನ್ಯ, ಕಲ್ಲಿದ್ದಲು ಮತ್ತು ತವರ—ಇವೂ ರಫ್ತಾಗುವುವು.

(*b*) ಪಟ್ಟಣಗಳು.—(೧) ಸಿಡ್ನಿ. ರಾಜಧಾನಿ; ಸುಂದರವಾದ ಪಟ್ಟಣ, ವ್ಯಾಪಾರಸ್ಥಳ. (೨) ನ್ಯೂಕಾಸಲ್ ಎಂಬುದು ರೇವೆಪಟ್ಟಣ; ಕಲ್ಲಿದ್ದಲು ರಫ್ತಾಗುತ್ತದೆ. (೩) ಬೇಥರ್‌ಸ್ಟ ಪಟ್ಟಣವು ಗೋದುವೆ ಬೆಳೆವ ಪ್ರದೇಶದಲ್ಲಿದೆ; ಇದರ ಹತ್ತಿರ ಚಿನ್ನದ ಗಣಿಗಳಿರುವುವು. (೪) ಪರಮಟ್ಟ—ಜಾರ್ಕ್ಸನ್ ಬಂದರ ಬಳಿ ಇದೆ; ಕಿತ್ತಲೆ ಹಣ್ಣಿಗೆ ಪ್ರಸಿದ್ಧವಾಗಿದೆ. (೫) ಸಿಲ್ವರ್ಟನ್—ಇಲ್ಲಿ ಬೆಳ್ಳಿಯ ಗಣಿಗಳಿವೆ.

19. ಕ್ವೀನ್ಸ್‌ಲೆಂಡ್. ವಿಸ್ತೀರ್ಣದಲ್ಲಿ ಫ್ರಾನ್ಸ್ ದೇಶಕ್ಕೆ ಮೂರರಷ್ಟು ಇದೆ. ತೀರದ ಹತ್ತಿರದಲ್ಲಿ ಪರ್ವತಶ್ರೇಣಿ ಇರುವುದು; ಪ್ರಸ್ಥಭೂಮಿ ಹೆಚ್ಚಾಗಿದೆ. ದೊಡ್ಡ ಕಾಡುಗಳಿರುವುವು. ಜನಸಂಖ್ಯೆ ೪,೯೩,೦೦೦. ಚೀಣಾದೇಶದವರು ಬಹು ಮಂದಿ ಚಿನ್ನದ ಗಣಿಗಳಲ್ಲಿ ಕೆಲಸ ಮಾಡುತ್ತಿದಾರೆ, ಯಾರ್ಕ್ ಪರ್ಯಾಯದ್ವೀಪದಲ್ಲಿ ಪೂರ್ವ ನಿವಾಸಿಗಳು ೧೨,೦೦೦ ಮಂದಿ ಇರುವರು.

(*a*) ವ್ಯಾಪಾರ.—ಪಶುಪಾಲನೆ, ಖನಿಜಗಳನ್ನು ತೆಗೆವುದು ಮತ್ತು ಕೃಷಿ, ಇವು ಜನರ ಮುಖ್ಯೋದ್ಯೋಗಗಳು. ರಫ್ತಾಗುವ ಮುಖ್ಯ ಪದಾರ್ಥಗಳು ಯಾವುವೆಂದರೆ:—ಉಣ್ಣೆ, ಚಿನ್ನ ಮತ್ತು ಸಕ್ಕರೆ.

(*b*) ಪಟ್ಟಣಗಳು.—(೧) ಬ್ರಿಸ್ಬೇನ್. ರಾಜಧಾನಿ. (೨) ರಾಕಾಂಪ್ಟನ್ ಎಂಬುದು ಲೋಹದ ಅದುರುಗಳು ರಫ್ತಾಗುವ ಸ್ಥಳ. (೩) ಮೇರಿಬರೊ ಎಂಬುದು ಸಕ್ಕರೆ ತಯಾರಾಗುವ ಪಟ್ಟಣ.

20. ದಕ್ಷಿಣ ಆಸ್ಟ್ರೇಲಿಯ.—ದ. ಅ. ೨೬ರಿಂದ ದಕ್ಷಿಣಕ್ಕೆ ಈ ಕಾಲೋನಿ ಇದೆ; ಈ ಅಕ್ಷಾಂಶದಿಂದ ಉತ್ತರಕ್ಕೆ ಉತ್ತರ ಟೇಟೋರಿ ಇರುವುದು. ಇವೆರಡರ ಒಟ್ಟು ವಿಸ್ತೀರ್ಣ ೯,೦೩,೬೯೦ ಚ. ಮೈ. ಜನಸಂಖ್ಯೆ ೩,೬೩,೦೦೦. ದಕ್ಷಿಣಭಾಗದಲ್ಲಿ ಮಾತ್ರ ಜನರು ವಾಸವಾಗಿದ್ದಾರೆ. ಮರ್ರೇನದಿ ಈ ಕಾಲೋನಿಯ ದಕ್ಷಿಣಭಾಗದಲ್ಲಿ ಹರಿಯುತ್ತದೆ. ಉತ್ತರದ ಟೆರಿಟೋರಿ ಎಂಬುದು ಮುಕ್ಕಾಲು ಮೂರು ವೀಸಪಾಲು ಮರುಭೂಮಿಯಾಗಿದೆ. ಈ ದೇಶದಲ್ಲಿ ಗೋಧುವೆ ಚೆನ್ನಾಗಿ ಬೆಳೆಯಾಗುತ್ತದೆ. ಕೆಲವುಕಡೆ ಗಣಿಗಳಲ್ಲಿ ತಾಮ್ರವು ಹೆಚ್ಚಾಗಿ ದೊರೆಯುತ್ತದೆ.

(*a*) ಜನರ ಉದ್ಯೋಗ ಮತ್ತು ವ್ಯಾಪಾರ.—ಕೃಷಿ, ಖನಿಜಗಳನ್ನು ತೆಗೆವುದು, ಪಶುಪಾಲನೆ, ವೈನನ್ನು ಮಾಡುವುದು—ಇವು ಜನರ ಮುಖ್ಯವಾದ ಉದ್ಯೋಗಗಳು. ರಫ್ತಾಗುವ ಮುಖ್ಯ ಪದಾರ್ಥಗಳು ಉಣ್ಣೆ, ಗೋಧಿ ಮತ್ತು ತಾಮ್ರ. ಆಮದಾಗುವ ಪದಾರ್ಥಗಳಲ್ಲಿ ಮುಖ್ಯವಾದುವು ಕಬ್ಬಿಣ, ಉಡುಪುಗಳು, ಬಟ್ಟೆ ಮತ್ತು ಯಂತ್ರಾದಿಗಳು.

(*b*) ಪಟ್ಟಣಗಳು.—ಅಡಿಲೇಡ್ ಎಂಬುದೊಂದೇ ದೊಡ್ಡ ಪಟ್ಟಣ; ಈ ಪಟ್ಟಣದ ಹತ್ತಿರ ನೀರಿಗೋಸ್ಕರ ದೊಡ್ಡ ಕೆರೆಗಳನ್ನು ಕಟ್ಟಿದ್ದಾರೆ.

21. ಪಶ್ಚಿಮ ಆಸ್ಟ್ರೇಲಿಯಾ.—ಈ ಕಾಲೋನಿ ಆಸ್ಟ್ರೇಲಿಯಾ ಖಂಡದ ವಿಸ್ತೀರ್ಣದಲ್ಲಿ ೧/೩ ಭಾಗವನ್ನೂ ಒಳಕೊಂಡಿದೆ. ತೀರಪ್ರದೇಶದಲ್ಲಿ ಮೂರು ಸ್ಥಳಗಳಲ್ಲಿ ಮಾತ್ರ ಜನರು ವಾಸವಾಗಿದ್ದಾರೆ; ಉಳಿದ ಭಾಗಗಳೆಲ್ಲಾ ಮರುಭೂಮಿ. ಈಗಿನ ಜನಸಂಖ್ಯೆ ೧,೮೪,೦೦೦. ಈ ಕಾಲೋನಿಯಿಂದ ಉಣ್ಣೆ ಮತ್ತು ಸೀಸದ ಅದುರು ರಫ್ತಾಗುವುವು. ಸ್ವಾನ್ ನದಿಯ ದಡದಲ್ಲಿರುವ ಪರ್ತ್ ಎಂಬ ಪಟ್ಟಣ ರಾಜಧಾನಿ.

ಉತ್ತರದಲ್ಲಿರುವ ಕಿಂಬರ್ಲೀ ಡಿಸ್ಟ್ರಿಕ್ಟಿನಲ್ಲಿ ಜನಸಂಖ್ಯೆ ಹೆಚ್ಚುತ್ತಿದೆ. ಇಲ್ಲಿ ಹುಲ್ಲುಗಾವಲುಗಳು ಇರುವುವು; ಚಿನ್ನದ ಗಣಿಗಳು ಸಿಕ್ಕಿವೆ; ಮುತ್ತಿನ ಮೀನುಗಳು ಇರುವುವು.

22. ತಾಸ್ಮೇನಿಯ.—ತಾಸ್ಮೇನಿಯಾ ದ್ವೀಪವು ಆಸ್ಟ್ರೇಲಿಯಕ್ಕೆ ದಕ್ಷಿಣದಲ್ಲಿದೆ. ವಿಸ್ತೀರ್ಣದಲ್ಲಿ ಸುಮಾರು ಸಿಂಹಳ ದ್ವೀಪದಷ್ಟು ಇರುವುದು; ಬೆಟ್ಟದ ಸೀಮೆ; ಇದನ್ನು "ದಕ್ಷಿಣಾರ್ಧ ಗೋಳದ ಸ್ವಿಟ್ಸರ್ಲೆಂಡ್" ಎನ್ನಬಹುದು; ನೀರು ಸಮೃದ್ಧಿಯಾಗಿದೆ; ವಾಯುಗುಣವು ಬಹು ಸೊಗಸಾಗಿರುವುದು. ಇಲ್ಲಿ ಗಣಿಗಳಲ್ಲಿ ತವರವು ವಿಶೇಷವಾಗಿ ಸಿಕ್ಕುತ್ತದೆ. ಕೆಲವೆಡೆ ಕಲ್ಲಿದ್ದಲೂ ಬೆಳ್ಳಿಯೂ ತಕ್ಕಮಟ್ಟಿಗೆ ದೊರೆಯುತ್ತವೆ. ಉಣ್ಣೆ, ತವರ, ಫಲಗಳು, ಚೌಬೀನಿಯುಮರ ಮತ್ತು ಚಿನ್ನ—ಇವು ರಫ್ತಾಗುತ್ತವೆ. ಜನಸಂಖ್ಯೆ ೧,೩೩,೦೦೦. ಡರ್ವೆಂಟ್‌ನದಿಯ ದಡದಲ್ಲಿರುವ ಹೋಬರ್ಟ್ ಎಂಬುದು ರಾಜಧಾನಿ; ಲಾನ್ಸ್ಟನ್ ಎಂಬುದು ಮುಖ್ಯವಾದ ರೇವುಪಟ್ಟಣ.

ನ್ಯೂಸೀಲೆಂಡ್.

23. ಮುಖ್ಯ ವಿಷಯಗಳು.—ಆಸ್ಟ್ರೇಲಿಯಕ್ಕೆ ಆಗ್ನೇಯದಲ್ಲಿ ದ. ಅ. ೩೪ರಿಂದ ೪೭ರ ವರೆಗೆ ಇರುವ ದ್ವೀಪಸ್ತೋಮಕ್ಕೆ ನ್ಯೂಸೀಲೆಂಡ್ ಎಂಬ ಹೆಸರು ಬಂದಿದೆ. ಈ ಸ್ತೋಮದಲ್ಲಿ ಉತ್ತರದ್ವೀಪ ದಕ್ಷಿಣದ್ವೀಪಗಳೆಂಬ ಎರಡು ದೊಡ್ಡ ದ್ವೀಪಗಳೂ ಸ್ಟೀವರ್ಟ್ ಎಂಬ ಒಂದು ಸಣ್ಣ ದ್ವೀಪವೂ ಸೇರಿವೆ. ಇವುಗಳ ಒಟ್ಟು ವಿಸ್ತೀರ್ಣವು ೧,೦೪,೦೦೦ ಚದರ ಮೈಲಿಗಿಂತ ಸ್ವಲ್ಪ ಹೆಚ್ಚಾಗಿರುವುದು. ಈ ದ್ವೀಪಗಳು ಮಲೆನಾಡುಗಳಾಗಿವೆ; ಇವುಗಳ ಅತ್ಯುನ್ನತ ಶಿಖರ ಕುಕ್‌ಶಿಖರ ೧೨,೩೪೯ ಅಡಿ; ಕೆಲವು ಜ್ವಾಲಾಮುಖಿಗಳೂ ಇರುವುವು. ವಾಯುವ್ಯ ಭಾಗದಿಂದ ಮಳೆಯ ಮೋಡಗಳು ವಿಶೇಷವಾಗಿ ಬರುತ್ತವೆ; ಅನೇಕ ಸರೋವರಗಳೂ ನದಿಗಳೂ ಇರುವುವು; ಖನಿಜಮಿಶ್ರವಾದ ಉಷ್ಣೋದಕದ ಊಟೆಗಳು ಅನೇಕ ಇವೆ. ವಾಯುಗುಣವು ಸೊಗಸಾಗಿರುವುದು; ಸಸ್ಯಾದಿಗಳು ಚೆನ್ನಾಗಿ ಬೆಳೆಯುತ್ತವೆ; ಪೀತದಾರುವಿನ ಕಾಡುಗಳುಂಟು. ಜನಸಂಖ್ಯೆ ಸುಮಾರು ೮,೧೫,೦೦೦. ಇವರಲ್ಲಿ ಸುಮಾರು ೪೩,೦೦೦ ಮಂದಿ ಪಾಲಿನೀಷಿಯದಿಂದ ಬಂದ ಮೆಯೋರಿಯರಾಗಿದ್ದಾರೆ. ಇವರಲ್ಲದೆ ಇಲ್ಲಿ ೨,೮೦೦ ಚೀಣದವರಿರುತ್ತಾರೆ.

ಪಶುಪಾಲನೆ, ಕೃಷಿ, ಖನಿಜಗಳನ್ನು ತೆಗೆವುದು.—ಇವು ಜನರ ಮುಖ್ಯೋದ್ಯೋಗಗಳು. ಉಣ್ಣೆ ಬಹಳ ಹೆಚ್ಚಾಗಿ ರಫ್ತಾಗುತ್ತದೆ; ಇದಕ್ಕಿಂತ ಕಡಿಮೆಯಾಗಿ ಚಿನ್ನ, ಧಾನ್ಯ ಮುಂತಾದುವು ರಫ್ತಾಗುವುವು.

ಪಟ್ಟಣಗಳು.—(೧) ಆಕ್ಲೆಂಡ್. ನ್ಯೂಸೀಲೆಂಡಿನ ದೊಡ್ಡ ಪಟ್ಟಣ; ಉತ್ತರ ದ್ವೀಪದಲ್ಲಿದೆ. (೨) ವೆಲಿಂಗ್ಟನ್. ಇದೂ ಉತ್ತರ ದ್ವೀಪದಲ್ಲಿದೆ; ನ್ಯೂಸೀಲೆಂಡಿನ ರಾಜಧಾನಿ. (೩) ಡ್ಯೂನೆಡಿನ್. ದಕ್ಷಿಣ ದ್ವೀಪದಲ್ಲಿದೆ; ವಿಶೇಷ ವ್ಯಾಪಾರಸ್ಥಳ (೪) ಕ್ರೈಸ್ಟ್‌ಚರ್ಚ್. ಮೈದಾನದ ಪ್ರದೇಶದಲ್ಲಿದೆ.

24. ಪೂರ್ವ ಪೆಸಿಫಿಕ್ಕಿನಲ್ಲಿರುವ ಹೆನ್ರಿ ದ್ವೀಪಗಳು ನ್ಯೂಸೀಲೆಂಡಿಗೆ ಸೇರಿವೆ. ಬಹು ಫಲವತ್ತಾದುವು. ಇಲ್ಲಿ ೬,೦೦೦ ನಿವಾಸಿಗಳಿರುತ್ತಾರೆ. ಇಲ್ಲಿಂದ ಕಾಫಿ, ಕೊಬ್ಬರಿ, ಹಣ್ಣುಗಳು ರಫ್ತಾಗುತ್ತವೆ.

ಪೆಸಿಫಿಕ್ ಸಾಗರದ ದ್ವೀಪಗಳು.

1. ವಿಭಾಗಗಳು.—ಪೆಸಿಫಿಕ್ ಸಾಗರದ ದ್ವೀಪಸ್ತೋಮಗಳನ್ನು ಮೂರು ಸ್ತೋಮಗಳಾಗಿ ಭಾಗಿಸಬಹುದು; ಮಿಲನೀಷಿಯ, ಮೈಕ್ರೊನೀಷಿಯ, ಮತ್ತು ಪಾಲಿನೀಷಿಯ.

ಮಿಲನೀಷಿಯವೆಂದರೆ ಕಪ್ಪು ದ್ವೀಪಗಳ ಪ್ರದೇಶ; ಮೈಕ್ರೊನೀಷಿಯವೆಂದರೆ ಅಲ್ಪದ್ವೀಪಗಳ ಪ್ರದೇಶ; ಪಾಲಿನೀಷಿಯವೆಂದರೆ ಬಹು ದ್ವೀಪಗಳ ಪ್ರದೇಶ.

2. ಮಿಲನೀಷಿಯ.—ಮಿಲನೀಷಿಯದ ದ್ವೀಪಗಳು ಮೊಲಕ್ಕಾ ದ್ವೀಪಗಳಿಂದ ಫೀಜೀದ್ವೀಪಗಳ ವರೆಗೂ ಅಲ್ಲಲ್ಲಿ ಇವೆ. ಇಲ್ಲಿಯ ನಿವಾಸಿಗಳು ಪಾಪುವನ್ ವಂಶಕ್ಕೆ ಸೇರಿದವರು. ಈ ದ್ವೀಪಗಳಲ್ಲಿ ಬಹು ದೊಡ್ಡದೆನಿಸಿಕೊಂಡಿರುವುದು ಪಾಪುವ ಅಥವಾ ನ್ಯೂಗಿನಿ. ಇಲ್ಲಿಯ ಮುಖ್ಯವಾದ ಸ್ತೋಮಗಳು ಯಾವುವೆಂದರೆ:—ಬಿಸ್ಮಾರ್ಕ್ ದ್ವೀಪಸ್ತೋಮ ಸಮುದಾಯ, ಸಾಲೊಮನ್ ದ್ವೀಪಗಳು, ನ್ಯೂ ಹೆಬ್ರಿಡೀಸ್ ದ್ವೀಪಗಳು, ನ್ಯೂಕಾಲಿಡೋನಿಯ, ಫೀಜೀ ದ್ವೀಪಗಳು.

(೧) ಪಾಪುವ ಅಥವಾ ನ್ಯೂಗಿನಿ ದ್ವೀಪವು ಬಹು ದೊಡ್ಡದು. ಸಮಭಾಜಕ ರೇಖೆಗೂ ಟಾರಿಸ್ ಜಲಸಂಧಿಗೂ ನಡುವೆ ಇದೆ. ಇದರ ವಿಸ್ತೀರ್ಣವು ೩,೦೦,೦೦೦ ಚ. ಮೈ. ಎಲ್ಲಾ ಭಾಗವೂ ಮಲೆನಾಡಾಗಿದೆ; ಕೆಲವು ಶಿಖರಗಳು ೧೫,೦೦೦ ಅಡಿಯಷ್ಟು ಎತ್ತರವಾಗಿರುವುವು. ನೆಲವು ಬಹು ಫಲವತ್ತಾಗಿದೆ ಮತ್ತು ದೊಡ್ಡ ಮರಗಳ ಕಾಡುಗಳು ಹೆಚ್ಚಾಗಿರುವುವು. ಇಲ್ಲಿ ರಬ್ಬರುಮರ, ಹತ್ತಿ, ಕಬ್ಬು, ಹೊಗೆಯಸೊಪ್ಪು, ಕಾಫಿ ಇವು ಬೆಳೆಯುತ್ತವೆ. ಕಾಡಿನಲ್ಲಿ ಎಬನಿ, ಸೀಡರ್ ಮರಗಳು ವಿಶೇಷವಾಗಿವೆ. ನದಿಯ ತಳದಲ್ಲಿ ಚಿನ್ನದ ರವೆ ದೊರೆಯುತ್ತದೆ. ಇಲ್ಲಿನ ಪ್ರಾಣಿಗಳು ಆಸ್ಟ್ರೇಲಿಯ ಜಾತಿಯವುಗಳಾಗಿವೆ. ಪಾಪುವನ್ ವಂಶದವರು ಕರಿಯ ಜನರು; ಇವರ ಕೂದಲು ಉಣ್ಣೆಯಂತಿದೆ. ಈ ದ್ವೀಪದ ಪಶ್ಚಿಮಾರ್ಧವು ಡಚ್ಚರಿಗೆ, ಈಶಾನ್ಯ ಭಾಗವು ಜರ್ಮ್ಮನರಿಗೆ, ಆಗ್ನೇಯಭಾಗವು ಇಂಗ್ಲಿಷರಿಗೆ ಸೇರಿರುವುದು.

(೨) ಬಿಸ್ಮಾರ್ಕ್ ದ್ವೀಪಸ್ತೋಮ ಸಮುದಾಯವು ಜರ್ಮನ್ ಜನರಿಗೆ ಸೇರಿದೆ; ಇವರು ಇಲ್ಲಿಯ ದ್ವೀಪಗಳಿಗೆ ಹೊಸ ಹೆಸರುಗಳನ್ನು ಇಟ್ಟಿರುವರು. ನ್ಯೂಪಾಮೆರೇನಿಯದಲ್ಲಿ ಜ್ವಾಲಾಮುಖಿಯೊಂದು ಇದೆ. ಇಲ್ಲಿಯ ಜನರು ಮಾನುಷಮಾಂಸಾಹಾರಿಗಳು. (೩) ಜ್ವಾಲಾಮುಖಿ ಯುಕ್ತಗಳಾದ ಸಾಲೊಮನ್ ದ್ವೀಪಗಳು ಜರ್ಮ್ಮನರಿಗೆ ಸೇರಿವೆ; ದೊಡ್ಡ ಮರಗಳ ಕಾಡುಗಳಿರುವುವು;

ಶ್ರೀಗಂಧದ ಮರವು ವಿಶೇಷವಾಗಿದೆ. (೪) ನ್ಯೂ ಹೆಬ್ರಿಡೀಸ್ ದ್ವೀಪಗಳಲ್ಲಿ ಜ್ವಾಲಾಮುಖಿಗಳು ವಿಶೇಷವಾಗಿವೆ; ಇವುಗಳಲ್ಲಿ ಕೆಲವು ಸರ್ವಕಾಲದಲ್ಲಿಯೂ ಆಡುತ್ತಿರುವುವು. (೫) ನ್ಯೂ ಕಾಲಿಡೋನಿಯಾ ದ್ವೀಪವು ಬೆಟ್ಟದ ಸೀಮೆ. ನಿಕಲ್ ಲೋಹವು ಹೆಚ್ಚಾಗಿ, ಚಿನ್ನವು ಕೊಂಚವಾಗಿ ಸಿಕ್ಕುತ್ತದೆ; ಈ ದ್ವೀಪವು ಫ್ರೆಂಚರಿಗೆ ಸೇರಿದೆ. (೬) ಫೀಜೀದ್ವೀಪಗಳು ಇಂಗ್ಲಿಷರಿಗೆ ಸೇರಿವೆ; ಒಬ್ಬ ಗವರ್ನರ ಕೈಕೆಳಗಿದೆ. ಇವು ಮಕರ ಸಂಕ್ರಾಂತಿ ವೃತ್ತಕ್ಕೆ ಸ್ವಲ್ಪ ಉತ್ತರದಲ್ಲಿರುವುವು. ಇಲ್ಲಿರುವ ೨೦೦ ದ್ವೀಪಗಳೊಳಗೆ ೮೦ರಲ್ಲಿ ಮಾತ್ರ ಜನರು ಇದ್ದಾರೆ. ನೆಲವು ಫಲವತ್ತಾಗಿದೆ, ಮತ್ತು ಕಾಡುಗಳಿರುವುವು. ರಬ್ಬರು, ಸಕ್ಕರೆ, ಹೊಗೆಸೊಪ್ಪು, ಸಾಗವಾನಿ, ಇವೇ ಇಲ್ಲಿ ಉತ್ಪತ್ತಿಯಾಗತಕ್ಕವುಗಳು. ಇಲ್ಲಿನ ಜನಸಂಖ್ಯೆ ೧,೩೦,೦೦೦. ಇವರಲ್ಲಿ ೨,೫೦೦ ಯುರೋಪಿಯನರು. ಮೂರುಪಾಲು ಎಲ್ಲರೂ ಕ್ರಿಸ್ತೀಯರು. ಸೂವ ಎಂಬುದು ರಾಜಧಾನಿ. ಲೆವುಕಾ ಎಂಬುದು ಬಂದರು.

3. ಮೈಕ್ರೊನೀಷಿಯ.—ಇಲ್ಲಿಯ ಮುಖ್ಯಸ್ತೋಮಗಳು ಯಾವುವೆಂದರೆ:—ಜಿಲ್ಬರ್ಟ್ ದ್ವೀಪಗಳು, ಮಾರ್ಷಲ್ ದ್ವೀಪಸ್ತೋಮ, ಕಾರೊಲೈನ್ ದ್ವೀಪಗಳು ಮತ್ತು ಮೇರಿಯಾನಿ ದ್ವೀಪಗಳು. ಕಡೆಯ ಎರಡನ್ನು ಸ್ಪೇನ್ ಸರ್ಕಾರದವರು ಜರ್ಮನಿಯವರಿಗೆ ಈಚೆಗೆ ಮಾರಿದರು. ಜಿಲ್ಬರ್ಟ್ ಸಮುದಾಯವು ಬ್ರಿಟನ್ನಿಗೆ ಸೇರಿದೆ.

(೧) ಜಿಲ್ಬರ್ಟ್ ಸ್ತೋಮದಲ್ಲಿ ೧೬ ದ್ವೀಪಗಳಿವೆ; ಇವೆಲ್ಲವೂ ಸಮುದ್ರದ ಮಟ್ಟಕ್ಕೆ ಸ್ವಲ್ಪ ಎತ್ತರದಲ್ಲಿವೆ; ಇಲ್ಲಿಯ ಮುಖ್ಯ ಬೆಳೆ ತೆಂಗು. (೨) ಮಾರ್ಷಲ್ ದ್ವೀಪಸ್ತೋಮದಲ್ಲಿ ಸುಮಾರು ೧೦,೦೦೦ ಜನರಿದ್ದಾರೆ. (೩) ಕಾರೊಲಿನ್ ದ್ವೀಪಗಳು ಪಶ್ಚಿಮವಾಗಿ ೨,೦೦೦ ಮೈಲಿಯ ವರೆಗೆ ಹಬ್ಬಿವೆ.

4. ಪಾಲಿನೀಷಿಯ.—ಪಾಲಿನೀಷಿಯದ ದ್ವೀಪಗಳು ದ. ಅ. ೨೦ ರಿಂದ ಉ. ಅ. ೨೦ರ ವರೆಗೆ ಹರಡಿಕೊಂಡಿವೆ. ಇಲ್ಲಿರುವ ಮುಖ್ಯಸ್ತೋಮಗಳು ಯಾವುವೆಂದರೆ:—ಟೊಂಗ ಅಥವಾ ಫ್ರೆಂಡ್ಲೀ ದ್ವೀಪಗಳು, ಸಾಮೊಆ ಸ್ತೋಮ, ಸೊಸೈಟೀ ದ್ವೀಪಗಳು, ಪಾಮೋಟು ದ್ವೀಪಗಳು, ಮಾರ್ಕ್ವೀಸಾಸ್ ದ್ವೀಪಗಳು ಮತ್ತು ಸಾಂಡಿಚ್ ದ್ವೀಪಗಳು.

(೧) ಫ್ರೆಂಡ್ಲೀ ದ್ವೀಪಗಳಲ್ಲಿ ತೊಂಗಟಾಬು ಎಂಬುದು ದೊಡ್ಡದು; ಸಾಂಡಿಚ್ ದ್ವೀಪಗಳಿಗೆ ಹೋಗುವ ಹೊಗೆಯ ಜಹಜುಗಳು ಇಲ್ಲಿ ಸ್ವಲ್ಪ ನಿಲ್ಲುವುವು. (೨) ಸಾಮೊಆ ದ್ವೀಪಗಳಲ್ಲಿ ತೆಂಗು ವಿಶೇಷ. (೩) ಸೊಸೈಟೀ ದ್ವೀಪಗಳಲ್ಲಿ ಟಾಹಿಟಿ ಎಂಬುದು ಮುಖ್ಯವಾದುದು. ಇಲ್ಲಿನವರೆಲ್ಲರೂ ಕ್ರಿಸ್ತೀಯಮತಕ್ಕೆ ಸೇರಿಕೊಂಡಿರುತ್ತಾರೆ. ಈ ದ್ವೀಪಗಳೆಲ್ಲಾ ಬಹು ರಮಣೀಯವಾಗಿವೆ; ಕಿತ್ತಳೆಯ ಹಣ್ಣೂ ತೆಂಗಿನ ಕಾಯಿಯೂ ರಫ್ತಾಗುತ್ತವೆ. ಸೊಸೈಟೀ ದ್ವೀಪಗಳೆಲ್ಲಾ ಫ್ರೆಂಚರಿಗೆ ಸೇರಿವೆ. (೪) ಪಾಮೋಟು ದ್ವೀಪಗಳಲ್ಲಿ ಮುತ್ತುಗಳು ಸಿಕ್ಕುತ್ತವೆ. (೫)

ಮಾರ್ಕ್ವೀಸಾಸ್ ದ್ವೀಪದವರು ಸುಂದರಪುರುಷರು. (೬) ಸ್ಯಾಂಡಿಚ್ ದ್ವೀಪಗಳು ಕರ್ಕಾಟಕ ಸಂಕ್ರಾಂತಿವೃತ್ತಕ್ಕೆ ಸ್ವಲ್ಪ ದಕ್ಷಿಣದಲ್ಲಿವೆ; ಜನಯುಕ್ತವಾದ ದ್ವೀಪಗಳು ೮ ಇರುವುವು; ಇವುಗಳಲ್ಲಿ ಹಾವೈ ಮತ್ತು ಓಹಾಹು ಎಂಬುವು ದೊಡ್ಡವು. ಈ ದ್ವೀಪಗಳು ಅತಿರಮಣೀಯವಾಗಿ ಭೂಸ್ವರ್ಗಪ್ರಾಯವಾಗಿವೆ; ಜನರು ವಿಹಾರಪ್ರಿಯರು. ನೆಲವು ಬಹು ಫಲವತ್ತಾಗಿದೆ; ಮುಖ್ಯವಾದ ಬೆಳೆಗಳು ಕಬ್ಬು ಮತ್ತು ಬತ್ತ. ಅಮೇರಿಕದವರ ಪ್ರಾಬಲ್ಯವು ಇಲ್ಲಿ ವಿಶೇಷವಾಗಿದೆ. ಸುಮಾರು ೬೦ ವರ್ಷಕ್ಕೆ ಮುಂಚೆ ಸ್ಯಾಂಡಿಚ್ ದ್ವೀಪದವರು ಕಾಡಜನರಾಗಿದ್ದರು. ಅಕ್ಷರವೆಂಬುದನ್ನೇ ಅರಿಯದವರಾಗಿದ್ದರು. ಈಗ ನಾಗರಿಕರಾಗಿ ಕ್ರಿಸ್ತೀಯ ಮತಕ್ಕೆ ಸೇರಿದಾರೆ.

ಹಾವೈ ದ್ವೀಪಗಳಲ್ಲಿ ಉನ್ನತವಾದ ಶಿಖರಗಳು ಎರಡುಂಟು. ಮೌನಲೋವ (೧೩,೬೭೦ ಅಡಿ) ಎಂಬ ಶಿಖರದ ಹತ್ತಿರ ಕಿಲೌಯ ಎಂಬ ಚಿತ್ರತರವಾದ ಜ್ವಾಲಾಮುಖಿ ಇರುವುದು; ಇದರ ಬಾಯಿ ಬಟ್ಟಲಿನ ಆಕಾರವಾಗಿದೆ; ಕೊತ ಕೊತನೆ ಕುದಿಯುತ್ತಿರುವ ಶಿಲಾರಸವು ಇದರಲ್ಲಿರುವುದು; ಇದು ಕಾಲ ಕಾಲಕ್ಕೆ ಸರಿಯಾಗಿ ಉಕ್ಕುತ್ತದೆ, ಮತ್ತು ಕಾಲಕಾಲಕ್ಕೆ ಸರಿಯಾಗಿ ತಗ್ಗುತ್ತದೆ.

ಧ್ರುವ ಪ್ರದೇಶಗಳು.

1. ಉತ್ತರ ದಕ್ಷಿಣ ಧ್ರುವಗಳಿಗಿರುವ ವೈಲಕ್ಷಣ್ಯ.—ಇವುಗಳ ನಿಜಸ್ವಭಾವವನ್ನು ಗೊತ್ತುಮಾಡುವುದಕ್ಕೆ ಸಾಹಸಿಗಳಾದ ಅನೇಕ ಯುರೋಪಿಯನರು ೧೮ನೆಯ ಶತಮಾನದಿಂದ ಇಂದಿನವರೆಗೂ ಪ್ರಯತ್ನಗಳನ್ನು ಮಾಡಿರುವರು. ಆದರೆ ಸರ್ಕಾರದಿಂದಲಾಗಲಿ ಸಾಮಾನ್ಯ ಜನರಿಂದಲಾಗಲಿ ಸಶಾಸ್ತ್ರೀಯ ಪ್ರಯತ್ನಗಳು ನಡೆದಿರುವುದು ೧೮೪೦ ರಿಂದಲೇ. ಇಂದಿನವರೆಗೆ ಇವರುಗಳಿಂದ ತಿಳಿಯಬಂದಿರುವುದೇನೆಂದರೆ:—ಉತ್ತರಧ್ರುವದ ಬಳಿ ಆಳವಾದ ಸಮುದ್ರವಿದೆ. ಇದು ಸುಮಾರು ಆಸ್ಟ್ರೇಲಿಯದ್ವೀಪದಷ್ಟು ವಿಸ್ತಾರವಾಗಿದೆ. ಈ ಸಮುದ್ರದ ಸುತ್ತಲೂ ಉತ್ತರ ಅಮೇರಿಕ, ಯುರೋಪ್ ಏಷ್ಯಾಖಂಡಗಳಿವೆ. ದಕ್ಷಿಣಧ್ರುವದ ಬಳಿ ವಿಸ್ತಾರವಾದ ನೆಲವಿದೆ. ಇದು ಆಸ್ಟ್ರೇಲಿಯಕ್ಕಿಂತ ದೊಡ್ಡದು. ಇದರ ಸುತ್ತಲೂ ದಕ್ಷಿಣ ಸಾಗರವಿದೆ. ಉತ್ತರಸಾಗರದಲ್ಲಿ ಸುಮಾರು ೧೫ ಅಡಿ ದಪ್ಪವಾದ ಹಿಮರಾಶಿಯು ಮುಚ್ಚಿಕೊಂಡಿದೆ. ಆದರೆ ಅಲ್ಲಲ್ಲಿ ಅಗಲವಾಗಿ ಬಿಡುಬಿಟ್ಟುಕೊಂಡಿರುವುದರಿಂದ ಹಿಮದ ರಾಶಿಗಳು ತೇಲಾಡುತ್ತಾ ನಿಂತಲ್ಲಿ ನಿಲ್ಲದೆ ಚಲಿಸುತ್ತಿರುವುವು. ಗ್ರೀನ್‌ಲೇಂಡ್ ಬಳಿಯಲ್ಲಿ ನೀರ್ಗಲ್ಲಿನ ಗುಡ್ಡಗಳು ತುಂಬಿಕೊಂಡಿರುವುವು. ದಕ್ಷಿಣಸಾಗರದಲ್ಲಿಯೋ ಎಂದರೆ ಹಿಮರಾಶಿಯು ಸಾವಿರಾರು ಅಡಿಯಿಂದ ಹಿಡಿದು ನೂರಾರು ಮೈಲಿಗಳಷ್ಟು

ದಪ್ಪವಾಗಿ ಮುಚ್ಚಿಕೊಂಡಿದೆ. ಆದರೆ ಈ ರಾಶಿಯ ಅಂಚುಗಳು ಮುರಿದು ಕಳಚಿ ಬಿದ್ದು ಸಮುದ್ರಪ್ರವಾಹಕ್ಕೆ ಸಿಕ್ಕಿ ಉಷ್ಣವಲಯದ ಕಡೆಗೆ ಒಯ್ಯಲ್ಪಡುತ್ತಿರುವುವು. ಉತ್ತರಧ್ರುವವು ಇದ್ದಮಟ್ಟಿಗೆ ಶಾಖವುಳ್ಳುದಾಗಿಯೂ ದಕ್ಷಿಣಧ್ರುವವು ಬಹು ಶೀತವಾಗಿಯೂ ಇರುವಂತೆ ತಿಳಿಯಬರುವುದು. ಎರಡು ಸಮುದ್ರಗಳಲ್ಲಿಯೂ ಅಲ್ಪ ಜಲಚರಗಳೂ ದೊಡ್ಡ ಮೀನುಗಳೂ ಇವೆ. ನೆಲವಿರುವೆಡೆಗಳಲ್ಲಿ ವಿಜಾತೀಯಗಳಾದ ಕೆಲವು ಪಕ್ಷಿಗಳಿವೆ. ಆದರೆ ಉತ್ತರಧ್ರುವದ ಭೂಮಿಗಳಲ್ಲಿ ಕರಡಿಗಳೂ, ನರಿಗಳೂ, ರೇಂಡಿಯರುಗಳೂ, ಕಸ್ತೂರಿ ವೃಷಭಗಳೂ ಅಲ್ಲಲ್ಲಿ ಗೋಚರವಾಗುತ್ತವೆ. ದಕ್ಷಿಣಧ್ರುವ ಭೂಮಿಗಳಲ್ಲಿ ಈ ವಿಧವಾದ ಯಾವ ಸಸ್ತನಿ ಪ್ರಾಣಿಗಳೂ ಇಲ್ಲ.

2. ಅಂಟಾರ್ಕ್ಟಿಕ ಅಥವಾ ದಕ್ಷಿಣಧ್ರುವಭೂಮಿ —ಅನೇಕ ಕಾಲದವರೆಗೆ ಇದರ ವಿಷಯವು ಏನೂ ತಿಳಿದಿರಲಿಲ್ಲ. ೧,೭೭೩ ರಲ್ಲಿ ಕ್ಯಾಪ್ಟನ್‌ಕುಕ್ ಎಂಬಾತನು ದಕ್ಷಿಣಧ್ರುವ ವೃತ್ತವನ್ನು ಮೊದಲನೆಯಸಾರಿ ದಾಟಿದನು. ೧,೮೪೧ ರಲ್ಲಿ ಸರ್ ಜೇಮ್ಸ್ ರಾಸ್ ಎಂಬಾತನು ದ. ಅ. ೭೦ ಮತ್ತು ದ. ಅ. ೭೮ ರ ಮಧ್ಯದಲ್ಲಿ ನ್ಯೂಜಿಲೆಂಡಿಗೆ ದಕ್ಷಿಣದಲ್ಲಿರುವ ಭೂಮಿಗೆ ಕಾಲಿಟ್ಟನು; ಅದನ್ನು ವಿಕ್ಟೋರಿಯಾ ಲ್ಯಾಂಡ್ ಎಂದು ಕರೆದನು. ಅಲ್ಲಿ ಆತನಿಗೆ ಎರಡು ಪರ್ವತಗಳು ಸಿಕ್ಕಿದುವು. ಅವುಗಳಿಗೆ ಈಗ ಮೌಂಟ್ ಎರಿಬಸ್, ಮೌಂಟ್ ಟೆರರ್ ಎಂದು ಹೆಸರು. ಇವುಗಳಲ್ಲಿ ಮೊದಲನೆಯದು ೧೩,೦೦೦ ಅಡಿ ಎತ್ತರವಾದ ಜ್ವಾಲಾಮುಖಿಯಾಗಿ ಈಗಲೂ ಜ್ವಾಲೆ ಆಡುತ್ತಿರುವುದು. ಅಂದಿನಿಂದ ೧೯ನೆಯ ಶತಮಾನದವರೆಗೆ ಯಾರೂ ಏನೂ ಪ್ರಯತ್ನ ಮಾಡಲಿಲ್ಲ. ಅಲ್ಲಿಂದೀಚೆಗೆ ಇಂಗ್ಲೆಂಡ್, ಜರ್ಮನಿ, ಫ್ರಾನ್ಸ್, ಸ್ವೀಡನ್‌ದೇಶೀಯರು ಬಹು ಸಾಹಸವನ್ನು ಮಾಡಿರುವರು. ೧೯೦೮—೦೯ರಲ್ಲಿ ಷಾಕಲ್ಟನ್ ಎಂಬ ಆಂಗ್ಲೇಯನು ಬಹು ದೀರ್ಘಕಾಲ ಕಷ್ಟಪಟ್ಟು ಹಿಮರಾಶಿಯ ಮೇಲೆ ಪಯಣಮಾಡಿ ಕಡೆಗೆ ದಕ್ಷಿಣ ಧ್ರುವಸ್ಥಾನವು ಇನ್ನು ೧೦೦ ಮೈಲಿ ಇರುವವರೆಗೆ ಹೋಗಿ ಬಂದನು. ಈತನು ಇನ್ನೂ ಹಲವು ಪರ್ವತಗಳನ್ನು ನೋಡಿದುದಲ್ಲದೆ ಎರಿಬಸ್ ಪರ್ವತಕ್ಕೆ ಹತ್ತಿ ಹೋಗಿದ್ದನು. ಈತನಿಂದ ತಿಳಿಯಬಂದ ಒಂದು ಮುಖ್ಯ ವಿಷಯವೇನೆಂದರೆ, ಅದುವರೆಗೆ ಜನರು ಊಹಿಸಿದ್ದಂತೆ ಧ್ರುವಗಳ ಬಳಿ ವಾಯು ನಿಶ್ಚಲವಾಗಿಲ್ಲದೆ, ಎಲ್ಲಿ ನೋಡಿದರೂ ಆಗ್ನೇಯ ಮಾರುತಗಳು ಬಲವಾಗಿ ಬೀಸುತ್ತಿರುವುವೆಂದು ಗೊತ್ತಾಯಿತು.

ಅಂಟಾರ್ಕ್ಟಿಕದ ಯಾವ ಭೂಮಿಯಲ್ಲಿಯೂ ಮನುಷ್ಯಜಾತಿ ಪ್ರಸಕ್ತಿಯೇ ಇಲ್ಲ. ದಕ್ಷಿಣ ಅಮೆರಿಕದ ದಕ್ಷಿಣಾಂತ್ಯದಲ್ಲಿರುವ ಟೆರಾಡೆಲ್ ಫ್ಯೂಗೋವಿಗೆ ದಕ್ಷಿಣದಲ್ಲಿ ೬೦೦ ಮೈಲಿ ದೂರದಲ್ಲಿ ಗ್ರಹಾಮ್ಸ್‌ಲ್ಯಾಂಡ್ ಎಂಬ ಪ್ರದೇಶವಿದೆ. ಇದು ಸಿಕ್ಕಿ ಬಹುಕಾಲವಾಯಿತು; ಆದರೆ ೧೮೯೮ರಲ್ಲಿ ಒಬ್ಬ ಬೆಲ್ಜಿಯನನು ಇದರ ಪಶ್ಚಿಮತೀರವನ್ನು ಶೋಧಿಸಿ ಪರೀಕ್ಷಿಸಿದನು. ಇದಕ್ಕೆ ಈಶಾನ್ಯದಲ್ಲಿ ದಕ್ಷಿಣ ಷೆಟ್ಲೆಂಡ್,

ದಕ್ಷಿಣ ಜಾರ್ಜಿಯ‌ರ್ವ ದ್ವೀಪಗಳಿವೆ. ಇವೂ ನಿರ್ಮಾನುಷ್ಯಗಳು. ಎಂಡರ್‌ಬಿಲ್ಯಾಂಡ್ ಎಂಬುದು ಮೊಡಗಾಸ್ಕರಿಗೆ ದಕ್ಷಿಣದಲ್ಲಿಯೂ ದಕ್ಷಿಣ ಧ್ರುವವೃತ್ತದಮೇಲೆಯೂ ಇದೆ.

ವಿಕ್ಟೋರಿಯಾಲ್ಯಾಂಡಿನ ಉತ್ತರದಕೊನೆಯು ದ. ಅ. ೭೧ರ ಬಳಿ ಇದೆ. ಅದರ ತೀರವು ಅಲ್ಲಿಂದ ಹಿಡಿದು ದಕ್ಷಿಣಕ್ಕೆ ದ. ಅ. ೭೮ರ ವರೆಗೆ ಇದೆ. ಅಲ್ಲಿಂದ ಅದು ಪೂರ್ವಕ್ಕೆ ತಿರುಗುತ್ತದೆ. ಈ ಪೂರ್ವ ತೀರವನ್ನು ಕ್ಯಾಪ್ಟನ್ ಸ್ಕಾಟ್ ಎಂಬಾತನು ೪೫೦ ಮೈಲಿಗಳ ವರೆಗೆ ಪರೀಕ್ಷಿಸಿ ಅದಕ್ಕೆ ಏಳನೆಯ ಎಡ್ವರ್ಡ್‌ರಾಜನ ಭೂಮಿ ಎಂದು ಹೆಸರಿಟ್ಟನು. ಎರಡು ತೀರಗಳೂ ಸೇರುವ ಮೂಲೆಯಲ್ಲಿ ಎರಿಬಸ್, ಟೆರರ್ ಪರ್ವತಗಳಿವೆ. ಭೂಪ್ರದೇಶದೊಳಗೆ ದ. ಅ. ೮೩ರ ಬಳಿ ೧೫,೦೦೦ ಅಡಿ ಎತ್ತರವಾದ ಒಂದು ಪರ್ವತಶ್ರೇಣಿ ಕಾಣಬಂದಿತು.

Some Difficult Words with their English Equivalents.

ಕ್ಲಿಷ್ಟಪದಗಳ ಪಟ್ಟಿ.

ಅಗ್ನಿಪಕ್ಷಿ Ostrich 61, 75
ಅಚ್ಛ್ಯಾರ್ಶಿಷ್ಟರು Saints 52
ಅನಾದಿವಾಸಿಗಳು Aborigines 62
ಆರ್ಟೀಷಿಯನ್ ಬಾವಿಗಳು Artesian Wells. ಇವು ಅನುಕೂಲವಾಗಿರುವ ಸ್ಥಳಗಳಲ್ಲಿ ನೆಲದಲ್ಲಿ ಕೊರೆದ ರಂಧ್ರಗಳಾಗಿವೆ; ಇವುಗಳಿಂದ ನೀರು ತನ್ನಷ್ಟಕ್ಕೆ ತಾನೆ ಮೇಲಕ್ಕೆ ಉಕ್ಕಿ ಬರುವುದು; ಇಂತಿರುವ ಬಾವಿ ಪುದುಚೇರಿಯಲ್ಲೊಂದಿದೆ 69
ಆಲ್ಫ Alfa 69, 70
ಕತ್ತಾಳೆಗಳು Aloes 61
ಕನ್ಸರ್ವೆಟಿವ ಪಕ್ಷ The Conservative Party 15
ಕಳ್ಳಿಗಳು Euphorbias 61
ಕಾಂಗರು Kangaroo 130
ಕಾರವಾನು Caravan 70
ಕಾರ್ನೌಬ Carnauba Palm 121
ಕಿರಮಂಜಿಯುಹುಳು Cochineal 107
ಕೋಕೋಗಿಡ Cacao plant 118
ಕ್ಷೀರಸ್ಫಟಿಕ Opal 34
ಗರ್ತುರುಪ್ಪು Artillery 17
ಗಿಣ್ಣು Cheese 33
ಗೀಸರ (ಗೈಸರ) Geyser ಉಷ್ಣೋದಕದ ಊಟೆ 40, 105
ಗ್ವೇನೊ Guano ಪಕ್ಷಿ ಹಿಕ್ಕೆ ಗೊಬ್ಬರ 125
ಖರ್ಜೂರ Date palm 61
ಚಿತ್ರಾಕ್ಷರ Hieroglyphics 66
ಚೀಲವುಳ್ಳಪ್ರಾಣಿ } ಸಕೋಶಪ್ರಾಣಿ } Marsupial 130
ಜಾರುಬಂಡಿ Sledges ... 46
ಟೆರಿಟೊರಿ Territory 101
ಡೈಕುಗಳು Dykes ಏರಿಗಳು 30
ದಂತ (ಗಜದಂತ) Ivory 71
ದನದ ಮಾಂಸದ ಸಾರ Extract of Beef 122
ದೀಪದ ಮನೆ Light house 17
ದ್ವೀಪದ ಹತ್ತಿ Island Cotton 104
ನಿತ್ಯವರ್ಷವಲಯ The Zone of Constant Precipitation 114
ನಿಯಮಿತ ರಾಜ್ಯಭಾರಕ್ರಮ Constitution 15
ನಿರಂತರಾಗ್ನೇಯಮಾರುತ South East Trade winds 114
ನಿರಂತರೈಶಾನ್ಯಮಾರುತಗಳು North East Trade winds 114

ನೀಗಸ್ Negus (ರಾಜಾಧಿರಾಜ) 68
ನೀರ್ಗಲ್ಲಿನ ಗುಡ್ಡ Iceberg 84
ನೀರ್ಗುದುರೆ Hippopotamus 61
ಪಾಂಪಾಸ್ Pampas 116, 123
ಪಿರಮಿಡ್ಡುಗಳು Pyramids ತ್ರಿಕೋಣಮುಖ ಶಿಖರಗಳು 65
ಪ್ಲಾಟಿಪಸ್ Platypus or Ornithorhynchus 130
ಪ್ರೈರಿ Prairie 86
ಬುಡ ಬುಡಿಕೆಯ ಹಾವು Rattle-snake 90
ಬೇಯೋಬಾಬ್ Baobab 61
ಬೋಡುವಾಯಿನ ಪ್ರಾಣಿಗಳು Edendata ನಿರ್ದಂತಿಗಳು 118
ಮಾನವ ಮಾಂಸಾಹಾರಿಗಳು Cannibals ನರಭಕ್ಷಕರು 135
ಯವಕ್ಷಾರ Nitre 124
ಯೂಕಲಿಪ್ಟಸ್ Eucalyptus 130
ರಾಳ Pitch 111
ಲಿಬರಲ್ ಪಕ್ಷ The Liberal Party 15
ಲ್ಯಾನೋಸ್ Llanos 116
ವಾಡಿಗಳು Wadies ಮಳೆಗಾಲದ ಹೊಳೆಗಳು 68
ವಾಣಿಜ್ಯಮಾರುತಗಳು Trade winds 114
ಶಿಲಾರಸ Lava 137
ಸಂಯುಕ್ತದೇಶ Federal Republic 33
ಸತು Zinc 37
ಸಭಾಧ್ಯಕ್ಷ President 101
ಸವನ್ನ Savannah 86
ಸಸ್ಪೆನ್ಷನ್ ಬ್ರಿಡ್ಜ್ Suspension Bridge ತೂಗು ಸೇತು 36
ಸಾಮಂತರ ಸಭೆ House of Lords 15
ಸಿರಾಕೊ Sirocco 50
ಸೆಲ್ವಾಸ್ Selvas 116
ಸುರಂಗದ ಮಾರ್ಗ Tunnel 16
ಸೈಕ್ಲೋನ್ Cyclone 110
ಸೈಮೂಂ Simoom 57
ಸೋಲೇನೊ Solano 53
ಶ್ವೇತದಾರು White Pine 99
ಸ಼ಾರ್ Czar 46
ಸ಼ೆಟ್ಸಿ Tsetse 62

ಅನುಕ್ರಮಣಿಕೆ.

ಅಂಕೋನ 52
ಅಂಗೋಲ 63, 73
ಅಂಟಾರ್ಕ್ಟಿಕ 138
ಅಂತನನಾರಿವೊ 80
ಅಕಾಂಕಾಗುವ 113
ಅಗೂಲ್ಯಾಸ್ 56
ಅಟಕಾಮ 115, 124
ಅಟ್ಟಾವ 96
ಅಟ್ಲಾಂಟ 104
ಅಟ್ಲಾಂಟಿಕ್ ಸಾ. 1
ಅಟ್ಲಾಸ್ 56 ; ದೊಡ್ಡ— 68, ಸಣ್ಣ—68
ಅಡೀಜ್ 50
ಅಡೆಲೇಡ್ 133
ಅಡೋವಾ 68
ಅತಬಾಸ್ಕ 86, 88
ಅತ್ಬಾರ 59
ಅನ್ನಬನ್ 80
ಅಪೂಲಿಯ 50
ಅಪ್ಪರ್ನಾವಿಕ್ 92
ಅಪ್ಸಾಲ 43
ಅಬರ್ಡೀನ್ 21
ಅಬಿಸೀನಿಯ 67
ಅಬ್ಬಿಯೊಕೂಟ 73
ಅಮರಾಂಟ ದ್ವೀ. 80
ಅಮಸಾನ್ 113, 117
ಅಮೊಡಿಯಸ್ 129
ಅಯಾಜೆಕ್ಕೊ 28
ಅಯೋನಿಯನ್ 3, 49
ಅಯೋವ 104
ಅರಿಕ್ವಿಪ 125
ಅರಿಸೋನ 105
ಅಲ್ಸ್ಟರ್ 23
ಅಲಬಾಮ 104
ಅಲಾಸ್ಕ 83, 84, 86, 106
ಅಲಿಸ್ವ್ಯಾಟರ್ 12
ಅಲೆಗ್ಸಾಂಡ್ರಿಯ 65
ಅಲೆಗ್ಸಾಂಡ್ರಿನ 129
ಅಸೆನ್ಷನ್ 56, 80, 122
ಅಸೆನ್ಷಿಯನ್ 122
ಅಸ್ಸಾಬ್ 64, 79
ಅಸ್ಸಾವನ್ 59, 66
ಅಸ್ಸಿನಿಬೋಯಿಯ 94
ಅಸ್ಸೀನಿ 63
ಅಸೋರ್ಸ್ 54, 80
ಅಸ್ಟೆಕ್ 107
ಆಂಗ್ಲೋ ಈಜಿಪ್ಷ್ಯ ಸೌಡಾನ್ 66
ಆಂಗ್ಲಿಸಿ 12, 28
ಆಂಟೇರಿಯೊ 87, 93
ಆಂಟಿಕಾಸ್ಟಿ 85
ಆಂಟಿಗ್ವ 111
ಆಂಟಿಸೇನ 113, 125
ಆಂಟ್ವರ್ಪ್ 29
ಆಂಡಲೂಷಿಯ 6
ಆಂಡೀಸ್ 113
ಆಂಸ್ಟರ್ಡಾಂ 31
ಆಕ್ಸ್ಫರ್ಡ್ 18
ಆಕ್ಲೆಂಡ್ 134
ಆಥೆನ್ಸ್ 50
ಆಪಲೇಶಿಯನ್ ಪ. 85
ಆಪೆನ್ನೈನ್ 4, 50
ಆರ್ 7
ಆರ್ಟ್ಸ್ನಗಬೀರ್ಗ್ 36
ಆರ್ಫ್ಯೂರಾ ಸ. 127
ಆರನ್ 19
ಆರಲ್ಬರ್ಗ್ 5
ಆರಿಗಾನ್ 106
ಆರೆಂಜ್ ನ. 60, 75
ಆರೆಂಜ್ ಫ್ರೀಸ್ಟೇಟ್ 77
ಆರ್ಕನ್ಸಾಸ್ 87, 104
ಆರ್ಕ್ನಿ 19
ಆರ್ಕೇಂಜಲ್ 47
ಆರ್ಜೆಂಟೈನ 123
ಆರ್ಟಿಗಲ್ 2
ಆಲನ್ 22
ಆಲಿಘನಿ 85

ಆಲೆಂಡ್ 44
ಆಲ್ಗೋವ 55
ಆಲ್ಜಿಯರ್ಸ್ 69
ಆಲ್ಜೀರಿಯಾ 69
ಆಲ್ಪ್ಸ್ ಪ. 4, 6, 26
ಆಲ್ಬರ್ಟ್ 95
ಆಲ್ಬರ್ಟ್‌ನ್ಯಾನ್ಸ 58
ಆಲ್ಸೇಸ್‌ಲೊರೇನ್ 39
ಆಷಾಂಟಿ 71, 73
ಆಸ್ಟ್ರಖಾನ್ 47
ಆಷ್ಟ್ರಲೇಷ್ಯ 126
ಆಸ್ಟ್ರಿಯಾ 34
ಆಸ್ಟ್ರೇಲಿಯ 126, 137
ಆಸ್ಟ್ರೇಲಿಯನ್ ಕೊಲ್ಲಿ 128
ಆ ಸ್ಟ್ರೇಲಿಯನ್ ಆಲ್ಸ್ 128
ಆಫ್ರಿಕಾ 55
ಇಂಕಾಜನರು 125
ಇಂಗ್ಲಿಷ್ ಕಡಲ್ಗಾಲುವೆ 3
ಇಂಗ್ಲೆಂಡ್ 11
ಇಂಡಿಯಾನ 104, 105
ಇಕ್ವೇಡರ್ 125
ಇಜೇನ 49
ಇಟಲಿ 50
ಇಡೇಹೊ 105, 106
ಇಡ್ರಿಯ 35
ಇನ್ 6
ಇಮಿಲಿಯ 51
ಇರ್ವೆಲ್ 16
ಇಲಿನಾಯ್ಸ 104, 105
ಇಲ್ಲಿರಿಯನ್‌ಗವಿ 34
ಇವೀಸ 53
ಈಜಿಪ್ಟ್ 64
ಈಜಿಯನ್ ಸ. 3, 49
ಈಟನ್ 18
ಈಥಿಯೋಪಿಯ 67
ಈಬ್ರೋ ನ. 6, 52
ಈರಿ 87, (ಕಾಲ್ವೆ) 88, 100
ಈಸೆಲ್ 44
ಈಸ್ಟ್‌ಲಂಡನ್ 76
ಈಫ-ಟವರ್ 27
ಈಷರ್ 6, 38
ಉಗಾಂಡ 79
ಉತ್ತರಕಾರೊಲೀನ 103
ಉತ್ತರ ಟೆರಿಟೊರಿ 133
ಉತ್ತರಡ್ವೈನ 6, 44
ಉತ್ತರದ್ವೀಪ 134
ಉತ್ತರ ಭೂಶಿರ 2
ಉತ್ತರ ಫ್ರೋರ್ಲೆಂಡ್ 12
ಉತ್ತರಸಾಗರ 1
ಉನ್ಟ್ಯಾಲಿ 78
ಉರುಗ್ವೆ 117, 121
ಉಲೆಗ್ಗ 56
ಊಸ್ 12
ಎಕ್ಸ್ 12
ಎಟ್ನ 5
ಎಡಿನ್ಬರ್ಗ್ 21
ಎಂಡರ್ಬಿಲಾಂಡ್ 139
ಎಡಿಸ್ಟೋನ್ 17
ಎಡ್ರಿಯಾಟಿಕ್ ಸ. 3, 52
ಎಸ್ಸಿನಡ 123
ಎಲ್ಬೆ 6, 37
ಎಲ್ಬ 50
ಎಲ್ಮೀನ 73
ಎಲ್ಲೋಸ್ಟೋನ್ ನಾಷನಲ್ ಪಾರ್ಕ್ 105
ಎಸಿಕೀಬೊ 120
ಎಸ್ಕಿಮೋ ಜನರು 92
ಎಡನ್ ಸ. ಶಾ. 55
ಎಡ್ರಿಯಾನೋಪಲ್ 48
ಏವನ್ 12
ಏಸಾವ್ ಸ. 2
ಐರಿಷ್ ಸ. 11
ಐರ್ 129
ಐರ್ಲೆಂಡ್ 24
ಐವರಿಕೋಸ್ಟ್ 73
ಐಸ್ಲೆಂಡ್ 4, 40
ಒಗೋವೆ 60, 73
ಒಟ್ರಾಂಟೊ 3
ಒಡೆಸ್ಸ 46
ಒನೀಗ 7, 45
ಒಪೋರ್ಟೊ 54
ಒಬಾಕ್ 63
ಓಡರ್ 6, 37
ಓಡೆನ್ಸಿ 40
ಓರಾನ್ 69
ಓರನೋಕೊ 116
ಓಲ್ಡನ್ಬರ್ಗ್ 38
ಓಲ್ಡಾಂ 17
ಓವರ್ನ್ 26
ಓಷಿಯೇನಿಯ 126
ಓಹಾಹು 137
ಓಹಿಯೋ 87, 105
ಕಂಟೇಬ್ರಿಯನ್ 52
ಕಂಬ್ರಿಯನ್ ಬೆ. 12
ಕನೆಕ್ಟಿಕಟ್ 103

ಕನ್ನಾಟ್ 23
ಕಪ್ಪು ಸ 1, 2
ಕಬ್ಬಿಣದ ಬೆ. 99
ಕಲಹರಿ 58, 75
ಕಲ್ಲೀವೊ 125
ಕಸ್ಕೊ 113, 125
ಕಾಂಗ್ ಪ. 56
ಕಾಂಗೋನದಿ 58 ಪ. 74
ಕಾಂಗೋಫ್ರೀಸ್ಟೇಟ್ 73
ಕಾಂಡಿಯಾ ದ್ವೀ. 4, 48
ಕಾಂಪೀಚಿ 85, 108
ಕಾಂಬ್ರಿಯನ್ ಬೆ. 12
ಕಾಕಸಸ್ ಪ. 1
ಕಾಕ್ಬರ್ನ್ ದ್ವೀ. 84
ಕಾಡ್ 84, 97
ಕಾನೆಂ 72
ಕಾನ್ಸ್ಟಾಂಟಿನೋಪಲ್ 48
ಕಾನ್ಸ್ಟೆಂಟೈನ್ 69
ಕಾನ್ಸ್ಟನ್ಸ್ 7, 32
ಕಾನ್ಸಾಸ್ 104, 105
ಕಾಪರ್ಮೈನ್ ನ. 87
ಕಾಪ್ಟರು 62
ಕಾಮರೂನ್ ಪ. 56 ತೀರ 73
ಕಾರಲ್ಟನ್ 95
ಕಾರಲ್ಸ್ರೂ 39
ಕಾರಸ್ನೋಕ್ರ್ ನ. 43
ಕಾರಾಕಾಸ್ 120
ಕಾರಾನದಿ 44
ಕಾರಿಂತ್ 3, 49
ಕಾರಿಬಿಯನ್ ಸ. 83
ಕಾರೋಲೈನ್ ದ್ವೀ. 136
ಕಾರ್ಕ್ 23
ಕಾರ್ಡಿಗನ್ ಕೊ. 12
ಕಾರ್ಡಿಲೆರಾ ಪ. 85
ಕಾರ್ಡಿಫ್ 16
ಕಾರ್ಡೋಫ್ಯಾನ್ 67
ಕಾರ್ಡೋವ 123
ಕಾರ್ತಜೀನ 53
ಕಾರ್ಥೇಜ್ 70
ಕಾರ್ಪೆಂಟೇರಿಯ ಸ. ಶಾ. 127
ಕಾರ್ಪೇತಿಯನ್ ಪ. 5
ಕಾರ್ರು 75
ಕಾರ್ಸಿಕಾ ದ್ವೀ. 4, 28
ಕಾಲಿಫೋರ್ನಿಯ 83, 84, 97, 107
ಕಾಲ್ಗರಿ 95
ಕಾಸಿಕ್ವಿಯೇರ್ 115
ಕಾಸ್ಕೇಡ್ ಪ. 86, 98
ಕಾಸ್ಪಿಯನ್ ಸ. 2
ಕಾಫರ್ಜನ 75
ಕಾಫಿರ್ನಾಡು 63
ಕಾಸ್ಟರ್ 46
ಕಿಂಗ್ಸ್ಟನ್ 23, 111
ಕಿಂಬರ್ಲಿ 76, 133
ಕಿಡ್ಡರ್ ಮಿನಿಸ್ಟರ್ 17
ಕಿಲಾರ್ನಿ 22
ಕಿಲಿಮಾಂಜೇರೊ 79
ಕಿಲೌಯ 137
ಕೀವಾರ್ಟಿನ್ 95
ಕುಕಿ:ಬರ 134
ಕುಮಾಸಿ 73
ಕೆಂಟಕಿ 104, 105
ಕೆಂನಿಟುಪ್ಸ 39
ಕೆಂಪುನದಿ 87
ಕೆಂಪು ಸ. 55
ಕೆಂಪುಹೊಳೆ 93
ಕೆನಡಾ ಡುಮಿನಿಯನ್ 93
ಕೆನಿಯ 57
ಕೆನೇರಿ ದ್ವೀ. 56, 80
ಕೆಯೆನ್ 120
ಕೆಲೇಬ್ರಿಯ 50
ಕೆಲ್ಟಿಕ್ ವಂಶ 8
ಕೆಳಗಣ ಕಾಲಿಫೋರ್ನಿಯ 84, 107
ಕೆಳಗಣ ಗಿನಿ 73
ಕೇಂಬ್ರಿಜ್ 17
ಕೇಡಿಸ್ 53
ಕೇಪ್ ಕಾಲೊನಿ 63, 76
ಕೇಪ್‌ಕೋಸ್ಟ್‌ಕ್ಯಾಸಲ್ 73
ಕೇಪ್ ಟೌನ್ 76
ಕೇಪ್ ಬ್ರಿಟನ್ 95
ಕೇಪ್‌ವರ್ಡ್ 54, 80
ಕೇಬ್ಸ್ ಸ. ಶಾ. 55
ಕೈರೊ 65
ಕೈರ್ವಾನ್ 70
ಕೊಟೊಪಾಕ್ಸಿ 113, 125
ಕೊಮೋರೋ ದ್ವೀ. 80
ಕೊಯರ್ನ್ ಸ. 60
ಕೊಯಿಂಬ್ರ 54
ಕೊರನ್ನ 53
ಕೊಲಂಬಿಯ 87, 104, 119
ಕೊಲೊರೇಡೊ 87, 98, 105, 123
ಕೊಲೋನ್ 38, 120

ಕೋನಿಗ್ಸ್‌ಬರ್ಗ 38
ಕೋಪನ್ ಹೇಗನ್ 40
ಕೋಸ್ಟರೀಕ 108
ಕೋಸ್ಟಲೆಂಡ್ 35
ಕ್ಯಾಟಿಗಾಟ್ 3, 41
ಕ್ಯಾರಂಟುಅಲ್ 22
ಕ್ಯಾಲಿಡೋನಿಯನ್ ಕಾಲ್ವೆ 19
ಕ್ಯಾಸ್ಟಿಲಿಯನ್ 52
ಕ್ಯಾರಕಾವೊ 111
ಕ್ಯೂಟ 69
ಕ್ಯೂಬ 109, 110
ಕಾರ್ಲ್‌ಸ್ಟ್ಯಾಡ್ 47
ಕ್ರಿಮಿಯ 2
ಕ್ರಿಸ್ಟಿಯಾನ 42
ಕ್ರೆಮ್ನಿಟ್ಸ 36
ಕ್ರೈಸ್ಟ್‌ಚರ್ಚ್ 134
ಕ್ರೋಏಷಿಯ 35
ಕ್ಲೈಡ್ 19
ಕ್ವಿಟೊ 126
ಕ್ವಿಬೆಕ 95
ಕ್ವೀನ್‌ಚಾರ್ಲೆಟ್ ದ್ವೀ. 85
ಕ್ವೀನ್ಸ್‌ಟನ್ 23
ಕ್ವೀನ್ಸ್‌ಲೆಂಡ್ 131, 132
ಕೇಪ್ವರ್ಡ 59
ಖಾರ್ಟೂಂ 67
ಖೀವ 65
ಗಯೇನ 114, 120
ಗಲ್ಫ್‌ಸ್ಟ್ರೀಂ 7, 84
ಗಲಾಟ್ಸ್ 48
ಗಾಂಡೊ 71
ಗಾಂಬಿಯ 60, 63
ಗಾತನ್‌ಬರ್ಗ 43
ಗಾಯಾಕ್ವಿಲ್ 112, 126
ಗಾರ್ಡನ್ 7
ಗಾರ್ಡರ್‌ಫ್ವಿ 56
ಗಾಲಪೇಗಾಸ್ 112, 126
ಗಾಲ್ವೆಕೊಲ್ಲಿ 21
ಗಿನಿ ಸ. ಖಾ. 55 ದೇ. 73
ಗೀಲಾಂಗ್ 132
ಗುಡಿನಾ 40
ಗುಡ್‌ಹೋಪ್ 56
ಗೆಬೂನ್ 73
ಗೆರೋನ್ 6, 26
ಗೆಲೇಷಿಯ 35
ಗೈರ್ಡ್‌ನರ್ 129
ಗೊಂಡಾರ್ 68
ಗೋಟ 42
ಗೋತಾರ್ಡ್ 32
ಗೋಲ್ಡ್ ಕೋಸ್ಟ್ 73
ಗೋರೆ 73
ಗೋವೆ 54
ಗ್ಯಾಲ್ಲಿನಾಸ್ 113
ಗ್ಯಾಲೊವೆ 19
ಗ್ರಹಾಮ್ಸ್‌ಲಾಂಡ್ 138
ಗ್ರ್ಯಾಂಪಿಯನ್ ಬೆ. 19
ಗ್ರಾಟ್ಸ್ 35
ಗ್ರೀಕ್‌ಚರ್ಚ್ 9, 45
ಗ್ರೀಕೊಬಾಟನ್ ವಂಶ 8
ಗ್ರೀಕ್ವಾಲೆಂಡ್ 63
ಗ್ರೀನ್‌ಲೆಂಡ್ 85, 91, 137
ಗ್ರೀನಾಕ 21
ಗ್ರೀನಿಚ್ 17
ಗ್ರೀಸ್ 48
ಗ್ರೆನಡ 53
ಗ್ರೇಟ್‌ಗೇಷರ್ 105
ಗ್ರೇಟ್‌ಬ್ಯಾರಿಯರ್ ರೀಫ್ 128
ಗ್ರೇಟ್‌ಬೆಲ್ಟ್ 3
ಗ್ರೇಟ್‌ಬೇರ್ 88
ಗ್ರೇಟ್‌ಬ್ರಿಟನ್ 110, 125
ಗ್ರೇಟ್‌ಸ್ಯಾಂಡೀ ದ್ವೀ. 128 (ಮ) 129
ಗ್ರೇಟ್‌ಸಾಲ್ಟ್ 88, 98
ಗ್ರೇಟ್‌ಸ್ಲೇವ್ 88
ಗ್ರೇಟ್‌ಫಿಷ್ ನ. 87
ಗ್ಲಾಸ್ಗೊ 21
ಗ್ಲೋಮನ್ 41
ಗ್ವಾಟಿಮಾಲ 108, 109
ಗ್ವಾಡಲ್‌ಕ್ವಿವರ್ 6, 53
ಗ್ವಾಡಲಹರ 108
ಗ್ವಾಡಲೂಪ್ 111
ಗ್ವಾಡಿಯಾನ 6, 52
ಗ್ವಾನಜ್ವೇಟೊ 108
ಘೆಂಟ್ 29
ಚೆಂಬೇಸಿ 59
ಚರ್ಚಿಲ್ 95
ಚಾಡ್ 58
ಚಾಥಾಂ 17
ಚಾನಲ್ ದ್ವೀ. 12
ಚಾರ್ಲಟ್‌ಟೌನ್ 95
ಚಾರ್ಲ್ಸ್‌ಟನ್ 102, 104
ಚಿಂಬೊರೇಸೊ 113, 125
ಚಿಕಾಗೋ 102, 105
ಚಿಕ್ಕ ಆಂಟೀಲ್ 109, 110

ಚಿಕ್ಕ ರಷ್ಯ 46
ಚಿಲಿ 124
ಚಿವಿಯಟ್ ಬೆ. 19
ಚಿಸಪೀಕ್ ಕೊ 92
ಚೆಲ್ಟನ್‍ಹಾಂ 18
ಜಮೈಕ 110, 111
ಜಯಂಟ್ಸ್ ಕಾಸ್ವೆ 21
ಜರ್ಮನ್ ಸ. 3
ಜರ್ಮನ್ ಚಕ್ರಾಧಿಪತ್ಯ 36
ಜರ್ಮನ್. ಈಸ್ಟ್ ಆಫ್ರಿಕ 78
ಜರ್ಮಾನಿಕ್ ವಂಶ 8
ಜರ್ಸಿ 102
ಜಾರ್ಜ್ ಟೌನ್ 120
ಜಾರ್ಜಿಯ 104, 139
ಜಿನೀವ 7, 33
ಜಿನೋವ 3, 52
ಜಿಬ್ರಾಲ್ಟರ್ 3, 53
ಜಿಲ್ಬರ್ಟ್ ದ್ವೀ. 136
ಜುಟ್ಲೆಂಡ್ 2, 39
ಜೂಬ 79
ಜೂರ ಬೆ. 26, 32
ಜೇಮ್ಸ್ ನ. 98
ಜೊಲೀಬ 59
ಟವಟೇಪ್ 80
ಟಸ್ಕನಿ 51
ಟಾಂಜಿಯರ್ 69
ಟಾರಂಟೊ 50, 96
ಟಾರಸ್ ಜ ಸಂ. 128
ಟಾರೆಂಟೊ ಸ. ಶಾ. 3
ಟಾರೆನ್ಸ್ 129
ಟಾಸ್ಮೇನಿಯ 42
ಟಾಹಿಟಿ 136
ಟಿಂಬಕ್ಟು 70, 71, 72
ಟಿಟಿಕಾಕ 117, 123
ಟಿಯೋಜ್ 60
ಟಿರಹೀನ್ 3
ಟುಲೂನ್ 27
ಟೂಲ 46
ಟೆಕ್ಸಾಸ್ 103, 104, 107
ಟೆನಿಸ್ಸಿ 104
ಟೆಮ್ಸ್ 6, 12
ಟೆರಾಡೆಲ್‍ಫ್ಯೂಗೊ 113 138
ಟೆಲ್ 68
ಟೆಹ್ವಾಂಟೆ ಪೆಕ್ 85
ಟೇಗಸ್ 6, 52, 54
ಟೇಬಲ್ ಕೊ, 55
ಟೇ ಸ. ಶಾ. 19, (ನ) 19
ಟೈನ್ 12
ಟೈಬರ್ 50
ಟೈರೋಲ್ 35
ಟೈಸ್ 6
ಟೊಂಗ 136
ಟೊಲಾನ್ 28
ಟೊಲೀಡೊ 52
ಟೋಕೆ 35
ಟೌನ್ಸೆಂಡ್ 128
ಟ್ಯೂಟಾನಿಕ್ 20
ಟ್ಯೂನಿಸ್ 63, 70
ಟ್ಯೂರಿನ್ 52
ಟ್ರುಕ್ಸಿಲ್ಲೊ 109
ಟ್ರಾನ್ಸ್ವಾಲ್ 63, 75
ಟ್ರಾನ್ಸಿಲ್ವೇನಿಯ 35
ಟ್ರಿನಿಡಾಡ್ 111
ಟ್ರಿಪಾಲಿಟೇನ 64
ಟ್ರಿಪೋಲಿ 70
ಟ್ರಿಯುಸ್ಟ್ 35
ಟ್ರೆಂಟ್ 12
ಟ್ವೀಡ್ 19
ಡಂಡಿ 21
ಡಚ್‍ಗಯೇನ 120
ಡಚ್ಚರು 31
ಡಡ್ಲಿ 17
ಡನೆಟ್ 19
ಡನ್ವೇಗನ್ 95
ಡಬ್ಲಿನ್ 23
ಡರಹಾಂ 17
ಡರ್ಗ 22
ಡರ್ಬ್ಯಾಂಗ್ 77
ಡರ್ವೆಂಟ್ ನ. 133
ಡಾಂಟ್ಸಿಗ್ 38
ಡಾರ್ಬಿ 17
ಡಾನ್ 6, 44
ಡಾನಿಗಲ್ ಕೊ. 21
ಡಾನ್ಯೂಬ್ 6
ಡಾಮಿಯಟ್ಟ 66
ಡಾರಸ್ ಸಲಾಂ 78
ಡಾರ್ಫೂರ್ 66
ಡಾರ್ಡನಲ್ಸ್ 3
ಡಾರ್ಲಿಂಗ್ 129
ಡಾಲರ್ಟ್ 30
ಡಾಲ್ಮೇಷಿಯ 35
ಡಿಂಗಲ್ ಕೊ. 21
ಡೀ 19
ಡೂನ 44

ಡೆಂಬಿಯ 58
ಡೆಟ್ರಾಯಿಟ್ 87, 105
ಡೆನ್ಮಾರ್ಕ್ 39, 110, 111
ಡೆಮರಾರ 120
ಡೆಲಗೋವ 55
ಡೇಗೋ 44
ಡೇನರು 40
ಡೇರಿಯನ್ ಸ. ಕಾ. 112
ಡೇವಿಸ್ ಜ. ಸಂ. 84, 85
ಡೊಮಿನಿಕೇರಿ 110
ಡೋವರ್ ಜ. ಸಂ. 3, 25
(ಪಟ್ಟಣ) 16
ಡೌರೊ 6, 52, 54
ಡ್ರ್ಯೂರ್ಡಿನ್ 134
ಡ್ರೆಸ್ಡನ್ 39
ಡ್ರೇಕನ್ಬರ್ಗ್ 75, 56
ಡ್ರೇವ್ 6
ತರೀಫ 2
ತಾಂಗನೀಕ 58
ತಾಮ್ರವರ್ಣದವರರಾಷ್ಟ್ರ 103, 104
ತಾಸ್ಮೇನಿಯ 133
ತಿಂಸ 65
ತೊಂಗಟಾಂಬು 136
ಥಸಲಿ 49
ದಕೋಟ ಟೆರಿಟೋರಿ 104
ದಕ್ಷಿಣ ಆಸ್ಟ್ರೇಲಿಯ 133
ದಕ್ಷಿಣಆಫ್ರಿಕ 73, 118
ದಕ್ಷಿಣ ಕಾರೊಲೀನ 103
ದಕ್ಷಿಣ ದ್ವೀ. 134
ದಕ್ಷಿಣ ಷೆಟ್ಲಂಡ್ 139
ದಕ್ಷಿಣ ರಷ್ಯ 46
ದಕ್ಷಿಣ ಜಾರ್ಜಿಯನ್ 139
ದಕ್ಷಿಣ ಫೋರ್ಲಂಡ್ 12
ದಾಹೊಮಿ 73
ಡಿಲಾವೇರ್ 103, 97, 98
ಡಿಹೇಗ್ 31
ಡುಸಲ್ಡಾರ್ಫ್ 38
ದೊಡ್ಡಆಂಟೀಲ್ 109, 110
ಧ್ರುವಪ್ರದೇಶಗಳು 137
ನರ್ 56
ನಯಾಗರ 87
ನಾಂಟ್ಸ್ 27
ನಾಟಿಂಘಾಂ 17
ನಾಮಿ 58
ನಾರಿಚ್ 17
ನಾರ್ಡ್ಕಿನ್ 2
ನಾರ್ಥಾಂಪ್ಟನ್ 17
ನಾರ್ವೀಜಿಯನ್ ಜನರು 42
ನಾರ್ವೆ 41
ನಾಸ್ಸೌ 111
ನಿಕರಾಗ್ವ 108, 109
ನಿಕೊಲೇವ 47
ನಿಜ್ನಿನೌಗರಾಡ್ 46
ನಿಬ್ರಸ್ಕ 104
ನಿಯೋಪಾಲಿಟನ್
ಪ್ರಾಂತ 51
ನಿವಾಡ 52, 86, 105
ನೀಗಸ್ 68
ನಿಗ್ರೋಜನ 63, 70, 71
ನೀಗ್ರೋದೇಶ 71
ನೀಪರ್ 6, 44
ನೀಮೆನ್ 37, 44
ನೀಲ ಪ. 97
ನೀವ 7, 44
ನೀಸ್ಟರ್ 6, 44
ನೆಕ್ಕಾರ್ 7
ನೆಗ್ರೊಪಾಂಟ್ 49
ನೆಟಾಲ್ 76, 77
ನೆತೌ ಶಿ. 4
ನೆಲ್ಸನ್ 88
ನೆಸ್ 19, 20
ನೇ 22
ನೇಪಲ್ಸ್ 51
ನೇಸ್‘ 2
ನೈಜರ್ 58
ನೈಲ್ 59
ನೋವಸ್ಕೋಷಿಯ 84, 92, 93
ನೋವಜೆಂಬ್ಲ 4, 44
ನ್ಯಾಸ್ಸ 58
ನ್ಯಾರೋಸ್ 87
ನ್ಯೂ ಆರ್ಲಿಯನ್ಸ್ 103, 104
ನ್ಯೂ ಇಂಗ್ಲಂಡ್ ಸಂ. 103
ನ್ಯೂಕಾಲಿಡೋನಿಯ 136 135
ನ್ಯೂಕಾಸಲ್ 16, 132
ನ್ಯೂಗಿನಿ 135
ನ್ಯೂಜರ್ಸಿ 104
ನ್ಯೂಬಿಯ 67
ನ್ಯೂಪೊಮರೇನಿಯ 135
ನ್ಯೂಬ್ರನ್ಸ್ವಿಕ 93
ನ್ಯೂಮೆಕ್ಸಿಕೊ 105, 107

ನ್ಯೂಯಾರ್ಕ್ 102, 103
ನ್ಯೂರೆಂಬರ್ಗ್ 38
ನ್ಯೂವೆಸ್ಟ್ಮಿನ್ಸ್ಟರ್ 95
ನ್ಯೂಷಾಟೆಲ್ 32
ನ್ಯೂಸೋಲ್ 36
ನ್ಯೂಸಾತ್ವೇಲ್ಸ್ 130, 132
ನ್ಯೂಹಾಂಪ್'ಷೈರ್ 103
ನ್ಯೂಹೇಬ್ರಿಡೀಸ್ 136 135
ನ್ಯೂಫೆಲ್ (ನ್ಯೂವೆಲ್ಶ್) 75
ನ್ಯೂಫೌಂಡ್ಲೆಂಡ್ 85, 96
ನ್ಯೂಝೀಲೆಂಡ್ 134
ಪಂಚ ಮಹಾ ಸರೋವರಗಳು 87
ಪನಾಮ 82, 111, 119
ಪರಮಾರಿಬೊ 120
ಪರವೇಪ 114, 116
ಪರ್ತ್ 133
ಪರ್ನಾಂಬುಕೊ 120, 122
ಪಶ್ಚಿಮ ಆಫ್ರಿಕ 72
ಪಶ್ಚಿಮ ಆಸ್ಟ್ರೇಲಿಯ 133
ಪಶ್ಚಿಮ ಗ್ರೀಕ್ವಾನಾಡು 63
ಪಶ್ಚಿಮ ರಷ್ಯ 46
ಪಶ್ಚಿಮ ವರ್ಜೀನಿಯ 103
ಪಾಂಡೋನಾಡು 63
ಪಾಟಗೋನಿಯ 123
ಪಾಟ್ರಾಸ್ 50
ಪಾಪುವ 135
ಪಾಪುರ್ವ ಸಂ. 135
ಪಾರ್ಗ್ವೆ 117, 121
ಪಾರನ 117
ಪಾರಿನ 113
ಪಾರಿಯು 112
ಪಾರಿಸ್ 27
ಪಾಲಿನೀಷಿಯ 126, 135, 136
ಪಾಲ್ಮಸ್ 56
ಪಾಸ್ಕೋ 113, 125
ಪಿಂಡಸ್ 47
ಪಿರನೀಸ್ 4, 26, 52
ಪಿರಮಿಡ್ಡುಗಳು 65
ಪಿರಿಯಸ್ 50
ಪೀಟರಮೇಟ್ಸ್ಬರ್ಗ್ 77
ಪೂರ್ವರಷ್ಯ 46
ಪೆಂಟ್ಲೆಂಡ್ ಸ. ಖಾ. 19
ಪೆಂಬ 56, 79
ಪೆಚೋರ 6, 44
ಪೆನ್ನೈನ್ ಬೆ. 12
ಪೆನ್ಸಿಲ್ವೇನಿಯ 103, 104
ಪೆರಕಾಪ್ 2
ಪೆರಿಂ 56
ಪೆರು 119, 125
ಪೆಲರ್ಮೊ 52
ಪೇಪಲ್ ಸಂ. 61
ಪೇಸ್ಲಿ 21
ಪೈಡ್ಮಾಂಟ್ 50, 51
ಪೈಲಟ್ನಾಬ್ 99
ಪೊಟೋಸಿ 124
ಪೊಟೊಮಾಕ್ 98
ಪೋ 6, 50
ಪೋಪೋಕಾಟಿಪೆಟಲ್ 86
ಪೋರ್ಟ್ಎಲಿಜಬೆತ್ 76
ಪೋರ್ಟ್ಲುಯಿ 80
ಪೋರ್ಟ್ಸೆಡ್ 65
ಪೋರ್ಟುಗಲ್ 54
ಪೋರ್ಟ್ಸ್ಮತ್ 17, 102
ಪೋರ್ಟೋರೀಕೊ 110,
ಪೋಲೆಂಡ್ 46
ಪೌಮೋಟು 136
ಪ್ಯೂಬ್ಲ 108
ಪ್ರಷ್ಯ 38
ಪ್ರಾಟೆಸ್ಟೆಂಟ್ಮತ 9
ಪ್ರಾವಿಡೆನ್ಸ್ 103
ಪ್ರಿನ್ಸ್ಆಫ್'ವೇಲ್ಸ್ ಭೂಶಿರ 83 ದ್ವೀ. 84
ಪ್ರಿನ್ಸ್ಎಡ್ವರ್ಡ್ ದ್ವೀ. 84, 93
ಪ್ರಿನ್ಸ್ ದ್ವೀ. 56, 80
ಪ್ರಿಟೋರಿಯ 77
ಪ್ರೂಟ್ 6
ಪ್ರೆಸ್ಬಿಟೇರಿಯಾನಿ ಸಂ 20
ಪ್ರೆಷ್ಟನ್ 17
ಪ್ರೇಗ್ 35
ಪ್ಲಾಟೆನ್ಸಿ 34
ಪ್ಲಿಮತ್ 17
ಬಂಟುಜನ 62
ಬಗೋಟ 119
ಬಟೂಂ 47
ಬಯಾಫ್ರ 55
ಬರ್ಕನ್ಹೆಡ್ 17
ಬರ್ಗನ್ 42
ಬರ್ಡಿಕಿನ್ 129
ಬರ್ನ್ಹಾರ್ಡ್ 32
ಬರ್ನ್ 33
ಬರ್ಬರರ ಸಂ. 68
ಬರ್ಬಿಸ್ 120

ಬರ್ಬೇರಾ 79
ಬರ್ಮಿಂಘಾಂ 17
ಬರ್ಮ್ಯುಡಾ ದ್ವೀ. 85, 111
ಬರ್ಲಿನ್ 38
ಬಲ್ಲರಾಟ್ 132
ಬಲ್ಗೇರಿಯ 48
ಬವೇರಿಯ 38
ಬಸೂಟೋನಾಡೂ 63, 76
ಬಹಾಮಾ ದ್ವೀ. 109
ಬಾಂಗ್ವಿಯೋಲೊ 58
ಬಾಂಟ್ರಿ ಕೊ. 21
ಬಾತ್ 18
ಬಾತ್ನಿಯಾ ಸ. ಶಾ. 3, 41
ಬಾನ್ 56
ಬಾಯಿನ್ 22
ಬಾರನ್ಹೋಂ 39
ಬಾರೆಲ್ ಅಬಿಯಾದ್ 59
ಬಾರೆಲ್ ಅಸ್ರಾಕ್ 59
ಬಾರ್ಕ 70
ಬಾರ್ನ್ಯು 72
ಬಾರ್ಬರ್ಟನ್ 77
ಬಾರ್ಬೇಡೋಸ್ 111
ಬಾರ್ರೋ 22, 84
ಬಾರ್ಸಿಲೋನ 53
ಬಾಲ್ಕನ್ ಪ. 5, 47
ಬಾಲ್ಟಿಕ್ ಸ. 3
ಬಾಲ್ಟಿಮೋರ್ 102
ಬಾಲ್ಮೊರಲ್ 21
ಬಾಸ್ ಜ. ಸಂ. 128
ಬಾಸಲ್ 33
ಬಾಸ್ಟನ್ 102, 103
ಬಾಸ್ನಿಯ 36, 47
ಬಾಸ್ಪೊರಸ್ 3, 48
ಬಾಹಿಯ 112, 122
ಬಾಫಿನ್ ಕೊ. 83
ಬಿಟ್ಟರ ಸ. 65
ಬಿಸ್ಕೆ ಕೊಲ್ಲಿ 25
ಬಿಸ್ಮಾರ್ಕ್ ದ್ವೀ. ಸ್ತೋ. 135
ಬಿಳಿಯನೈಲ್ 59
ಬಿಳಿಯ ಸ. 3
ಬೀಚೀ ಹೆಡ್ 12
ಬುಕಾರೆಸ್ಟ್ 48
ಬುಕೊವೀನ 35
ಬುಲವೇಯೊ 78
ಬುಷ್ಮನ್ನುಗಳು 62
ಬೂತಿಯ 83
ಬೆಂಗ್ವೇಲ 63, 73
ಬೆಂಘಾಸಿ 71
ಂಬ 58
ಬೆಕ್ವಾನಾನಾಡು 63, 76
ಬೆನ್ನೆವಿಸ್ 19
ಬೆರ್ನ್ 55
ಬೆನ್ಯು 63
ಬೆಲ್ಗ್ರೇಡ್ 48
ಬೆಲ್ಜಿಯಂ 28
ಬೆಲ್ಫಸ್ಟ್ಲಾಕ್ 21, ಪ.23
ಬೆಲಿಸಿ 109
ಬೆಹೆರಿಂಗ್ ಜ. ಸಂ. 84
ಬೇಗಮಿರ್ಡ್ 72
ಬೇರ್ಡ 38, 39
ಬೇಥರಸ್ಟ್ 73, 132
ಬೈರರ್ 127
ಬೊಲಿವಿಯ 123
ಬೊಲೋನ 52
ಬೊಹೀಮಿಯ 35
ಬೋಮ 74
ಬೋರ್ಡೊ 27
ಬೋರ್ನು 70, 71
ಬೋರ್ಬನ್ ದ್ವೀ. 80
ಬೋಲ್ಟನ್ 17
ಬ್ಯೂಟ್ ದ್ವೀ. 19
ಬ್ಯೂಡಪೆಸ್ಟ್ 35
ಬ್ಯೂನಾಸ್ ಏರಿಸ್ 123
ಬ್ರಸಲ್ಸ್ 29
ಬ್ರಾಡ್ಫರ್ಡ್ 17
ಬ್ರಿಂಡಿಸಿ 18, 52
ಬ್ರಿಟಿಷ್ ಅಮೇರಿಕ 92
ಬ್ರಿಟಿಷ್ ಈಸ್ಟ್ ಆಫ್ರಿಕ 63, 78
ಬ್ರಿಟಿಷ್ ಕೊಲಂಬಿಯ 93
ಬ್ರಿಟಿಷ್ ಗಯೇನ 120
ಬ್ರಿಟಿಷ್ ದ್ವೀಪಗಳು 11
ಬ್ರಿಟಿಷ್ಹಾಂಡುರಾಸ್ 108, 109
ಬ್ರಿಸ್ಟಲ್ 16, ಚಾನಲ್ 11
ಬ್ರಿಸ್ಬೇನ್ 132
ಬ್ರುಕ್ಲಿನ್ 102
ಬ್ರೆಸ್ಟ್ 28
ಬ್ರೆಸಿಲ್ 121
ಬೆಸ್ಲ 38
ಬ್ರೈಟನ್ 17
ಬ್ರೌನ್ 86
ಬ್ಲಾಂಕ್ ಕ. 4
ಬ್ಲಾಂಕೊ 56
ಬ್ಲಾಕ್ಬರ್ನ್ 17
ಬ್ಲೂಪರ್ವತ 85, 128

ಬ್ಲೂಂಫಾಂಟೀನ್ 77
ಭೂಮಧ್ಯ ಸ. 2
ಮಗ್ಡಾಲ 68
ಮಟಪ್ಯಾನ್ 2
ಮಡಗಾಸ್ಕರ್ 56, 80
ಮಧ್ಯದ ಅಮೆರಿಕ 83, 108
ಮನ್ಸ್ಟರ್ 23
ಮನ್ರೋವಿಯ 73
ಮರ್ಸಿ 12
ಮರ್ಸೋಕ್ 71
ಮರಕೇಬೊ 120
ಮರಾಜೊ 113
ಮರ್ತ್ಯರ್‌ಟಿಡ್ವಿಲ್ 17
ಮಿರ್ರೇನದಿ 129
ಮಲೇಷಿಯ 126
ಮಸಾಚುಸೆಟ್ಸ್ 103
ಮಸ್ಸೈನಾಡು 63
ಮಸ್ಕೋವಿ 46
ಮಸ್ಕ್ವೇಷಿಯ 108, 109
ಮಸ್ಸೋವ 68, 79
ಮಹಾಕಾರವ್ರು 75
ಮ್ಯಾಂಚೆಸ್ಟರ್ 16
ಮಾಂಟನೀಗ್ರೊ 48
ಮಾಂಟವಿಡಿಯೊ 117
ಮಾಂಟ್‌ಸಿನೆ 5
ಮಾಂಟೀನ 105
ಮಾಂಟ್ರೀಲ್ 96, 95
ಮಾಕ್ಲ್‌ಸ್‌ಫೀಲ್ಡ್ 17
ಮಾರ್ಕ್ವೇಸಾಸ್ 136, 137
ಮಾಜೆಲಃ ಜ. ಸಂ 112, 113
ಮಾಡ್ರೆ 86
ಮ್ಯಾನ್ ದ್ವೀ. 12
ಮಾನಗ್ವ 109
ಮಾನಿಟೋಬ 93
ಮಾಮತ್ ಗವಿ 105
ಮಾರಿಷಸ್ 80
ಮಾರ್ಟಿನೀಕ್ 111
ಮಾರ್ಮೊರ ಸ. 3
ಮಾರ್ಷಲ್ ದ್ವೀ. 136
ಮಾರ್ಸೇಲ್ಸ್ 27
ಮಾಲಾಗ 53
ಮಾಲ್ಟ 4, 24
ಮಾಲ್ಡೇವಿಯ 48
ಮಾಸ್ (ಮ್ಯೂಸ್) 7
ಮಾಸ್ಕೊ 46
ಮಾಫಿಯ 56
ಮಿಚಿಗನ್ 87, 98, 104 105
ಮಿಚೆಲ್ 86
ಮಿರ್ಹೊ 54
ಮಿನಿಸೋಟ 104
ಮಿಲ್ವಾಕಿ 105
ಮಿಲ್‌ಸ್ಟ್ರೀಮ್ 41
ಮಿಲ್‌ಫರ್ಡ್ ಹೇವನ್ 12
ಮಿಲನೀಷಿಯ 126, 135
ಮಿಸಿಸಿಪ್ಪಿ 87, 104
ಮಿಸೌರಿ 87, 104
ಮಿಸೌರಿಮಿಸಿಸಿಪ್ಪಿ 86, 87 89
ಮೀಲಾರ್ 43
ಮುರ್ಶಿಯ 53
ಮೂರ್ ಜನರು 69
ಮೆಕೀನೇಸ್ 69
ಮೆಕೆನ್ಸಿ 87, 88, 93
ಮೆಕ್ಸಿಕೊ 83, 84, 97, 108
ಮೆಜಾರ್ಕ 53
ಮೆಜಿಯೋರೆ 7
ಮೆಡಿಟರೇನಿಯನ್ ಸ. 1, 2
ಮೆಡೀರ 56, 80, 117, 123
ಮೆಡ್ರಿಡ್ 53
ಮೆನ್ಸ್ಲಿ 65
ಮೆಯಿನ್ 38
ಮೆಯೋರಿಯರು 134
ಮೆರಿಟ್ಸ ನ. 48
ಮೆರೀಡ 108
ಮೆಲ್ಬೋರ್ನ್ 132
ಮೆಸ್ಸೀನ ಜ. ಸಂ. 3
ಮೇನ್ 103
ಮೇರಿಬರೊ 132
ಮೇರಿಯಾನಿ 136
ಮೇರಿಲೆಂಡ್ 103
ಮೇಲಣ ಗಿನಿ 73
ಮೈಕ್ರೊನೀಷಿಯ 126 135, 136
ಮೈನಾರ್ಕ 53
ಮೈಲಾನ್ 51
ಮೊಗಡೋರ್ 69
ಮೊಂಬಾಸ್ಸಾ 79
ಮೊರಾಕೊ 69
ಮೊರಿಯ 2
ಮೊರೆಕಾಂಬೆ 12
ಮೊರೆ ಸ, ಖಾ. 19

ಮೊರೇವಿಯ 35
ಮೊಲಕ್ಕಾ 135
ಮೊಸಾಂಬೀಕ್ 54, 78
ಮೊಸೆಲ್ 7, 26
ಮೋರೀನ 52
ಮೋರಿರ್ಟ ಕೊ. 128
ಮೌಂಟ್‌ಎರಿಬಸ್ 138
ಮೌಂಟಿಟೆರರ್ 138
ಮೌನಲೋವ 137
ಮ್ಯಾಗಿಲಿಕಡ್ಡಿ 22
ಮ್ಯೂನಿಕ್ 38
ಮ್ಯೂಸ್ 28
ಯಾರ್ಕ್ ಪ. ದ್ವಿ. 127
ಯಾರ್ಕ್ ಭೂಶಿರ 127
ಯಾಸ್ಸಿ 48
ಯುಕಟಾರ್ನ 83, 108
ಯುಟ್ರೆಕ್ಟ 31
ಯುಜಿಜಿ 79
ಯೂರ್ಕ 88
ಯೂಟ 85, 105, 106, 107
ಯೂಬಿಯ 49
ಯೂರಲ್‌ನದಿ 6, 44
ಯೂರಲ್ ಪ. 1
ಯೂರೇಷಿಯ 81
ಯೂರೋಪಿನತುರ್ಕಿ 47
ಯೆನಿಸೇಲ್ 3
ಯೊರಬರ ದೇ. 73
ರಗ್ಬಿ 18
ರಯೋಗ್ರಾಂಡೆಲ್ ನಾರ್ಟೆ 107
ರಯೋಡಿಟರೋ 73
ರಯೋಜನೀರೊ 112
ರಯೋಡಿಜನೇರೊ 121
ರಯೋನೀಗ್ರೋ 117
ರಷ್ಯ 44
ರಾಕೀ ಪ. 85, 86
ರಾಕಾಂಪ್ಟರ್ 132
ರಾಟರ್ಡಾಂ 31
ರಾತ್ 19
ರಾತ್ಲಿ 21
ರಾಜಿಕಿಟರ 33
ರೀ 22
ರೀಜಿಯಾವಿಕ್ 40
ರೀರ್ಗನಬರ್ಗ 36
ರಜೀನ 95
ರೇಸ್ ಭೂಶಿರ 84, 96
ರೈಗ 3, 46
ರೊಡೀಷಿಯ 62, 78
ರೊಮಾನಿಕ್ ವಂಶ 8
ರೊಮೇನಿಯ 48
ರೊಮೇಲಿಯ 47
ರೊವೂವಮಾ ನ. 78
ರೊಸೆಟ್ಟ 66
ರೊಸೇರಿಯೊ 123
ರೋಕ ಭೂಶಿರ 2
ರೋಮ್ 51
ರೋಮರ್ನ ಕ್ಯಾಥೋಲಿಕ್ ಮತ 9
ರೋವರ್ನ 27
ರ್ಹೈರ್ನ 6, 7, 115
ರ್ಹೋ (ರೋ)ಡ್ ದ್ವೀ 97, 103
ರ್ಹೋರ್ನ 6, 26
ಲಂಡಂಡರಿ 25
ಲಂಡರ್ನ 15, 17
ಲಡೋಗ 8, 44, 45
ಲಯನ್ಸ್ ಸ. ಕಾ. 3, 25, ಪ. 27
ಲಾಂಗ್ ದ್ವೀ. 97
ಲಾಂಡ್ಸೆಂಡ್ 12
ಲಾಂಬರ್ಡಿ 6, 51
ಲಾಜ್ 26
ಲಾರ್ಸ್ಟರ್ನ 133, 134
ಲಾಪಾಸ್ 124
ಲಾಪ್ಲಾಟ 112, 117
ಲಾಪ್ಲೆಂಡ್ 43
ಲಾಬ್ರಡಾರ್ 83, 84 96
ಲಾಮಂಡ್ 20
ಲಾರೆಂಟಸ್ಟ ಜ. ವಿ. 93
ಲಾವರ್ಸಿ 30
ಲಾಹೋರ್ 2
ಲಾಫೋರ್ಡ ದ್ವಿ. 4,41
ಲಿಂಪೋಪೋ 59, 75
ಲಿಟಲ್ ಬೆಲ್ಟ 3
ಲಿನ್ಹೆ ಸ. ಕಾ. 19
ಲಿಪಾಂಟೊ 49
ಲಿಪಾರೀ ದ್ವೀ. 50
ಲಿಬಿಯ ಮ. 64
ಲಿಮರಿಕ್ 23
ಲಿಯಾಟ್ 29
ಲಿಯರ್ನ 108
ಲಿವರ್ಪೂಲ್ 16, 18
ಲಿಥೆ 22
ಲಿಸ್ಬರ್ನ 54

ಲಿಜರ್ಡ್ ಪಾಯಿಂಟ್ 12
ಲೀಂಫ್ಯೊರ್ಡ್ 39
ಲೀಡ್ಸ್ 17
ಲೀತ್ 21
ಲೀಲ್ 27
ಲೀವರ್ಡ್ ದ್ವೀ. 110, 111
ಲೀಸ್ಟರ್ 23
ಲುವಲಾಬ 59
ಲೂಯಿಸವಿಲ್ 105
ಲೂಸಿಯಾನ 103, 104
ಲೆಂಬರ್ಗ್ 35
ಲೆಗಹಾರ್ನ್ 52
ಲೆಚ್ 6
ಲೆಡೋನ 44
ಲೆಡೋರ್ರ್ 54
ಲೇಗಾಸ್ 73
ಲೇಡನ್ 31
ಲೈಪ್ಸಿಕ್ 39
ಲೈಬೀರಿಯ 73
ಲೈಮ 125
ಲೋಕಿಂಗ ಪ 56
ಲೋವಾಂಡ 73
ಲೋಮ 59
ಲೋಲೆಂಡ್ 39
ಲೌತರ್ಸ್ ಬೆ. 19
ಲ್ಯಾನೋಸ್ 116, 119
ಲ್ಯೂಕ 2
ಲ್ಯೂಸರ್ನ್ 32
ಲ್ವಾರ್ 5, 26
ವಡ್ಡೈ 71
ವರ್ಜೀನಿಯ 103
ವರ್ಟೆಂಬರ್ಗ್ 38, 39
ವರ್ಡ್ 56
ವರ್ಮಾಂಟ್ 103
ವಲೂನರು 29
ವಲೇಕಿಯ 48
ವಲ್ಪರೈಸೊ 124
ವಾಂಕೂವರ್ 85, 95
ವಾಟರ್‌ಫರ್ಡ್ 24
ವಾಟರ್ಲೂ 51
ವಾಡಿಹಾಫ 65
ವಾಯುವ್ಯರಾಷ್ಟ್ರ 93
ವಾರ್ಸ 46
ವಾಲ್ 75
ವಾಲ್ಡೈ 6, 44
ವಾಲ್ಗ 6, 44
ವಾಷ್ 11
ವಾಷಿಂಗ್ಟನ್ 102, 104
ವಿಂಚೆಸ್ಟರ್ 18
ವಿಂಡ್ಸರ್ 18, 17
ವಿಂಡರ್‌ಮಿಯರ್ 12
ವಿಂಡ್ವರ್ಡ್ ದ್ವೀ. 109, 110, 111
ವಿಕ್ಟೋರಿಯ 94, 131
ವಿಕ್ಟೋರಿಯಾನ್ಯಾನ್ಸ 58
ವಿಕ್ಟೋರಿಯಾಫಾಲ್ಸ್ 59
ವಿಕ್ಟೋರಿಯಾಲಾಂಡ್ 138
ವಿನಿಪೆಗ್ 93, 94, 95
ವಿಯನ್ನ 35
ವಿಯೋಮಿಂಗ್ 105
ವಿಲ್ಸನ್ ಭೂಶಿರ 127
ವಿಶ್ಚುಲ 6, 44
ವಿಸ್ಕಾನ್ಸಿನ್ 105
ವೀರಕ್ರೂಸ್ 108
ವೀಸರ್ 6, 37
ವುಲಿಚ್ 17
ವುಲ್ವರ್ ಹಾಂಪ್ಟನ್ 17
ವೆಟ್ಟರ್ 42
ವೆಡ್ನಸ್ಬರಿ 17
ವೆನರ್ 42
ವೆಲೆನ್ಷಿಯ 53, 120
ವೆನಿಸ್ 52
ವೆನಿಸ್ಯೂಲ 120
ವೆನಿಸ್ಯೂಲನ್ 111
ವೆಲಿಂಗ್ಟನ್ 134
ವೆಸಿಷಿಯ 51, 52
ವೆಲೆನ್ಷಿಯ 53, 120
ವೆಸೂವಿಯಸ್ 5
ವೆಸ್ಟ್ ಇಂಡಿಯಾ ದ್ವೀ. 85, 109
ವೇರ್‌ನದಿ 12
ವೇಲ್‌ಫಿಷ್‌ಕೊಲ್ಲಿ 74
ವೇಲ್ಸ್ 11
ವೈಗಾಟ್ಸ್ 44
ವೈಟ್ ದ್ವೀ. 12
ಶ್ವೇತ ಪ. 97
ಷರ್ಬರ್ಗ್ 28
ಷಾನನ್ 22
ಷಾರಿ 60
ಷಟ್ಲೆಂಡ್ 19
ಷೆಮ್ನಿಟ್ಸ್ 36
ಷೆಫೀಲ್ಡ್ 17
ಸಂಟಾಕ್ರೂಸ್ 111
ಸಂಡರ್ಲೆಂಡ್ 17
ಸಂಯುಕ್ತ ಸಂಸ್ಥಾನ 83, 96

ಸರ್ವ್ವೆ 32
ಸರ್ವಿಯ 48
ಸವನ್ನ 86, 98
ಸಸ್ಕಚ್ಚಿವನ 88 93, 94
ಸಸ್ಕ್ವೆಹನ್ನ 98
ಸಹರ 55, 57
ಸಾಂಗ್ಯೆ 126, 125
ಸಾಂಟಿಯಾಗೊ 124
ಸಾಂಡ್ ಹರಸ್ಟ 132
ಸಾಂಡಿಚ್ ದ್ವೀ. 136, 137
ಸಾಕ್ರಮೆಂಟೋ ನ. 98
ಸಾಕ್ಸವೀಮಾರ್ 38
ಸಾಕ್ಸೊನಿ 38
ಸಾನ್‌ಜುವನ 97
ಸಾನ್‌ಸಾಲ್ವಡಾರ್ 108 109
ಸಾನ್‌ಫ್ರಾನ್ಸಿಸ್ಕೊ 97, 103, 106
ಸಾನ್ಟಿಟೀನ 27
ಸಾವೊಅ 136
ಸಾರ್ಡಿನಿಯ 4, 50
ಸಾಲಿಸಬರಿ 78
ಸಾಲೊನೀಕ 48
ಸಾಲೊಮನ ದ್ವೀ. 135
ಸಾಲ್ಸಬರ್ಗ 35
ಸಾಲ್ವೆಫರ್ತ 12, 19
ಸಿಂಪ್ಸನ 32
ಸಿಟ್ಕಾ ದ್ವೀ. ಸ್ತ್ರೋ. 85
ಸಿಡ್ನಿ 95, 132
ಸಿನೆ 27
ಸಿನ್ಸಿನಾಟಿ 102
ಸಿಬಾಸ್ಟೊಪೂಲ 47
ಸಿಯಹೌಟ 66
ಸಿರಯಿಂಗ 29
ಸಿರಾಲಿಯೋನ 63, 73
ಸಿರ್ರನಿವಾಡ 97
ಸಿಲ್ಲೀ ದ್ವೀ. 12
ಸಿಸಿಲಿ 4, 50, 51
ಸಿಸ್ಕಕೇಷಿಯ 46
ಸೀಡ್ರ ಸ. ಶಾ. 55
ಸುಗೋತ್ರ 56, 80
ಸುಯಸ್‌ಕಾಲ್ವೆ 65
ಸುವಾಕಿಂ 66
ಸುಪೀರಿಯರ್ 87, 88
ಸೂಕರ್ 124
ಸೂವ 136
ಸೆಂಟಅಲ್ಬ್ಸ 19
ಸೆಂಟ ಎಲೆಯಸ 86
ಸೆಂಟ ಕ್ಲೇರ 87
ಸೆಂಟ ಗೋಥಾರ್ಡ 5
ಸೆಂಟಜಾರ್ಜ 96, 99, 111
ಸೆಂಟಜಾರ್ಜ 11
ಸೆಂಟಡೇವಿಡ್ಸ ಹೆಡ 12
ಸೆಂಟ ಥಾಮಸ 56, 80, 111
ಸೆಂಟಪೀಟರ್ಸ ಬರ್ಗ 46
ಸೆಂಟರೋಕ 112
ಸೆಂಟಲಾರೆನ್ಸ 86, 93
ಸೆಂಟಲುಯಿ 72
ಸೆಂಟಲೂಯಿಸ 87, 103, 105
ಸೆಂಟಲ್ಯೂಕಾಸ 84
ಸೆಂಟ ವಿನ್ಸೆಂಟ 2
ಸೆಂಟ ಹೆಲೀನ 56, 80
ಸೆನಿಗಾಂಬಿಯ 71, 73
ಸೆನಿಗಾಲ 60
ಸೆನ್ನಾರ್ 67
ಸೆವರ್ನ್ ನ. 12
ಸೆವಿಲ 53
ಸೆರ್ವೆ ಬೆ. 26
ಸೇಗೋ 72
ಸೇನ 6, 26
ಸೇನೆ 78
ಸೇಬಲ 84, 97
ಸೇವ 6
ಸೈಕ್ಲೇಡೀಸ 49
ಸೈಪ್ರಸ 25
ಸೈಲೀಷಿಯ 35
ಸೊಕೋಟೊ 71
ಸೊಸೈಟ ದ್ವಿ. 136
ಸೊಮಾಲ 55, 63, 79
ಸೋಮಾಲಿ 79
ಸೋಫಿಯ 48
ಸಾಂಡ್ ಜ. ಸಂ. 3
ಸೌಡಾ 71
ಸಾಥಾಂಪ್ಟನ 16
ಸ್ಕಾ 2, 39
ಸ್ಕಾಂಡಿನೇವಿಯ 41
ಸ್ಕಾಟ್ಲೆಂಡ 19
ಸ್ಕಾಗ್ಬರೊ 18
ಸ್ಕಾಫೆಲ 12
ಸ್ಕಾಗರ್ರಾಕ 3, 41
ಸ್ಕೆಲ್ಟ 7, 26, 28, 29
ಸ್ಟಾಕಹೊಂ 43
ಸ್ಟಾಫ 21
ಸ್ಟೆರಿಯ 35
ಸ್ಟೇಪ ಭೂಶಿರ 12
ಸ್ಟೇವರ್ಟ 134
ಸ್ಟುಟಗಾರ್ಟ 39

ಸ್ಟ್ರಾಂಬೋಲಿ 5
ಸ್ಟ್ರಾಸ್‌ಬರ್ಗ್ 39
ಸ್ನೋಡರ್ನ 12
ಸ್ಪರ್ನ್ ಶಿ, 12
ಸ್ಪಾನಿಷ್‌ಟೌನ 111
ಸ್ಪಾರ್ಟಿವೆಂಟೋ 2
ಸ್ಪಿಟಲ್‌ಫೀಲ್ಡ್ಸ 17
ಸ್ಪಿಟ್ಸ್‌ಬರ್ಗನ 4, 44
ಸ್ಪೆನ್ಸರ್ ಸ.ಶಾ. 127 129
ಸ್ಪೆಸಿಯ 52
ಸ್ಪೇ 19
ಸ್ಪೇಜ 52
ಸ್ಪ್ರೀನದಿ 38
ಸ್ಲವಾನಿಕ 8
ಸ್ಲವೋನಿಯ 35
ಸ್ವಾನ್ಸಿ 16, 124
ಸ್ವಾಟನ 133
ಸ್ವಿಟ್ಸರ್ಲೆಂಡ್ 32
ಸ್ವಿಲ್ಲಿಲಾಕ 21
ಸ್ವೀಡನ್ 41
ಹಂಗೇರಿ 35
ಹಂಬರ 11, 12
ಹಂಬೋಲ್ಟ್‌ಕರೆಂಟ 124
ಹಡ್ಡರ್ಸ್‌ಫೀಲ್ಡ್ 17
ಹಡ್ಸನ 83, 84, 98
ಹರಿತ ಪ. 97
ಹರ್ವ್ಯ ಕೊಲ್ಲಿ 128
ಹರ್ಸ್‌ಗೊವೀನ 36, 47
ಹಲ್ 16
ಹವನ್ನ 110
ಹಾಂಡುರಾಸ 108
ಹಾಟರಸ 84, 97
ಹಾಟೆಂಟಾಟಜನ 62, 76
ಹಾನೋವರ 38
ಹಾಮರ್‌ಫೆಸ್ಟ 42
ಹಾಮಿಲ್ಟನ್ 96
ಹಾರಿಸ್ ಬೆ. 36
ಹಾರೋ 18
ಹಾರ್ನ್ 113
ಹಾರ್ಲೆಂ 31
ಹಾಲಿಫಾಕ್ಸ 17,95,128
ಹಾಲೆಂಡ 30, 110
ಹಾವರ 27
ಹಾವೈ 137
ಹೂಕರ 86
ಹೆಕ್ಲ 5
ಹೆಬ್ರಿಡಿಸ್ ದ್ವಿ. 19
ಹೆಲ್ವೆಲಿನ್ 12
ಹೇಟೈ 110, 111
ಹೈಟ್ ಆಫ್ ಲಾಂಡ 87
ಹೊಸಗ್ವಾಟೆಮಾಲ 109
ಹೋಬರ್ಟ್ 133
ಹ್ಯೂರನ 87, 88
ಸ಼ಾಂಬೆಸಿ 58, 74
ಸ಼ಾನ್‌ಸಿಬಾರ 56, 79
ಸ಼ೀಲೆಂಡ 39
ಸ಼ೂಡರಸ಼ಿ 3, 30
ಸ಼ೂಲೂನಾಡು 63, 76
ಸ಼ೇಲಾ 78
ಸ಼ಟನ್ಯ 48
ಸ಼್ಯೂರಿಕ 32, 33
ಸ಼್ವಾರ್ಟ್ ಪ. 74
ಫ಼ಂಡೀಕೊಲ್ಲಿ 82, 83
ಫ಼ರ್ನಾಂಡಿಪೊ 80
ಫ಼ಾಕ್ಲೆಂಡ ದ್ವಿ. 113
ಫ಼ಾಯಲ್‌ಲಾಕ 21
ಫ಼ಾರ್ಕ್ ಕೊ. 127
ಫ಼ಿಟ್‌ಸ್ರಾಯ್ 129
ಫ಼ಿನಿಸ್ಟರ 2
ಫ಼ಿನ್ಲೆಂಡ ಸ. ಶಾ. 3, 44
ಫ಼ಿಲಿಪ್ಪೊಪೊಲೀಸ 48
ಫ಼ಿಲಡಲ್‌ಫಿಯ 102
ಫ಼ೀಜೀದ್ವೀಪ 136 131, 135
ಫ಼ೆರ್ರೋಲ 53
ಫ಼ೆಲ್ಲಟರು 71
ಫ಼ೆಸ 69
ಫ಼ೆಸಾನ 70
ಫ಼ೇರೋ ದ್ವಿ. 40
ಫ಼ೋರ್ತ 19
ಫ಼್ಯೂನೆನ 39
ಫ಼್ರಾಂಕ್‌ಫರ್ಟ್ 38
ಫ಼್ರಾನ್ಸ್ 25, 120
ಫ಼್ರಿಯೊ 74
ಫ಼್ರೀಟೌನ 73
ಫ಼್ರೆಂಚ್‌ಕಾಂಗೋದೇಶ 73
ಫ಼್ರೆಂಚ್‌ಗಯೊನ 120
ಫ಼್ರೆಂಡ್ಲಿ ದ್ವಿ. 136
ಫ಼್ರೆಡರಿಕ್ಟನ 95
ಫ಼್ರೆಡರಿಕ್ಷಾಬ್ 92
ಫ಼್ರೇಸರ 93, 95
ಫ಼್ಲಾಂಬರೊ 12
ಫ಼್ಲಾಟರಿ 96, 97
ಫ಼್ಲಾರಿಡ 84, 104
ಫ಼್ಲಾರೆನ್ಸ 52
ಫ಼್ಲೆಮಿಂಗರು 29